ಸಮಗ್ರ ಕುಟುಂಬಕ್ಕೆ ಸಮೃದ್ಧ ಸಾಪ್ತಾಹಿಕ * ಎಪ್ರಿಲ್ 30, 2026

₹25

ತರಂಗ

ಭಾಗ-1

ಪಿಯುಸಿ ಎಂಬ ತಿರುವು

ನೂರಾರು ಕೋರ್ಸ್‌ಗಳು

ಸಾವಿರಾರು ಉದ್ಯೋಗಾವಕಾಶಗಳು

Admissions
Open 2026 - 27

Courses Offered

CSE / ISE / ECE / AIML / AI&DS / CSD / ME

Apply now

Canara Engineering College

An Autonomous Institution

Benjanapadavu, Bantwal Taluk, Mangalore - 574219

87927 27001
89047 37001

enquiry@canaraengineering.in
www.canaraengineering.in

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ
ಧರ್ಮೋತ್ಥಾನ ಟ್ರಸ್ಟ್ (ರಿ.)
ಧರ್ಮಸ್ಥಳ
54ನೇ ವರ್ಷದ
ಉಚಿತ ಸಾಮೂಹಿಕ
ವಿವಾಹ
ಜೀವನದ ಕಲ್ಯಾಣಕ್ಕಾಗಿ
ಶ್ರೀ ಕ್ಷೇತ್ರದ ಸಾಮೂಹಿಕ
ವಿವಾಹ ಮಹೋತ್ಸವ ಮಾದರಿ



ವಿವಾಹವೆಂಬುದು ಜೀವನದ ಔನ್ನತ್ಯ ಸಾಧನೆಗೆ ದಾರಿಯಾಗುವ ಸುಂದರ ಮಾರ್ಗ. ಅದನ್ನು ವ್ಯವಹಾರವನ್ನಾಗಿಸದೆ ಅಥವಾ ವರದಕ್ಷಿಣೆಯ ಕಿರುಕುಳದ ಪಿಡುಗನ್ನಾಗಿಸದೆ, ಆರ್ಥಿಕವಾಗಿ ಭಾರವನ್ನಾಗಿ ಮಾಡದೆ, ಸಂಸ್ಕಾರವನ್ನಾಗಿ, ಪವಿತ್ರ ಬಾಂಧವ್ಯವನ್ನಾಗಿಸುವ ನಿಟ್ಟಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ನಡೆಯುವ ಸಾಮೂಹಿಕ ವಿವಾಹ ಮಾದರಿಯಾಗಿದೆ. 2026ರ ಎಪ್ರಿಲ್ 29ರ ಬುಧವಾರದಂದು ಸಂಜೆ ಗಂಟೆ 6.40ಕ್ಕೆ ಗೋಧೂಳಿ ಲಗ್ನ ಸುಮುಹೂರ್ತದಲ್ಲಿ 54ನೇ ವರ್ಷದ ಉಚಿತ ಸಾಮೂಹಿಕ ವಿವಾಹ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ನಡೆಯಲಿದೆ.

ಆಗಸದಷ್ಟೇ ವಿಶಾಲ ಸೇವಾ ಕೈಂಕರ್ಯ. ಭೂಮಿಯಷ್ಟೇ ಮಮತೆಯ ತೂಕ ಹೊಂದಿರುವ ಅಪೂರ್ವ ಪುಣ್ಯಸ್ಥಳ ಶ್ರೀ ಕ್ಷೇತ್ರ ಧರ್ಮಸ್ಥಳ. ಇಲ್ಲಿನ ಧರ್ಮ ಕಾರ್ಯಗಳು, ಗ್ರಾಮೀಣ ಅಭಿವೃದ್ಧಿಯ ಅಭಯ, ಶಿಕ್ಷಣ ಯಜ್ಞ, ಆರೋಗ್ಯ ಭಾಗ್ಯ, ಅನ್ನದಾಸೋಹದ ಪರಂಪರೆ ಮುಂತಾದ ಸೇವಾ ಪ್ರಕಲ್ಪಗಳು ಜಗತ್ ಪ್ರಸಿದ್ಧಿ. ಆಲದ ನರದ ಬಿಳಲುಗಳಂತೆ ಹಬ್ಬಿರುವ ಕ್ಷೇತ್ರದ ಸಾಮಾಜಿಕ ಕಾರ್ಯಗಳ ಯೋಚನೆ, ಯೋಜನೆ, ಪ್ರೇರಣೆ ಮತ್ತು ಅದರ ಯಶಸ್ಸಿನ ಮೂಲ ಶಕ್ತಿ ಶ್ರೀ ಕ್ಷೇತ್ರದ ಧರ್ಮಾಧಿಕಾರಿಗಳಾದ ಡಾ. ಡಿ. ವೀರೇಂದ್ರ ಹೆಗ್ಗಡೆಯವರು. ಶ್ರೀ ಕ್ಷೇತ್ರವನ್ನು ಧಾರ್ಮಿಕ ಕ್ಷೇತ್ರವನ್ನಾಗಿ ಮಾತ್ರ ಸೀಮಿತಗೊಳಿಸದೆ ಸಮಾಜಮುಖಿಯಾಗಿ ಜನಸಾಮಾನ್ಯರ ಅಭಿವೃದ್ಧಿಗೆ ತೆರೆದಿಟ್ಟವರು ಶ್ರೀ ಹೆಗ್ಗಡೆಯವರು. ಶ್ರೀ ಕ್ಷೇತ್ರವನ್ನು ಪ್ರಸಕ್ತ ಕಾಲಕ್ಕೆ ಅನುಗುಣವಾಗಿ ಹಂತ ಹಂತವಾಗಿ ಆಧುನಿಕತೆ, ತಂತ್ರಜ್ಞಾನ ಮಿಳಿತಗೊಳಿಸಿ, ಅಭಿವೃದ್ಧಿಗೊಳಿಸಿ ಮಾದರಿ ಕ್ಷೇತ್ರವನ್ನಾಗಿಸಿದ್ದಾರೆ.

ಶ್ರೀ ಕ್ಷೇತ್ರದಲ್ಲಿ ಭಕ್ತರ ಅನುಕೂಲಕ್ಕಾಗಿ

ಸಾಮೂಹಿಕ ವಿವಾಹದ ಸಂದರ್ಭ ಮಾತೃಶ್ರೀ ಹೇಮಾವತಿ ವೀ. ಹೆಗ್ಗಡೆಯವರು ಮಾಂಗಲ್ಯ ಸರ ನೀಡುತ್ತಿರುವುದು.

“ಸಾಮರಸ್ಯದ ಸಂಸಾರವೇ ಸ್ವರ್ಗ
ಮದುವೆಯ ಬಳಿಕವೇ ಮನುಷ್ಯನ ವ್ಯಕ್ತಿತ್ವ ಪರಿಪೂರ್ಣವಾಗುತ್ತದೆ. ಆದರೆ ಈ ವ್ಯಕ್ತಿತ್ವ ಸಾಧನೆಗೆ ಸಾಲ ತಂದು ಖರ್ಚು ಮಾಡಿ ವಿವಾಹವಾದರೆ ಬದುಕಿನ ಸುಖ ಅಗೋಚರವಾಗುತ್ತದೆ. ಮದುವೆ ವಿಧಿಬದ್ಧವಾಗಿರಬೇಕು. ಅದಕ್ಕಾಗಿ ಮಾಡಿದ ಸಾಲದ ಶೂಲಕ್ಕೆ ಕೊರಳೊಡ್ಡಿ ಜೀವನದ ಹಿತವನ್ನು ಕಸಿದುಕೊಳ್ಳುವಂತಿರಬಾರದು.
ಈ ಕಾರಣದಿಂದಲೇ ಶ್ರೀ ಕ್ಷೇತ್ರದ ಧರ್ಮೋತ್ಥಾನ ಟ್ರಸ್ಟ್ ಮೂಲಕ ಸಾಮೂಹಿಕ ವಿವಾಹವನ್ನು ನಡೆಸಿಕೊಂಡು ಬಂದಿದ್ದೇವೆ. ವಿವಾಹ ಸರಳವಾಗಿದ್ದರೂ ಶಾಸ್ತ್ರಕ್ಕೆ ಚ್ಯುತಿ ತರದೆ ಸಂಪ್ರದಾಯ ಬದ್ಧತೆ ಮತ್ತು ಶುದ್ಧತೆಗಳಿಗೆ ಆದ್ಯತೆ ನೀಡಿದೆ. ವಿವಾಹ ಬಂಧನ ಎಂಬ ವಾಖ್ಯೆಯಿದ್ದರೂ ಪಾಶ್ಚಾತ್ಯರು ಹೇಳುವಂತೆ ಅದು ಸೆರೆಮನೆಯಲ್ಲ, ಎಲ್ಲ ಸರಿಯಿದ್ದರೆ ಹಿತಕರವಾದ ಅರಮನೆ, ಪುರೋಹಿತರು ಮತ್ತು ಹಿರಿಯರ ಸಮಕ್ಷಮದಲ್ಲಿ ನಡೆಯುವ ಭಾರತೀಯ ವಿವಾಹ ಪದ್ಧತಿ ಸತ್ವಪೂರ್ಣವಾಗಿದೆ. ಮದುವೆ ಮಕ್ಕಳಾಟಿಕೆಯಲ್ಲ, ಅದು ಕೌಟುಂಬಿಕ ಜವಾಬ್ದಾರಿಯನ್ನು ಹೆಚ್ಚಿಸುವ ಪಾಠಶಾಲೆ. ಯಾವುದೇ ಕಾರಣಕ್ಕೂ ದಂಪತಿಯ ನಡುವೆ ಬಿರುಕು ಮೂಡಬಾರದು. ಸಾಮರಸ್ಯದ ಸಂಸಾರವೇ ಸ್ವರ್ಗ ಎಂಬ ಮಾತಿದೆ. ನಮ್ಮಲ್ಲಿ ನಡೆದ ಸಾಮೂಹಿಕ ವಿವಾಹದಲ್ಲಿ ಜೊತೆಗೂಡಿದವರ ಶಾಂತಿ, ನೆಮ್ಮದಿಯ ಸುಖಮಯ ಬದುಕನ್ನು ಹತ್ತಿರದಿಂದ ನೋಡಿದಾಗ ಈ ಮಾತು ಸತ್ಯವೆಂದು ನಮಗನಿಸಿದೆ.

• **ಡಾ| ಡಿ. ವೀರೇಂದ್ರ ಹೆಗ್ಗಡೆಯವರು**
ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಧರ್ಮಸ್ಥಳ

ಖ್ಯಾತ ಚಿತ್ರನಟ ರಾಕಿಂಗ್ ಸ್ಟಾರ್ ಯಶ್ ದಂಪತಿಗಳು ಉಚಿತ ಸಾಮೂಹಿಕ ವಿವಾಹ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಇದ್ದ ವಸತಿ ಛತ್ರಗಳನ್ನು ಉನ್ನತ ದರ್ಜೆಗೆ ಏರಿಸಿದರು. ಅನ್ನದಾಸೋಹ ತಯಾರಿಗೆ ಆಧುನಿಕ ಸ್ಪರ್ಶ ನೀಡಿದರು. ಭಕ್ತರು ಹೆಚ್ಚು ತ್ರಾಸ ಪಡದೆ ಆರಾಮದಾಯಕವಾಗಿ ಶ್ರೀ ಮಂಜುನಾಥ ಸ್ವಾಮಿಯ ದರ್ಶನವನ್ನು ಪಡೆಯಲು ವ್ಯವಸ್ಥೆಗಾಗಿ ಸಂಪೂರ್ಣ ಆಧುನೀಕರಣಗೊಂಡ ಸಾನ್ನಿಧ್ಯ ಕ್ಯೂ-ಕಾಂಪ್ಲೆಕ್ಸ್ ನಿರ್ಮಿಸಿದರು.

ಶ್ರೀ ಕ್ಷೇತ್ರದ ಗ್ರಾಮಾಭಿವೃದ್ಧಿ ಯೋಜನೆ, ರುಡ್ ಸೆಟ್, ಮದ್ಯವರ್ಜನ ಶಿಬಿರ, ಭಜನಾ ಕಮ್ಮಟ, ವಾತ್ಸಲ್ಯ ಕಾರ್ಯಕ್ರಮ, ಶೌರ್ಯ ತಂಡ, ಮುಂತಾದ ಅನೇಕ ಜನಪರ ಕಾರ್ಯಕ್ರಮಗಳ ಸಾಲಿನಲ್ಲಿ ವಿಶೇಷವಾಗಿ ಸ್ಥಾನ ಪಡೆದಿರುವಂತಹದ್ದು ಉಚಿತ ಸಾಮೂಹಿಕ ವಿವಾಹ.

ಅತ್ಯಂತ ಪವಿತ್ರವಾದ 'ಸಂಸ್ಕಾರ'

ಭಾರತೀಯ ಸಂಸ್ಕೃತಿಯಲ್ಲಿ ವಿವಾಹ ಅತ್ಯಂತ ಪವಿತ್ರವಾದ 'ಸಂಸ್ಕಾರ'ವಾಗಿದೆ. ವಿವಾಹವು ಕೇವಲ ಇಬ್ಬರು ವ್ಯಕ್ತಿಗಳ ನಡುವಿನ ದೈಹಿಕ ಅಥವಾ ಕಾನೂನಾತ್ಮಕ ಸಂಬಂಧವಲ್ಲ; ಅದು ಎರಡು ಆತ್ಮಗಳ ಮಿಲನ ಮತ್ತು ಎರಡು ಕುಟುಂಬಗಳ ಸಮ್ಮಿಲನ. ಬದುಕಿನ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸ ಈ ನಾಲ್ಕು ಆಶ್ರಮಗಳಲ್ಲಿ ಗೃಹಸ್ಥಾಶ್ರಮವೇ ಆಶ್ರಮಗಳಲ್ಲಿ ಶ್ರೇಷ್ಠವೆಂದು ಶಾಸ್ತ್ರಗಳು ಸಾರುತ್ತವೆ. ಗೃಹಸ್ಥಾಶ್ರಮದಲ್ಲಿ ವ್ಯಕ್ತಿ ತನ್ನ ಜೀವನದ ಸಾರ್ಥಕತೆಯನ್ನು ಅನುಭವಿಸುತ್ತಾನೆ. ಈ ಹಿನ್ನೆಲೆಯಲ್ಲೇ ವಿವಾಹವೆಂಬುದು ವ್ಯವಹಾರವಲ್ಲ, ಅದು ಪವಿತ್ರ ಸಂಸ್ಕಾರ. ಷೋಡಶ ಸಂಸ್ಕಾರಗಳಲ್ಲಿ ವಿವಾಹವೇ ಅತ್ಯಂತ ಮಹತ್ವ ಪಡೆದಿದೆ.

ಪುರಾಣಗಳಲ್ಲಿ ಸಾಮೂಹಿಕ ವಿವಾಹದ ಪರಿಕಲ್ಪನೆ

ಸಾಮೂಹಿಕ ವಿವಾಹದ ಪರಿಕಲ್ಪನೆ ನಮ್ಮ ಸಂಸ್ಕೃತಿಯಲ್ಲಿ ಬಹಳ ಹಿಂದಿನಿಂದಲೂ ಇದೆ. ಮಾರ್ಕಂಡೇಯ ಪುರಾಣದಲ್ಲಿ ನರಿಷ್ಯಂತ ಮಹಾರಾಜನ ಉದಾಹರಣೆ ಇದಕ್ಕೆ ಸಾಕ್ಷಿ. ಧರ್ಮನಿಷ್ಠನಾಗಿದ್ದ ಈ ರಾಜನ ಆಡಳಿತದಲ್ಲಿ ಪ್ರಜೆಗಳು ಎಲ್ಲರೂ ಸಮೃದ್ಧರಾಗಿದ್ದರು. ಯಜ್ಞಗಳನ್ನು ನಡೆಸಲು ಅಗತ್ಯವಾದ ಬ್ರಾಹ್ಮಣರೇ ಸಿಗದಂತಹ ಸ್ಥಿತಿ ನಿರ್ಮಾಣವಾಯಿತು. ಈ ಸಂದರ್ಭದಲ್ಲೇ ನರಿಷ್ಯಂತನು ಸಮಾಜದ ಹಿತಕ್ಕಾಗಿ ಮೂರು ಮಹತ್ವದ ಕಾರ್ಯಗಳನ್ನು ಆರಂಭಿಸಿದನು. ಸಾಮೂಹಿಕ ವಿವಾಹ ವ್ಯವಸ್ಥೆ, ಎಲ್ಲರಿಗೂ ಗುರುಕುಲ ಶಿಕ್ಷಣ ಹಾಗೂ ಪ್ರತಿಯೊಬ್ಬನಿಗೂ ಉದ್ಯೋಗ ವ್ಯವಸ್ಥೆ. ಇವುಗಳಲ್ಲಿ ಸಾಮೂಹಿಕ ವಿವಾಹಕ್ಕೆ ವಿಶೇಷ ಮಹತ್ವವಿತ್ತು.

ಯಾಕೆಂದರೆ ವಿವಾಹವು ಕೇವಲ ಇಬ್ಬರ ವೈಯಕ್ತಿಕ ಸಂಬಂಧವಲ್ಲ; ಅದು ಸಮಾಜದ ಶ್ರೇಯಸ್ಸಿಗೆ ಮೂಲವಾದ ಸಂಸ್ಕಾರ. ಎಲ್ಲ ವರ್ಗದ ಜನರೂ ಸಮಾನವಾಗಿ ಈ ಸಂಸ್ಕಾರವನ್ನು ಅನುಭವಿಸಬೇಕು ಎಂಬ ಉದ್ದೇಶದಿಂದ ಸಾಮೂಹಿಕ ವಿವಾಹವನ್ನು ಪ್ರೋತ್ಸಾಹಿಸಲಾಯಿತು ಎಂದು ಪುರಾಣಗಳಲ್ಲಿ ಉಲ್ಲೇಖಿಸಲಾಗಿದೆ.

ಅಷ್ಟವಿಧ ವಿವಾಹ

ಅಷ್ಟವಿಧ ವಿವಾಹವೆಂದರೆ ಶಾಸ್ತ್ರಗಳಲ್ಲಿ ಉಲ್ಲೇಖವಾಗಿರುವ ಎಂಟು ವಿಧದ ಮದುವೆ ಪದ್ಧತಿಗಳು. ಅವುಗಳೆಂದರೆ ಬ್ರಾಹ್ಮ, ದೈವ, ಆರ್ಷ, ಪ್ರಾಜಾಪತ್ಯ, ಅಸುರ, ಗಾಂಧರ್ವ, ರಾಕ್ಷಸ ಮತ್ತು ಪೈಶಾಚಿಕ. ಇವುಗಳಲ್ಲಿ ಬ್ರಾಹ್ಮ, ದೈವ, ಆರ್ಷ ಮತ್ತು ಪ್ರಾಜಾಪತ್ಯ ವಿವಾಹಗಳು ಶ್ರೇಷ್ಠವಾದವುಗಳೆಂದು ಪರಿಗಣಿಸಲಾಗುತ್ತವೆ. ಇನ್ನು ಅಸುರ, ಗಾಂಧರ್ವ, ರಾಕ್ಷಸ ಮತ್ತು ಪೈಶಾಚಿಕ ವಿವಾಹಗಳು ಅನಾಚಾರ ಪದ್ಧತಿಗಳೆಂದು ಶಾಸ್ತ್ರಗಳು ಸೂಚಿಸುತ್ತವೆ.

ಮದುವೆಯ ನಾಡಿ ಸಪ್ತಪದಿ

ಸಪ್ತಪದಿ ವಿವಾಹದ ಅತ್ಯಂತ ಮುಖ್ಯ ಭಾಗ. ಈ ಸಂದರ್ಭದಲ್ಲಿ ದಂಪತಿಗಳು ಏಳು ಹೆಜ್ಜೆಗಳನ್ನು ಹಾಕುತ್ತಾ ಪರಸ್ಪರ ವಚನಗಳನ್ನು ಕೊಡುತ್ತಾರೆ. ಈ ವಚನಗಳು ಜೀವನದ ಪ್ರಮುಖ ಅಂಶಗಳಾದ ಅನ್ನ, ಬಲ, ಧನ, ಪ್ರೀತಿ, ಸಂತಾನ, ಸಹಕಾರ ಮತ್ತು ಸ್ನೇಹವನ್ನು ಒಳಗೊಂಡಿವೆ. ಅಂದರೆ, ಪರಸ್ಪರ ಒಗ್ಗಟ್ಟಿನಿಂದ ಬದುಕಿ ಗೃಹಸ್ಥ ಜೀವನವನ್ನು ಸುಖಕರವಾಗಿ ನಡೆಸುವುದಕ್ಕೆ ಇದು ಸಂಕಲ್ಪವಾಗಿರುತ್ತದೆ.

ಪಾಣಿಗ್ರಹಣದ ಸಮಯದಲ್ಲಿ ಉಚ್ಚರಿಸಲ್ಪಡುವ ಧರ್ಮೇಚ ಅರ್ಥೇಚ ಕಾಮೇಚ ನಾಚರಾಮಿ ಎಂಬ ವಚನವು ದಾಂಪತ್ಯ ಜೀವನದ ಮಹತ್ವದ ಪ್ರತಿಜ್ಞೆಯಾಗಿದೆ. ಇದರ ಅರ್ಥ, ಜೀವನದ ಮೂರು ಮುಖ್ಯ ಗುರಿಗಳಾದ ಧರ್ಮ, ಅರ್ಥ ಮತ್ತು ಕಾಮ ವಿಷಯಗಳಲ್ಲಿ ನಾನು ನಿನ್ನನ್ನು ಬಿಟ್ಟು ಬೇರೆಡೆ ನಡೆಯುವುದಿಲ್ಲ ಎಂಬುದು. ಅಂದರೆ, ಧರ್ಮವನ್ನು ಪಾಲಿಸುವಲ್ಲಿ, ಸಂಪತ್ತನ್ನು ಗಳಿಸುವಲ್ಲಿ ಮತ್ತು ಜೀವನದ ಆಸೆಗಳನ್ನು ಪೂರೈಸುವಲ್ಲಿ ಪತಿ-ಪತ್ನಿಯರು ಪರಸ್ಪರ ವಿಶ್ವಾಸದಿಂದ, ನಿಷ್ಠೆಯಿಂದ ಜೊತೆಯಾಗಿರಬೇಕು ಎಂಬ ಸಂದೇಶ ಇದರಲ್ಲಿ ಅಡಕವಾಗಿದೆ. ಇದು ಕೇವಲ ಮಾತಿನ ವಚನವಲ್ಲ; ಜೀವನಪೂರ್ತಿ ಪಾಲಿಸಬೇಕಾದ ಬದ್ಧತೆಯಾಗಿದೆ.

ಜನ-ಮನ ಗೆದ್ದ ಸಾಮೂಹಿಕ ವಿವಾಹ

1972ರಲ್ಲಿ ಶ್ರೀ ಕ್ಷೇತ್ರದ ನೌಕರರು, ಊರವರು ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮದುವೆಯಾದರೆ ಬಳಿಕ ಆರ್ಥಿಕವಾಗಿ ಹಿಂದುಳಿದವರು, ಬಡ ವರ್ಗದ ಜನರಿಗೆ ಇದು ವರದಾನವಾಯಿತು. ವರ್ಷ ಕಳೆದಂತೆ ಸಾಮೂಹಿಕ ವಿವಾಹವು ಪ್ರಸಿದ್ಧಿಯಾಗಿ ಎಲ್ಲಾ ವರ್ಗದವರ ಮನ ಗೆದ್ದಿತು. ಇದೀಗ ಯಾವುದೇ ಜಾತಿ, ವರ್ಗ, ಅಂತಸ್ತು ಇತ್ಯಾದಿಗಳ ಬೇಧವಿಲ್ಲದೆ ವಿವಾಹವು ನಡೆಯುತ್ತಿದೆ. ಶ್ರೀ ಕ್ಷೇತ್ರದ ಅನೇಕ ಭಕ್ತರು ಹರಕೆ, ಶ್ರೀ ಸ್ವಾಮಿಯ ಆಶೀರ್ವಾದ ಬಯಸಿ ಸಾಮೂಹಿಕ ವಿವಾಹದಲ್ಲಿ ಮದುವೆಯಾಗುತ್ತಾರೆ. ವಿಶೇಷವೆಂದರೆ ಸಾಮೂಹಿಕ ವಿವಾಹ ಕಾರ್ಯದಲ್ಲಿ ವಿವಾಹವಾದವರ ಮಕ್ಕಳು, ಮೊಮ್ಮಕ್ಕಳು ಕೂಡ ಇಲ್ಲೇ ವಿವಾಹವಾದ ಸಂಗತಿಗಳಿವೆ. ಇತ್ತೀಚೆಗೆ ಅಂತರ್ಜಾತಿ ವಿವಾಹವೂ ಹೆಚ್ಚಾಗುತ್ತಿದ್ದು ಸಾಮಾಜಿಕ ಅಸಮಾನತೆಯನ್ನು ಮೀರಿ ಸಾಮೂಹಿಕ ವಿವಾಹ ಬೆಳೆದಿದೆ ಎನ್ನುವುದು ಶ್ಲಾಘನೀಯ ವಿಚಾರ.

ಶ್ರೀ ಕ್ಷೇತ್ರದ ಸಾಮೂಹಿಕ ವಿವಾಹ ಅಂಕುರದ ಕಥೆ

ಶ್ರೀ ಹೆಗ್ಗಡೆಯವರು ಪಟ್ಟಾಧಿಕಾರಿಯಾಗಿ ಕೆಲವು ವರ್ಷಗಳಾಗಿತ್ತಷ್ಟೇ. ಕ್ಷೇತ್ರಕ್ಕೆ ಬರುವ ಭಕ್ತರನ್ನು ಭೇಟಿಯಾಗುತ್ತಿದ್ದ ಅವರು ಭಕ್ತರ ಮಾತು, ನೋವು, ಸಂಕಷ್ಟಗಳಿಗೆ ಕಿವಿಯಾಗಿ ಸಾಂತ್ವನ, ಅಭಯ, ಹಾರೈಕೆಯನ್ನು ನೀಡುತ್ತಿದ್ದರು. ಹೀಗೆ ಭೇಟಿಯಾದ ಸಂದರ್ಭದಲ್ಲಿ ವೃದ್ಧೆಯೊಬ್ಬರು ನನಗೆ ಇಬ್ಬರು ಗಂಡು ಮಕ್ಕಳು, ಅವರ ಮದುವೆಯನ್ನು ವಿಜೃಂಭಣೆಯಿಂದ ಮಾಡಬೇಕೆಂದು ಯೋಚಿಸಿ ಸಾವಿರಾರು ರೂಪಾಯಿ ಸಾಲ ಮಾಡಿ ನನ್ನ ಕನಸಿನಂತೆ ಮದುವೆ ಮಾಡಿದೆ. ಮದುವೆ ಆಗಿ ಹಲವಾರು ವರ್ಷಗಳಾಗಿವೆ. ಅವರ ಸಂಸಾರ ಬೆಳೆದಂತೆ ಮದುವೆಗೆ ಮಾಡಿದ ಸಾಲದ ಮೇಲಿನ ಬಡ್ಡಿಯೂ ಬೆಳೆಯಿತು. ಎಲ್ಲಾದರೂ ದುಡಿದು ಸಾಲ ತೀರಿಸೋಣ ಅಂದರೆ ಇದೀಗ ಮೈಯಲ್ಲಿ ಶಕ್ತಿಯಿಲ್ಲ. ಮಕ್ಕಳು ದುಡಿದರೂ ಸಾಲ ತೀರಿಸಲಾಗಿಲ್ಲ. ಬೇರೆ ದಾರಿ ಕಾಣದೆ ಮಕ್ಕಳನ್ನು ಸಾಲ ಸಂದಾಯವಾಗುವವರೆಗೆ ಸಾಲ ಕೊಟ್ಟವರ ಮನೆಯಲ್ಲಿ ಜೀತದಾಳುಗಳಾಗಿ ದುಡಿಯಿರಿ ಎಂದಿದ್ದೇನೆ, ಮದುವೆಗೆ ಮಾಡಿದ ಸಾಲ ಬಾಳನ್ನು ನರಕವಾಗಿಸಿದೆ ಎಂದು ದುಃಖ ತೋಡಿಕೊಂಡರು. ಅಲ್ಲದೆ ಮಕ್ಕಳ ಮದುವೆಯ ಖರ್ಚು ವೆಚ್ಚ ನಿಭಾಯಿಸಲು ಮಾತ್ರವಲ್ಲದೆ ವರದಕ್ಷಿಣೆಗಾಗಿಯೂ ಆರ್ಥಿಕ ಸಹಾಯ, ಸಾಲ ಕೇಳುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿತ್ತು. ಇವುಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಶ್ರೀ ಹೆಗ್ಗಡೆಯವರು ಮಾತೃಶ್ರೀ ರತ್ನಮ್ಮನವರೊಡನೆ ಮಾತುಕತೆ ನಡೆಸಿದಾಗ ಸಾಮೂಹಿಕ ವಿವಾಹ ಕಾರ್ಯಕ್ರಮದ ಯೋಜನೆ ರೂಪುಗೊಂಡಿತ್ತು.

ಸುವರ್ಣ ಸಂಭ್ರಮ

ಮನೆಯಲ್ಲಿ ಮಗ, ಮಗಳ ಮದುವೆಯನ್ನು ಮಾಡುವಾಗ ಸಾಕಷ್ಟು ಓಡಾಡುವ, ಒದ್ದಾಡುವ ಪ್ರಸಂಗಗಳು ಬಂದಾಗ ಸಾಕಪ್ಪಾ ಸಾಕು ಎಂದೆನಿಸುವುದುಂಟು. ಆದರೆ ಶ್ರೀ ಕ್ಷೇತ್ರದಲ್ಲಿ ಕಳೆದ 53 ವರ್ಷಗಳಿಂದ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಿಕೊಂಡು ಬರುತ್ತಿರುವುದರ ಹಿಂದೆ ಶ್ರೀ ಹೆಗ್ಗಡೆ ಹಾಗೂ ಅವರ ಸಹೋದರರು, ಕುಟುಂಬಸ್ಥರ ಶ್ರದ್ಧೆ, ಅವಿರತ ಪರಿಶ್ರಮವಿದೆ.

ಸಂಭ್ರಮದ ಮದುವೆ

ಸಾಮೂಹಿಕ ವಿವಾಹ ಸಂದರ್ಭ ಶ್ರೀ ಕ್ಷೇತ್ರದ ಬೀದಿಗಳೆಲ್ಲವು ತಳಿರು ತೋರಣಗಳಿಂದ ಸಿಂಗಾರಗೊಳ್ಳುತ್ತವೆ. ಶ್ರೀ ಡಿ. ಸುರೇಂದ್ರ ಕುಮಾರ್

ಬದುಕಿನ ಸಾರ್ಥಕ್ಯ ಕ್ಷಣವೆಂಬ ಜನರ ಭಾವನೆ

ಮಾತೃಶ್ರೀ ಡಾ। ಹೇಮಾವತಿ ವೀ. ಹೆಗ್ಗಡೆಯವರು
ಶ್ರೀಕ್ಷೇತ್ರ ಧರ್ಮಸ್ಥಳ

ನಾನು ಕೃಷಿ ಮನೆತನದಲ್ಲಿ ಬೆಳೆದು ಬಂದವಳು, ಆ ಕಾಲದಲ್ಲಿ ನಮ್ಮ ಮನೆಗೆ ವ್ಯವಸಾಯದ ಕೆಲಸ ಮಾಡಲು ತುಂಬ ಮಂದಿ ಹೆಂಗಸರೂ ಬರುತ್ತಿದ್ದರು. ಅವರು, ನನ್ನ ತಾಯಿ-ತಂದೆ ಜೊತೆಗೆ ಬೆಳೆದು ನಿಂತ ಮಗಳಂದಿರಿಗೆ ಮದುವೆ ಮಾಡಲು ಕಷ್ಟಪಡುತ್ತಿರುವುದನ್ನು ಹೇಳಿಕೊಳ್ಳುತ್ತಿದ್ದರು. ವರದಕ್ಷಿಣೆ, ಚಿನ್ನದ ಬೇಡಿಕೆಯಿಡುತ್ತಿದ್ದ ಗಂಡುಗಳಿಂದಾಗಿ ಅವರಿಗೆ ಮದುವೆ ಖರ್ಚು ಎಂಬುದು ಹೊನ್ನ ಶೂಲವಾಗುತ್ತಿತ್ತು. ಸಂಪ್ರದಾಯದ ಗೌಜಿ, ಗದ್ದಲಕ್ಕೆ ಕಡಿಮೆಯಾಗಬಾರದೆಂದು ಸಾಲ ಮಾಡಿ ಮದುವೆ ಮಾಡುತ್ತಿದ್ದ ಹೆತ್ತವರು ಜೀವಮಾನವಿಡೀ ಸಾಲ ತೀರಿಸಲಾಗದೆ ಕಷ್ಟಪಡುವುದನ್ನು, ದುಃಖದಿಂದ ಅವರು ಆಡುತ್ತಿದ್ದ ಮಾತುಗಳನ್ನು ಕೇಳಿ ಛೇ, ಇವರಿಗಾಗಿ ಏನಾದರೂ ಒಂದು ಉತ್ತಮ ವ್ಯವಸ್ಥೆ ಬರಬೇಕಿತ್ತಲ್ಲವೆ ಎಂದು ನನಗನ್ನಿಸುತ್ತಿತ್ತು.

ನಾನು ಶ್ರೀ ಕ್ಷೇತ್ರ ಧರ್ಮಸ್ಥಳದ ಸೊಸೆಯಾಗಿ ಬರುವಾಗ ಮೊದಲ ವರ್ಷದ ಸಾಮೂಹಿಕ ಕಾರ್ಯಕ್ರಮ ನೆರವೇರಿತು. ಆದರೆ ಆಗಲೇ ಇದರ ಬಗೆಗೆ ನಾನು ತುಂಬಾ ಆಕರ್ಷಿತಳಾಗಿದ್ದೆ. ಅನಂತರದ ವರ್ಷಗಳಲ್ಲಿ ಸಾಮೂಹಿಕ ಮದುವೆ ಸರ್ವ ಜನರನ್ನೂ ಆಕರ್ಷಿಸಿ ಕೇವಲ ಬಡವರ ಪಾಲಿನ ಮದುವೆಯಾಗಿ ಉಳಿಯದೆ, ವಿದ್ಯಾವಂತರನ್ನು, ಸಂಪನ್ನರನ್ನೂ ಆಕರ್ಷಿಸಿತು. ಇಲ್ಲಿ ಮದುವೆಯಾಗುವುದು ಬದುಕಿನ ಸಾರ್ಥಕ್ಯದ ಕ್ಷಣವೆಂದೇ ಜನ ಭಾವಿಸಿದರು. ಹೀಗೆ ಮದುವೆಯಾದ ಎಲ್ಲ ಜೋಡಿಗಳೂ ನೆಮ್ಮದಿಯಿಂದ ಬದುಕು ನಡೆಸುತ್ತಿರುವುದು ಸಂತಸದ ವಿಚಾರ. ದಿನಗಳು ಹೇಗೆ ಕಳೆದವು ಗೊತ್ತಿಲ್ಲ, ಶ್ರೀಕ್ಷೇತ್ರದಿಂದ ನಡೆದುಬಂದ ಸಾಮೂಹಿಕ ವಿವಾಹದ ಪರಂಪರೆ 53 ವರ್ಷಗಳನ್ನು ಪೂರೈಸಿದೆ. ಮುಂದೆಯೂ ಇದು ದಾಂಪತ್ಯ ರಥದ ಉತ್ತಮ ವೇದಿಕೆಯಾಗಿ ಶತಮಾನವನ್ನು ತಲುಪುತ್ತದೆ ಎಂಬ ವಿಶ್ವಾಸವಿರಿಸಿಕೊಂಡು ಶ್ರೀ ಮಂಜುನಾಥ ಸ್ವಾಮಿ ಹಾಗೂ ಧರ್ಮದೇವತೆಗಳ ಕೃಪೆಯಿಂದ ಎಲ್ಲ ದಂಪತಿಗಳಿಗೆ ದಾಂಪತ್ಯ ಜೀವನದಲ್ಲಿ ಸುಖ ಲಭಿಸಲೆಂದು ಹಾರೈಸುತ್ತೇನೆ.

ಮತ್ತು ಶ್ರೀ ಡಿ. ಹರ್ಷೇಂದ್ರ ಕುಮಾರ್‌ರವರ ನೇತೃತ್ವದಲ್ಲಿ ಸತ್ಕಾರದ ಏರ್ಪಾಡು ನಡೆಯುತ್ತದೆ. ವಿವಾಹದ ದಿನ ಶ್ರೀ ಹೆಗ್ಗಡೆ ದಂಪತಿಗಳು ಬೀಡಿನಲ್ಲಿ ವರನಿಗೆ ಧೋತಿ ಮತ್ತು ಶಾಲು, ವಧುವಿಗೆ ಸೀರೆ, ಬಳೆ ಹಾಗೂ ರವಿಕೆ ಕಣವನ್ನು ನೀಡುತ್ತಾರೆ. ಬಳಿಕ ವಧೂವರರಾಗಿ ಸಿದ್ಧಗೊಂಡ ಅವರು ಶ್ರೀ ಮಂಜುನಾಥ ಸ್ವಾಮಿ ದೇವಾಲಯಕ್ಕೆ ಪ್ರದಕ್ಷಿಣೆ ಬಂದು ಅಲ್ಲಿಂದ ವಿವಾಹ ನಡೆಯುವ ಅಮೃತವರ್ಷಿಣಿ ಸಭಾಭವನದತ್ತ ಬ್ಯಾಂಡ್, ವಾಲಗದ ಮೆರವಣಿಗೆಯಲ್ಲಿ ಸಾಗುತ್ತಾರೆ.

ಸರ್ವರಿಗೂ ಪ್ರಶಸ್ತ ಗೋಧೂಳಿ ಲಗ್ನ

ಪ್ರತಿ ವರ್ಷ ಶ್ರೀ ಕ್ಷೇತ್ರದಲ್ಲಿ ಗೋಧೂಳಿ ಲಗ್ನದಲ್ಲೇ ವಿವಾಹ ನಡೆಯುತ್ತದೆ. ಇತರ ಲಗ್ನಗಳು ಎಲ್ಲಾ ವಧು - ವರರ ಜಾತಕ, ಗ್ರಹಸ್ಥಿತಿಗೆ ಕೂಡಿ ಬರುವುದಿಲ್ಲ. ಆದ್ದರಿಂದ ಏಕಕಾಲದ ವಿವಾಹಕ್ಕೆ ಅನುಕೂಲವಾಗಿರುವುದಿಲ್ಲ. ಆದರೆ ಶಾಸ್ತ್ರಗ್ರಂಥಗಳ ಪ್ರಕಾರ ಗೋಧೂಳಿ ಲಗ್ನದಲ್ಲಿ ಯಾವುದೇ ಅಡೆ-ತಡೆಗಳು, ಗ್ರಹದೋಷಗಳಿಲ್ಲದೆ ಎಲ್ಲ ರಾಶಿ, ನಕ್ಷತ್ರದವರು ಕೂಡ ವಿವಾಹವಾಗಬಹುದಾಗಿದೆ. ಮುಹೂರ್ತದ ಹೊತ್ತಿಗೆ ಆಯಾ ಜಾತಿ-ಪಂಗಡ ದವರು ತಮ್ಮ ಸಂಪ್ರದಾಯ, ಪದ್ಧತಿಯ ಪ್ರಕಾರ ತಮ್ಮ ವಿಧಿ-ವಿಧಾನ ಗಳನ್ನು ನೆರವೇರಿಸಿಕೊಳ್ಳುತ್ತಾರೆ. ಬಳಿಕ ಶುಭ ಮುಹೂರ್ತದಲ್ಲಿ ಏಕಕಾಲದಲ್ಲಿ ಮಾಂಗಲ್ಯಧಾರಣೆ ನಡೆಯುತ್ತದೆ.

ಮಾಂಗಲ್ಯ ಉರುಳಲ್ಲ, ರಕ್ಷಣೆಯ ಭರವಸೆ

ಮಾಂಗಲ್ಯ ಎಂದರೆ ಕೇವಲ ತಾಳಿ ಅಥವಾ ಹಾರವಲ್ಲ; ಅದು ದಾಂಪತ್ಯ ಜೀವನದ ಪವಿತ್ರ ಬಾಂಧವ್ಯದ ಸಂಕೇತ. ಮಾಂಗಲ್ಯವು ಪತಿ-ಪತ್ನಿ ನಡುವೆ ಇರುವ ನಂಬಿಕೆ, ನಿಷ್ಠೆ ಮತ್ತು ರಕ್ಷಣೆಯ ಪ್ರತಿಜ್ಞೆಯ ಸಂಕೇತವಾಗಿದೆ. ವಿವಾಹದ ಸಮಯದಲ್ಲಿ ಗಂಡು ಹೆಣ್ಣಿಗೆ ಮಾಂಗಲ್ಯವನ್ನು ಕಟ್ಟುವಾಗ, ಆಕೆಯ ರಕ್ಷಣೆ, ಗೌರವ ಮತ್ತು ಸುಖಕ್ಕಾಗಿ ಬದುಕಿನವರೆಗೂ ಬದ್ಧನಾಗಿರುವೆನೆಂಬ ಭರವಸೆಯನ್ನು ನೀಡುತ್ತಾನೆ. ಅದೇ ರೀತಿ ಹೆಣ್ಣು ಕೂಡಾ ಗಂಡನೊಂದಿಗೆ ಧರ್ಮಪಥದಲ್ಲಿ ನಡೆದು, ಕುಟುಂಬವನ್ನು ಕಾಪಾಡುವ ಸಂಕಲ್ಪ ಮಾಡುತ್ತಾಳೆ. ಶ್ರೀ ಕ್ಷೇತ್ರದಲ್ಲಿ ವಿವಾಹ ಮಾಂಗಲ್ಯ ಧಾರಣೆ ಬಳಿಕ ಗಣ್ಯ ಅತಿಥಿಗಳು ಮತ್ತು ಶ್ರೀ ಹೆಗ್ಗಡೆ ದಂಪತಿಯ ಸಮ್ಮುಖದಲ್ಲಿ ದಂಪತಿಗಳಿಗೆ ಪ್ರಮಾಣವಚನವನ್ನು ಬೋಧಿಸಲಾಗುತ್ತದೆ.

“

ಮನೆಯ ಕಾರ್ಯಕ್ರಮ

ಶ್ರೀ ಡಿ. ಹರ್ಷೇಂದ್ರ ಕುಮಾರ್
ಶ್ರೀಕ್ಷೇತ್ರ ಧರ್ಮಸ್ಥಳ

ಕ್ಷೇತ್ರದಲ್ಲಿ ಸಾಮೂಹಿಕ ವಿವಾಹಕ್ಕೆ ಶ್ರೀ ಹೆಗ್ಗಡೆಯವರು ದಿನಾಂಕ ನಿಗದಿ ಮಾಡಿದ ಬಳಿಕ ಕಾರ್ಯಕ್ರಮದ ಪೂರ್ವ ತಯಾರಿಗಳು ನಡೆಯುತ್ತಾ ಇರುತ್ತವೆ. ಮದುವೆಯ ಮುಹೂರ್ತಕ್ಕೆ ಇನ್ನೂ ದಿನಗಳಿವೆ ಎನ್ನುವಾಗಲೇ ಹಿಂದೆ ಎಷ್ಟು ಮದುವೆಗಳು ನಡೆದಿವೆ ಅದರ ತಯಾರಿ ಹೇಗಿತ್ತು. ಈ ಬಾರಿ ಹೇಗೆ ಮಾಡುವುದು? ವ್ಯವಸ್ಥೆಗಳ ಬಗ್ಗೆ ಚರ್ಚೆ ಮಾಡುತ್ತೇವೆ. ಕಳೆದ ಸಾಮೂಹಿಕ ಮದುವೆಯಲ್ಲಿ ಏನಾದರೂ ಸಮಸ್ಯೆಗಳಾಗಿದ್ದರೆ ಅದನ್ನು ಈ ಬಾರಿ ಸರಿಪಡಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಶ್ರೀ ಹೆಗ್ಗಡೆಯವರ ಹತ್ತಿರ ಹೋಗಿ ನಮ್ಮ ತಯಾರಿಯನ್ನು ತಿಳಿಸಿದ ನಂತರ ಅವರು ಈ ಬಾರಿಯ ಸಾಮೂಹಿಕ ವಿವಾಹವನ್ನು ಯಾವ ರೀತಿ ಮಾಡಬೇಕು, ಮಾಡಬಹುದು ಎಂಬುದರ ಬಗ್ಗೆ ನಿರ್ದೇಶನ ನೀಡುತ್ತಾರೆ. ಆ ಪ್ರಕಾರ ನಮ್ಮ ಡಿಎಂಪಿ, ತೋಟಗಾರಿಕೆ, ಉಗ್ರಾಣ ಮತ್ತು ಮೇಲ್ವಿಚಾರಕರೆಲ್ಲ ಒಟ್ಟಾಗಿ ಕಾರ್ಯನಿರ್ವಹಿಸುತ್ತೇವೆ. ವಿವಾಹದ ಹಿಂದಿನ ದಿನ ಊರವರನ್ನು ಕರೆದು ಮೀಟಿಂಗ್ ಮಾಡಿ ಸಾಮೂಹಿಕ ಕೆಲಸಗಳು ನಿಯಮ ಆಧಾರಿತವಾದ್ದರಿಂದ ಯಾವುದೇ ಸಮಸ್ಯೆಗಳು ನಮಗೆ ತೋರುವುದಿಲ್ಲ, ಊರಿನವರು ಮದುವೆಯ ದಿವಸ ಮುಂಚಿತವಾಗಿ ಬಂದು ಕಾರ್ಯಪ್ರವೃತ್ತರಾಗುತ್ತಾರೆ. ಹಾಗೂ ಎಲ್ಲರೂ ಮನೆಯ ಕಾರ್ಯಕ್ರಮದಂತೆ ವಿವಾಹ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಾರೆ.

ವಧೂ-ವರರ ಪ್ರಮಾಣ ವಚನ

ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಮಂಗಲ ಮುಹೂರ್ತದಲ್ಲಿ ವಧೂ-ವರರಾಗಿ ಪವಿತ್ರ ಬಾಂಧವ್ಯವನ್ನು ಹೊಂದಿರುವ ನಾವು ಮುಂದೆ ಜೀವನದುದ್ದಕ್ಕೂ ಧರ್ಮ, ಅರ್ಥ ಮತ್ತು ಕಾಮಗಳಲ್ಲಿ ಸಹಚರರಾಗಿ ಪರಸ್ಪರ ಪ್ರೀತಿ-ವಿಶ್ವಾಸದಿಂದ ಒಬ್ಬರಿಗೊಬ್ಬರು ವಂಚನೆ ಮಾಡದೆ ಯಾವುದೇ ದುರಭ್ಯಾಸಗಳಿಗೂ ತುತ್ತಾಗದೆ ಬದುಕುತ್ತೇವೆ ಎಂಬುದಾಗಿ ಭಗವಾನ್ ಶ್ರೀ ಮಂಜುನಾಥ ಸ್ವಾಮಿಯ ಸನ್ನಿಧಿಯಲ್ಲಿ ಮತ್ತು ಧರ್ಮಾಧಿಕಾರಿ ಶ್ರೀ ಹೆಗ್ಗಡೆಯವರ ಸಮಕ್ಷಮದಲ್ಲಿ ಪ್ರಮಾಣವಚನ ಬದ್ಧರಾಗುತ್ತಿದ್ದೇವೆ ಎಂದು ವಧೂ-ವರರು ಪ್ರಮಾಣ ವಚನ ಸ್ವೀಕರಿಸುತ್ತಾರೆ.

ಸುಖಮಯ ದಾಂಪತ್ಯ ಜೀವನ

ಶ್ರೀ ಹೆಗ್ಗಡೆ ದಂಪತಿಗಳ ಸಮ್ಮುಖದಲ್ಲಿ ಶ್ರೀ ಕ್ಷೇತ್ರದಲ್ಲಿ ಇದುವರೆಗೂ ದಾಂಪತ್ಯ ಬದುಕಿಗೆ ಕಾಲಿರಿಸಿದ ಜೋಡಿಗಳೆಲ್ಲ ಸುಖ, ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ. ಶ್ರೀ ಕ್ಷೇತ್ರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ದಂಪತಿಗಳು ತಮ್ಮ ಸಂತಸದ ಜೀವನದ ಕುರಿತಾಗಿ ಹೆಗ್ಗಡೆಯವರೊಡನೆ ಸಂತಸವನ್ನು ಹಂಚಿಕೊಂಡು ಅವಿಸ್ಮರಣೀಯ ಕ್ಷಣಗಳನ್ನು ಮೆಲುಕು ಹಾಕುತ್ತಾರೆ. ಸಾಮೂಹಿಕ ವಿವಾಹದಲ್ಲಿ ಮದುವೆಯಾದ ಜೋಡಿ ವಿಚ್ಛೇದನದ ಕಡೆ ಮುಖ ಮಾಡದಿರುವುದು ಶ್ರೀ ಕ್ಷೇತ್ರದ ಮೇಲಿನ ನಂಬಿಕೆಗೆ ಸಾಕ್ಷಿ.

ಕೊರೊನಾ ಸಂದರ್ಭದಲ್ಲಿ ವಿಶಿಷ್ಟ ರೀತಿಯಲ್ಲಿ ನಡೆದ ವಿವಾಹ

ಕೊರೊನಾ ಸಾಂಕ್ರಾಮಿಕ ರೋಗ ಸಂದರ್ಭದಲ್ಲಿ ಶ್ರೀ ಕ್ಷೇತ್ರದಲ್ಲಿ ಸಾಮೂಹಿಕ ವಿವಾಹ ನಡೆಯಲಿಲ್ಲ. ಬದಲಾಗಿ 23 ಜಿಲ್ಲೆಗಳಲ್ಲಿನ ವಧು -ವರರಿಗೆ ಅವರವರ ಮನೆಗಳಲ್ಲೇ ಏಕ ಕಾಲಕ್ಕೆ ಮದುವೆ ಮಾಡಿಸಲು ಶ್ರೀ ಕ್ಷೇತ್ರದ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಶ್ರೀ ಹೆಗ್ಗಡೆಯವರು ವ್ಯವಸ್ಥೆ ಮಾಡಿದ್ದರು.

ಸರಳತೆಗೆ ಮಾರು ಹೋದರು

ಸಾಮೂಹಿಕ ವಿವಾಹವೆಂದರೆ ಕೇವಲ ಆರ್ಥಿಕವಾಗಿ ಹಿಂದುಳಿದವರಿಗಾಗಿ ಮಾತ್ರವಲ್ಲ; ಸರಳತೆ ಮತ್ತು ಸಂಸ್ಕಾರವನ್ನು ಮೆಚ್ಚುವ ಎಲ್ಲರಿಗೂ ಇದು ಸಮಾನವಾಗಿ ಮುಕ್ತವಾದ ವೇದಿಕೆ. ಇಂದು ಸರಕಾರಿ ನೌಕರರು, ಸಾಫ್ಟ್‌ವೇರ್ ಎಂಜಿನಿಯರುಗಳು, ಪ್ರಾಧ್ಯಾಪಕರು ಸೇರಿದಂತೆ ಉತ್ತಮ ಆದಾಯ ಹೊಂದಿರುವವರೂ ಸಹ ಆಡಂಬರವನ್ನು ತೊರೆದು ಸರಳ ವಿವಾಹವನ್ನು ಆಯ್ಕೆ ಮಾಡುತ್ತಿರುವುದು ಈ ಪರಿಕಲ್ಪನೆಯ ಮಹತ್ವವನ್ನು ತೋರಿಸುತ್ತದೆ. ಅನೇಕ ಸಂಘ-ಸಂಸ್ಥೆಗಳಿಗೆ ಶ್ರೀ ಕ್ಷೇತ್ರದಲ್ಲಿ ನಡೆಯುತ್ತಿರುವ ಸರಳ ಸಾಮೂಹಿಕ ವಿವಾಹಗಳು ಪ್ರೇರಣೆಯಾಗಿವೆ. ಈ ಮಾದರಿಯನ್ನು ಗಮನಿಸಿದ ಸರ್ಕಾರವೂ ಸಹ ಇಂತಹ ಪ್ರಯತ್ನಗಳಿಗೆ ಉತ್ತೇಜನ ನೀಡುತ್ತಿರುವುದು ಗಮನಾರ್ಹ.

ದುಂದು ವೆಚ್ಚಕ್ಕೆ ಕಡಿವಾಣ

ಇಂದಿನ ದಿನಗಳಲ್ಲಿ ಮದುವೆ ಎಂದರೆ ಲಕ್ಷ ಲಕ್ಷ ಖರ್ಚಾಗುತ್ತದೆ. ವಿವಾಹ ಕಾರ್ಯಕ್ರಮದ ಜೊತೆ ಔತಣಕೂಟಗಳು, ಡಿ.ಜೆ. ಅಬ್ಬರ, ಉಡುಗೆತೊಡುಗೆ, ಆಭರಣ ಖರೀದಿ ಹೀಗೆ ಖರ್ಚಿನ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಮದುವೆಗಳಲ್ಲಿ ಅನಗತ್ಯವಾಗಿ ಮಾಡುವ ಹೆಚ್ಚಿನ ಖರ್ಚುಗಳನ್ನು ಕಡಿಮೆ ಮಾಡಿ, ಆ ಹಣವನ್ನು ಜೀವನದ ಅಗತ್ಯಗಳಿಗೆ ಬಳಸಿದರೆ ಅದು ನಿಜವಾದ ಸದುಪಯೋಗವಾಗುತ್ತದೆ. ಇದರಿಂದ ಸಾಲದ ಬಾಧೆಗೂ ತುತ್ತಾಗುವುದನ್ನು ತಪ್ಪಿಸಬಹುದು. ಇಂತಹ ಸಾರ್ಥಕವಾದ ಯೋಚನೆಯಿಂದಲೇ ಹಲವರು ಶ್ರೀ ಕ್ಷೇತ್ರದ ಸಾಮೂಹಿಕ ವಿವಾಹದಲ್ಲಿ ಮದುವೆಯಾಗಬೇಕು ಎಂಬ ಸಂಕಲ್ಪ ಮಾಡಿಕೊಂಡು ಹರಕೆ ಹೊತ್ತು ಬಂದು ವಿವಾಹವಾಗುತ್ತಿರುವುದು ಹೆಚ್ಚುತ್ತಿದೆ. ವಿಶೇಷವಾಗಿ ವಿದ್ಯಾವಂತರಲ್ಲಿ ಈ ಸರಳ ವಿವಾಹದ ಬಗ್ಗೆ ಒಲವು ಹೆಚ್ಚುತ್ತಿರುವುದು ಸಮಾಜದಲ್ಲಿ ಒಳ್ಳೆಯ ಬದಲಾವಣೆಯ ಸಂಕೇತವಾಗಿದೆ.

ವಿವಾಹಕ್ಕೆ ಅಡ್ಡಿಯಾಗದ ವಿಕಲತೆ

ಮದುವೆ ಎಂಬುದು ಮರೀಚಿಕೆ ಎಂದುಕೊಂಡವರು, ಸಾಮಾಜಿಕವಾಗಿ ತುಳಿತಕ್ಕೊಳಗಾದವರು ವಿಕಲಚೇತನರು, ದೃಷ್ಟಿ ಮಾಂದ್ಯರೂ ಕೂಡಾ ಈ ಸಾಮೂಹಿಕ ವಿವಾಹದಲ್ಲಿ ದಂಪತಿಗಳಾಗುತ್ತಿದ್ದಾರೆ. ಇದೊಂದು ಮಹತ್ವದ ಸಂಗತಿ.

ಸಾಮಾಜಿಕ ಸಮಾನತೆಗೆ ಕೈಗನ್ನಡಿ

ಸಾಮೂಹಿಕ ವಿವಾಹವು ಸಾಮಾಜಿಕ ಸಮಾನತೆಯನ್ನು ಬಲಪಡಿಸುತ್ತದೆ. ಇಲ್ಲಿ ಧನಿಕ-ಬಡವ ಎಂಬ ಭೇದವಿಲ್ಲದೆ ಎಲ್ಲರೂ ಒಂದೇ ವೇದಿಕೆಯಲ್ಲಿ ಸಮಾನವಾಗಿ ವಿವಾಹವಾಗುವುದರಿಂದ ಸಮಾಜದಲ್ಲಿ ಏಕತೆಯ ಭಾವನೆ ಬೆಳೆಯುತ್ತದೆ.

ಡಾ|ಡಿ.ವೀರೇಂದ್ರ ಹೆಗ್ಗಡೆಯವರು ನೂತನ ವಧೂವರರಿಗೆ ಮಾಂಗಲ್ಯ ಸರ ನೀಡುತ್ತಿರುವುದು.

ಸಂಸ್ಕೃತಿಯ ಪ್ರತಿಬಿಂಬ ಮೆರವಣಿಗೆ

ವಧೂ-ವರರು ಮೊದಲು ದೇವಸ್ಥಾನಕ್ಕೆ ಭೇಟಿ ನೀಡಿ ದೇವರ ಸನ್ನಿಧಿಯಲ್ಲಿ ಪ್ರದಕ್ಷಿಣೆ ಬಂದು ಆಶೀರ್ವಾದ ಪಡೆದು ನಂತರ ಭವ್ಯವಾದ ಮೆರವಣಿಗೆ ಆರಂಭವಾಗುತ್ತದೆ. ನಂದಿ, ಆನೆ, ಛತ್ರಿರಾಯ, ಹಕ್ಕಿ ನಿಶಾನೆ, ನಂದಿಕೋಲು ಮತ್ತು ನಾದಸ್ವರಗಳ ಸೊಗಸಾದ ಧ್ವನಿಯೊಂದಿಗೆ ಮೆರವಣಿಗೆ ಅದ್ದೂರಿಯಾಗಿ ಅಮೃತವರ್ಷಿಣಿ ಸಭಾಮಂಟಪಕ್ಕೆ ಸಾಗುತ್ತದೆ. ಈ ಮೆರವಣಿಗೆಯು ಕೇವಲ ದೃಶ್ಯಮಾತ್ರವಾಗಿರದೇ, ನಮ್ಮ ಸಾಂಪ್ರದಾಯಿಕ ಮೌಲ್ಯಗಳನ್ನು ಪ್ರತಿಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮವಾಗಿರುತ್ತದೆ.

ಮೆರವಣಿಗೆಯಲ್ಲಿ ಸುಮಂಗಲೆಯರು ದೇಗುಲದಿಂದ ಮಂಗಳ ದ್ರವ್ಯಗಳನ್ನು ಕರೆತಂದು ಮಂಗಳಮಂಟಪಕ್ಕೆ ಆಗಮಿಸುತ್ತಾರೆ. ಅವರ ಕೈಯಲ್ಲಿ ಮಂಗಳದೀಪ, ಅರಿಶಿನ-ಕುಂಕುಮ, ಹೂವುಗಳು ಹಾಗೂ ಇತರ ಶುಭಸೂಚಕ ವಸ್ತುಗಳು ಇರುತ್ತವೆ. ಈ ದೃಶ್ಯವು ಮದುವೆಯ ಪಾವಿತ್ರ್ಯವನ್ನು ಇನ್ನಷ್ಟು ಹೆಚ್ಚಿಸುತ್ತದೆ. ಸುಶ್ರಾವ್ಯ ಶೋಭಾನೆ ಹಾಡುಗಳಿಂದ ವಧೂ-ವರರಿಗೆ ಆರತಿ ಮಾಡುವ ಮೂಲಕ ಅವರ ಜೀವನಕ್ಕೆ ಶುಭಕೋರಲಾಗುತ್ತದೆ. ಈ ಸಾಮೂಹಿಕ ವಿವಾಹೋತ್ಸವವು ಸಮಾಜದಲ್ಲಿ ಸಮಾನತೆ, ಸಹಕಾರ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಬಲಪಡಿಸುತ್ತವೆ.

ಐದು ದಶಕಗಳಲ್ಲಿ ಸಾಮಾಜಿಕ ಕ್ರಾಂತಿ

ಕಳೆದ ಐದು ದಶಕಗಳಲ್ಲಿ ಈ ಕ್ಷೇತ್ರದಲ್ಲಿ ನಡೆದ ಸಾಮೂಹಿಕ ವಿವಾಹಗಳು ನಿಜಕ್ಕೂ ಒಂದು ಮಹತ್ವದ ಸಾಮಾಜಿಕ ಕ್ರಾಂತಿಯಾಗಿ ಗುರುತಿಸಬಹುದು. ಈ ಅವಧಿಯಲ್ಲಿ ಒಟ್ಟು 12,900ಕ್ಕೂ ಹೆಚ್ಚು ಜೋಡಿಗಳು ವೈವಾಹಿಕ ಜೀವನಕ್ಕೆ ಕಾಲಿಟ್ಟಿದ್ದು, ಸುಖ-ಶಾಂತಿ ಮತ್ತು ನೆಮ್ಮದಿಯಿಂದ ದಾಂಪತ್ಯ ಜೀವನ ಸಾಗಿಸಿರುವುದು ಅತ್ಯಂತ ಮಹತ್ವದ ಸಂಗತಿಯಾಗಿದೆ.

ಈ ರೀತಿಯಾಗಿ ಸಾವಿರಾರು ಕುಟುಂಬಗಳ ಜೀವನದಲ್ಲಿ ಬೆಳಕು ತುಂಬಿದ ಸಾಮೂಹಿಕ ವಿವಾಹಗಳು, ಸಮಾಜದ ಆರೋಗ್ಯಕರ ಅಭಿವೃದ್ಧಿಗೆ ದಾರಿಯನ್ನೆರೆದಿವೆ. ಇದು ಒಂದು ಸಮಗ್ರ ಸಾಮಾಜಿಕ ಪರಿವರ್ತನೆಯ ಸಂಕೇತವಾಗಿದೆ.

ಬರಹ: **ಚಂದ್ರಶೇಖರ ಎಸ್. ಅಂತರ**

ವ್ಯವಸ್ಥಿತ ನೋಂದಣಿ ಪ್ರಕ್ರಿಯೆ

ಸಾಮೂಹಿಕ ವಿವಾಹದಲ್ಲಿ ವಿವಾಹವಾಗುವವರು ಮೊದಲು ನೋಂದಣಿ ಮಾಡಿಸಿಕೊಳ್ಳುವುದು ಕಡ್ಡಾಯವಾಗಿದೆ. ಇದಕ್ಕಾಗಿ ನೋಂದಣಿ ಕಚೇರಿಯನ್ನು ತೆರೆಯಲಾಗುತ್ತದೆ. ವಿವಾಹಾಕಾಂಕ್ಷಿಗಳು ಜನನ ಪ್ರಮಾಣ ಪತ್ರ ಅಥವಾ ಎಸ್ಸೆಸೆಲ್ಸಿ ಅಂಕಪಟ್ಟಿ, ಗುರುತಿನ ಚೀಟಿ, ಆಧಾರ್ ಕಾರ್ಡ್, ಪಡಿತರ ಚೀಟಿ ಪ್ರತಿ, ಇದ್ದಲ್ಲಿ ಮದುವೆ ಆಮಂತ್ರಣ ಪತ್ರಿಕೆ, ಜಾತಿ ಪ್ರಮಾಣ ಪತ್ರ ಪ್ರತಿ, ವಾಸ್ತವ್ಯ ಇರುವುದಾಗಿ ಮತ್ತು ಇದುವರೆಗೆ ವಿವಾಹವಾಗಿರುವುದಿಲ್ಲ ಎಂಬುದರ ಬಗ್ಗೆ ಗ್ರಾಮ ಪಂಚಾಯತ್ ದೃಢೀಕರಣ ಪತ್ರ, ವಧು-ವರರ ತಂದೆ ತಾಯಿ ಆಧಾರ್ ಕಾರ್ಡ್ ಪ್ರತಿ, ವರ ಅಥವಾ ವಧುವಿನ ತಂದೆ ಅಥವಾ ತಾಯಿ ಮರಣ ಹೊಂದಿದ್ದಲ್ಲಿ ಅವರ ಮರಣ ಪ್ರಮಾಣ ಪತ್ರ, ತಂದೆ ಅಥವಾ ತಾಯಿ ಅಸೌಖ್ಯದಿಂದ ಮದುವೆಗೆ ಬರಲು ಸಾಧ್ಯವಾಗದಿದ್ದಲ್ಲಿ ಸರಕಾರಿ ವೈದ್ಯರಿಂದ ದೃಢೀಕರಣ ಪತ್ರ, ವಧು-ವರನ ಇತ್ತೀಚಿನ ಎರಡು ಭಾವಚಿತ್ರ ನೀಡಿ ನೋಂದಣಿ ಮಾಡಿಕೊಳ್ಳಬೇಕಾಗುತ್ತದೆ. ಹಾಗೆಯೇ ವಿವಾಹ ಸಂದರ್ಭದಲ್ಲಿ ವಧು-ವರರ ತಂದೆ-ತಾಯಿ ಕಡ್ಡಾಯವಾಗಿ ಉಪಸ್ಥಿತರಿರಬೇಕು.

ಶ್ರೀ ಹೆಗ್ಗಡೆಯವರ ಅಂತರ್ ದೃಷ್ಟಿಯ ಫಲ
ಉಚಿತ ಸಾಮೂಹಿಕ ವಿವಾಹ

ದಕ್ಷಿಣ ಕನ್ನಡ ಜಿಲ್ಲೆಯ ನೇತ್ರಾವತಿ ನದಿಯ ತಟದಲ್ಲಿರುವ ಶ್ರೀ ಕ್ಷೇತ್ರ ಧರ್ಮಸ್ಥಳವು ಕೇವಲ ಒಂದು ಧಾರ್ಮಿಕ ಕೇಂದ್ರವಲ್ಲ, ಅದು ಮನುಕುಲದ ಕಲ್ಯಾಣವನ್ನು ಬಯಸುವ ವಿಶಿಷ ಶ್ರದ್ಧಾಕೇಂದ್ರ. ಭಗವಾನ್ ಶ್ರೀ ಮಂಜುನಾಥ ಸ್ವಾಮಿ ಮತ್ತು ಧರ್ಮದೇವತೆಗಳ ಸನ್ನಿಧಿಯಲ್ಲಿ 'ಧರ್ಮ' ಎನ್ನುವುದು ಕೇವಲ ಮಾತಿನಲ್ಲಿರದೆ ಕೃತಿಯಲ್ಲಿ ವ್ಯಕ್ತವಾಗುತ್ತದೆ. ಅಂತಹ ಉದಾತ್ತ ಕಾರ್ಯಗಳಲ್ಲಿ ಅತ್ಯಂತ ಪ್ರಮುಖವಾದುದು ಮತ್ತು ಸಾಮಾಜಿಕ ಕ್ರಾಂತಿಗೆ ನಾಂದಿ ಹಾಡಿರುವುದು ಶ್ರೀ ಕ್ಷೇತ್ರದ ಉಚಿತ ಸಾಮೂಹಿಕ ವಿವಾಹ. ಶ್ರೀ ಹೆಗ್ಗಡೆಯವರ ಈ ಕೈಂಕರ್ಯ ಒಂದು ಮಹೋನ್ನತ ಸಾಮಾಜಿಕ ಕ್ರಾಂತಿಯಾಗಿ ರೂಪ ತಾಳಿರುವುದು ಇತಿಹಾಸದಲ್ಲಿ ಶಾಶ್ವತ ಮೈಲಿಗಲ್ಲು.

ಮಿತವ್ಯಯ ಮತ್ತು ಸಾಮಾಜಿಕ ಪರಿವರ್ತನೆಯ ಸಮ್ಮಿಲನ

ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಐದು ದಶಕಗಳಿಂದ ನಡೆಸಿಕೊಂಡು ಬರುತ್ತಿರುವ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮವು ಕೇವಲ ಒಂದು ಸಮಾರಂಭವಲ್ಲ; ಅದು ಸಮಾಜದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಯನ್ನು ಸುಧಾರಿಸುವ ಒಂದು ಮಹಾನ್ ಅಭಿಯಾನ.

ಸಾಲದ ಸುಳಿಯಿಂದ ಮುಕ್ತಿ ಮತ್ತು ಸಂಪನ್ಮೂಲಗಳ ಸದ್ಬಳಕೆ

ನಮ್ಮ ಸಮಾಜದಲ್ಲಿ ಅನೇಕ ಕುಟುಂಬಗಳು ಮದುವೆಯ ನೆಪದಲ್ಲಿ ತಮ್ಮ ಆರ್ಥಿಕ ಶಕ್ತಿಯನ್ನು ಮೀರಿ ವೆಚ್ಚ ಮಾಡುತ್ತವೆ. ಬಡವರು ಮತ್ತು ಮಧ್ಯಮ ವರ್ಗದವರು ''ಜನರು ಏನೆಂದುಕೊಂಡಾರು?'' ಎಂಬ ಸಾಮಾಜಿಕ ಒತ್ತಡಕ್ಕೆ ಮಣಿದು, ಕೈಗಡ ಸಾಲ ಮಾಡಿ ಅದ್ದೂರಿ ಮದುವೆ ಮಾಡುತ್ತಾರೆ. ತದನಂತರ ಆ ಸಾಲವನ್ನು ತೀರಿಸಲಾಗದೆ ಇಡೀ ಜೀವನ ಪಶ್ಚಾತ್ತಾಪ ಮತ್ತು ಸಂಕಷ್ಟದಲ್ಲಿ ಕಳೆಯುತ್ತಾರೆ. ಸಾಮೂಹಿಕ ವಿವಾಹವು ಇಂತಹ ಕುಟುಂಬಗಳಿಗೆ ಸಂಜೀವಿನಿಯಾಗಿದೆ. ಇಲ್ಲಿ ಅನಗತ್ಯ ಖರ್ಚುಗಳಿಗೆ ಕಡಿವಾಣ ಹಾಕಿ, ಆ ಉಳಿತಾಯದ ಹಣವನ್ನು ದಂಪತಿಗಳ ಮುಂದಿನ ಬದುಕಿನ ಭದ್ರತೆಗೆ ಅಥವಾ ಅಭಿವೃದ್ಧಿ ಕಾರ್ಯಗಳಿಗೆ ಬಳಸಲು ಪ್ರೇರೇಪಿಸಲಾಗುತ್ತದೆ.

ವರನಟ ಡಾ. ರಾಜ್ ಕುಮಾರ್ ದಂಪತಿ ಸಾಮೂಹಿಕ ವಿವಾಹ ಸಮಾರಂಭದಲ್ಲಿ ಭಾಗವಹಿಸಿದ್ದರು.

ಆಡಂಬರ ಮತ್ತು ಸಂಪತ್ತಿನ ಅಪವ್ಯಯಕ್ಕೆ ಪರ್ಯಾಯ

ಕೇವಲ ಬಡವರಿಗಷ್ಟೇ ಅಲ್ಲ, ಈ ಯೋಜನೆ ಸ್ಥಿತಿವಂತರಿಗೂ ಒಂದು ದೊಡ್ಡ ಸಂದೇಶವನ್ನು ನೀಡುತ್ತದೆ. ಜನಪ್ರಿಯತೆ ಗಳಿಸುವ ಉದ್ದೇಶದಿಂದ ಅಥವಾ ಅಂತಸ್ತಿನ ಪ್ರದರ್ಶನಕ್ಕಾಗಿ ಮದುವೆಗಳಲ್ಲಿ ಕೋಟ್ಯಂತರ ರೂಪಾಯಿಗಳನ್ನು ವ್ಯಯಿಸುವ ಪ್ರವೃತ್ತಿ ಇಂದು ಹೆಚ್ಚಾಗಿದೆ. ಇಂತಹ ಶ್ರೀಮಂತ ವರ್ಗದವರು ಮನಃಪೂರ್ವಕವಾಗಿ ಸಾಮೂಹಿಕ ವಿವಾಹದ ವ್ಯಾಪ್ತಿಗೆ ಒಳಪಟ್ಟರೆ, ಅದು ಸಮಾಜಕ್ಕೆ ದೊಡ್ಡ ಮಾದರಿಯಾಗುತ್ತದೆ. ಸಂಪತ್ತಿನ ಅಪವ್ಯಯವನ್ನು ತಡೆದು, ಆ ಹಣವನ್ನು ಶಿಕ್ಷಣ ಅಥವಾ ಆರೋಗ್ಯದಂತಹ ಸಾಮಾಜಿಕ ಸೇವೆಗಳಿಗೆ ವಿನಿಯೋಗಿಸುವ ಉದಾತ್ತ ಪ್ರವೃತ್ತಿ ಬೆಳೆಯಲು ಇದು ಪ್ರೇರಣೆ ನೀಡುತ್ತದೆ.

ಡಾ। ಡಿ. ವೀರೇಂದ್ರ ಹೆಗ್ಗಡೆಯವರು -
ಮಾತೃಶ್ರೀ ಡಾ। ಹೇಮಾವತಿ ವೀ. ಹೆಗ್ಗಡೆಯವರು, ಶ್ರೀಕ್ಷೇತ್ರ ಧರ್ಮಸ್ಥಳ

ವೈವಾಹಿಕ ಸಮಾರಂಭಗಳಲ್ಲಿ ಚಪ್ಪರ, ಬಾಜಾಭಜಂತ್ರಿ, ಅದ್ದೂರಿ ಅಲಂಕಾರ ಮತ್ತು ಧ್ವನಿವರ್ಧಕಗಳಿಗಾಗಿ ಅಪಾರ ಹಣ ವ್ಯಯವಾಗುತ್ತದೆ. ಇವುಗಳು ಮದುವೆಯ ಪಾವಿತ್ರ್ಯಕ್ಕಿಂತ ಹೆಚ್ಚಾಗಿ ಪ್ರದರ್ಶನಕ್ಕೇ ಸೀಮಿತವಾಗಿವೆ. ಸಾಮೂಹಿಕ ವಿವಾಹಗಳಲ್ಲಿ ಇಂತಹ ಅನಗತ್ಯ ಖರ್ಚುಗಳಿಗೆ ಆಸ್ಪದವಿಲ್ಲ. ದುಂದು ವೆಚ್ಚದ ಮನೋಭಾವವನ್ನು ತೊಡೆದುಹಾಕುವುದು ಸಾಮೂಹಿಕ ವಿವಾಹದ ಪ್ರಮುಖ ಗುರಿ.

ಮಿತವ್ಯಯದ ಸಂಸ್ಕೃತಿಯ ಬಿತ್ತನೆ

ಮದುವೆ ಎಂಬುದು ದಾಂಪತ್ಯದ ಆರಂಭವೇ ಹೊರತು ಬದುಕಿನ ಅಂತ್ಯವಲ್ಲ. ಈ ಸಹಜ ಸಾಮಾಜಿಕ ಕಾರ್ಯದಲ್ಲಿ ಮಿತವ್ಯಯ ಸಾಧಿಸುವುದು ಇಂದಿನ ತುರ್ತು ಅಗತ್ಯವಾಗಿದೆ. ಶ್ರೀ ಕ್ಷೇತ್ರದ ಸನ್ನಿಧಿಯಲ್ಲಿ ನಡೆಯುವ ವಿವಾಹಗಳು ಸರಳತೆಯಲ್ಲಿಯೇ ಸೌಂದರ್ಯವಿದೆ ಎಂಬುದನ್ನು ಸಾಬೀತುಪಡಿಸಿವೆ.

ಧಾರ್ಮಿಕ ಪಾವಿತ್ರ್ಯದ ರಕ್ಷಣೆ

ವೆಚ್ಚ ಕಡಿತಗೊಳಿಸುವುದು ಎಂದರೆ ಧಾರ್ಮಿಕ ವಿಧಿಗಳನ್ನು ನಿರ್ಲಕ್ಷಿಸುವುದು ಎಂದರ್ಥವಲ್ಲ. ಶ್ರೀ ಕ್ಷೇತ್ರದಲ್ಲಿ ನಡೆಯುವ ವಿವಾಹಗಳಲ್ಲಿ ಪ್ರತಿ ಧರ್ಮದ ಮತ್ತು ಪಂಗಡದ ಆಚಾರ-ವಿಚಾರಗಳಿಗೆ ಗೌರವ ನೀಡಲಾಗುತ್ತದೆ. ಧಾರ್ಮಿಕ ವಿಧಿಗಳಿಗೆ ಯಾವುದೇ ಚ್ಯುತಿಯಾಗದಂತೆ ಸಾಂಸ್ಕೃತಿಕ ಪಾವಿತ್ರ್ಯವನ್ನು ಇಲ್ಲಿ ಕಾಪಾಡಲಾಗುತ್ತದೆ. ಮಂಜುನಾಥ ಸ್ವಾಮಿಯ ದಿವ್ಯ ಸನ್ನಿಧಿಯಲ್ಲಿ ನಡೆಯುವ ಈ ವಿವಾಹವು ದಂಪತಿಗಳಲ್ಲಿ ಒಂದು ಬಗೆಯ ಪುನೀತ ಮನೋಭಾವನೆಯನ್ನು ಮತ್ತು ಧಾರ್ಮಿಕ ಜಾಗೃತಿಯನ್ನು ಮೂಡಿಸುತ್ತದೆ. ಶಿಸ್ತುಬದ್ಧ ವಿಧಿ ವಿಧಾನಗಳು, ಶುದ್ಧ ವಾತಾವರಣ ಮತ್ತು ಪೂಜ್ಯ ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ನಡೆಯುವ ಈ ಮದುವೆಗಳು ವಧೂ-ವರರಲ್ಲಿ ಹೊಸ ಜೀವನದ ಬಗ್ಗೆ ಆತ್ಮವಿಶ್ವಾಸವನ್ನು ತುಂಬುತ್ತವೆ.

ಕಾರ್ಯದರ್ಶಿ ಎ.ವಿ. ಶೆಟ್ಟಿ ಹಾಗೂ ತಂಡದವರಿಂದ ಪ್ರಮಾಣ ವಚನ ಬೋಧನೆ.

ಸಮಾಜಕ್ಕೊಂದು ಗಣನೀಯ ನೆರವು

ಯಾವಾಗ ಒಂದು ಕುಟುಂಬ ಮದುವೆಯ ಹೆಸರಿನಲ್ಲಿ ದಿವಾಳಿಯಾಗುವುದನ್ನು ತಪ್ಪಿಸುತ್ತದೆಯೋ, ಆಗ ಆ ಕುಟುಂಬವು ಸಮಾಜಕ್ಕೆ ಹೊರೆಯಾಗುವ ಬದಲಿಗೆ ಸಮಾಜದ ಆಸ್ತಿಯಾಗುತ್ತದೆ. ಸಾಮೂಹಿಕ ವಿವಾಹಗಳಲ್ಲಿ ಪಾಲ್ಗೊಳ್ಳುವ ಮೂಲಕ ಜನರು ಸಂಕುಚಿತ ಮನೋಭಾವನೆಯಿಂದ ಹೊರಬಂದು, ವಿಶಾಲವಾದ ಸಾಮೂಹಿಕ ಹಿತಾಸಕ್ತಿಯನ್ನು ಬೆಳೆಸಿಕೊಳ್ಳುತ್ತಾರೆ. ಇದು ಪರಸ್ಪರ ಸಹಕಾರ ಮತ್ತು ಸಹಿಷ್ಣುತೆಯ ಭಾವನೆಯನ್ನು ಗಟ್ಟಿಗೊಳಿಸುತ್ತದೆ. ಇಲ್ಲಿ ಜಾತಿ, ಮತ ಅಥವಾ ಆರ್ಥಿಕ ಅಂತಸ್ತಿನ ಭೇದಭಾವವಿಲ್ಲ. ಶ್ರೀಮಂತ-ಬಡವ ಎಂಬ ತಾರತಮ್ಯವಿಲ್ಲದೆ ಎಲ್ಲರೂ ಒಂದೇ ವೇದಿಕೆ ಅಡಿಯಲ್ಲಿ ಹಸೆಮಣೆ ಏರುತ್ತಾರೆ. ಇದು ಸಮಾಜದಲ್ಲಿ ಸಹಿಷ್ಣುತಾ ಭಾವನೆಯನ್ನು ಉದ್ದೀಪಿಸುತ್ತದೆ. ನೂರಾರು ಜೋಡಿಗಳು ಏಕಕಾಲದಲ್ಲಿ ಜೀವನದ ಹೊಸ ಅಧ್ಯಾಯಕ್ಕೆ ಕಾಲಿಡುವುದು ಒಂದು ಅಪೂರ್ವ ಸಾಮಾಜಿಕ ಸಾಮರಸ್ಯಕ್ಕೆ ಸಾಕ್ಷಿಯಾಗುತ್ತದೆ.

ಆರ್ಥಿಕ ಶಿಸ್ತು ಮತ್ತು ಆಧ್ಯಾತ್ಮಿಕ ನೆಮ್ಮದಿ

ಶ್ರೀ ಧರ್ಮಸ್ಥಳದ ಸಾಮೂಹಿಕ ವಿವಾಹವು ದುಂದು ವೆಚ್ಚ, ವರದಕ್ಷಿಣೆಯ ಪಿಡುಗು ಸಂಕೋಲೆಯಿಂದ ಸಮಾಜವನ್ನು ಮುಕ್ತಗೊಳಿಸಿ, ಆರ್ಥಿಕ ಶಿಸ್ತು ಮತ್ತು ಆಧ್ಯಾತ್ಮಿಕ ನೆಮ್ಮದಿಯನ್ನು ಏಕಕಾಲಕ್ಕೆ ಒದಗಿಸುವ ಕ್ರಾಂತಿಕಾರಿ ಹೆಜ್ಜೆಯಾಗಿದೆ. ಇದು ವ್ಯಕ್ತಿಯನ್ನು ಆರ್ಥಿಕವಾಗಿ ಸಬಲಗೊಳಿಸುವುದಲ್ಲದೆ, ಸಮಾಜವನ್ನು ಸುಸ್ಥಿರ ಅಭಿವೃದ್ಧಿಯತ್ತ ಕೊಂಡೊಯ್ಯುವ ಶಕ್ತಿಯನ್ನು ಹೊಂದಿದೆ.

ಜವಾಬ್ದಾರಿಯುತ ನಾಗರಿಕರಾಗಿ ಬದುಕು

ವಧುವಿಗೆ ಮಾಂಗಲ್ಯ, ಸೀರೆ, ರವಿಕೆ ಮತ್ತು ವರನಿಗೆ ಧೋತಿ, ಶರ್ಟ್ ಹಾಗೂ ಶಾಲುಗಳನ್ನು ಶ್ರೀ ಕ್ಷೇತ್ರದಿಂದಲೇ ಉಚಿತವಾಗಿ ಒದಗಿಸಲಾಗುತ್ತದೆ. ಇದೀಗ ಕ್ಷೇತ್ರದ ಭಕ್ತರೂ ಕೂಡ ಈ ವಿವಾಹ ಕಾರ್ಯಕ್ರಮಕ್ಕೆ ಸಹಕಾರ ನೀಡುತ್ತಿದ್ದು, ಈ ಮೂಲಕ ಶ್ರೀ ಸ್ವಾಮಿಯ ಸೇವೆ ಸಲ್ಲಿಸುತ್ತಿದ್ದಾರೆ. ಈ ಮಹತ್ಕಾರ್ಯವು ಸಾವಿರಾರು ಕುಟುಂಬಗಳ ಬಾಳಿನಲ್ಲಿ ಬೆಳಕನ್ನು ಚೆಲ್ಲಿದೆ. ಧಾರ್ಮಿಕ ಕ್ಷೇತ್ರಗಳು ಕೇವಲ ಪೂಜೆ-ಪುನಸ್ಕಾರಗಳಿಗೆ ಸೀಮಿತವಾಗದೆ, ಸಾಮಾಜಿಕ ಸುಧಾರಣೆಯ ಕೇಂದ್ರಗಳಾಗಬೇಕು ಎಂಬುದಕ್ಕೆ ಧರ್ಮಸ್ಥಳದ ಸಾಮೂಹಿಕ ವಿವಾಹ ಜ್ವಲಂತ ಸಾಕ್ಷಿ. ಇಲ್ಲಿ ಹಸೆಮಣೆ ಏರಿದ ದಂಪತಿಗಳು ಸಮಾಜದಲ್ಲಿ ಜವಾಬ್ದಾರಿಯುತ ನಾಗರಿಕರಾಗಿ, ದುಶ್ಚಟ ಮುಕ್ತವಾಗಿ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ. ಆಡಂಬರಕ್ಕಿಂತ ಸಂಸ್ಕಾರವೇ ಮುಖ್ಯ ಎಂಬುದನ್ನು ಸಾರುವ ಈ ಯೋಜನೆ, ಆಧುನಿಕ ಜಗತ್ತಿಗೆ ಒಂದು ಆದರ್ಶ ಮಾದರಿಯಾಗಿದೆ.

ಶ್ರೀ ಹೆಗ್ಗಡೆಯವರಿಂದ ದಂಪತಿಗಳಿಗೆ ಜೀವನ ಪಾಠ

ವಿವಾಹದ ಸಂದರ್ಭದಲ್ಲಿ ವಧೂ-ವರರು ಸಾಮೂಹಿಕವಾಗಿ ಪ್ರಮಾಣ ವಚನವನ್ನು ಸ್ವೀಕರಿಸುತ್ತಾರೆ. ಈ ಪ್ರಮಾಣ ವಚನವು ಕೇವಲ ಪದಗಳಲ್ಲ, ಅದು ಸರಳ ಮತ್ತು ಸುಂದರ ಜೀವನಕ್ಕೆ ನೀಡುವ ಭರವಸೆ. ಕ್ಷುಲ್ಲಕ ಕಾರಣಗಳಿಗಾಗಿ ಪವಿತ್ರ ಸಂಬಂಧಗಳು ವಿಚ್ಛೇದನದಲ್ಲಿ ಕೊನೆಗೊಳ್ಳಬಾರದು ಎಂಬ ದೃಢನಿರ್ಧಾರವನ್ನು ಇಲ್ಲಿ ದಂಪತಿಗಳು ಮಾಡುತ್ತಾರೆ. ಶ್ರೀ ಕ್ಷೇತ್ರದ ಧರ್ಮಾಽಕಾರಿಗಳು ಸ್ವತಃ ದಂಪತಿಗಳಿಗೆ ಶುಭ ಹಾರೈಸಿ, ಸಂಸಾರದಲ್ಲಿ ಎದುರಾಗುವ ಸವಾಲುಗಳನ್ನು ಹೇಗೆ ಎದುರಿಸಬೇಕು ಎಂದು ಮಾರ್ಗದರ್ಶನ ನೀಡುತ್ತಾರೆ.

ಗಣ್ಯರ ಸಮಕ್ಷಮ

ಶ್ರೀ ಕ್ಷೇತ್ರ ಧರ್ಮಸ್ಥಳದ ಸಾಮೂಹಿಕ ವಿವಾಹದ ಪುಣ್ಯ ಕಾರ್ಯಕ್ಕೆ ನಾಡಿನ ಗಣ್ಯರು ಸಾಕ್ಷಿಯಾಗಿ, ನವದಂಪತಿಗಳಿಗೆ ಶುಭ ಹಾರೈಸುತ್ತಾ ಬಂದಿರುವುದು ವಿವಾಹ ಮಹೋತ್ಸವದ ಹಿರಿಮೆಯನ್ನು ಎತ್ತಿ ಹಿಡಿಯುತ್ತದೆ. ಸರಳತೆಯ ಹರಿಕಾರ ವರನಟ ಡಾ. ರಾಜ್ ಕುಮಾರ್ ಅವರು ಧರ್ಮಸ್ಥಳ ಮತ್ತು ಹೆಗ್ಗಡೆಯವರ ಕುಟುಂಬದೊಂದಿಗೆ ಆಪ್ತ ಒಡನಾಟ ಹೊಂದಿದ್ದರು. ಸಾಮೂಹಿಕ ವಿವಾಹೋತ್ಸವದಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ಅವರು ಆಡಿದ್ದ ಮಾತುಗಳು ಇಂದಿಗೂ ಸ್ಮರಣೀಯ. ''ಮಂಜುನಾಥ ಸ್ವಾಮಿಯ ಸನ್ನಿಧಿಯಲ್ಲಿ ನಡೆಯುವ ಈ ವಿವಾಹವು ಅತ್ಯಂತ ಪವಿತ್ರವಾದುದು. ಆಡಂಬರವಿಲ್ಲದ ಈ ಸರಳ ಮದುವೆಗಳು ದೇವರಿಗೆ ಪ್ರಿಯವಾದವು. ಇಲ್ಲಿ ಹಸೆಮಣೆ ಏರುವ ದಂಪತಿಗಳು ಭಾಗ್ಯವಂತರು, ಏಕೆಂದರೆ ಅವರಿಗೆ ಕ್ಷೇತ್ರದ ಆಶೀರ್ವಾದದ ಜೊತೆಗೆ ಸಾವಿರಾರು ಜನರ ಶುಭ ಹಾರೈಕೆ ಸಿಗುತ್ತದೆ.'' ಎಂದಿದ್ದರು. ನಾಡಿನ ವಿವಿಧ ಕ್ಷೇತ್ರಗಳ ದಿಗ್ಗಜರು ಆಗಮಿಸಿದ್ದಾರೆ. ರಾಜಕೀಯ ನಾಯಕರು, ಮುಖ್ಯಮಂತ್ರಿಗಳು ಮತ್ತು ಕೇಂದ್ರ ಸಚಿವರು ಆಗಮಿಸಿ, ಸರಕಾರದ ಮಟ್ಟದಲ್ಲಿ ಇಂತಹ ಯೋಜನೆಗಳು ಜಾರಿಯಾಗಲು ಪ್ರೇರಣೆ ಪಡೆದಿದ್ದಾರೆ. ಚಲನ ಚಿತ್ರ ನಟ-ನಟಿಯರು, ಸಾಹಿತಿಗಳು ಮತ್ತು ಧಾರ್ಮಿಕ ಮುಖಂಡರು. ಇವರು ವಿವಾಹದ ಧಾರ್ಮಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಜನರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ.

ಬರಹ: ಎ. ವೀರು ಶೆಟ್ಟಿ
ಡಾ। ಹೆಗ್ಗಡೆಯವರ ಆಪ್ತ ಕಾರ್ಯದರ್ಶಿಗಳು
ಶ್ರೀಕ್ಷೇತ್ರ ಧರ್ಮಸ್ಥಳ

ವಿವಾಹದ ಪ್ರತಿಜ್ಞೆ

ಮಾಂಗಲ್ಯ ಧಾರಣೆ ವಿಧಿ ಮುಗಿದ ಬಳಿಕ ಗಣ್ಯರ ಸಮ್ಮುಖದಲ್ಲಿ ನವ ವಧೂವರರು ಸಚ್ಚಾರಿತ್ರ್ಯದ ಬದುಕಿನ ಬಗೆಗೆ ಪ್ರಮಾಣ ವಚನ ಸ್ವೀಕರಿಸುವ ಸಂಪ್ರದಾಯವಿದ್ದು ಅದು ತುಳು ಭಾಷೆಯಲ್ಲಿದೆ. ಶ್ರೀಕ್ಷೇತ್ರದಲ್ಲಿ ಇಂದಿನ ಈ ಶುಭ ದಿವಸದಲ್ಲಿ ಶುಭ ಘಳಿಗೆಯಲ್ಲಿ ವಧೂ ವರರಾಗಿ ಶುದ್ಧ ಸಂಬಂಧವನ್ನು ಗಳಿಸಿ, ಇನ್ನು ಮುಂದಕ್ಕೆ ಜೀವನದಲ್ಲಿ ಧರ್ಮದಿಂದ, ಸಂಪತ್ತಿನಿಂದ ಸುಖೀ ಸಂಸಾರ ನಡೆಸಿಕೊಂಡು, ಒಬ್ಬರನ್ನೊಬ್ಬರು ಪ್ರೀತಿ ವಿಶ್ವಾಸದಲ್ಲಿ ಅನುಸರಿಸಿಕೊಂಡು ಯಾವುದೇ ದುಶ್ಚಟಗಳಿಗೂ ಬಲಿಯಾಗದೆ ಬದುಕು ನಡೆಸುತ್ತೇವೆ ಎಂದು ಶ್ರೀ ಮಂಜುನಾಥ ಸ್ವಾಮಿ ಮತ್ತು ಪೂಜ್ಯ ಖಾವಂದರ ಮುಂದೆ ಉಚ್ಚರಿಸುತ್ತಾರೆ.

ಇವರದೇ ಅಗ್ರಪಂಕ್ತಿ

ಜನಜಾಗೃತಿ ವೇದಿಕೆ, ರುದ್ರಭೂಮಿ ನವೀಕರಣ, ಧರ್ಮೋತ್ಥಾನ, ಕೆರೆಗಳ ಪುನಃಶ್ಚೇತನ ಸೇರಿದಂತೆ ಅನೇಕ ಯೋಜನೆಗಳನ್ನು ಸಮಾಜಕ್ಕೆ ಮಾದರಿಯನ್ನಾಗಿ ರೂಪಿಸಿದವರು ಶ್ರೀ ಹೆಗ್ಗಡೆಯರು. ಸಮಾಜದಲ್ಲಿ ಅದೆಷ್ಟೋ ಸಾಧು, ಸಂತರು, ಮಹನೀಯರು ಧಾರ್ಮಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಕೊಡುಗೆ ನೀಡಿದ್ದಾರೆ. ಆದರೆ ಶ್ರೀ ಹೆಗ್ಗಡೆಯವರು ಇವರೆಲ್ಲರಿಗಿಂತ ಭಿನ್ನವಾಗಿ ಸಮಾಜಕ್ಕೆ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ. ಯಾರೂ ಊಹಿಸದ, ಯಾರಿಗೂ ಹೊಳೆಯದ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸಿ ಸಮಾಜಕ್ಕೆ ಧಾರೆ ಎರೆದ ಶ್ರೀ ಹೆಗ್ಗಡೆಯವರು ಸೇವಾ ಕಾರ್ಯಗಳಲ್ಲಿ ಅಗ್ರಪಂಕ್ತಿಯಲ್ಲಿ ನಿಲ್ಲುತ್ತಾರೆ.

ದುಶ್ಚಟಮುಕ್ತ ಸಮಾಜದ ಸಂಕಲ್ಪ

ಜನಜಾಗೃತಿ ವೇದಿಕೆಯ ಮೂಲಕ ಮದ್ಯವರ್ಜನ ಶಿಬಿರಗಳನ್ನು ಆರಂಭಿಸಿ ವಿಶಿಷ್ಟ ಸಾಮಾಜಿಕ ಕ್ರಾಂತಿಗೆ ಶ್ರೀ ಹೆಗ್ಗಡೆಯವರು ನಾಂದಿ ಹಾಡಿದರು. ಯಾವುದೇ ಔಷಧಿಗಳ ಅವಲಂಬನೆಯಿಲ್ಲದೆ, ಮಾನಸಿಕ ಬಲ ಮತ್ತು ಆತ್ಮಪ್ರೇರಣೆಯ ಮೂಲಕ ವ್ಯಸನಿಗಳಿಗೆ ಮದ್ಯಪಾನ ತ್ಯಜಿಸುವ ದಾರಿಯನ್ನು ತೋರಿಸಿದ್ದು ಅವರ ಕಾರ್ಯದ ಮಹತ್ವವನ್ನು ಹೆಚ್ಚಿಸುತ್ತದೆ. ಇದರ ಫಲವಾಗಿ ಸಾವಿರಾರು ಜನರು ಹೊಸ ಬದುಕಿನತ್ತ ಹೆಜ್ಜೆ ಇಟ್ಟು, ಕುಟುಂಬ ಹಾಗೂ ಸಮಾಜದಲ್ಲಿ ಗೌರವಯುತ ಸ್ಥಾನವನ್ನು ಗಳಿಸಿದ್ದಾರೆ.

ರುದ್ರಭೂಮಿಗೊಂದು ಹೊಸ ರೂಪ

ಹಳ್ಳಿ ಹಳ್ಳಿಗಳಲ್ಲಿ ಮೃತರ ಅಂತ್ಯಕ್ರಿಯೆಗಳಿಗೆ ಸೂಕ್ತ ವ್ಯವಸ್ಥೆಗಳ ಕೊರತೆ ಕಂಡುಬಂದ ಸಂದರ್ಭದಲ್ಲಿ ರುದ್ರಭೂಮಿ ನಿರ್ಮಾಣ ಎಂಬ ಅಪೂರ್ವ ಯೋಜನೆಯನ್ನು ಕಾರ್ಯರೂಪಕ್ಕೆ ತಂದರು. ಈ ಯೋಜನೆಯ ಮೂಲಕ ಅಂತ್ಯಕ್ರಿಯೆಗಳು ಶ್ರದ್ಧೆಯಿಂದ ನಡೆಯುವಂತಾಗಿದ್ದು, ಮೃತರಿಗೆ ಸದ್ಗತಿ ದೊರಕುವ ವ್ಯವಸ್ಥೆ ರೂಪುಗೊಂಡಿತು. ಶವ ದಹನಕ್ಕಾಗಿ ಸ್ಥಳದ ಅಭಾವದಿಂದ ಸಂಕಷ್ಟದಲ್ಲಿದ್ದ ಅನೇಕ ಕುಟುಂಬಗಳಿಗೆ ಇದು ಮಹತ್ತರ ನೆರವಾಯಿತು.

ದೇವಾಲಯಗಳ ಪುನರುತ್ಥಾನಕ್ಕೆ ಧರ್ಮೋತ್ಥಾನ

ಹೊಸ ದೇವಸ್ಥಾನಗಳ ನಿರ್ಮಾಣಕ್ಕಿಂತಲೂ ಪ್ರಾಚೀನ ದೇಗುಲಗಳ ಜೀರ್ಣೋದ್ಧಾರವೇ ಪುಣ್ಯದಾಯಕವೆಂದು ನಂಬಿದ ಅವರು, ಶ್ರೀ ಕ್ಷೇತ್ರ ಧರ್ಮಸ್ಥಳ ಧರ್ಮೋತ್ಥಾನ ಟ್ರಸ್ಟ್ ಮೂಲಕ ಅನೇಕ ಪಾಳುಬಿದ್ದ ದೇವಾಲಯಗಳನ್ನು ಅವುಗಳ ಮೂಲ ಸ್ವರೂಪಕ್ಕೆ ಧಕ್ಕೆಯಾಗದಂತೆ ಪುನರ್ ನಿರ್ಮಿಸಿದರು. ಈ ಮೂಲಕ ಸಾಂಸ್ಕೃತಿಕ ಪರಂಪರೆಯನ್ನು ಉಳಿಸುವಲ್ಲಿ ಅವರು ಮಹತ್ವದ ಪಾತ್ರ ವಹಿಸಿದ್ದಾರೆ.

ಕೆರೆಗಳ ಪುನಃಶ್ಚೇತನದಿಂದ ಸುಂದರ ಜನ-ಜೀವನ

ಗ್ರಾಮೀಣ ಪ್ರದೇಶಗಳಲ್ಲಿ ನೀರಿನ ಅಭಾವವನ್ನು ಮನಗಂಡ ಹೆಗ್ಗಡೆಯವರು ಹೂಳು ತುಂಬಿ ಹಾಳಾಗಿದ್ದ ಕೆರೆಗಳನ್ನು ಪುನರುಜ್ಜೀವನಗೊಳಿಸುವ ಕಾರ್ಯಕ್ಕೆ ಮುಂದಾದರು. ಕೆರೆಗಳ ಹೂಳನ್ನು ತೆಗೆಯುವ ಮೂಲಕ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಹಿಡಿದು, ಜನಜೀವನಕ್ಕೆ ಹಸಿರು ಬೆಳಕು ತಂದರು. ಜೊತೆಗೆ, ರುಡ್‌ಸೆಟ್

ಉಚಿತ ಸಾಮೂಹಿಕ ವಿವಾಹ ಸಮಾರಂಭದಲ್ಲಿ ಭಾಗವಹಿಸಿದ ಜನಸ್ತೋಮ

ಸಂಸ್ಥೆಯ ಮೂಲಕ ಸ್ವ ಉದ್ಯೋಗ ತರಬೇತಿಗಳನ್ನು ನೀಡಿ, ಸಾವಿರಾರು ಯುವಕರಿಗೆ ಸ್ವಾವಲಂಬಿ ಬದುಕಿನ ದಾರಿ ತೋರಿಸಿದರು.

ಸಮಾಜಸೇವೆ ಪರಮ ಧರ್ಮ

ಈ ಎಲ್ಲಾ ಯೋಜನೆಗಳ ಮೂಲಕ ಶ್ರೀ ಡಿ. ವೀರೇಂದ್ರ ಹೆಗ್ಗಡೆ ಅವರು ಸಮಾಜಸೇವೆಯನ್ನು ಧರ್ಮವೆಂದು ಕಂಡ ಮಹನೀಯರು. ನಿಸ್ವಾರ್ಥ ಸೇವಾ ಮನೋಭಾವ ಮತ್ತು ದೂರದೃಷ್ಟಿತ್ವದಿಂದ ಸಮಾಜದ ಸಮಗ್ರ ಅಭಿವೃದ್ಧಿಗೆ ಕಾರಣವಾಗಿರುವ, ಅವರು ಸೇವಾ ಧರ್ಮದ ತವನಿಧಿಯಾಗಿದ್ದಾರೆ.

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್ (ರಿ.)
ಆಶ್ರಯದಲ್ಲಿ ಪ್ರತೀ ವರ್ಷ ಎಪ್ರಿಲ್ ಅಥವಾ ಮೇ ತಿಂಗಳಲ್ಲಿ
ಉಚಿತ ಸಾಮೂಹಿಕ ವಿವಾಹ ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ನಡೆಯುತ್ತದೆ.
ಹೆಚ್ಚಿನ ಮಾಹಿತಿಗಾಗಿ:
ವಿವಾಹ ನೋಂದಣಿ ಕಚೇರಿ, ಧರ್ಮಸ್ಥಳ - 574216
ಮೊಬೈಲ್: 9663464648 / 08256 - 266644 ಗೆ ಸಂಪರ್ಕಿಸಬಹುದು.

ಸಾಮೂಹಿಕ ವಿವಾಹದ ಸಂದರ್ಭ ಶ್ರೀಮತಿ ಸುಪ್ರಿಯ ಹರ್ಷೇಂದ್ರ ಕುಮಾರ್ ಮಾಂಗಲ್ಯ ಸರ ನೀಡುತ್ತಿರುವುದು.

ತರಂಗ

•ಸಂಪುಟ 44 •ಸಂಚಿಕೆ 18
ಎಪ್ರಿಲ್ 30, 2026

ಪ್ರಕಾಶಕರು
ಡಾ|| ಟಿ. ಸತೀಶ್ ಯು. ಪೈ

ವ್ಯವಸ್ಥಾಪಕ ಸಂಪಾದಕರು
ಡಾ|| ಸಂಧ್ಯಾ ಎಸ್. ಪೈ

ಸಂಪಾದಕರು
ಡಾ| ಯು. ಬಿ. ರಾಜಲಕ್ಷ್ಮೀ

ಸಂಪಾದಕೀಯ ವಿಭಾಗ
ಜಯರಾಮ ಕಾರಂತ
ರೇವತಿ
ಸವಿತಾ ಎನ್. ಹೊಳ್ಳ

ವಿನ್ಯಾಸ ಮತ್ತು ಕಲೆ
ಜೇಮ್ಸ್‌ವಾಜ್
ಸುಬ್ರಹ್ಮಣ್ಯ ಯಾದವ್
ಬಿ. ಗಜೇಂದ್ರ ಆಚಾರ್ಯ

ವಿಳಾಸ
ಮಣಿಪಾಲ ಕಚೇರಿ
'ಉದಯವಾಣಿ' ಕಟ್ಟಡ
ಮಣಿಪಾಲ - 576 104
ಫೋನ್ : (0820) 2205000–4275000
E-mail: taranga@manipalpress.com

ಮುಂಬಯಿ ಕಚೇರಿ
616, ದಲ್‌ಮಾಲ್ ಟವರ್ಸ್
ನರಿಮನ್ ಪಾಯಿಂಟ್
ಮುಂಬಯಿ – 400 021
ಫೋನ್ : (022) 22845248
ಫ್ಯಾಕ್ಸ್: (022) 22851764

ಇಂಟರ್‌ನೆಟ್
http://www.tarangaonline.com

ಮುದ್ರಕರು
ಬಿ. ನರಹರಿ
ಮಣಿಪಾಲ ಟೆಕ್ನಾಲಜೀಸ್ ಲಿಮಿಟೆಡ್
ಹಳೆ ಫಾರ್ಮಸಿ ಕಾಲೇಜು ಕಟ್ಟಡ
ಮಣಿಪಾಲ - 576 104

ತರಂಗಾಂತರಂಗ

ಲೇಖನಗಳು

23 ಪಿಯುಸಿ ಎಂಬ ತಿರುವು: ನೂರಾರು ಕೋರ್ಸ್‌ಗಳು ಸಾವಿರಾರು ಉದ್ಯೋಗಾವಕಾಶಗಳು (ಭಾಗ-1) ★ಎನ್. ಅನಂತನಾಗ್

36 ಯಾವ ಹಾದಿ, ಎಲ್ಲಿಗೆ ಪಯಣ... ಎಲ್ಲಿದೆ ಗುರಿ, ನಿಲ್ದಾಣ...? ★ ಶಶಿಕಲಾ ತೊಕ್ಕೊಟ್ಟು

50 ಐಪಿಎಲ್ ದಾಖಲೆಗಳ ಸುನಾಮಿ ★ ಬಾಲಾಜಿ

60 ಸ್ವರಲೋಕದ ಧ್ರುವತಾರೆ: ಆಶಾ ಭೋಂಸ್ಲೆ ★ ದಿಯಾ

(ಟಾಪ್ ಟೆನ್- ಮುಂದಿನ ವಾರ)

ಕಥೆಗಳು

46 ಸಹಾನುಭೂತಿ ★ವಿಜಯಪ್ರಕಾಶ್ ಕಣಕ್ಕೂರು

52 ಇಂಗ್ಲಿಷ್ ಭೂತ ★ಬಸವರಾಜ ಡೋಣೂರ

ಧಾರಾವಾಹಿ

16 ಛತ್ರಪತಿ ಶಿವಾಜಿ :ವೀರಗಾಥೆ-18 ★ ತುಕಾರಾಮ್ ಜಿ. ಎಸ್.

19 ನಿಗೂಢ ಲಕೋಟೆ! -4 ★ಎಸ್.ಜಿ. ಶಿವಶಂಕರ್

56 ಮುಗಿಯದ ಮೌನ - 7 ★ ಡಾ. ಆರತಿ ವೆಂಕಟೇಶ್

ವಿಧಾನವೀಥಿಯಿಂದ **41** ಚಿಣ್ಣರ ಲೋಕ **42** ರಾಷ್ಟ್ರರಾಜಕೀಯ **49**
ಹಸುರಜೇಡ **54** ಭವಿಷ್ಯದರ್ಪಣ **55** ಶಬ್ದಶಿಲ್ಪ **59** ಸೌಖ್ಯ ಸಂವಾದ **62**

ಮುಖಪುಟ ವಿನ್ಯಾಸ : **ಜೇಮ್ಸ್‌ವಾಜ್**

('ತರಂಗ'ದಲ್ಲಿ ಪ್ರಕಟವಾಗುವ ಲೇಖನ, ವಿಚಾರಗಳು, ಕಥೆ - ಕಾದಂಬರಿಗಳಿಗೆಲ್ಲ ಲೇಖಕರೇ ಜವಾಬ್ದಾರರು. - ಸಂಪಾದಕರು)

ಪ್ರಿಯ ಓದುಗರೇ...

ತರಂಗ

30-4-2026

ವೇಷಧಾರಣೆಯ ವರ್ತುಲದೊಳಗೆ...

ಒಂದಾನೊಂದು ಕಾಲದಲ್ಲಿ ಒಂದಾನೊಂದು ದೇಶದಲ್ಲಿ ಒಬ್ಬ ಪರಿಪೂರ್ಣ ಛದ್ಮವೇಷಧಾರಿ ಇದ್ದ. ಇವರನ್ನು ಉತ್ತರಭಾಗದಲ್ಲಿ 'ಬಹುರೂಪಿಯಾ' ಎಂದು ಕರೆಯುತ್ತಾರೆ. ಇವರು ಯಾವ ವೇಷಧಾರಣೆ ಮಾಡುತ್ತಾರೋ ಅದೇ ಆಗಿ ಪರಿವರ್ತನೆಯಾಗುವುದು ಇವರ ವಿಶೇಷ. ಈ ಕಾರಣಕ್ಕಾಗಿ ಇವನು ಬಲು ಪ್ರಖ್ಯಾತನಾಗಿದ್ದ. ಎಲ್ಲಿಯವರೆಗೆ ಎಂದರೆ, ಇವನ ಖ್ಯಾತಿ ರಾಜ್ಯದ ಮಹಾರಾಜನ ಕಿವಿಗೂ ಬಿದ್ದು, ರಾಜ ಇವನನ್ನು ದರ್ಬಾರಿಗೆ ಆಹ್ವಾನಿಸಿದ. ಇವನಿಗೆ ತುಂಬಾ ಸಂತೋಷವಾಯಿತು. ''ಪ್ರಭೂ, ತಮ್ಮ ಮುಂದೆ ನಿಲ್ಲುವ ಈ ಅವಕಾಶ ನನ್ನ ಸೌಭಾಗ್ಯ ಎಂದುಕೊಂಡಿದ್ದೇನೆ. ಯಾವ ರೀತಿಯಲ್ಲಿ ನನ್ನ ಈ ವಿದ್ಯೆ ನೋಡಬಯಸುತ್ತೀರಿ? ಒಂದು ಮಾತು ನೆನಪಿರಲಿ. ನಾನು ಧರಿಸುವ ವೇಷದಿಂದ ನನ್ನ ಗುಣ, ಸ್ವಭಾವಗಳೂ ಬದಲಾಗಿ, ನಾನು 'ಆ' ವೇಷದ ಮೂಲವೇ ಆಗಿ ಹೋಗುತ್ತೇನೆ'' ಎಂದ ವಿನಯದಿಂದ. ಕೂಡಲೇ ಅಲ್ಲಿಯೇ ಇದ್ದ ಎಳೆಯ ವಯಸ್ಸಿನ ರಾಜಕುಮಾರ ''ಹುಲಿಯಾಗು, ದೊಡ್ಡ ಗಾತ್ರದ ಘರ್ಜಿಸುವ, ಕ್ರೂರ ಹುಲಿಯಾಗು, ನನಗೆ ನೋಡಬೇಕು'' ಎಂದ ಉತ್ಸಾಹದಿಂದ.

ಹುಡುಗನ ಮಾತುಗಳನ್ನು ಕೇಳಿದ ಸಭಾಸದರು, ''ಹಾಗೇ ಆಗಲಿ. ಹುಲಿಯಾಗು'' ಎಂದರು. 'ಬಹುರೂಪಿಯಾ' ಒಂದು ಕ್ಷಣ ಯೋಚಿಸಿದ. ಅನಂತರ ''ಹಾಗೇ ಆಗಲಿ. ಆದರೆ ಯಾರೂ ನನಗೆ ಕಿರುಕುಳ ನೀಡಬೇಡಿ, ಹತ್ತಿರ ಬರಬೇಡಿ. ನಾನು ಹುಲಿಯಾಗಿದ್ದಾಗ ಏನಾದರೂ ಆಗಬಾರದ್ದು ಆದರೆ ನನಗೆ ಶಿಕ್ಷೆಯಾಗಬಾರದು ಎಚ್ಚರ, ಎಚ್ಚರ'' ಎಂದು ಹೇಳಿ, ಮುಖ ಮೈಗಳಿಗೆ ಬಣ್ಣ ಬಳಿದು ಕೊಂಡುಬಂದ. ನೆಲದ ಮೇಲೆ ಪದ್ಮಾಸನ ಹಾಕಿ ಕಣ್ಣುಮುಚ್ಚಿ ಐದು ನಿಮಿಷ ನಿಶ್ಚಲವಾಗಿ ಕುಳಿತುಕೊಂಡ. ಮತ್ತೆ ಕಣ್ಣು ತೆರೆದಾಗ ಅವನು ಸಂಪೂರ್ಣ ಬದಲಾದ. ಅವನ ಕೊರಳೊಳಗಿನಿಂದ ಹೊರಬಿದ್ದ ಘರ್ಜನೆಗೆ ಅರಮನೆ ನಡುಗಿತು. ಅವನು ನಡೆದಾಡುತ್ತಾ ಅತ್ತಿತ್ತ ನೋಡುತ್ತಿದ್ದರೆ ಸಭಾಸದರು ಅಲ್ಲಲ್ಲಿ ಅಡಗಿಕೊಂಡರು. ಇಷ್ಟಿದ್ದರೂ ಅವರಿಗೆ ಅವನು ಒಬ್ಬ 'ವೇಷಧಾರಿ ಮನುಷ್ಯ' ಎಂಬ ತಿಳುವಳಿಕೆ ಇತ್ತು. ರಾಜಕುಮಾರ ಸ್ವಲ್ಪ ಹೆದರಿದರೂ ಇದೇ ಅರಿವಿನಿಂದ ಒಂದು ಹೆಜ್ಜೆ ಮುಂದೆ ಬಂದು ಒಂದು ಕೋಲಿನಿಂದ ಹುಲಿಯನ್ನು ತಿವಿಯುವ ಪ್ರಯತ್ನ ಮಾಡತೊಡಗಿದ. ಹುಲಿ ಇವನ ತಿವಿತ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿತು. ರಾಜಕುಮಾರ ಮತ್ತೆ ಮತ್ತೆ ತಿವಿಯತೊಡಗಿದಾಗ ಅದು ತನ್ನ ಕೈ ಎತ್ತಿ ರಾಜಕುಮಾರನಿಗೆ ಬಲವಾಗಿ ಒಂದೇಟು ಹಾಕಿತು.

ಏಟು ಎಷ್ಟು ಬಲವಾಗಿತ್ತೆಂದರೆ, ರಾಜಕುಮಾರನ ಕತ್ತು ಮುರಿಯಿತು. ಅವನು ಅಷ್ಟು ಎತ್ತರಕ್ಕೆ ಹಾರಿ ಕೆಳಗೆ ಬಿದ್ದ. ತಲೆ ಒಡೆದು ರಕ್ತ ಹರಿಯಿತು. ಅವನ ಪ್ರಾಣ ಹೋಯಿತು. ಸಭೆಯಲ್ಲಿ ಹಾಹಾಕಾರ ಉಂಟಾಯಿತು. ಮಂದಿ ಎದ್ದು ಓಡತೊಡಗಿದರು. ಗಲಾಟೆಯಲ್ಲಿ ಹುಲಿ ಅರಮನೆಯಿಂದ ಹೊರಗೆ ಓಡಿ ಹೋಯಿತು. ಹುಡುಕಿದರೂ ಸಿಕ್ಕಲೇ ಇಲ್ಲ. ಎರಡು ದಿನಗಳ ಅನಂತರ 'ಅವನು' ತಾನಾಗಿಯೇ ಮರಳಿ ಬಂದು ರಾಜನ ಮುಂದೆ ನಿಂತ. ಅವನ ಕಣ್ಣುಗಳಿಂದ ನೀರು ಹರಿಯುತ್ತಿತ್ತು. ರಾಜನಿಗೆ ಒಂದು ಕಡೆ ಕೋಪ, ಮತ್ತೊಂದು ಕಡೆ ಅಸಹಾಯಕತೆ! ಇದರಲ್ಲಿ 'ಬಹುರೂಪಿಯಾ' ನ ತಪ್ಪೇನೂ ಇರಲಿಲ್ಲ ಎಂದವನಿಗೆ ಗೊತ್ತಿತ್ತು. ಅವನು ಮೊದಲೇ ತಮ್ಮನ್ನು ಎಚ್ಚರಿಸಿದ್ದ. ಬಾರಿಬಾರಿಗೂ ತಡೆದಿದ್ದ. ಎಲ್ಲವೂ ಸರಿ. ಆದರೆ ರಾಜ ಪುತ್ರ ಶೋಕದಿಂದ ತೀರಾ ದುಃಖಿತನೂ ಆಗಿದ್ದ. ಇವನನ್ನು ಶಿಕ್ಷಿಸು ಎನ್ನುತ್ತಿತ್ತು ಅವನ ಮನಸ್ಸು, ಕುಟುಂಬ ಹಾಗೂ ಮಂತ್ರಿಮಂಡಲ. ಅವನೆಂದ, '' ಈಗ ನೀನು ಸರ್ವಸಂಗ ಪರಿತ್ಯಾಗಿಯಾಗು. ನೋಡೋಣ'' ಎಂದ. ಒಪ್ಪಿದ ವೇಷಧಾರಿ ಕಾವಿವಸ್ತ್ರ ಉಟ್ಟು, ಭಸ್ಮಧಾರಿಯಾಗಿ ಬಂದ. ಹಿಂದಿನಂತೆ ಐದು ನಿಮಿಷ ಧ್ಯಾನಸ್ಥನಾಗಿ ಕಣ್ಣು ತೆರೆದ.

ಆ ಕ್ಷಣ ಮಿಂಚು ಹೊಡೆದಂತಾಯಿತು. ಅವನ ದೇಹದಿಂದ ಹೊರಹೊಮ್ಮುತ್ತಿದ್ದ ದಿವ್ಯಪ್ರಭೆಯಿಂದ ಭುವಿ ಬೆಳಗಿತು. ಕೂಡಲೇ ಸೇವಕರು ಅಮೂಲ್ಯ ಧನ-ಕನಕ ತುಂಬಿದ್ದ ಪೆಟಾರಿಗಳನ್ನು ಅವನ ಮುಂದಿಟ್ಟರು. ರಾಜ ತನ್ನ ಕಿರೀಟ ಕಳಚಿ ಅವನ ಮುಂದಿಟ್ಟು '' ಈ ಕ್ಷಣದಿಂದ ಈ ಸಮಸ್ತವನ್ನು ತಮಗೆ ಒಪ್ಪಿಸಿದ್ದೇನೆ. ಸ್ವೀಕರಿಸಿ'' ಎಂದ. ಸಂತ ಒಂದಿನಿತೂ ವಿಚಲಿನಾಗಲಿಲ್ಲ. ''ರಾಜ, ಇವೆಲ್ಲವೂ ಮಾಯೆ, ನಾನು ನನ್ನ ಜೀವನದ ಅಂತಿಮ ಹಂತ ಕಂಡುಕೊಂಡಿದ್ದೇನೆ. ಇದೋ ನಾನು ಕಟ್ಟಕಡೆಗೆ ನನ್ನ ಈ 'ಬಹುರೂಪಿ' ವೃತ್ತಿಯನ್ನು ತ್ಯಜಿಸುತ್ತಿದ್ದೇನೆ. ನೀನು ನ್ಯಾಯದಿಂದ, ಧರ್ಮದಿಂದ ರಾಜ್ಯ ಪಾಲಿಸು'' ಎಂದು ಹೇಳಿ ಹೊರಟು ಹೋದ.

ಅವನು ಮತ್ತೆಂದೂ ವೇಷಧಾರಣೆ ಮಾಡಲಿಲ್ಲ. ಹೊಸವೇಷ ಧರಿಸಲಿಲ್ಲ. ಏಕೆಂದರೆ, ವೇಷಬದಲಾವಣೆಯ 'ಆ' ವೇಷದಲ್ಲಿ ಬದುಕುವ ನಿರರ್ಥಕತೆ ಹಾಗೂ ಸಾರ್ಥಕತೆಗಳನ್ನು ಅವನು ಅರ್ಥಮಾಡಿಕೊಂಡಾಗಿತ್ತು. ಈ ವೇಷದಲ್ಲಿ ಯಾವ ಆಮಿಷಗಳೂ ಅವನನ್ನು ವಿಚಲಿತಗೊಳಿಸುತ್ತಿರಲಿಲ್ಲ. ಇಲ್ಲಿ ಖ್ಯಾತಿಯ ಸಿರಿ ಸಂಪದದ ಕಾಮನೆಗಳಿರಲಿಲ್ಲ.
ಓದುಗ, ಇದೊಂದು ಸುಂದರ, ಬಲು ಮಾರ್ಮಿಕ,
ಬಹು ಆಯಾಮಿ ಕಥೆ.

ಸಂಧ್ಯಾ ಪೈ

(ವ್ಯವಸ್ಥಾಪಕ ಸಂಪಾದಕರು)

ಮುಖಪುಟ

'**ತ**ರಂಗ' ಏಪ್ರಿಲ್ 9, 2026ರ ಸಂಚಿಕೆಯಲ್ಲಿ ಪ್ರಕಟವಾದ ಡಾ। ಕೆ. ಚಿನ್ನಪ್ಪ ಗೌಡ ಅವರ 'ಸಿರಿಜಾತ್ರೆ ಆಚರಣೆ- ಸ್ತ್ರೀಕುಲದ ಅಸ್ಮಿತೆಗೆ ಬಿಡುಗಡೆಯ ಭರವಸೆ' ಲೇಖನ ಉತ್ತಮವಾಗಿದೆ. ದೇವರ ಮೇಲಿನ ನಂಬಿಕೆ ಮನುಷ್ಯನ ಮಾನಸಿಕ ನೆಮ್ಮದಿಗೆ ಕಾರಣವಾಗಿರುತ್ತದೆ. ನಮ್ಮಿಂದ ಅತೀತವಾದ ಶಕ್ತಿ ಜಗತ್ತನ್ನು ನಡೆಸುತ್ತದೆ, ನಮ್ಮ ಮೇಲೂ ಅದರ ಹತೋಟಿ ಇರುತ್ತದೆ ಎಂಬ ನಂಬಿಕೆಯೇ ನಾವೆಲ್ಲಾ ಪ್ರೀತಿಯಿಂದ ಬದುಕುವಂತೆ ಮಾಡುತ್ತದೆ. ಯಾವುದೂ ಅತಿಯಾಗದೆ, ಶೋಷಣೆ ಮುಕ್ತವಾಗಿದ್ದಾಗ ಜಾತ್ರೆಗೊಂದು ಅರ್ಥ ಸಿಗುತ್ತದೆ.

ಪ್ರೊ. ಮಧೂರು ಮೋಹನ ಕಲ್ಲೂರಾಯ, ಗೇರುಕಟ್ಟೆ

ನಮ್ಮ ಸಂಸ್ಕೃತಿಯ ಆಚರಣೆಗಳಲ್ಲಿ ಎಷ್ಟೊಂದು ವೈವಿಧ್ಯತೆಗಳಿವೆ ಎನ್ನುವುದನ್ನು ತೋರಿಸಿದ ಲೇಖನ. ಮಹಿಳೆಯರೇ ಪ್ರಧಾನವಾಗಿ ಭಾಗವಹಿಸುವ ಈ ಆಚರಣೆಯ ಬಗ್ಗೆ ಕೇಳಿ ಸಂತೋಷವಾಯಿತು. ವ್ಯಕ್ತಿಯಾಗಿ ಹೊಸಿಲು ದಾಟಲಾರದ ಮಹಿಳೆ ಸಮಷ್ಟಿಯಾಗಿ, ಶಕ್ತಿಯಾಗಿ ಹೊರಹೊಮ್ಮುವ ಬಗೆ ಅನನ್ಯ.

ಚೈತನ್ಯ ಎಂ., ಮೈಸೂರು

ಸಿರಿ ಮಹಾಕಾವ್ಯದ ಕುರಿತು ತಿಳಿದು ಅಚ್ಚರಿಯಾಯಿತು. ಸಾವಿರಾರು ಸಾಲುಗಳ ಮೌಖಿಕ ಮಹಾಕಾವ್ಯಗಳು ಹೇಗೆ ನಿರ್ಮಾಣವಾಗುತ್ತವೆ ಎಂಬ ಪ್ರಶ್ನೆಗೆ ಉತ್ತರ ಹುಡುಕುವುದು ಕಷ್ಟದ ಸಂಗತಿ.

ಲೇಖಾ ಕೆ.ಜೆ., ಸುಬ್ರಹ್ಮಣ್ಯ

ತುಳುನಾಡಿನ ಆಚರಣೆಗಳಾದ ಭೂತಾರಾಧನೆ, ಕೋಲ, ನಾಗಮಂಡಲ ಇತ್ಯಾದಿಗಳ ಬಗ್ಗೆ ತಿಳಿದಿದ್ದ ನಮಗೆ ಸಿರಿಜಾತ್ರೆ ಹೊಸ ಸಂಪ್ರದಾಯವನ್ನು ಪರಿಚಯಿಸಿತು. ಸ್ತ್ರೀವರ್ಗದ ಸ್ವಾಭಿಮಾನ ಹಾಗೂ ಕಾರಣಿಕ ಶಕ್ತಿಯನ್ನು ಪ್ರಸ್ತುತಪಡಿಸುವ ಈ ಆಚರಣೆ ಸೇವಾರೂಪದಲ್ಲಿ ಅರ್ಪಣೆಯಾಗುವುದನ್ನು ತಿಳಿದು ಅಚ್ಚರಿಯಾಯಿತು.

ಮಂಗಳಾ ಕುಮಾರಿ, ಬೀದರ್

ಪ್ರಿಯ ಓದುಗರೇ

ಡಾ।। ಸಂಧ್ಯಾ ಪೈ ಅವರ 'ಸೂಕ್ತ ಸಮಯದ ಸೂಕ್ತ ನಿರ್ಧಾರಕ್ಕಿರಲಿ ಒತ್ತು' ಸಂಪಾದಕೀಯ ಸೊಗಸಾಗಿತ್ತು. 'ಊರು ಕೊಳ್ಳೆ ಹೊಡೆದ ಮೇಲೆ ಕೋಟೆ ಬಾಗಿಲು ಹಾಕಿದರು' ಎಂಬ ಗಾದೆಯಂತೆ, ಯಾವುದೇ ಕೆಲಸವನ್ನು ಸರಿಯಾದ ಸಮಯದಲ್ಲಿ ಮಾಡಿದರೆ ಕ್ಷೇಮ, ಇಲ್ಲದಿದ್ದರೆ ಅಪಾಯ ತಪ್ಪಿದ್ದಲ್ಲ. ಇದನ್ನು ಕೇಂದ್ರ ಹಾಗೂ ರಾಜ್ಯಗಳಲ್ಲಿ ಅಧಿಕಾರ ಹಿಡಿದ ಪಕ್ಷಗಳು ಗಮನಿಸಬೇಕು.

ಬಾಣಾವರ ನಾಗರಾಜ, ಜೆ.ಪಿ. ನಗರ

ಸರಿಯಾದ ಸಮಯಕ್ಕೆ ಸರಿಯಾದ ನಿರ್ಧಾರ ತೆಗೆದುಕೊಳ್ಳದೆ ಹೋದರೆ ಆಗಬಹುದಾದ ಕಷ್ಟ ನಷ್ಟದ ಪ್ರಮಾಣವನ್ನು ದೃಷ್ಟಾಂತದ ಮೂಲಕ ತಿಳಿಹೇಳಿರುವ ಪರಿ ಅನನ್ಯ. ಸಣ್ಣ ಪುಟ್ಟ ಕಲಹಗಳು ಹೇಗೆ ಮಹಾಸಮರಗಳಿಗೆ ನಾಂದಿ ಹಾಡುತ್ತವೆ ಎಂಬುದು ಸ್ಪಷ್ಟವಾಯಿತು. 'ಆಲಸ್ಯಂ ಅಮೃತಂ ವಿಷಂ' ಎಂಬ ಸುಭಾಷಿತದ ನೆನಪಾಯಿತು.

ನೆ.ಲ. ರಾಮಮೂರ್ತಿ, ವಿಜಯನಗರ

ಸುರುಳಿ ಚಿತ್ರಪಟ ಕಲೆ

ಲೋಕೇಶ್ ಅವರ 'ಹಾಡಿದೆ, ಚಿತ್ರಗಳಿವೆ, ಕುಣಿಸುವವರೆಲ್ಲಿ? ಸುರುಳಿ ಚಿತ್ರ ಕಲೆ' ಲೇಖನ ಶತಮಾನಗಳ ಇತಿಹಾಸ ಇರುವ ಅಪೂರ್ವ ಕಲೆಯೊಂದರ ಚಿತ್ರಣ ನೀಡಿತು. ಸಿನೆಮಾ ರೀಲ್‌ನಂತೆ ಸುರುಳಿಸುರುಳಿಯಾಗಿ ತೆರೆದುಕೊಳ್ಳುವ ಆಂಧ್ರಪ್ರದೇಶದ ಚೆರಿಯಾಲ್ ಎಂಬ ಹಳ್ಳಿಯಲ್ಲಿ ಇಂದಿಗೂ ಜೀವಂತವಾಗಿ ಉಳಿದಿರುವ ಈ ಅನಾದಿ ಜಾನಪದ ಕಲೆ ಈಗ ಕೆಲವೇ ಕೈಗಳಿಗೆ ಸೀಮಿತವಾಗಿರುವುದು ವಿಷಾದನೀಯ.

ಪಿ. ಜಯವಂತ ಪೈ, ಕುಂದಾಪುರ

ಈ ಚಿತ್ರಗಳ ಸುರುಳಿ ಬಿಚ್ಚುತ್ತಾ ಹೋದಂತೆ ಅದಕ್ಕೆ ಸಂಬಂಧಿಸಿದ ಹಲವು ಕತೆಗಳನ್ನು ಹೇಳುತ್ತಿದ್ದರು. ಆಗಿನ ಕಾಲದಲ್ಲಿ ಇದೊಂದು ಮನೋರಂಜನೆಯ ಸಾಧನೆಯಾಗಿತ್ತು ಎಂಬುದು ಕುತೂಹಲಕರ ಸಂಗತಿ.

ಸವಿತಾ ಶಂಕರ ಪುರಾಣಿಕ, ಕುಮಟಾ

ಜನಮನ

ದಾರುಮಾ: ಅದೃಷ್ಟದ ಗೊಂಬೆಗಳು

ರತ್ನಾ ಜಿ.ಎಸ್. ಅವರ 'ದಾರುಮಾ: ಅದೃಷ್ಟದ ಗೊಂಬೆಗಳು' ಲೇಖನ ಸೊಗಸಾಗಿತ್ತು. ವಿಶ್ವದಲ್ಲೇ ಅತಿ ಶಿಸ್ತುಬದ್ಧ ಜೀವನ ನಡೆಸುವ ಜಪಾನೀಯರ ಬದುಕಲ್ಲಿ ಈ ಗೊಂಬೆಗಳ ಪಾತ್ರ ವಿಶೇಷವಾಗಿದೆ. ದಾರುಮಾ ಗೊಂಬೆಗಳ ಮೂಲ ಭಾರತದ ರಾಜಪರಂಪರೆಯೊಂದಿಗೆ ಥಳುಕು ಹಾಕಿಕೊಂಡಿರುವುದನ್ನು ತಿಳಿದು ಆಶ್ಚರ್ಯವಾಯಿತು. ಈ ಗೊಂಬೆಗಳು ನಮ್ಮ 'ಗಣೇಶ' ಮೂರ್ತಿಯಂತೆ ಜೀವನದಲ್ಲಿ ಅದೃಷ್ಟವನ್ನು ತರುತ್ತವೆ ಎಂಬ ಭಾವ ಮೂಡಿತು.

ವಾಣಿ ರಾಮಾರಾಧ್ಯ, ಮೈಸೂರು

ಅದೃಷ್ಟವನ್ನು ಅತಿಯಾಗಿ ನಂಬುವ ಜಪಾನೀಯರು ಮನೆ, ಕಚೇರಿಗಳಲ್ಲಿ ಈ ಗೊಂಬೆಗಳನ್ನು ಇಟ್ಟುಕೊಳ್ಳುತ್ತಾರೆ. ಯಾವುದೇ ಹೊಸ ಕೆಲಸಕ್ಕೆ ಕೈಹಾಕುವುದಿದ್ದರೂ ಅವರೊಂದಿಗೆ ಈ ಗೊಂಬೆ ಇದ್ದೇ ಇರುತ್ತದೆ ಎಂಬುದನ್ನು ತಿಳಿದು ಅಚ್ಚರಿಯಾಯಿತು. ಜಿಂದಾಯ್ಜಿ ದೇವಾಲಯದ ದಾರುಮಾ ಜಾತ್ರೆಯ ಮಾಹಿತಿ ಸಮಗ್ರವಾಗಿತ್ತು.

ಕೇಶವಮೂರ್ತಿ, ಕಳಸ

ನೇಪಾಳ-ಹತ್ತು ನೋಟ

ಚಿನ್ಮಯ್ ಅವರ 'ನೇಪಾಳ-ಹತ್ತು ನೋಟ' ಟಾಪ್‌ಟೆನ್ ಸರಣಿ ಕುತೂಹಲಕಾರಿಯಾಗಿತ್ತು. ಭಾರತೀಯರು ಪಾಸ್‌ಪೋರ್ಟ್ ಇಲ್ಲದೆಯೂ ಹೋಗಲು ಸಾಧ್ಯವಿರುವ ದೇಶಗಳಲ್ಲಿ ನೇಪಾಳ ಕೂಡಾ ಒಂದು. ಹಿಮಾಲಯ ಪರ್ವತದ ನಡುವೆ ಇರುವ ಈ ದೇಶ ಪ್ರವಾಸಿಗರ ಸ್ವರ್ಗ. ಇಲ್ಲಿ ಹಲವು ಐತಿಹಾಸಿಕ, ಧಾರ್ಮಿಕ ಕ್ಷೇತ್ರಗಳು ಮಾತ್ರವಲ್ಲ ಸುಂದರ ಕಣಿವೆ ಪ್ರದೇಶಗಳಿವೆ. ಲೇಖನ ಪ್ರವಾಸಿಗರಿಗೆ ನೆಚ್ಚಿನ ಕೈಪಿಡಿಯಾಗುವಂತಿತ್ತು.

ಶಿವಣ್ಣ, ಕಾಸರಗೋಡು

ಕಾಠ್ಮಂಡುವಿನ ಶಿವ ದೇವಾಲಯ, ಟಿಬೆಟಿಯನ್ನರ ಧಾರ್ಮಿಕ ಕೇಂದ್ರ ಬೌದ್ಧನಾಥ ಸ್ತೂಪ, ವಾನರ ದೇವಾಲಯ ಸ್ವಯಂಭೂನಾಥ, ಗೌತಮ ಬುದ್ಧನ ಜನ್ಮಸ್ಥಾನ ಲುಂಬಿನಿ, ಐತಿಹಾಸಿಕ ಸ್ಮಾರಕ ಭಕ್ತ್‌ಪುರ್, ದೈವಿಕ ಪರ್ವತ ಸಾಗರಮಾತಾ ಮೊದಲಾದೆಡೆ ಭೇಟಿ ನೀಡಿದ ಅನುಭವ ದೊರೆಯಿತು. ಇಂಥ ಅಪರೂಪದ ಸ್ಥಳ ಪರಿಚಯದ ಲೇಖನಗಳು ಪತ್ರಿಕೆಯಲ್ಲಿ ಹೆಚ್ಚು ಪ್ರಕಟಗೊಳ್ಳಲಿ.

ವಿಭಾ ಸಂಪತ್, ಚೆನ್ನರಾಯಪಟ್ಟಣ

ಡಾ।। ಸಂಧ್ಯಾ ಎಸ್. ಪೈ ಅವರ ಮಧುರ ಧ್ವನಿಯಲ್ಲಿ...

ದಶಕಗಳಿಂದ ನಾಡಿನ ಮನೆಮಾತಾಗಿರುವ 'ತರಂಗ' ವಾರಪತ್ರಿಕೆಯ ಜನಪ್ರಿಯ ಅಂಕಣ ಪ್ರಿಯ ಓದುಗರೇ...

ಮುದ್ದು ಮಕ್ಕಳ ನೆಚ್ಚಿನ 'ಸಂಧ್ಯಾಮಾಮಿ' ಹೇಳಿದ ಮನೋಜ್ಞ ರಾಮಾಯಣ

ಸಂಧ್ಯಾವಾಣಿ

ಕೇಳಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ .

ಲಿಂಕ್: https://www.udayavani.com/sandhyavani

ಛತ್ರಪತಿ ಶಿವಾಜಿ

ಸ್ವರಾಜ್ಯ ಸಂಕಲ್ಪದ ಅಪ್ರತಿಮ ವೀರಗಾಥೆ

ಕರ್ತಲಬ್‌ಖಾನ್‌ನ ದಂಡಯಾತ್ರೆ

ಅಧ್ಯಾಯ 18

❑ **ತುಕಾರಾಮ್ ಜಿ. ಎಸ್.**

ಔರಂಗಜೇಬನ ಮಾವ ಶೈಸ್ತಾಖಾನ್ ಚಕಾನ್ ಕೋಟೆಗೆ ಮುತ್ತಿಗೆ ಹಾಕಿ ಎರಡು ತಿಂಗಳು ಆಗುತ್ತ ಬಂದಿತ್ತು. ಏನೇನು ಮಾಡಿದರೂ ಕೋಟೆಯನ್ನು ವಶಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಚಕಾನ್ ಕಗ್ಗಲ್ಲಿನ ಸುಭದ್ರ ಕೋಟೆ. ಕೋಟೆಯ ಸುತ್ತ ತೆರೆದ ಬಯಲು ಭೂಮಿ. ಕೋಟೆಯಿಂದ ಫಿರಂಗಿ ಗುಂಡುಗಳು ಸಿಡಿದರೆ ಮೊಘಲ್ ಸೈನಿಕರಿಗೆ ಬಚ್ಚಿಟ್ಟುಕೊಳ್ಳಲು ಜಾಗವೇ ಇರಲಿಲ್ಲ. ಅದರ ಹೊಡೆತದಿಂದ ತಪ್ಪಿಸಿಕೊಳ್ಳಲು ಮೊಘಲ್ ದಂಡು ದೂರ ಸರಿದಿತ್ತು. ಅಷ್ಟು ದೂರದಿಂದ ತೋಪು ಹಾರಿಸಿ ನೋಡಿದರೆ ಗುಂಡುಗಳು ಕೋಟೆಯ ಸಮೀಪ ಕೂಡ ತಲಪುತ್ತಿರಲಿಲ್ಲ.

ಕೊನೆಗೆ ಶೈಸ್ತಾಖಾನ್ ಒಂದು ಉಪಾಯ ಯೋಚಿಸಿದ.

ಅವನ ಸೈನಿಕರು ಬಯಲಿನ ಕೆಳಗಿನಿಂದ ಸುರಂಗ ತೋಡಿದರು. ಚಕಾನ್‌ನ ಒಳಗೆ ಕುಳಿತವರಿಗೆ ಸುಳಿವೂ ಸಿಗದಂತೆ ಕೋಟೆಯ ತಳದ ತನಕ ಸುರಂಗ ತೋಡಿ, ಅಲ್ಲಿ ಸಿಡಿಮದ್ದುಗಳನ್ನು ರಾಶಿ ಪೇರಿಸಿದರು. ಕೊಬ್ಬು ಸವರಿದ ಸೆಣಬಿನ ಹಗ್ಗವನ್ನು ಸಿಡಿಮದ್ದಿಗೆ ಜೋಡಿಸಿ, ಅದರ ಇನ್ನೊಂದು ಕೊನೆಯನ್ನು ಮೈದಾನದ ಹೊರಗೆ ಅವರ ಡೇರೆಯ ತನಕ ತಂದರು.

ಮುಂಜಾನೆ ಸೂರ್ಯ ಮೂಡುವ ಮೊದಲೇ ಮೊಘಲ ಸೈನ್ಯ ಆಕ್ರಮಣಕ್ಕೆ ಸಜ್ಜಾಗಿ ನಿಂತಿತು. ಬೆಂಕಿ ಹಚ್ಚಲು ಶೈಸ್ತಾಖಾನ್ ಆದೇಶ ನೀಡಿದ. ಸೈನಿಕರು ಹಗ್ಗಕ್ಕೆ ಬೆಂಕಿ ಹಚ್ಚಿ ಕಾದು ನಿಂತರು.

ಹಗ್ಗ ಉರಿಯುತ್ತ ಸುರಂಗದೊಳಗೆ ಹೋಯಿತು. ಸುಮಾರು ಅರ್ಧ ಗಂಟೆಯ ಬಳಿಕ ಸಿಡಿಮದ್ದಿನ ದಾಸ್ತಾನಿಗೆ ತಲಪಿತು. ಸಿಡಿಮದ್ದುಗಳು ಭಾರೀ ಶಬ್ದದೊಡನೆ ಸ್ಫೋಟಿಸಿದವು.

ಭೂಮಿಯೊಳಗಿನ ವಿಸ್ಫೋಟದ ಅಬ್ಬರಕ್ಕೆ ನೆಲ ಬಿರಿಯಿತು, ಜೊತೆಗೇ ಕೋಟೆಯ ಒಂದು ಭಾಗದ ಗೋಡೆ ಧಡಧಡನೆ ಕುಸಿದು ಬಿತ್ತು.

ಚಕಾನ್ ಕೋಟೆ ಗಡಗಡ ನಡುಗಿತು. ದಳಪತಿ ಫಿರಂಗೋಜಿ ನರ್ಸಾಲಾ ಸೈನಿಕರೊಡನೆ ಕುಸಿದ ಗೋಡೆಯ ಬಳಿಗೆ ಧಾವಿಸಿದ. ದೂರದಲ್ಲಿ ಮೊಘಲ್ ಸೈನಿಕರು ಕೇಕೆ ಹಾಕುತ್ತ ಕೋಟೆಯತ್ತ ಓಡಿ ಬರುತ್ತಿರುವುದು ಕಾಣಿಸಿತು.

ಗೋಡೆಯ ಜೊತೆಗೆ ಅಲ್ಲಿನ ಬುರುಜು ಕುಸಿದಿತ್ತು, ಅದರಲ್ಲಿದ್ದ ತೋಪುಗಳು ಮಣ್ಣುಪಾಲಾಗಿದ್ದವು. ಕಾವಲು ಪಡೆಯ ಸೈನಿಕರು ಹತ್ತಿರದ ಬುರುಜಿನ ತೋಪುಗಳನ್ನು ತಿರುಗಿಸಿ ದಾಳಿಕೋರರತ್ತ ಗುಂಡು ಹಾರಿಸಲು ತಯಾರಿ ಮಾಡಿದರು.

ಆದರೆ ಅದಕ್ಕೆ ಮೊದಲೇ ಶತ್ರು ಸೈನಿಕರು ಓಡುತ್ತ ಕೋಟೆ ತಲಪಿದರು. 'ದೀನ್! ದೀನ್!' ಕಿರುಚಾಟದ ಜೊತೆಗೆ ಮೊಘಲ್ ಕಾಲಾಳುಗಳು ಕುಸಿದ ಗೋಡೆಯ ಕಲ್ಲುಬಂಡೆಗಳನ್ನೇರಿ ಮೇಲೆ ಹತ್ತಿದರು.

ಫಿರಂಗೋಜಿ ಖಡ್ಗ ಮೇಲೆತ್ತಿ 'ಹರ ಹರ ಮಹಾದೇವ! ಜೈ ಭವಾನಿ!' ಎಂದು ಕೂಗಿದ. ಅವನ ಸೈನಿಕರು ಈಟಿ, ಖಡ್ಗಗಳನ್ನು ಹಿಡಿದು ಕೋಟೆಯಿಂದ ಕೆಳಗೆ ಧುಮುಕಿ ಶತ್ರುಗಳ ಮೇಲೆರಗಿದರು.

ಭೀಕರ ಯುದ್ಧ ಆರಂಭವಾಯಿತು. ಫಿರಂಗೋಜಿ ಸ್ವತಃ ಮೊಘಲರನ್ನು ಎದುರಿಸಿ ವೀರಾವೇಶದಿಂದ ಹೋರಾಡಿದ. ಆದರೆ ಮೊಘಲ ಸೈನಿಕರ ಸಂಖ್ಯೆ ಅಪಾರವಾಗಿತ್ತು. ಅದರ ಮುಂದೆ ಕೋಟೆಯ ರಕ್ಷಕರ ಕೈ ಸಾಗಲಿಲ್ಲ, ಯುದ್ಧ ಬೇಗನೆ ಮುಗಿದುಹೋಯಿತು.

ಮೈಯೆಲ್ಲ ಗಾಯವಾಗಿದ್ದ ಫಿರಂಗೋಜಿ ಹತಾಶೆಯಿಂದ ನೆಲಕ್ಕೆ ಕುಸಿದ. ಮೊಘಲ ಸೈನಿಕರು ಅವನನ್ನು ಸಂಕೋಲೆಗಳಲ್ಲಿ ಬಂಧಿಸಿ ಶೈಸ್ತಾಖಾನ್‌ನ ಬಳಿಗೆ ಎಳೆದೊಯ್ದರು.

ಒಂದು ಪುಟ್ಟ ಕೋಟೆಯನ್ನು ಐವತ್ತಾರು ದಿನಗಳ ಕಾಲ ರಕ್ಷಿಸಿದ್ದ ವೃದ್ಧ ಫಿರಂಗೋಜಿ ನರ್ಸಾಲಾನ ಸಾಹಸವನ್ನು ಶೈಸ್ತಾಖಾನ್ ಕೂಡ ಮೆಚ್ಚಿದ. ''ನನ್ನ ಸೈನ್ಯಕ್ಕೆ ಸೇರಿಕೊಳ್ಳು. ಕೋಟೆಯನ್ನು ನಿನ್ನ ವಶಕ್ಕೇ ಕೊಡುತ್ತೇನೆ. ಮೊಘಲ್ ಸೈನ್ಯದ ಕಿಲ್ಲೇದಾರ ಹುದ್ದೆ ನಿನ್ನದಾಗುತ್ತದೆ'' ಎಂದ.

ಫಿರಂಗೋಜಿ ಒಪ್ಪಲಿಲ್ಲ. ''ನನ್ನ ಖಡ್ಗ ಶಿವಾಜಿಯ ಸೇವೆಗೆ ಮೀಸಲು. ನನ್ನ ಒಡೆಯನಿಗೆ ದ್ರೋಹ ಮಾಡಲಾರೆ'' ಎಂದು ಎದೆಯುಬ್ಬಿಸಿ ಉತ್ತರಿಸಿದ.

ಬೇರೆ ಯಾರಾದರೂ ಆಗುತ್ತಿದ್ದರೆ ಶೈಸ್ತಾಖಾನ್ ಅವನನ್ನು ವಧಿಸಲು ಹೇಳುತ್ತಿದ್ದ. ಆದರೆ ಫಿರಂಗೋಜಿಗೆ ಗಲ್ಲುಶಿಕ್ಷೆ ಕೊಡಲು ಮನಸ್ಸು ಬರಲಿಲ್ಲ. ಅವನನ್ನು ಸೆರೆಯಿಂದ ಬಿಡಿಸಿ ಹೋಗಲು ಬಿಟ್ಟ.

ಚಕಾನ್‌ನ ವಿಜಯದ ಬಳಿಕ ಶೈಸ್ತಾಖಾನ್ ಅತ್ತಿತ್ತ ಕಣ್ಣು ಹಾಯಿಸಿದ. ಅಲ್ಲಿಗೆ ಸಮೀಪದಲ್ಲಿ ಪರಿಂದಾ ಎಂಬ ಕೋಟೆ ಇತ್ತು. ಅದಿನ್ನೂ ಆದಿಲ್ ಶಾಹಿಗಳ ವಶದಲ್ಲಿದ್ದ ಕೋಟೆ. ಘಾಲಿಬ್ ಎಂಬ ವೃದ್ಧ ದಂಡನಾಯಕ ಇಲ್ಲಿ ಐನೂರು ಸೈನಿಕರ ಬಲದಲ್ಲಿ ಕೋಟೆಯನ್ನು ರಕ್ಷಿಸುತ್ತಿದ್ದ.

ಇದೊಂದು ಪುಟ್ಟ ಕೋಟೆಯಾಗಿತ್ತು. ಘಾಲಿಬ್ ಬಹಳ ಕಾಲದಿಂದ ಶಹಾಜಿಗೆ ಆಪ್ತನಾಗಿದ್ದ ಕಾರಣ ಶಿವಾಜಿ ಪರಿಂದಾ ಕೋಟೆಯ ಮೇಲೆ ದಾಳಿಗೆ ಹೋಗದೆ ಸುಮ್ಮನಿದ್ದ. ಹೀಗಾಗಿ ಅದಿನ್ನೂ ಆದಿಲ್ ಶಾಹಿಗಳ ಹೆಸರಿನಲ್ಲೇ ಇತ್ತು.

ಪರಿಂದಾ ಕೋಟೆಯ ಮೇಲೆ ಲಗ್ಗೆ ಹಾಕಲು ಶೈಸ್ತಾಖಾನ್ ಕರ್ತಲಬ್‌ಖಾನ್ ಎಂಬ ಸರದಾರನನ್ನು ಕಳಿಸಿದ. ಕರ್ತಲಬ್‌ಖಾನ್ ಉಜ್ಬೆಕಿಸ್ತಾನ ಮೂಲದ ವೀರ. ಔರಂಗಜೇಬನ ನೆಚ್ಚಿನ ಸರದಾರನ ಮಗನಾಗಿದ್ದ ಈತ ಮಹತ್ವಾಕಾಂಕ್ಷಿಯೂ ಆಗಿದ್ದ.

ಕರ್ತಲಬ್‌ಖಾನ್ ಮೂರು ಸಾವಿರ ಮೊಘಲ್ ಸೈನಿಕರೊಡನೆ ಪರಿಂದಾ ಕೋಟೆಯ ಮೇಲೆ ದಂಡೆತ್ತಿ ಹೋದ. ಈ ಕೋಟೆಯ ರಕ್ಷಣೆ ಹೆಚ್ಚೇನೂ ಬಲವಾಗಿರಲಿಲ್ಲ. ಘಾಲಿಬ್‌ಗೆ ಯುದ್ಧ ಮಾಡುವ ಉತ್ಸಾಹವೂ ಇರಲಿಲ್ಲ. ಯಾವುದೇ ಪ್ರತಿಭಟನೆ ತೋರಿಸದೆ ಕೋಟೆಯನ್ನು ಮೊಘಲರಿಗೆ ಒಪ್ಪಿಸಿದ. ಪರಿಂದಾ ರಕ್ತಪಾತವಿಲ್ಲದೆ ಸಲೀಸಾಗಿ ಕರ್ತಲಬ್‌ಖಾನ್‌ನ ವಶವಾಯಿತು.

ಕರ್ತಲಬ್‌ಖಾನ್ ವಿಜಯೋತ್ಸಾಹದಲ್ಲಿ ಚಕಾನ್‌ಗೆ ಮರಳಿದ. ಶೈಸ್ತಾಖಾನ್ ದೊಡ್ಡ ಸಾಧನೆ ಮಾಡಿದಂತೆ ಉಬ್ಬಿದ. ಸರದಾರನಿಗೆ ಬಿರುದು ಬಾವಲಿಗಳನ್ನು ಕೊಟ್ಟು ಸನ್ಮಾನಿಸಿದ.

ಆದಿಲ್‌ಶಾಹಿ ಸುಲ್ತಾನ ಅಲ್ಲಿಂದ ಹೆಚ್ಚು ದೂರದಲ್ಲಿ ಇರಲಿಲ್ಲ. ಶಿವಾಜಿಯನ್ನು ಮಟ್ಟಹಾಕಲೆಂದು ಸ್ವತಃ ದಂಡಿನ ಜೊತೆಗೆ ಹೊರಟಿದ್ದ ಆದಿಲ್‌ಶಾಹಿ ಸುಲ್ತಾನ ಮಳೆಗಾಲ ಕಳೆಯಲು ಕೃಷ್ಣಾನದೀ ತೀರದ ಚಿಮಾಲ್ಗೆ ಎಂಬಲ್ಲಿ ಡೇರೆ ಹಾಕಿದ್ದ. ಅವನಿಗೆ ಮೊಘಲರು ತನ್ನ ಪರಿಂದಾ ಕೋಟೆಯನ್ನು ವಶಪಡಿಸಿಕೊಂಡ ಸುದ್ದಿ ಬಂತು.

ಶಿವಾಜಿಯ ಮೇಲೆ ದಾಳಿ ಮಾಡಲು ಸುಲ್ತಾನ ಸ್ವತಃ ಮೊಘಲರನ್ನು ದಕ್ಷಿಣಕ್ಕೆ ಆಹ್ವಾನಿಸಿದ್ದ. ''ಈ ದುಷ್ಟ ಮೊಘಲರು ಶಿವಾಜಿಯನ್ನು ಎದುರಿಸುವ ಬದಲು ನನ್ನದೇ ಕೋಟೆಯನ್ನು ವಶಪಡಿಸಿಕೊಂಡಿದ್ದಾರೆ! ಎಂಥಾ ಅನರ್ಥ!'' ಎಂದು ತಲೆ ಚಚ್ಚಿಕೊಂಡ.

ಪರಿಸ್ಥಿತಿ ಕೈಮೀರಿತ್ತು. ಅವನು ಏನೂ ಮಾಡುವ ಹಾಗಿರಲಿಲ್ಲ. ಮೊಘಲ ಪಡೆಯನ್ನು ಎದುರಿಸುವ ತಾಕತ್ತು ಅವನಲ್ಲಿ ಇರಲಿಲ್ಲ. ಅಷ್ಟರಲ್ಲಿ ಬಿಜಾಪುರದಿಂದ ಒಂದು ಕೆಟ್ಟ ಸುದ್ದಿ ಕೂಡ ಬಂತು.

ಸುಲ್ತಾನ ಬಿಜಾಪುರ ಬಿಟ್ಟಾಗ ಕರ್ನಾಟಕದ ಭಾಗಗಳಲ್ಲಿ ಪಾಳೆಯಗಾರರು ಸ್ವಾತಂತ್ರ್ಯ ಘೋಷಿಸಿದ್ದಾರೆ, ಆದಿಲ್‌ಶಾಹಿಯ ವಿರುದ್ಧ ದಂಗೆಯೆದ್ದಿದ್ದಾರೆ ಎಂದು ಬಿಜಾಪುರದಿಂದ ಬಂದ ಓಲೆ ಹೇಳಿತ್ತು. ಬೆಕ್ಕು ಮನೆಯಲ್ಲಿ ಇರದಾಗ ಇಲಿಗಳದ್ದೇ ರಾಜ್ಯ! ಸುಲ್ತಾನ ಕೂಡಲೇ ಡೇರೆ ಕಿತ್ತು ಬಿಜಾಪುರಕ್ಕೆ ಧಾವಿಸಿದ.

ಶೈಸ್ತಾಖಾನ್ ಔರಂಗಜೇಬನಿಗೆ ಚಕಾನ್ ಮತ್ತು ಪರಿಂದಾ ಕೋಟೆಗಳು ವಶವಾದ ವರದಿ ಕಳಿಸಿದ. ಔರಂಗಜೇಬನಿಗೆ ಸಂತೋಷವಾಯಿತು. ''ಶಾಭಾಸ್! ಬೇಗನೆ ಶಿವಾಜಿಯ ಎಲ್ಲ ಪ್ರದೇಶಗಳನ್ನೂ ವಶಪಡಿಸಿಕೊಳ್ಳಿ. ಈ ವರ್ಷದ ಒಳಗಾಗಿ ಮಧ್ಯಭಾರತ ನಮ್ಮ ಕೈ ಸೇರಬೇಕು. ಅನಂತರ ಬಿಜಾಪುರದ ಮೇಲೆ ದಾಳಿಗೆ ತಯಾರಾಗಿ!'' ಎಂದು ಮಾವನಿಗೆ ಸಂದೇಶ ಕಳಿಸಿದ.

ಶೈಸ್ತಾಖಾನ್ ಚಕಾನ್‌ನಲ್ಲಿ ಎರಡು ತಿಂಗಳು ಕಳೆದು ಪುಣೆಗೆ ಮರಳಿದ. ಮಳೆಗಾಲ ಮುಗಿಯುತ್ತ ಬಂದಿತ್ತು. ಈ ತನಕ ಸೋಮಾರಿತನದಲ್ಲಿ ಕಾಲ ಕಳೆದಿದ್ದ ಮೊಘಲ್ ಸೈನ್ಯ ಹೊಸ ಹುರುಪಿನಲ್ಲಿ ಯುದ್ಧಕ್ಕೆ ತಯಾರಾಗಿತ್ತು. ಆದರೆ ಶೈಸ್ತಾಖಾನ್‌ನಲ್ಲಿ ಮಾತ್ರ ಯುದ್ಧ ಮಾಡುವ ಉತ್ಸಾಹ ಉಳಿದಿರಲಿಲ್ಲ.

ಚಕಾನ್‌ನಲ್ಲಿ ಆತ ಅದಾಗಲೇ ಒಬ್ಬ ವೃದ್ಧ ಮರಾಠಾ ಸರದಾರನ ಸಾಮರ್ಥ್ಯವನ್ನು ನೋಡಿದ್ದ. ಇನ್ನು ಬೇರೆ ಕೋಟೆಗಳಲ್ಲಿ ಪರಿಸ್ಥಿತಿ ಹೇಗಿರಬಹುದು ಎಂದು ಯೋಚಿಸಿಯೇ ನಡುಕ ಹುಟ್ಟಿತ್ತು ಅವನಿಗೆ.

ಮನಸ್ಸಿಲ್ಲದಿದ್ದರೂ ಶೈಸ್ತಾಖಾನ್ ಔರಂಗಜೇಬನ ಆಣತಿಯನ್ನು ತಳ್ಳಿ ಹಾಕುವಂತಿರಲಿಲ್ಲ. ಅವನು ಕರ್ತಲಬ್‌ಖಾನ್‌ನನ್ನು ಕರೆಸಿದ.

'ಕರ್ತಲಬ್‌ಖಾನ್, ನಿನ್ನ ಖಡ್ಗದ ಬಲಕ್ಕೆ



ಸಾಟಿಯೇ ಇಲ್ಲ. ನಿನ್ನ ಸಾಮರ್ಥ್ಯವನ್ನು ಬಾದಶಹ ಕೂಡ ಮೆಚ್ಚಿಕೊಂಡಿದ್ದಾರೆ. ಕೊಂಕಣದ ಪ್ರದೇಶವನ್ನು ವಶಪಡಿಸಿಕೊಳ್ಳುವ ಕೆಲಸ ನಿನಗೆ ಕೊಡುತ್ತೇನೆ. ನಿನಗೆ ಬೇಕಾದಷ್ಟು ಸೈನ್ಯ ತೆಗೆದುಕೊಂಡು ಹೋಗು. ಕಲ್ಯಾಣ, ಭಿವಂಡಿ, ಪನವೇಲ್, ನಾಗತಾಣೆ – ಇಲ್ಲೆಲ್ಲ ಇರುವ ಶಿವಾಜಿಯ ನೆಲೆಗಳನ್ನು ಗೆದ್ದು ಮೊಘಲ ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳು. ಈ ಕೆಲಸ ಮಾಡುವ ತಾಕತ್ತು ನಿನಗಿದೆ ಎಂದು ಗೊತ್ತು. ಈ ಕೆಲಸ ನೆರವೇರಿಸಿದರೆ ಬಾದಶಹರಿಗೆ ಶಿಫಾರಸು ಮಾಡಿ ನಿನಗೆ ಕೊಂಕಣದ ಸುಬೇದಾರ ಪದವಿ ಕೊಡಿಸುತ್ತೇನೆ'' ಎಂದು ಹೇಳಿದ.

ಕರ್ತಲಬ್‌ಖಾನ್ ಉತ್ಸಾಹದಿಂದಲೇ ಒಪ್ಪಿಕೊಂಡ. ಜೈತ್ರಯಾತ್ರೆಗೆ ಭರ್ಜರಿ ತಯಾರಿ ನಡೆಸಿದ.

ಕರ್ತಲಬ್‌ಖಾನ್ ಮಹಾವೀರ ಎನ್ನುವುದರಲ್ಲಿ ಸಂದೇಹ ಇರಲಿಲ್ಲ. ಅವನು ತನ್ನದೇ ಖಡ್ಗದ ಬಲದಲ್ಲಿ ಹಲವಾರು ಯುದ್ಧಗಳನ್ನು ಗೆದ್ದಿದ್ದ. ಆದರೆ ಅವನಿಗೆ ಬಯಲು ಭೂಮಿಯಲ್ಲಿ ಮಾತ್ರ ಯುದ್ಧದ ಅನುಭವ. ಕೊಂಕಣ ಮತ್ತು ಮಾವಳದ ದಟ್ಟಕಾಡು, ಬೆಟ್ಟಗುಡ್ಡಗಳನ್ನು ಅವನು ಈ ತನಕ ನೋಡಿರಲಿಲ್ಲ, ಮಾವಳಿಗಳ ಕೂಟಯುದ್ಧದ ರುಚಿಯನ್ನು ಈ ತನಕ ಅನುಭವಿಸಿರಲಿಲ್ಲ.

ಶೈಸ್ತಾಖಾನ್ ಕರ್ತಲಬ್‌ಖಾನ್‌ನ ನೆರವಿಗೆ ರಾಯ್‌ಬಾಗನ್ ಎಂಬ ಸರದಾರಿಣಿಯನ್ನು ಕೂಡ ನೇಮಿಸಿದ. ''ಬೆಟ್ಟಗಳಲ್ಲಿ ಶಿವಾಜಿಯ ಪಡೆ ಕಾದಿರುತ್ತದೆ. ಸಹ್ಯಾದ್ರಿಯನ್ನು ದಾಟಿ ಹೋಗುವುದು ಸುಲಭವಲ್ಲ'' ಎಂದು ಆಕೆ ಕರ್ತಲಾಬ್‌ಖಾನ್‌ಗೆ ಮೊದಲೇ ಎಚ್ಚರಿಕೆ ನೀಡಿದಳು.

ರಾಯ್‌ಬಾಗನ್‌ಳ ನಿಜವಾದ ಹೆಸರು ಸಾವಿತ್ರಿಬಾಯಿ ದೇಶಮುಖ್. ಅವಳ ಗಂಡ ರಾಜೇ ಉದಾರಾಮ್ ದೇಶಮುಖ್ ಮಾಹುರ್‌ನ ಜಾಗೀರುದಾರನಾಗಿ ಮೊಘಲರ ಊಳಿಗದಲ್ಲಿದ್ದ. ಸಾಮುಗರ್ ಎಂಬ ಯುದ್ಧದಲ್ಲಿ ಗಂಡ ತೀರಿಕೊಂಡಾಗ ಸಾವಿತ್ರಿಬಾಯಿ ಸ್ವತಃ ಸೈನ್ಯವನ್ನು ಮುನ್ನಡೆಸಿ, ಪರಾಕ್ರಮದಿಂದ ಹೋರಾಡಿ ಯುದ್ಧ ಗೆದ್ದಿದ್ದಳು. ಅವಳ ಸಾಹಸಕ್ಕೆ ಮೆಚ್ಚಿ ಔರಂಗಜೇಬ 'ರಾಯ್‌ಬಾಗನ್' ಎಂದು ಬಿರುದು ನೀಡಿದ್ದ.

ರಾಯ್ ಬಾಗನ್ ಎಂದರೆ ಸಿಂಹಿಣಿ ಎಂದು ಅರ್ಥ. ಸಾವಿತ್ರಿಬಾಯಿಗೆ ಅನ್ವರ್ಥನಾಮವಾಗಿತ್ತು. ಅವಳು ಖಡ್ಗ ಹಿಡಿದು ಯುದ್ಧಕ್ಕೆ ಇಳಿದರೆ ಎದುರಿಸುವ ಛಾತಿ ಆಜಾನುಬಾಹು ಪಠಾಣ ಸರದಾರರಿಗೂ ಇರಲಿಲ್ಲ.

ಸಹ್ಯಾದ್ರಿ ಬೆಟ್ಟಗಳ ಬಗ್ಗೆ ರಾಯ್‌ಬಾಗನ್ ಕೊಟ್ಟ ಎಚ್ಚರಿಕೆಯನ್ನು ಕರ್ತಲಬ್‌ಖಾನ್ ಉಡಾಫೆಯಿಂದ ತಳ್ಳಿಹಾಕಿದ್ದ. ''ಬೆಟ್ಟಗಳಲ್ಲಿ ಏನಿದೆ ಮಹಾ? ನೇರ ಹೋಗುವ ಬದಲು ಮೇಲೆ ಮೇಲೆ ಹತ್ತುತ್ತ ಹೋದರೆ ಸಾಕು, ತಂತಾನೇ ಬೆಟ್ಟ ದಾಟುತ್ತೇವೆ'' ಎಂದು ಅಹಂಕಾರದಿಂದ ಉತ್ತರಿಸಿದ್ದ.

ರಾಯ್‌ಬಾಗನ್ ಹೆಚ್ಚು ಮಾತನಾಡುವವಳಲ್ಲ. ಸಮಯ ಬಂದಾಗ ನೋಡಿಕೊಳ್ಳೋಣ ಎಂದು ಯೋಚಿಸಿ, ಕರ್ತಲಬ್‌ಖಾನ್ ಜೊತೆಗೆ ವಾದಕ್ಕಿಳಿಯದೆ ಸುಮ್ಮನಾಗಿದ್ದಳು.

ಫೆಬ್ರವರಿ 2, 1661. ಪುಣೆಯಿಂದ ಕರ್ತಲಬ್ ಖಾನ್‌ನ ನೇತೃತ್ವದಲ್ಲಿ ಬಲಾಢ್ಯ ಮೊಘಲ್ ಸೈನ್ಯ ದಂಡಯಾತ್ರೆಗೆ ಹೊರಟಿತು. ಸುಮಾರು ಮೂವತ್ತು ಸಾವಿರ ಸೈನಿಕರ ಸೈನ್ಯ. ಮೊಘಲರು, ಉಜ್ಬೆಕಿಗಳು, ಪಠಾಣರು ಮಾತ್ರವೇ ಅಲ್ಲ, ಈ ಸೈನ್ಯದಲ್ಲಿ ಮೊಘಲ ಸಾಮಂತರಾದ ಕಛ್ವಾರಾಜ, ಚತುರ್ಭುಜ್ ಚೌಹಾಣ್, ಅಮರಸಿಂಹ ಚಂದ್ರಾವತ್, ಮಿತ್ರಸೇನ ಮುಂತಾದ ರಜಪೂತ ಸರದಾರರು, ಸರ್ಜೇರಾವ್ ಜೆಧೆ, ಜಸ್ವಂತರಾವ್ ಕೋಕಟೆ, ಜಾಧವರಾವ್ ಮುಂತಾದ ಮರಾಠಾ ವೀರರು ಕೂಡ ಇದ್ದರು.

ಕರ್ತಲಬ್‌ಖಾನ್ ಭೂಪಟಗಳನ್ನು ತರಿಸಿ ಅಧ್ಯಯನ ಮಾಡಿದ್ದ. ಎಲ್ಲಿಂದ ಹೋದರೆ ಬೇಗನೆ ತಲಪಲು ಸಾಧ್ಯವಿದೆ ಎಂದು ಮಾರ್ಗದರ್ಶಿಗಳೊಡನೆ ಚರ್ಚಿಸಿ ಮೊದಲೇ ಮಾರ್ಗವನ್ನು ನಿಶ್ಚಯಿಸಿದ್ದ. ಅದರಂತೆ ಸೈನ್ಯ ಚಿಂಚ್ವಾಡ್, ತಾಲೆಗಾಂವ್, ವಡಗಾಂವ್ ಮಾರ್ಗವಾಗಿ ಕೊಂಕಣದತ್ತ ಸಾಗಿತು.

''ಶಿವಾಜಿಗೆ ಸುದ್ದಿ ತಿಳಿಯದಂತೆ ನೋಡಿಕೊಳ್ಳು. ಅವನ ದೈತ್ಯ ಪಡೆಗಳು ಹಠಾತ್ ಆಕ್ರಮಣ ಮಾಡುತ್ತವೆ. ಕೊಂಕಣಕ್ಕೆ ತಲಪುವ ತನಕ ನಿನ್ನ ಸೈನ್ಯ ಬಲ ಕಳೆದುಕೊಳ್ಳಬಾರದು'' ಎಂದು ಶೈಸ್ತಾಖಾನ್ ಎಚ್ಚರಿಸಿದ್ದ. ಅದರಂತೆ ಕರ್ತಲಬ್‌ಖಾನ್ ಯಾವುದೇ ಸದ್ದು ಗದ್ದಲವಿಲ್ಲದೆ ಯಾತ್ರೆ ನಡೆಸುತ್ತಿದ್ದ.

ಅವನದು ಹುಚ್ಚು ಪ್ರಯತ್ನವಾಗಿತ್ತು.

ಸಹ್ಯಾದ್ರಿಯ ನಡುವೆ ಗಾಳಿಗೆ ತರಗೆಲೆ ಅಲುಗಾಡಿದರೂ ಶಿವಾಜಿಗೆ ಸುದ್ದಿ ಹೋಗುತ್ತದೆ. ಮೊಘಲ್ ಸೈನ್ಯ ಪುಣೆಯಿಂದ ಹೊರಟಾಗಿನಿಂದ ಶಿವಾಜಿಯ ಬೇಹುಗಾರರು ಅದರ ಮೇಲೆ ಕಣ್ಣಿರಿಸಿದ್ದರು. ಕರ್ತಲಬ್‌ಖಾನ್‌ನ ಪ್ರತಿಯೊಂದು ಚಲನೆಯ ಸುದ್ದಿ ಶಿವಾಜಿಗೆ ತಲಪುತ್ತಿತ್ತು.

ಮೊಘಲಸೈನ್ಯ ಸಾಗಿ ಬಂದಿದ್ದ ಲೋಹಗಢ, ವಿಸಾಪುರದ ಕೋಟೆಗಳೆಲ್ಲ ಶಿವಾಜಿಯ ವಶದಲ್ಲಿ ಇದ್ದವು. ರಾಯಗಢದಿಂದ ಬಂದಿದ್ದ ಆದೇಶದಂತೆ ಈ ಕೋಟೆಗಳ ಸರದಾರರು ತಮ್ಮ ಕಣ್ಣಳವಿನಲ್ಲೇ ಸಾಗಿದ್ದ ಮೊಘಲ ಸೈನ್ಯದ ದಂಡಯಾತ್ರೆಯನ್ನು ನೋಡುತ್ತ ತಣ್ಣಗೆ ಕೋಟೆಯೊಳಗೆ ಕುಳಿತಿದ್ದರು.

ಕರ್ತಲಬ್‌ಖಾನ್ ಲೋಹಗಢ ಕೋಟೆಯನ್ನು ಸುತ್ತುಬಳಸಿಕೊಂಡು ಮುಂದೆ ಸಾಗಿದ. ಅಲ್ಲಿಂದ ಮುಂದೆ ಎತ್ತರೆತ್ತರದ ಬೆಟ್ಟಗಳು ಕಾಣಿಸಿಕೊಂಡವು. ಅವರ ಮುಂದೆ ದುರ್ಗಮ ಸಹ್ಯಾದ್ರಿಯೇ ಹರವಿಕೊಂಡಿತ್ತು.

ಲೋಹಗಢ ದಾಟಿದ ಬಳಿಕ ತುಂಗಾರಣ್ಯ ಆರಂಭವಾಯಿತು. ನಿಜವಾದ ಕಾಡು ಹೇಗಿರುತ್ತದೆ ಎಂದು ಕರ್ತಲಬ್‌ಖಾನ್ ಮತ್ತು ಅವನ ಹೆಚ್ಚಿನ ಸೈನಿಕರಿಗೆ ಅರಿವಾಗಿದ್ದು ಆಗಲೇ. ಅವನ ಜೊತೆಗಿದ್ದ ರಜಪೂತ ಸೈನಿಕರಿಗೆ ಅರಾವಳಿಯ ಬೋಳುಬೆಟ್ಟಗಳ ಅನುಭವ ಇತ್ತು. ಆದರೆ ಸಹ್ಯಾದ್ರಿಯ ದಟ್ಟ ಕಾಡುಗಳ ನಡುವೆ ಅವರಿಗೂ ಕಣ್ಣುಕಟ್ಟಿತ್ತು.

ಲೋಹಗಢದಿಂದ ಅವರ ಸೈನ್ಯ ಬೋರ್‌ಘಾಟ್ ಮಾರ್ಗವಾಗಿ ಹೋಗಬೇಕಿತ್ತು. ಸಾಮಾನ್ಯವಾಗಿ ಕೊಂಕಣಕ್ಕೆ ಹೋಗಲು ಎಲ್ಲರೂ ಹಿಡಿಯುವ ದಾರಿ. ಆದರೆ ಕರ್ತಲಬ್‌ಖಾನ್ ಅವಸರದಲ್ಲಿದ್ದ. ಬೋರ್‌ಘಾಟ್ ಬದಲು ಹತ್ತಿರದ ಅಂಬರ್‌ಖಿಂಡಿ ಮಾರ್ಗವನ್ನು ಆರಿಸಿದ.

ಅಂಬರ್‌ಖಿಂಡಿಯ ಕಣಿವೆ ದಾಟಿ ಸೀದಾ ಕೊಂಕಣದ ಬಯಲುಭೂಮಿಗೆ ಇಳಿದರೆ ಶಿವಾಜಿಯ ಕೊಂಕಣದ ಕೋಟೆಗಳ ಮೇಲೆ ಹಠಾತ್ ಆಕ್ರಮಣ ಮಾಡಬಹುದು ಎಂದು ಕರ್ತಲಬ್‌ಖಾನ್‌ನ ರಣತಂತ್ರವಾಗಿತ್ತು. ತಾನು ಪ್ರವೇಶಿಸುತ್ತಿರುವುದು ಮೃತ್ಯುಪಂಜರದೊಳಗೆ ಎಂಬ ಸುಳಿವೂ ಅವನಿಗೆ ಇರಲಿಲ್ಲ.

ದಟ್ಟ ಕಾಡು, ಕಡಿದಾದ ಬೆಟ್ಟಗಳು, ನಡುವೆ ಕಿರಿದಾದ ದಾರಿ. ಈ ದಾರಿಯಲ್ಲಿ ಕಾಲಾಳುಗಳು, ಅಶ್ವಾರೋಹಿಗಳು, ಅವರ ಹಿಂದೆ ಆನೆ, ಕುದುರೆ, ಒಂಟೆ, ಸಾಮಾನು ಸರಂಜಾಮು, ತೋಪುಗಳ ಜೊತೆಗೆ ಸೈನ್ಯ ನಿಧಾನವಾಗಿ ಸಾಗಿತು.

ಎತ್ತರೆತ್ತರಕ್ಕೆ ಬೆಳೆದ ರಾಕ್ಷಸ ಗಾತ್ರದ ಮರಗಳು, ತಲೆಯ ಮೇಲೆ ಚಾದರ ಹಾಸಿದಂತೆ ರೆಂಬೆ–ಕೊಂಬೆಗಳ ದಟ್ಟಣೆ. ಸೂರ್ಯನ ಬೆಳಕು ಕಾಣದ ನೆಲ. ಸಹ್ಯಾದ್ರಿ ಬೆಟ್ಟಗಳ ನಡುವೆ ಇಳಿಯುವಾಗ ಅವರಿಗೊಂದು ಕೊಳವೆ – ಸುರಂಗದೊಳಗೆ ನಡೆಯುವಂತೆ ಭಾಸವಾಗುತ್ತಿತ್ತು. ಈ ಸುರಂಗಕ್ಕೆ ಕೊನೆಯೇ ಇರಲಿಲ್ಲ!

ಕಣಿವೆಯೊಳಗೆ ಸೈನ್ಯದ ಗತಿ ಇನ್ನಷ್ಟು ನಿಧಾನವಾಗಿತ್ತು. ಹೆಜ್ಜೆ ಹೆಜ್ಜೆಗೂ ಅಪಾಯ ಕಾದಿತ್ತು. ಅಲ್ಲಲ್ಲಿ ದಾರಿಯ ಒಂದೆಡೆ ಬೆಟ್ಟ, ಇನ್ನೊಂದೆಡೆ ಪ್ರಪಾತ. ಕಡಿದಾದ ಕಣಿವೆದಾರಿಯಲ್ಲಿ ಸೈನಿಕರು ಒಂದಿಷ್ಟು ಜಾರಿದರೂ ಪ್ರಪಾತಕ್ಕೆ ಉರುಳುವ ಸಾಧ್ಯತೆಯಿತ್ತು.

ಒಂದೊಂದೆಡೆ ಅವರು ಮೈ ಹೊರಳಿಸಲೂ ಸಾಧ್ಯವಿಲ್ಲದಷ್ಟು ಕಿರಿದಾದ ದಾರಿ. ಒಂದು ಸಾಲಿನಲ್ಲಿ ಇಬ್ಬರೇ ಸೈನಿಕರು ಜೊತೆಯಾಗಿ ನಡೆಯಲು ಸಾಧ್ಯ. ಅವರ ಸೈನ್ಯದ ಬಾಲ ಕಣಿವೆಯುದ್ದಕ್ಕೆ ಮೈಲುಗಟ್ಟಲೆ ದೂರಕ್ಕೆ ಬೆಳೆದಿತ್ತು.

''ಈ ದಾರಿ ಹೇಳಿದವರು ಯಾರು? ಇಲ್ಲಿಂದ ಬಂದದ್ದಾದರೂ ಯಾಕೆ?'' ಎಂದು ಸೈನಿಕರು ಕೇಳತೊಡಗಿದರು. ಅವರ ಯುದ್ಧದ ಹುಮ್ಮಸ್ಸು ಅಲ್ಲೇ ಉಡುಗಿತ್ತು.

ಅಷ್ಟರಲ್ಲಿ ಇನ್ನೊಂದು ಸಮಸ್ಯೆ ಎದುರಾಯಿತು. ಕಣಿವೆಯಲ್ಲಿ ಎಲ್ಲೂ ನೀರು ಸಿಗುತ್ತಿರಲಿಲ್ಲ. ಬೆಟ್ಟಗಳ ನಡುವೆ ನೀರು ನಿಲ್ಲುವುದಿಲ್ಲ, ಎಲ್ಲ ಕಣಿವೆಯ ಕೆಳಗೆ ಹರಿದು ಹೋಗುತ್ತದೆ. ಮಳೆ ಮುಗಿದ ಬಳಿಕ ಇಲ್ಲಿ ಕುಡಿಯಲು ತೊಟ್ಟು ನೀರೂ ಸಿಗುವುದಿಲ್ಲ.

ಯುದ್ಧಕ್ಕೆ ಹೊರಟ ಸೈನ್ಯ ಬಾವಿ ತೋಡಲು ಸಾಧ್ಯವೆ? ಸೈನಿಕರು ಬಾಯಾರಿಕೆಯಲ್ಲಿ ತಹತಹಿಸುತ್ತಿದ್ದರು.

ಈ ತನಕ ನಿರಾತಂಕವಾಗಿದ್ದ ಕರ್ತಲಬ್ ಖಾನ್‌ನ ಎದೆಯಲ್ಲಿ ಮೊದಲ ಬಾರಿಗೆ ಅಳುಕು ಹುಟ್ಟಿತು. ಆದರೂ ಭಂಡಧೈರ್ಯ ತೋರಿಸುತ್ತಿದ್ದ. ''ಇನ್ನು ಸ್ವಲ್ಪ ದೂರ ಮಾತ್ರ. ಖುದಾ ನಮ್ಮನ್ನು ಈ ಜಹನ್ನುಮ್ (ನರಕ) ದಾಟಿಸಿದ ಬಳಿಕ ಕೊಂಕಣದ ಜನ್ನತ್ (ಸ್ವರ್ಗ) ನಮ್ಮದಾಗುತ್ತದೆ. ಅಲ್ಲಿಂದ ಹೆಜ್ಜೆ ಹೆಜ್ಜೆಗೂ ವಿಜಯ ನಮ್ಮದು!'' ಎಂದು ಸೈನಿಕರನ್ನು ಹುರಿದುಂಬಿಸುತ್ತಿದ್ದ.

ರಾಯ್‌ಬಾಗನ್ ಇದೆಲ್ಲ ನೋಡಿ ಸುಮ್ಮನೇ ಇದ್ದಳು. ಅವಳ ಕಣ್ಣುಗಳು ಆಗಾಗ ಬೆಟ್ಟದ ಮೇಲೆ ಹಾಯುತ್ತಿದ್ದವು.

ಮುಂಬರುವ ಅನಾಹುತದ ಅರಿವು ಅವಳಿಗೆ ಮಾತ್ರ ಇತ್ತು.

(ಮುಂದುವರಿಯುತ್ತದೆ)

ನೆಪಕ್ಕಾದರೂ...!

ಕನಸು ಸುಕ್ಕಾದರೇನು,
ನೋವು ಪಕ್ಕಾದರೇನು?
ನೀನದನ್ನು ಮರೆತು ಬಿಡು
ನೆನಪಿನ ನೆಪಕ್ಕಾದರೂ ...

ಹೃದಯ ಬರಡಾದರೇನು,
ಪ್ರೀತಿ ಮಂಕಾದರೇನು?
ನೀನಿಲ್ಲಿ ಸೋತು ಬಿಡು
ಗೆಲುವಿನ ನೆಪಕ್ಕಾದರೂ...

ಹಂಬಲ ಹಳಸಿದರೇನು,
ನಿರೀಕ್ಷೆ ನೀರ್ಗುಳ್ಳೆಯಾದರೇನು?
ನೀನೊಮ್ಮೆ ಅತ್ತುಬಿಡು
ನಗುವ ನೆಪಕ್ಕಾದರೂ....

ನಂಬಿಕೆ ಹುಸಿಯಾದರೇನು,
ನೆಮ್ಮದಿ ಮರೀಚಿಕೆಯಾದರೇನು ?
ನೀನೊಮ್ಮೆ ನಿದ್ರಿಸಿಬಿಡು
ಎಚ್ಚರದ ನೆಪಕ್ಕಾದರೂ...

ರೆಂಬೆ ಸವರಿದರೇನು,
ಚಿಗುರ ಚಿವುಟಿದರೇನು?
ನೀನೊಮ್ಮೆ ಹೊತ್ತಿ ಬಿಡು
ಅರಳುವ ನೆಪಕ್ಕಾದರೂ...

ಭಾವ ಬತ್ತಿದರೇನು,
ಕಾಯಕ್ಕೆ ಉರಿ ಹತ್ತಿದರೇನು
ನೀನೊಮ್ಮೆ ಸತ್ತು ಬಿಡು
ಬದುಕುವ ನೆಪಕ್ಕಾದರೂ...

❑ **ಭಾಸ್ಕರ ಕೆ. ಕುಂಟಪದವು**

ಧಾರಾವಾಹಿ

ನಿಗೂಢ ಲಕೋಟೆ

❑ ಎಸ್. ಜಿ. ಶಿವಶಂಕರ್

ಹಿಂದಿನ ಸಂಚಿಕೆಯಿಂದ...

ಪತ್ತೇದಾರ ವಿಕ್ರಮ್ ಹಾಗೂ ಶರತ್ ಕೊಲೆಯಾದ ಯಶವಂತರಾಯರ ಮನೆಯಲ್ಲಿ ಉಳಿದುಕೊಂಡು ಮನೆಯವರನ್ನೆಲ್ಲ ವಿಚಾರಿಸಿದರು. ಯಶವಂತರಾಯರು ಕೊಲೆಯಾದ ದಿನ ಗಂಗಾಧರನೆಂಬ ಆಳಿನೊಂದಿಗೆ ಜಗಳವಾಡಿದ್ದು ತಿಳಿದು, ಅವನನ್ನು ವಿಚಾರಿಸಿದರು. ತನಗೆ ಕೊಡುವ ಕೂಲಿಯನ್ನು ಹೆಂಡತಿಗೆ ಕೊಟ್ಟಿರುವುದೇ ಜಗಳಕ್ಕೆ ಕಾರಣವೆಂದು ಅವನು ವಿವರಿಸಿದ.

ಮುಂದೆ ಓದಿ...

ತಾವು ಬಂದ ಸಮಯ ಸರಿಯಾಗಿಲ್ಲ ಎಂದು ಶರತ್ ಪೇಚಾಡಿದ. ಒಳಗೆ ಜಗಳ ನಡೆಯುತ್ತಿರುವುದರ ಸೂಚನೆ ಸಿಕ್ಕ ತತ್‌ಕ್ಷಣ ಹಿಂದಿರುಗಿಬಿಡಬೇಕಿತ್ತು. ಇನ್ನೊಮ್ಮೆ ಬಂದು ಇವನನ್ನು ವಿಚಾರಿಸಬಹುದಿತ್ತು. ಗಂಗಾಧರ ಜಗಳಕ್ಕೆ ಕೊಟ್ಟ ಕಾರಣ ಕ್ಷುಲ್ಲಕವಾಗಿತ್ತು. ಬಹುಶಃ ಈ ಮನುಷ್ಯ ತಾನು ದುಡಿದದ್ದನ್ನ ಕುಡಿದು ಹಾಳ್ಮಾಡುತ್ತಿದ್ದಿರಬೇಕು. ಅದನ್ನು ಇವನ ಹೆಂಡತಿ ಯಶವಂತರಾಯರಲ್ಲಿ ಹೇಳಿರಬೇಕು. ಅದಕ್ಕೇ ಇವನ ಕೂಲಿ ಹಣ ಹೆಂಡತಿಗೆ ಸಿಗುವಂತೆ ಮಾಡಿರಬೇಕು. ಆ ಸಂಬಂಧದಲ್ಲಿ ಯಶವಂತರಾಯರ ಜೊತೆ ಇವನು ಜಗಳವಾಡಿದ್ದಾನೆ ಎನ್ನುವುದು ಸ್ಪಷ್ಟವಾಗಿತ್ತು.

“ಅಂದ್ರೆ... ನಿನ್ನ ಕೂಲಿ ಹಣ ನಿಂಗೆ ಕೊಡ್ತಿರಲಿಲ್ಲವೆ...? ಪಾಪ...ನಿಂಗೂ ತುಂಬಾ ಕಷ್ಟ

ಕೃಷ್ಣನ ಗೆಳತಿ!

ಅಧ್ಯಾಯ – 4



ಇರಬೇಕು...ತಗೋ...ಈ ನೋಟಿಟ್ಕೋ.”

ಶರತ್ ನೂರರ ಒಂದು ನೋಟನ್ನು ಅವನ ಮುಂದೆ ಹಿಡಿದ.

“ಏ... ಬ್ಯಾಡ್ರ... ನಂಕಷ್ಟಕ್ಕೆ ನೀವ್ಯಾಕೆ ತೊಂದ್ರೆ ತಕ್ಕೋತೀರಿ...” ಎನ್ನುತ್ತಲೇ ನೋಟನ್ನು ಜೇಬಿನೊಳಕ್ಕೆ ಇಟ್ಟುಕೊಂಡು ಸಾವಕಾಶವಾಗಿ ಸಿಗರೇಟು ತುಟಿಯಲ್ಲಿಟ್ಟುಕೊಂಡು ಕಡ್ಡಿ ಕೊರೆದು ಹೊಗೆ ಊದಿದ.

“ಅದ್ನೇ ಬುದ್ಧಿ ನಾನು ಹೇಳಿದ್ದು. ಒಂದು ವಾರದ ಕೂಲಿ...ಕೊಡೊಲ್ಲ ನಿನ್ನ ಹೆಂಡ್ತಿಗೆ ಕಳಿಸ್ತೀನಿ ಅಂತ ಹೇಳಿದ್ರು. ನಂಗೆ ಶಾನೆ ಕೋಪ ಬಂತು! ನೀನೇನು ನನ್ನೆಂಡ್ರು ಇಟ್ಕೊಂಡಿದ್ದೀಯಾಂದೆ! ಅದಕ್ಕೇ ಆವಯ್ಯಂಗೂ ಶಾನೆ ಕೋಪ ಬಂದಿತ್ತು! ಬಾರುಕೋಲು ತಗೊಂಡು ಬೊಬ್ಬೆ ಬರೋ ಹಾಗೆ ಹೊಡೆದ! ನಾನು ಬಿಡ್ತೀನಾ... ಬಾರುಕೋಲು ಕೈಗೆ ಕಿತ್ಕೊಂಡೆ! ನಾನೂ ನಾಕು ಇಕ್ಕಬೌದು. ಆದ್ರೆ ಮಾಡ್ನಿಲ್ಲ! ಪೊಲೀಸ್ ಕಂಪ್ಲೈಂಟು ಕೊಡ್ತೀನಿ ಅಂತ ಕಿರುಚಿದೆ... ಅದಕ್ಕೆ ಕೊಂಚ ಹೆದರಿದ್ದ. ‘ಲೇ... ನನ್ನ ಬಗ್ಗೆ ಸಮಾಜದಲ್ಲಿ ಎಂಥಾ ಹೆಸರಿದೆ. ಧರ್ಮ ರತ್ನಾಕರ ಅಂತ ಬಿರುದು ಕೊಟ್ಟಿದ್ದಾರೆ. ನನ್ನ ಮೇಲೆ ಇಂಥಾ ಕೆಟ್ಟ ಮಾತಾಡ್ತೀಯ... ನಾಳೆಯಿಂದ ನಿನಗೆ ನನ್ನ ತೋಟದಲ್ಲಿ ಕೆಲಸ ಇಲ್ಲ. ನಿನ್ನ ಸಂಸಾರಕ್ಕೆ ಒಳ್ಳೇದಾಗ್ಲೀ ಆ ಹೆಣ್ಮಗಳು ಉಪವಾಸ ಮಲ್ಗೋದು ಬ್ಯಾಡಾಂತ ನಾನು ನಿನ್ನ ಕೂಲಿ ಅವಳಿಗೆ ಕಳಿಸ್ತಿದ್ದೆ. ಇಷ್ಟಕ್ಕೂ ನಾನೇನು ನಿನ್ನ ಮನೆ ಬಾಗಿಲಿಗೆ ಬಂದಿಲ್ಲ. ಅಂಥಾ ಹಲ್ಕಟ್ ಕೆಲ್ಸ ನಾನು ಮಾಡೊಲ್ಲ’ ಅಂತ ಕಿರುಚಾಡಿದ. ನಂಗೂ ಗೊತ್ತಿತ್ತು ಆಯಪ್ಪ ಅಂಥವನಲ್ಲ ಅಂತ. ಆದ್ರೂ ಕೂಲಿ ವಸೂಲಿಯಾಗ್ಲೀಂತ ಅಂಗಂದೆ. ದಣಿದು ದುಡಿಯೋನಿಗೆ ಮೈಕೈ ನೋವು ಹೋಗಾಕೆ ಒಂದು ಪ್ಯಾಕೆಟ್ ಸಾರಾಯಿ ಹಾಕ್ಕೊಳ್ಳೋಕೂ ಕಾಸು ಸಿಗೊಲ್ಲ ಅಂದ್ಮಾಗೆ ಯಾಕೆ ದುಡೀಬೇಕು... ಆವಯ್ಯನ ಹತ್ರ...? ನಿನ್ನ ಸವಾಸ ಸಾಕು... ಈತನಕ ದುಡಿದಿರೋದು ಕೊಡೂಂದ್ರೂ ಆವಯ್ಯ ಜಗ್ಗಲಿಲ್ಲ. ಅದೆಂಗಾನ ಇರ್ಲಿ, ಈ ಜಗಳದ ಇಶ್ಯ ನಿಮಗ್ಯಾರು ಹೇಳಿದ್ದು...?”

ಗಂಗಾಧರ ತನ್ನ ಕೃತ್ಯಕ್ಕೆ ಸಮಜಾಯಿಸಿ ಕೊಟ್ಟಿದ್ದ.

“ಇನ್ಯಾರೋ...? ಆ ಮನೇಲಿರೋರು ಇಬ್ರು ಗಂಡಸರು... ಅವರಲ್ಲೊಬ್ರು ಹೇಳಿದ್ರು.”

ಶರತ್ ಜಾಣತನದಿಂದ ಹೇಳಿದ. ರಾಮಣ್ಣನ ಹೆಸರಾಗಲೀ ಇಲ್ಲಾ ಕೃಷ್ಣನ ಹೆಸರನ್ನಾಗಲೀ ಹೇಳಲಿಲ್ಲ.

“ಆ ಮನೇಲಿರೋರು ಇಬ್ರಲ್ಲ ಮೂರ್ಜನ...” ಗಂಗಾಧರ ತಿದ್ದಿದ.

ತಾನು ಆಮಿಷವೊಡ್ಡಿದ ನೋಟು, ಸಿಗರೇಟು ಪ್ಯಾಕು ಕೆಲಸ ಮಾಡಿದೆ ಎಂದುಕೊಂಡ ಶರತ್.

“ಮೂರ್ಜನ ಯಾರೋ...?”

“ಏ... ನೀವು ಮೂರ್ತಪ್ಪನ್ನ ಬಿಟ್ಟೇಬಿಟ್ರಲ್ಲ...?”

“ಅವರು ಇಲ್ಲಿರೊಲ್ಲವಲ್ಲ...?”

“ಇಲ್ಲಾ ಹೆಚ್ಕಮ್ಮಿ ಇಲ್ಲೇ ಇರ್ತಾರೆ...ದೊಡ್ಡ ಗಂಟು ಯಾರಿಗ್ಬೇಡ...?”

“ಏನೋ ಹಂಗಂದ್ರೆ...?”

“ಏ... ಆಪಾಟಿ ಆಸ್ತಿಪಾಸ್ತಿ ಸುಮ್ಕೆ ಬಿಟ್ಟಾರಾ...?”

“ಅಂದ್ರೇನೋ... ನೀನು ಹೇಳೋದು... ಮೂರ್ತಿಗೆ ಆಸ್ತಿ ಮೇಲೆ ಕಣ್ಣಿದ್ದೆಯಾ...?”

“ಬುಟ್ಬುಟ್ಟಾರಾ...? ಮೂರ್ಜನಾನೂ ಹದ್ನಂಗೆ ಕಾದವ್ರೆ...ಮುದ್ಕ ಗೊಟಕ್ಕನ್ನಾದನ್ನ... ಮೂರ್ಜನದಾಗೇ ಯಾರೋ ಒಬ್ರು ಗುನ್ನ ಇಕ್ಕವ್ರೆ ಮುದ್ಕಂಗೆ...”

ಗಂಗಾಧರನ ವಿಚಾರ ಸುಳ್ಳು ಎನ್ನುವಂತಿರಲಿಲ್ಲ ಪರಿಸ್ಥಿತಿ. ಅವನ ಯೋಚನೆಯ ದಿಕ್ಕು ಸರಿಯಾಗೇ ಇತ್ತು. ಗಂಗಾಧರನ ಪಾತ್ರ ಯಶವಂತರಾಯರ ಕೊಲೆಯಲ್ಲಿ ಇಲ್ಲ ಎನ್ನುವುದು ಅವನ ಮಾತಿನಿಂದಲೇ ಸ್ಪಷ್ಟವಾಗಿತ್ತು.

‘ಆವಯ್ಯನ್ನ ಸಾಯಿಸ್ದ್ರೆ ನಂಗೇನು ಸಿಕ್ಕಾತು... ಲೊಟ್ಟೆ!’ ಎನ್ನುವ ಗಂಗಾಧರನ ಮಾತು ಕಿವಿಯಲ್ಲಿ ಮಾರ್ದನಿಸಿತು! ನಿಜ ಯಶವಂತರಾಯರು ಸತ್ತರೆ ಇವನಿಗೇನು ಸಿಕ್ಕೀತು? ಬರೀ ಅವರೊಂದಿಗೆ ಜಗಳವಾಡಿದ್ದ ಎನ್ನುವ ಒಂದೇ ಕಾರಣಕ್ಕೆ ಅವನು ಕೊಲೆ ಮಾಡುವ ಹಂತಕ್ಕೆ ಹೋಗುವುದಿಲ್ಲ ಎನಿಸಿತು. ಇಷ್ಟಕ್ಕೂ ಅವನೇನು ಸೇಡಿಗಾಗಿ, ಜಿದ್ದಿಗಾಗಿ ಕೊಲೆ ಮಾಡುವ ಮನುಷ್ಯನಾಗಿ ಕಾಣಲಿಲ್ಲ!

“ಆ ಮೂರ್ಜನದಲ್ಲಿ ಯಾರಾದ್ರೂ ಕೊಲೆ ಮಾಡಿದ್ದಾರೆ ಅಂತೀಯ...?”

ಗಂಗಾಧರನ ಬಾಯಿಂದ ಏನು ಬರಬಹುದು ಎಂದು ಶರತ್ ಕೇಳಿದ.

“ಏ... ನಾನಂಗೆಲ್ಲಾ ಏನೂ ಹೇಳಾಕಿಲ್ಲ...” ಗಂಗಾಧರ ಜಾಣನಂತೆ ಮಾತಾಡಿದ.

“ಊರಿನ ಜನ ಯಾರ್ಮೇಲೆ ಅನುಮಾನಪಡ್ತಿದ್ದಾರೆ...?”

ಶರತ್ ಅವನ ಬಾಯಿ ಬಿಡುಸುವ ಪ್ರಯತ್ನ ಮತ್ತೆ ಮಾಡಿದ.

“ಊರ್ಜನ ಏನೇಳ್ತಾರೆ ಅನ್ನೋದು ಬಿಟ್ಹಾಕಿ. ನೀವು ಹುಡ್ಕಿ... ಅದ್ಕೇ ಅಲ್ಲವ್ರಾ ನೀವು ಬಂದಿರಾದು.”

ಗಂಗಾಧರ ಒರಟನಂತಿದ್ದರೂ ಕಿಲಾಡಿತನವಿತ್ತು. ಯಶವಂತರಾಯರ ಬಳಿ ಅವನು ಜಗಳವಾಡಿ ರಾದ್ಧಾಂತ ಮಾಡಿದ್ದು ನಿಜವಾದ್ರೂ ಕೊಲೆ ಮಾಡುವಂಥ ಕೆಲಸಕ್ಕೆ ಕೈಹಾಕಿಲ್ಲ ಎನ್ನುವುದು ಅವನ ಮಾತುಗಳಿಂದ ಶರತ್‌ಗೆ ಸ್ಪಷ್ಟವಾಯಿತು.

“ಹೋಗ್ಲಿ... ಅವರ ಮನೆಯವರಲ್ಲಿರೋ ಜನರ ಪೈಕಿ ಕೃಷ್ಣ ಎಂಥಾ ಮನುಷ್ಯ?”

“ಆವಯ್ಯ ನಿಜವಾಗ್ಲೂ ಒಳ್ಳೇನೇ... ಆದ್ರೆ ಚಾಲು ಸರಿ ಇಲ್ಲ... ಅಂಗಂತಾ ಊರ ಜನ್ರಿಗೇನೂ ತೊಂದ್ರೆ ಮಾಡಿಲ್ಲ, ಅವ್ನ ಯವಾರ ಎಲ್ಲಾ ಊರ ಹೊರೀಕೆ... ಬಡಬಗ್ರೂಂದ್ರೆ ಧಾರಾಳವಾಗಿ ಕೈಬಿಚ್ತಾರೆ... ಒಂದ್ಸಲ ಅವನ ಕಾರು ಕೆಟ್ಟೋಗಿತ್ತು. ಮೂರು ಜನ ಸೇರ್ಕಂಡು ಮನೀತನಕ ತಳ್ಳಿದ್ದಕ್ಕೆ ಆವಯ್ಯ ತಲಾ ಐನೂರು ಕೊಟ್ಟಿದ್ದ! ವಾರ ಇಡೀ ಮಜಾ ಮಾಡಿದೆ! ಒಳ್ಳೇ ಮನ್ಸ.”

ಕೃಷ್ಣನ ಬಗೆಗೆ ಗಂಗಾಧರ ಒಳ್ಳೇ ಸರ್ಟಿಫಿಕೇಟ್ ಕೊಟ್ಟ.

“ಅಂಗಾದ್ರೆ ಉಳಿದಿರೋರು ಇಬ್ರು... ಅವರಿಬ್ರಲ್ಲಿ ಒಬ್ಬರಿರಬಹುದೆ...?”

ಶರತ್ ಅವನ ಬಾಯಿ ಬಿಡಿಸಲು ಮತ್ತೊಂದು ಪ್ರಯತ್ನ ಮಾಡಿದ.

“ಮತ್ತೆ ತಿರ್ಗೊಂಡು ನನ್ನೇ ಕೇಳ್ತಿದ್ದೀರ...?” ಚಾಲಾಕುತನ ತೋರಿಸಿದ ಗಂಗಾಧರ.

“ಹೋಗ್ಲಿ ಬಿಡೋ... ನಿನಗೆ ಹೇಳೋಕೆ ಮನಸ್ಸಿಲ್ಲ. ಕೊನೇಪಕ್ಷ ಈ ಊರಲ್ಲಿ ಇನ್ಯಾರ ಹತ್ರಾನಾದ್ರೂ ಯಶವಂತರಾಯರಿಗೆ ಶತ್ರುಗಳಿದ್ದಾರಾ...?”

“ದೊಡ್ಡ ಮನ್ಸುರಿಗೆ ಈ ಹಳ್ಳಿ ಸಣ್ಣದು. ಅವರ ದ್ವೇಷ ಕಟ್ಕೊಳ್ಳೋ ಅಂಥಾವರು ಈ ಊರಾಗಿಲ್ಲ. ಹೊರಗೆ ಇದ್ರೂ ಇರಬೌದು. ಅವೆಲ್ಲಾ ನಂಗೆ ತಿಳ್ದಿಲ್ಲ.”

“ಸರಿ ಗಂಗಾಧರ... ಈ ವಿಷಯದಲ್ಲಿ ಏನಾದ್ರೂ ಗೊತ್ತಾದ್ರೆ ನಂಗೊಂದು ಫೋನು ಮಾಡ್ತೀಯ...? ಇನಾಮೂ ಕೊಡ್ತೀನಿ... ತಗೋ ನನ್ನ ಫೋನ್ ನಂಬರು.”

ಶರತ್ ಜೇಬಿಂದ ತನ್ನ ಕಾರ್ಡು ತೆಗೆದು ಗಂಗಾಧರನ ಕೈಗಿತ್ತ.

“ಇನ್ನೇನಾದ್ರೂ ಇದೆಯೇನೊ?”

ಕಾರ್ಡು ಕೈಲಿ ಹಿಡಿದು ತಲೆ ಕೆರೆದು ನಿಂತ ಗಂಗಾಧರನನ್ನು ನೋಡಿ ಶರತ್ ಕೇಳಿದ.

“ಇನ್ನೊಂದ್ನೈನೂರಿದ್ರೆ ಕೊಡಿ... ಮನೇಲಿ ಅಕ್ಕಿ ಬ್ಯಾಳೆ ಇಲ್ಲ. ಹೆಂಡ್ರು ಉಪಾಸ ಅವ್ಳೆ...”

“ಆಯ್ತು ಕೊಡ್ತೀನಿ... ಆದ್ರೆ ಎಲ್ಲಾ ಹೆಂಡಕ್ಕೇ ಸುರೀಬೇಡ. ಹೆಣ್ತಿ ಕೈಗೂ ಒಂದಿಷ್ಟು ಕೊಡು.”

ಶರತ್ ಬುದ್ಧಿ ಹೇಳಿ ನೂರರ ಇನ್ನೆರಡು ನೋಟು ಅವನ ಕೈಗಿತ್ತ.

“ಏನಾದ್ರೂ ಸುದ್ದಿ ಸಿಕ್ಕಿದ್ರೆ, ಬೇರೆ ಇನ್ಯಾರಿಗೂ ಹೇಳ್ಬೇಡ, ನೇರವಾಗಿ ನನಗೆ ತಿಳಿಸೋದು ಮರೀಬೇಡ.”

ಮತ್ತೆ ಎಚ್ಚರಿಸಿದ.

“ಮರ್ಯಾಕಿಲ್ಲ. ಫೋನ್ ನಂಬರ್ ಐತಲ್ಲ...?”

ಗ್ಯಾಸ್ ಟ್ರಬಲ್

‘ದಿನಾ ಬಿಸಿ ಬಿಸಿ ಅನ್ನ ಕೊಡ್ತಾ ಇದ್ರಿ... ಇವತ್ತು ಏಕಮ್ಮ ಅಕ್ಕಿ ಕೊಡುತ್ತಿದ್ದೀರಿ!?’

ಗಂಗಾಧರ ಪೊಲೀಸಿನವರ ಹಾಗೆ ಸೆಲ್ಯೂಟ್ ಮಾಡಿದ. ಶರತ್ ನಗುತ್ತಾ ಹಿಂದೆ ತಿರುಗಿ ನಡೆಯತೊಡಗಿದ.

ಗಂಗಾಧರನನ್ನು ವಿಚಾರಿಸಿದ್ದು ಫಲಪ್ರದವಾಯಿತೆ? ತನ್ನ ಕೆಲಸ ತೃಪ್ತಿ ಕೊಟ್ಟಿತೆ? ಶರತ್ ತನ್ನನ್ನು ತಾನೇ ಕೇಳಿಕೊಂಡ!

“ಸಾರ್ ಒಂದು ನಿಮಿಷ.”

ಶರತ್ ಹಿಂದೆ ತಿರುಗಿ ನೋಡಿದ. ತನ್ನ ಬೆನ್ನ ಹಿಂದೆ ಗಂಗಾಧರನ ದನಿ ಕೇಳಿತು. ನಡೆಯುತ್ತಿದ್ದ ಶರತ್ ನಿಂತು ಹಿಂದೆ ತಿರುಗಿದ.

“ನಿಮ್ಗೆ ವೆಂಕಟ ರೆಡ್ಡಿ ಗೊತ್ತೆ?”

ಶರತ್ ಹತ್ತಿರಕ್ಕೆ ಬಂದು ಗಂಗಾಧರ ಕೇಳಿದ.

“ಯಾವ ವೆಂಕಟ ರೆಡ್ಡಿ? ನನಗೆ ಆ ಹೆಸರಿನೋರು ಯಾರೂ ಗೊತ್ತಿಲ್ಲ.” ಶರತ್ ಹೇಳಿದ.

“ಅವರ್ಯಾರೂ ನಿಮಗೆ ವೆಂಕಟ ರೆಡ್ಡಿ ವಿಷ್ಯ ಹೇಳಲೇ ಇಲ್ಲವಾ?”

ಗಂಗಾಧರ ಏನೋ ರಹಸ್ಯ ಹೇಳುವವರಂತೆ ದನಿ ತಗ್ಗಿಸಿ ಕೇಳಿದ.

“ಅವರೆಲ್ಲಾ ಅಂದ್ರೆ ಯಾರು? ವಿಷಯ ನೀನು ಹೇಳ್ತಿರೋದು?”

“ಅದೇ ಸಾರ್ ನನ್ನ ಮ್ಯಾಗೆ ಅನ್ಮಾನ ಬರೋಹಂಗೆ ಮಾಡಿ ನನ್ನತ್ರ ಕಳುಹಿಸಿದ್ರಲ್ಲ, ಅವರು?”

“ಯಾರೋ ನಿನ್ನ ಬಗ್ಗೆ ಹೇಳಿದಾರೆ ಅಂತ ನಿನಗೆ ಯಾಕೆ ಅನುಮಾನ?”

“ಇಲ್ಲದಿದ್ದರೆ ನೀವು ನನ್ನ ಹುಡುಕೊಂಡು ಬರ್ತಿದ್ರಾ ಈ ಕೊಂಪೆಗೆ?”

ಗಂಗಾಧರ ಮುಖದಲ್ಲಿ ಹುಸಿ ನಗೆ ಇತ್ತು. ಮಾತಿನಲ್ಲಿ ಕಿಚಾಯಿಸುವ ಪರಿ ಇತ್ತು.

“ಅದೆಲ್ಲ ಇರಲಿ, ನೀನು ವೆಂಕಟ ರೆಡ್ಡಿ ಬಗ್ಗೆ ಏನು ಹೇಳಬೇಕು ಅಂತಿದ್ದೀಯಾ ಅದನ್ನು ನೇರವಾಗಿ ಹೇಳು.”

ಗಂಗಾಧರನ ಕೊಂಕು, ಸುತ್ತು ಬಳಸಿ ಮಾತನಾಡುವ ವಿಧಾನ ಶರತ್ ಸಹನೆ ಕಳೆದುಕೊಳ್ಳುವಂತಾಗಿತ್ತು.

“ವೆಂಕಟ ರೆಡ್ಡಿ ವಿಷಯ ನಿಮಗೆ ಹೇಳಿದರೆ ನಿಮಗೆ ಲಾಭವಾಗುತ್ತೆ! ನನಗೆ ಏನು ಸಿಗುತ್ತೆ?”

ಅವನ ಮಾತಿನ ಹಿಂದೆ ಇದ್ದ ಉದ್ದೇಶ ಶರತ್‌ಗೆ ಅರಿವಾಗಿತ್ತು. ಜೇಬಿನಿಂದ ಐನೂರು ರೂಪಾಯಿಯ ಒಂದು ನೋಟು ತೆಗೆದು ಗಂಗಾಧರನ ಮುಂದೆ ಹಿಡಿದ. ಒಂದಿಷ್ಟೂ ಸಂಕೋಚ ಪಡದೆ ಗಂಗಾಧರ ಅದನ್ನು ತೆಗೆದುಕೊಂಡು ತನ್ನ ಪ್ಯಾಂಟಿನ ಜೇಬಿಗೆ ಸೇರಿಸಿದ.

“ನಿನಗೆ ಲಾಭವಾಯಿತಲ್ಲ ಇನ್ನು ಹೇಳು ಯಾರು ವೆಂಕಟ ರೆಡ್ಡಿ? ಅವನಿಗೂ ಯಶವಂತರಾಯರಿಗೂ ಇರುವ ಸಂಬಂಧ ಏನು? ಕೇಸಲ್ಲಿ ಅವನ ಪಾತ್ರ ಏನು?”

“ವೆಂಕಟ ರೆಡ್ಡಿ ಮತ್ತು ಅವನ ತಂದೆ ತಾಯಿಗಳು ಹದಿನೈದು ವರ್ಷದ ಹಿಂದೆ ಆಂಧ್ರದ ಒಂದು ಕೊಂಪೆಯಿಂದ ಕೆ.ಜಿ. ಹಳ್ಳಿಗೆ ಬಂದ್ರು. ಅವರಾಗೆ ಬರಲಿಲ್ಲ, ಯಶವಂತಪ್ಪ ಅವರನ್ನು ಕರ್ಕೊಂಡು ಬಂದ. ದ್ರಾಕ್ಷಿ ತ್ವಾಟದಾಗೆ ಕೆಲಸ ಮಾಡಾಕೆ ಅವರನ್ನು ಇಟ್ಟುಕೊಂಡಿದ್ದ. ತ್ವಾಟದ ಒಂದು ಕಡೆ ಅವರಿಗೆ ಮನೆ ಕೂಡ ಕೊಟ್ಟಿದ್ದ. ಈ ಊರಿಗೆ ಬಂದಾಗ ವೆಂಕಟ ರೆಡ್ಡಿಗೆ ಹತ್ವರ್ಸ. ವೆಂಕಟ ರೆಡ್ಡಿ ತಂದೆ-ತಾಯಿ ನಿಯತ್ತಾಗಿ ಕೆಲಸ ಮಾಡ್ಕಂಡಿದ್ರು. ಇಲ್ಲಿಗೆ ಬಂದ ಐದು ವರ್ಸದಾಗೆ ವೆಂಕಟ ರೆಡ್ಡಿ ಅಪ್ಪ ಯಾವುದೋ ಕಾಯಿಲೇಲಿ ತೀರಿಕೊಂಡ. ಆಗ ವೆಂಕಟ ರೆಡ್ಡಿಗೆ ಸುಮಾರು ಹದಿನೈದು ವರ್ಸ. ವೆಂಕಟ ರೆಡ್ಡಿಗೆ ದ್ರಾಕ್ಷಿ

ತ್ವಾಟದ ಕೆಲಸ ಇಷ್ಟ ಇರ್ನಿಲ್ಲ. ಆ ಸಮಯದಾಗೆ ನಮ್ಮೂರಿಗೆ ರೋಡ್ ಕೆಲ್ಸ ನಡೀತಿತ್ತು. ಲಕ್ಷ್ಮಯ್ಯ ಅಂತ ಒಬ್ಬ ಕಂಟ್ರಾಕ್ಟರ್ ರೋಡ್ ಕೆಲ್ಸ ಮಾಡುಸ್ತಿದ್ದ. ವೆಂಕಟ ರೆಡ್ಡಿ ಅವನತ್ರ ಕೆಲಸಕ್ಕೆ ಸೇರಿಕೊಂಡ. ಹುಡುಗ ಬ್ಯಾಗ್ನೆ ಸರಕಾರಿ ಕಾಂಟ್ರಾಕ್ಟರಿನ ಎಲ್ಲಾ ಚಾಲು ತಿಳ್ಕೊಂಡ. ಆಮ್ಯಾಗೆ ಲಕ್ಷ್ಮಯ್ಯನ ಹತ್ತಿರ ತುಂಡು ಗುತ್ತಿಗೆ ಮಾಡೋಕೆ ಸುರು ಹಚ್ಕಂಡ. ಐದೇ ವರ್ಸದಾಗೆ ಕಾಸು ಓಡಾಡಿಸೋ ಹಂಗಾದ. ಆಮ್ಯಾಲೆ ಒಂದು ದೊಡ್ಡ ಗುತ್ತಿಗೆ ಹಿಡಿದು ದೊಡ್ಡ ಕುಳಾನೇ ಆದ.''

ಇವನೇನೋ ದುಡ್ಡಿಗೋಸ್ಕರ ಯಾವುದೋ ಕೆಲಸಕ್ಕೆ ಬಾರದ ದೊಡ್ಡ ಕತೇನೇ ಹೇಳ್ತಿದಾನೆ ಅಂತ ಅನಿಸಿತು ಶರತ್‌ಗೆ.

''ಕಥೆ ದೊಡ್ಡದು ಮಾಡಬೇಡ, ಚಿಕ್ಕದಾಗಿ ಹೇಳು. ವೆಂಕಟ ರೆಡ್ಡಿಗೂ ಯಶ್ವಂತ್ರಾಯರಿಗೂ ಹೇಗೆ ಸಂಬಂಧ.''

''ಅದನ್ನೇ ಹೇಳಾಕೆ ಹೊರಟಿದ್ದೆ. ನೀವು ಆತುರ ಮಾಡಿದ್ರಿ. ಆತು ಚಿಕ್ಕದಾಗೇ ಹೇಳ್ತೀನಿ. ಕಾಂಟ್ರಾಕ್ಟ್ ಮಾಡೋಕೆ ಶುರುಮಾಡಿದ ಮ್ಯಾಲೆ ವೆಂಕಟ ರೆಡ್ಡಿ ಅವರಮ್ಮನ್ನ ತೋಟದ ಕೆಲಸದಿಂದ ಬಿಡಿಸಿ, ಊರೊಳಗೆ ಮನೆ ಕಟ್ಟಿಸಿ ಅಲ್ಲಿಗೆ ಕರ್ಕೊಂಡು ಹೋದ. ಇದ್ರಿಂದ ಯಶವಂತಪ್ಪಂಗೆ ಪೂರಾ ಇರ್ಸುಮುರ್ಸಾಗಿತ್ತು. ಇದರ ಜೊತೀಗೆ ಬಿಡದಿನಾಗೆ ಒಂದು ಸಹಕಾರಿ ಬ್ಯಾಂಕ್ ಐತೆ. ಐದು ವರ್ಸದಿಂದ ಯಶವಂತಪ್ಪ ಅದರ ಪ್ರೆಸಿಡೆಂಟ್ ಆಗಿದ್ದರು. ಈ ವರ್ಷ ವೆಂಕಟ ರೆಡ್ಡಿ ಪ್ರೆಸಿಡೆಂಟ್ ಪೋಸ್ಟಿಗೆ ಎದುರಿಗೆ ನಿಂತ. ಇದರಿಂದ ಯಶವಂತಪ್ಪನ ಪಿತ್ತ ನೆತ್ತಿಗ್ಯಾರಿತ್ತು. 'ನೀನು ಎಲೆಕ್ಷನ್ನಿಗೆ ನಿಂತ್ಕೋಬೇಡ, ಇದು ನಿನ್ನ ತಕ್ಕದ್ದಲ್ಲ. ನೀನು ಏನಾಗಿದ್ದೆ ಅನ್ನೋದು ನೆನಪಿರಲಿ. ಜೊತೆಗೆ ನನ್ನ ಎದುರಾಳಿ ಆಗ್ತೀಯಾ. ಇದು ನಿನ್ನ ಆರೋಗ್ಯಕ್ಕೆ ಒಳ್ಳೆಯದಲ್ಲ' ಅಂತ ನ್ಯಾರವಾಗಿ ಯಶವಂತಪ್ಪ ಯೋಳಿದ್ದರು. ಅಂಗೇ ನ್ಯಾರವಾಗಿ ವೆಂಕಟ ರೆಡ್ಡಿ ಯಶವಂತಪ್ಪಂಗೆ ತಿರುಗುತ್ತರ ಕೊಟ್ಟಿದ್ದ. 'ಸ್ವಾಮಿ ನಿಮ್ ಕಾಲ ಮುಗೀತು. ಈಗೇನಿದ್ದರೂ ನಮ್ಮ ಕಾಲ. ಪ್ರೆಸಿಡೆಂಟ್ ಗಿರಿ ಸಾಸ್ವತವಾಗಿ ನಿಂದಾಗೋಕೆ ಸಾಧ್ಯವಿಲ್ಲ. ಇಷ್ಟು ವರ್ಷ ನೀವೇ ಪ್ರೆಸಿಡೆಂಟ್ ಆಗಿದ್ದಿರಿ, ಇನ್ನಾದರೂ ಕೆಳಗಿಳಿಯಿರಿ. ಇಷ್ಟಕ್ಕೂ ಪ್ರೆಸಿಡೆಂಟ್ ಆಗಿ ನೀವು ಮಾಡಿರೋ ಘನಕಾರ್ಯ ಅಷ್ಟರಲ್ಲೇ ಇದೆ. ಎಲೆಕ್ಷನ್‌ಗೆ ನಿಂತ್ಕೋಬ್ಯಾಡ ಅನ್ನೋ ಅಧಿಕಾರ ನಿಮಗಿಲ್ಲ.'

ಇಷ್ಟೆಲ್ಲಾ ಆದಮೇಲೆ ಅವನ ಮೇಲೆ ಸೇಡು ತೀರಿಸಿಕೊಳ್ಳಲು ಯಶವಂತಪ್ಪ ಕಾಯುತ್ತಿದ್ದ. ಒಂದ್ಸಲ ನಮ್ಮೂರಿನ ಮಾರಿಹಬ್ಬ ಟೈಮ್‌ನಲ್ಲಿ ಯಶ್ವಂತಪ್ಪನ ಚೇಲಾಗಳು ಮತ್ತೆ ವೆಂಕಟ ರೆಡ್ಡಿ ಚೇಲಾಗಳು ಕೈಕೈ ಮಿಲಾಯಿಸಿದರು. ದೊಡ್ಡ ಹೊಡೆದಾಟ ಆಯಿತು. ದೊಣ್ಣೆಗಳನ್ನ ತಗೊಂಡು ಬಡಿದಾಡಿದರು. ಇಬ್ರು ಸತ್ರು, ಹತ್ತದ್ನೈದು ಜನಕ್ಕೆ ಶಾನೆ ಏಟಾಗಿತ್ತು. ಪೊಲೀಸ್ ಕೇಸ್ ನಡೀತಾ ಐತೆ. ಈ ಇಷ್ಯ ನಿಮಗೆ ಹೇಳಬೇಕು ಅಂತಿದ್ದೆ.''

ಗಂಗಾಧರ ಮಾತು ಮುಗಿಸಿ ಶರತ್ ಮುಖ ನೋಡುತ್ತಿದ್ದ.

''ಅಂದರೆ ಈ ಕೊಲೆ ವೆಂಕಟ ರೆಡ್ಡಿ ಮಾಡಿರಬಹುದು ಅಂತ ನಿನ್ನ ಅನುಮಾನಾನ?''

''ನಾನಂಗೆ ಹೇಳಿದ್ನ? ಇಲ್ಲ, ನಾನು ಅಂಥದೇನು ಹೇಳ್ಲಿಲ್ಲ. ನಾನು ಹೇಳಿದ್ದು ಊರಾಗ ನಡೆದಿದ್ದ ಒಂದು ಇಷ್ಯ. ಅವನು ಕೊಲೆಮಾಡಿದಾನೋ ಇಲ್ಲವೋ ಅನ್ನೋದು ತಿಳ್ಕೊಳ್ಳೋದು ನಿಮ್ಮ ಕೆಲಸ. ಇದಕ್ಕೆಲ್ಲ ನನ್ನ ಸಾಕ್ಷಿ ಅಂತಾ ಕರೆಯೋಕೆ ಸುರುಹಚ್ಕಬ್ಯಾಡಿ.''

ಕದನ ವಿರಾಮ –
ಸ್ವಲ್ಪ ಸಮಾಧಾನ
ಮೃತರನ್ನು ಹುಡುಕಿ
ಹೂಳುವುದಕ್ಕೆ.

★ ★ ★

ಯಾಚಕನ ಹಸಿವು
ಭಿಕ್ಷಾ ಪಾತ್ರೆಯ ಮೇಲೆ
ಲಯಬದ್ಧವಾಗಿ ಗುಡುಗುತ್ತಿದ್ದ
ನಾಣ್ಯಗಳಿಂದ ಅನುವಾದಿಸಲ್ಪಟ್ಟಿತು.

❑ **ಡಾ. ಪಿ. ಪುಗಳೇಂದಿ**

''ಸರಿ, ನಿನಗೆ ಲಾಭವಾಗುವಂಥ ವಿಷಯ ಇನ್ನೇನಾದರೂ ಇದ್ದರೆ ಹೇಳು?''

''ಇಲ್ಲ... ನಂಗೆ ಗೊತ್ತಿರೋದು, ನಾನು ಹೇಳಬೇಕು ಅಂತಿದ್ದು ಇದಿಷ್ಟು ಮಾತ್ರ.''

''ಇದನ್ನಾದರೂ ನನಗ್ಯಾಕೆ ಹೇಳಿದೆ? ನಿನ್ನ ಉದ್ದೇಶ ಏನಿತ್ತು? ವೆಂಕಟ ರೆಡ್ಡೀನ ಕಷ್ಟಕ್ಕೆ ಸಿಗಿಸಬೇಕು ಅಂತಾನ? ಅವನ ಮೇಲೆ ನಿನ್ನ ದ್ವೇಷ ಏನಾದರೂ ಇದ್ಯ? ಹೋಗ್ಲಿ ನೀನು ಯಾವ ಪಾರ್ಟಿಯವನು? ವೆಂಕಟ ರೆಡ್ಡಿ ಪಾರ್ಟೀನಾ ಇಲ್ಲ ಯಶವಂತರಾಯರ ಪಾರ್ಟಿನಾ?''

''ಹೋಗಿ ಸ್ವಾಮಿ, ನಿಂದೊಳ್ಳೆ ಕಥೆ ಆಯ್ತು. ಏನೋ ನಿಮಗೆ ಗೊತ್ತಿಲ್ದೆ ಇರೋ ವಿಷಯ ಹೇಳೋಣ ಅಂತ ಹೋದರೆ ನನ್ನನ್ನು ಇದರಲ್ಲಿ ತಗಲಾಕ್ಸೋಕೆ ನೋಡ್ತಾ ಇದ್ದೀರಾ?''

''ಲೇ...ಯಾರ್ಯಾರನ್ನೋ ಯಾಕೆ ಸಿಗಿಸೋಕೆ ಹೋಗಲಿ? ತಪ್ಪು ಮಾಡಿದವರಿಗೆ ಶಿಕ್ಷೆ ಆಗುತ್ತೆ ಸುಮ್ಸುಮ್ನೆ ಯಾರ್ಯಾರಿಗೋ ತೊಂದರೆ ಕೊಡೋ ಉದ್ದೇಶ ನಮಗಿಲ್ಲ''

''ಆತೇಳಿ, ನಿಮಗೆ ಹೇಳಬೇಕು ಅಂತಿದೆಲ್ಲಾ ಹೇಳಿದ್ದೀನಿ.''

''ಮತ್ತೇನಾದರೂ ಹೊಸ ವಿಷಯ ಗೊತ್ತಾದರೆ ತತ್‌ಕ್ಷಣ ಫೋನ್ ಮಾಡಿ ಹೇಳು.''

ಇಷ್ಟು ಹೇಳಿದ ಶರತ್ ಮತ್ತೆ ಗಂಗಾಧರನ ಮುಖ ನೋಡದೆ ಊರಿನ ಕಡೆ ಮುಖ ಮಾಡಿದ.

★ ★ ★

ಕೆ.ಜಿ ಹಳ್ಳಿಯಲ್ಲಿ ಒಂದು ಪುಟ್ಟ ಪೋಸ್ಟ್ ಆಫೀಸು ಸಹ ಇತ್ತು. ಅದು ಏಕ ವ್ಯಕ್ತಿ ಅಂಚೆ ಕಚೇರಿ. ಅಲ್ಲಿ ಕೆಲಸ ಮಾಡುತ್ತಿದ್ದವನು ಒಬ್ಬನೇ ವ್ಯಕ್ತಿ. ಅವನೇ ಅಲ್ಲಿನ ಆಫೀಸರ್, ಪೋಸ್ಟ್ ಮ್ಯಾನ್–ಎಲ್ಲ. ಪ್ರತಿದಿನವೂ ಪೋಸ್ಟ್ ಆಫೀಸು ತೆರೆಯಬೇಕು, ಇಂಥದ್ದೇ ಸಮಯದಲ್ಲಿ ಪೋಸ್ಟ್ ಆಫೀಸು ವ್ಯವಹಾರ ಮಾಡಬೇಕೆಂಬ ಯಾವ ನಿಯಮವೂ ಅವನಿಗಿದ್ದಂತಿರಲಿಲ್ಲ. ಪೋಸ್ಟ್ ಆಫೀಸಿನ ಎಲ್ಲಾ ಕೆಲಸಗಳು ಆತನಿಗೆ ತಿಳಿದಿತ್ತೋ ಇಲ್ಲವೋ? ಇಲ್ಲಾ ಬೇಕಂತಲೇ ಹಾಗೆ ಮಾಡುತ್ತಿರುವನೋ ಎಂದು ಕೆಲವರು ಆಶ್ಚರ್ಯ ಪಡುತ್ತಿದ್ದರು. ವಾರದ ಆರು ಕೆಲಸದ ದಿನಗಳಲ್ಲಿ ಎರಡು ದಿನ ಅವನು ಪೋಸ್ಟ್ ಆಫೀಸು ತೆರೆದರೆ ಹೆಚ್ಚು. ತೀರಾ ತುರ್ತಾಗಿ ಪೋಸ್ಟಾಫೀಸಿನ ಕೆಲಸ ಇದ್ದವರು ಅವನಿರುವ ಜಾಗ ತಿಳಿದುಕೊಂಡು ಅಲ್ಲಿಗೇ ಹೋಗುತ್ತಿದ್ದರು. ಅವನು ಅವರಿಗೆ ನಿರಾಸೆ ಮಾಡುತ್ತಿರಲಿಲ್ಲ! ತನ್ನನ್ನು ಹುಡುಕಿಕೊಂಡು ಬಂದವರನ್ನು ಆತ್ಮೀಯವಾಗಿ ಮಾತಾಡಿಸಿ, ಅವರ ಅಗತ್ಯಗಳನ್ನು ಪೂರೈಸಿ ಕಳಿಸುತ್ತಿದ್ದ. ಅವನ ಹೆಗಲಲ್ಲಿ ಸದಾ ಒಂದು ಚೀಲ ನೇತಾಡುತ್ತಿರುತ್ತಿತ್ತು. ಅದರಲ್ಲೇ ಒಂದು ಮಿನಿ ಪೋಸ್ಟ್ ಆಫೀಸು ಅಡಕವಾಗಿತ್ತು. ಅವನ ಹೆಸರು ಜಂಬಣ್ಣ. ಯಾವುದೇ ರೀತಿಯ ಜಂಭ ಇಲ್ಲದ ಅವನ ಹೆಸರು ಕೆಲವರಿಗೆ ವಿಚಿತ್ರವಾಗಿ ಕಾಣಿಸುತ್ತಿತ್ತು. ಅವನು ಸದಾ ಆ ಊರಿನಲ್ಲಿದ್ದ ಒಂದೇ ಒಂದು ಹೋಟೇಲು, ಲಕ್ಷ್ಮಿ ಟಿಫಿನ್ ರೂಮಿನಲ್ಲಿ ಕೂತು ಹರಟೆ ಕೊಚ್ಚಿ ಕಾಲ ಕಳೆಯುತ್ತಿದ್ದ.

ವಿಕ್ರಮ್ ಆ ಹೋಟೇಲ್‌ನೊಳಗೆ ಹೋದಾಗ ಮಾಲೀಕ ವೆಂಕಯ್ಯನಿಗೆ ತನ್ನ ಹೋಟೇಲಿನ ಪರಿಸ್ಥಿತಿಯ ಬಗ್ಗೆ ನಾಚಿಕೆಯಾಗಿರಬೇಕು. ಆದರೂ ಅದನ್ನು ಮುಚ್ಚಿಕೊಳ್ಳಲು ಅಧಿಕಾರವಾಣಿಯಿಂದ ತನ್ನ ಹೋಟೇಲ್ ಮಾಣಿ, ಅಡುಗೆಯವ ಮತ್ತು ಲೋಟ ತೊಳೆಯುವ ಏಕೈಕ ವ್ಯಕ್ತಿಯನ್ನು ಕೂಗಿದ.

''ಸುಬ್ಬ, ಗಿರಾಕಿ ಬಂದೈತೆ ಟೇಬಲ್ ಕಿಲೀನ್ ಮಾಡೋ.''

ವಿಕ್ರಮ್, ಜಂಬಣ್ಣ ಕೂತಿದ್ದ ಟೇಬಲ್ ಹತ್ತಿರವೇ ಹೋದ.

''ಬನ್ನಿ... ಕೂತ್ಕೊಳ್ಳಿ.''

ಜಂಬಣ್ಣ ಕತ್ತೆತ್ತಿ ನೋಡಿ ತನ್ನ ಉಬ್ಬಿದ ಹಲ್ಲುಗಳನ್ನು ಪ್ರದರ್ಶಿಸಿದ.

''ಥ್ಯಾಂಕ್ಸ್, ನೀವು ಇಲ್ಲಿನ ಪೋಸ್ಟ್ ಮಾಸ್ಟರ್ ಅಂತ ಕಾಣುತ್ತೆ.''

ವಿಕ್ರಮ್ ಮರ್ಯಾದೆಯಿಂದ ಮಾತಾಡಿಸಿದೊಡನೆಯೇ ಜಂಬಣ್ಣ ಹಿಗ್ಗೀ ಹೀರೇಕಾಯಿಯಾದ.

''ನೀವು ಯಾರೋ ನನಗೆ ಗೊತ್ತಾಗಲಿಲ್ಲ.''

''ಹೇಳ್ತೀನಿ, ನನ್ನ ಹೆಸರು ವಿಕ್ರಮ್. ಬೆಂಗಳೂರಿಂದ ಬಂದಿದೀನಿ, ಒಬ್ಬರನ್ನ ನೋಡಬೇಕಾಗಿತ್ತು. ಹಾಗೇ ಪೋಸ್ಟಾಫೀಸಿನ ಆವಶ್ಯಕತೆ ಇತ್ತು. ಆದರೆ ನೀವು ಇಲ್ಲಿರ್ತೀರಾಂತ ಗೊತ್ತಾಯ್ತು.''

''ಏನು ಕೊಡಲಿ ಸಾರ್?''

ಹೋಟೇಲ್ ಮಾಲೀಕ ವೆಂಕಯ್ಯ ತಾನಾಗಿಯೇ ಆರ್ಡರ್ ತೆಗೆದುಕೊಳ್ಳಲು ಬಂದ.

''ಎರಡು ಒಳ್ಳೆ ಟೀ ಮಾಡ್ಕೊಂಡು ಬನ್ನಿ. ಜಂಬಣ್ಣನವರೇ... ನೀವು ಟೀ ತಗೋತೀರಿ ತಾನೇ? ಇಲ್ಲಾ ಕಾಫಿ ಹೇಳಲೋ?''

''ಟೀನೇ ಇರಲಿ ಬಿಡಿ.''

ಜಂಬಣ್ಣ ನಗುತ್ತಾ ಹೇಳಿದ. ಮರುಕ್ಷಣವೇ ತಾನು ಪೋಸ್ಟಾಫೀಸು ಮುಚ್ಚಿರುವ ವಿಷಯ ನೆನಪಾಯಿತು.

''ಪೋಸ್ಟಾಫೀಸು ಓಪನ್ ಮಾಡ್ಕೊಂಡು ಕೂತ್ರೆ ನೊಣ ಹೊಡೀತಾ ಕೂರಬೇಕು ಅಷ್ಟೆ ಸಾರ್. ಇಡೀ ದಿನ ಓಪನ್ ಮಾಡ್ಕೊಂಡು ಕೂತರೂ ಹತ್ತು ರೂಪಾಯಿ ವ್ಯವಹಾರ ಆಗೋದಿಲ್ಲ. ಅದಕ್ಕೆ ಸ್ವಲ್ಪ ಮುಂಚೇನೆ ಮುಚ್ಚಿಬಿಡ್ತೀನಿ. ಯಾರ್ಗಾದ್ರೂ ಅರ್ಜೆಂಟಾಗಿ ಏನಾದ್ರೂ ಬೇಕಾದ್ರೆ ಇಲ್ಲಿಗೆ ಬಂದ್ರೆ ಕೊಡ್ತೀನಿ. ನಿಮಗೇನು ಬೇಕಾಗಿತ್ತು?''

''ಒಂದು ರಿಜಿಸ್ಟರ್ ಪೋಸ್ಟು ಮಾಡಬೇಕಿತ್ತು. ''

''ಟೈಮಾಗೋಯ್ತಲ್ಲ ಸಾರ್?''

''ಏನು ಜಂಬಣ್ನೋರೆ ನೀವು ಸಹಾಯ ಮಾಡ್ತೀರಾಂತ ಬಂದ್ರೆ ಹೀಗಾಡೋದಾ?''

''ನಿಮಗೆ ಇಲ್ಲಾನ್ನೋಕೆ ಆಗುತ್ತ್ಯೇ? ಕವರ್ ಕೊಡಿ. ನಾನು ಮಾಡ್ತೇನೆ.''

ಅಷ್ಟೊತ್ತಿಗೆ ಟೀ ಬಂದಿತ್ತು.

''ತಗೊಳ್ಳಿ.''

ವಿಕ್ರಮ್ ಮಾತಿಗೆ ತೀರಾ ಸಂಕೋಚದಿಂದ ಎಂಬಂತೆ ಟೀ ಕಪ್ಪು ಕೈಗೆ ತೆಗೆದುಕೊಂಡ ಜಂಬಣ್ಣ.

''ಟೀ ಕುಡಿದ ಮೇಲೆ ಆಫೀಸಿಗೆ ಹೋಗೋಣ

ಅಲ್ಲೇ ಕವರ್ ಕೊಡ್ತೀನಿ.''
ಸ್ವಲ್ಪ ಹೊತ್ತು ವಿಕ್ರಮ್ ಮತ್ತು ಜಂಬಣ್ಣ ಇಬ್ಬರೂ ಲೋಕಾಭಿರಾಮವಾಗಿ ಮಾತಾಡಿದರು.
ಅರ್ಧ ಗಂಟೆಯ ಅನಂತರ ಇಬ್ಬರೂ ಜಂಬಣ್ಣನ ಪೋಸ್ಟ್ ಆಫೀಸ್ ಕಮ್ ರೆಸಿಡೆನ್ಸ್‌ನಲ್ಲಿದ್ದರು.
''ಕವರ್ ಕೊಡಿ...''
ಜಂಬಣ್ಣ ಕುರ್ಚಿಯಲ್ಲಿ ಕೂತ ಅನಂತರ ವಿಕ್ರಮ್ ತನ್ನ ವಿಸಿಟಿಂಗ್ ಕಾರ್ಡ್ ನೀಡಿದ. ವಿಸಿಟಿಂಗ್ ಕಾರ್ಡು ನೋಡುತ್ತಲೇ ಜಂಬಣ್ಣನ ಮುಖ ವಿವರ್ಣವಾಯಿತು.
''ಸಾರ್, ನಾನು ಪೋಸ್ಟಾಫೀಸನ್ನ ಸರಿಯಾಗಿ ತೆಗೆಯೋದಿಲ್ಲ, ಅದು ನಿಜ, ಆದ್ರೆ ಅದನ್ನ ಮೇಲಿನೋರಿಗೆ ರಿಪೋರ್ಟು ಮಾಡ್ಬೇಡಿ ಸಾರ್, ನನ್ನ ಹೊಟ್ಟೆ ಮೇಲೆ ಹೊಡೀಬೇಡಿ ಬಡವ...''
ಜಂಬಣ್ಣ ಗೋಗರೆಯಲು ಶುರು ಮಾಡಿದ.
''ನನಗೆ ಒಂದು ಸುದ್ದಿ ಬೇಕು. ಅದನ್ನ ಹೇಳಿದ್ರೆ ನಿನ್ನ ಬಗ್ಗೆ ರಿಪೋರ್ಟು ಮಾಡೋದಿಲ್ಲ.''
''ಅದೇನು ಕೇಳಿ. ''
''ಇಲ್ಲಿ ದಿನಾ ಎಷ್ಟು ವ್ಯಾಪಾರವಾಗುತ್ತೆ? ಯಾರ‍್ಯಾರು ಎಂತೆಂಥ ಪೋಸ್ಟಲ್ ಸಾಮಗ್ರಿಗಳನ್ನ ತಗೋತಾರೆ ಹೇಳು.''
ಜಂಬಣ್ಣ ಒಂದು ನಿಮಿಷ ಯೋಚಿಸಿ ಅನಂತರ ಮಾತು ಶುರು ಮಾಡಿದ.
''ಹೇಳೀ ಕೇಳಿ ಇದು ಹಳ್ಳಿ. ಹೆಚ್ಚಿಗೆ ಖರ್ಚಾಗೋದು ಕಾರ್ಡುಗಳು. ಅದು ಬಿಟ್ಟರೆ ಇನ್‌ಲ್ಯಾಂಡ್ ಲೆಟರ್‌ಗಳು. ಒಂದೊಂದು ಸಲ ಕವರ್ ಮತ್ತು ಸ್ಟ್ಯಾಂಪುಗಳೂ ಮಾರಾಟವಾಗ್ತವೆ.''
''ಕವರ್ ಕೊಂಡುಕೊಳ್ಳೋರು ಕಮ್ಮಿ ಅಲ್ವಾ? ಈಗ್ಗೆ ಸುಮಾರು ವಾರದ ಹಿಂದಿಂದ ಕವರ್‌ಗಳನ್ನು ಯಾರ‍್ಯಾರು ತಗೊಂಡಿದಾರೆ ನೆನಪು ಮಾಡ್ಕೊಂಡು ಹೇಳು.''
ಜಂಬಣ್ಣ ತಲೆ ತುರಿಸಿಕೊಂಡ.
''ಐದಾರು ದಿವಸಗಳಿಂದ ಎರಡು ಕವರ್...? ಹಾ...ಸರಿ...ಎರಡು ಕವರ್ ಮಾರಾಟವಾಗಿದಾವೆ. ಒಂದು ನಮ್ಮ ಕವಿ ಸೀತಾಪತಿ ತಗೊಂಡೋದ. ಆಮೇಲೆ ಹಾ... ಕೃಷ್ಣ ತಗೊಂಡು ಹೋದ...''
''ಇಬ್ಬರೂ ಅವನ್ನ ಪೋಸ್ಟ್ ಮಾಡಿದರಾ?''
''ಹೂಂ... ಸೀತಾಪತಿಯಂತೂ ನನ್ನೆದುರಿಗೇ ಎರಡು ಹಾಳೆಯ ಒಂದು ಪದ್ಯಾನ ಅದ್ರೊಳಗೆ ಸೇರಿಸಿ ಗೋಂದು ಹಾಕಿ ಕೊಟ್ಟ. ಕೃಷ್ಣನೂ ರಾತ್ರಿ ನನ್ನ ಕೈಗೆ ಕವರ್ ಕೊಟ್ಟ.''
''ಕೃಷ್ಣ ಅವರು ಕೊಟ್ಟ ಕವರ್ ಸೀಲಾಗಿತ್ತಲ್ವೆ?''
ಜಂಬಣ್ಣ ತಲೆಯಾಡಿಸಿದ.
''ಒಳಗೆಷ್ಟು ಪೇಪರ್ ಇದ್ದವು?''
''ಹ್ಹೆ... ಹ್ಹೆ... ಅದೆಂಗೇಳಾಕಾಗುತ್ತೆ ಸಾರ್?''
''ಹೋಗಲಿ, ತೂಕವಾಗಿತ್ತೋ ಇಲ್ಲ ಹಗುರವಾಗಿತ್ತೋ?''
''ಹಗುರವಾಗಿತ್ತೂಂತ ಕಾಣುತ್ತೆ.''
''ಯಾರ ವಿಳಾಸ ಅದರ ಮೇಲೆ ಬರೆದಿತ್ತು?''
''ಅದೆಲ್ಲಾ ನಾನು ನೋಡೋದಿಲ್ಲ. ಅದು ನಮ್ಮ ಪೋಸ್ಟಾಫೀಸಿನ ನಿಯಮಕ್ಕೆ ನಿಷಿದ್ಧ! ಬ್ಯಾಗ್ ಒಳಕ್ಕೆ ಹಾಕಿ ಸೀಲ್ ಮಾಡಿ ಸಂಜೆ ಬರೋ ಬಸ್ಸಲ್ಲಿ ಕಳಿಸಿಬಿಡ್ತೀನಿ.''
''ಓ.ಕೆ. ಮಿಸ್ಟರ್ ಜಂಬಣ್ಣ... ಅದೆಷ್ಟೇ ವಿಷಯ ನಂಗೆ ಬೇಕಾಗಿದ್ದು.''
ವಿಕ್ರಮ್ ಕುರ್ಚಿಯಿಂದೆದ್ದ.
''ಸಾರ್ ಏನೋ ರಿಜಿಸ್ಟರ್ಡ್ ಕವರ್ ಅಂದ್ರಿ?''
ಜಂಬಣ್ಣನ ಮಾತು ಮುಗಿಯುವುದರಲ್ಲಿ ವಿಕ್ರಮ್ ಪೋಸ್ಟಾಫೀಸಿನಾಚೆ ಹೋಗಿದ್ದ.
''ಸಾರ್... ನನ್ನ ಮೇಲೆ ರಿಪೋರ್ಟ್ ಮಾತ್ರ ಮಾಡ್ಬೇಡಿ ಸಾರ್?''
ಬಾಗಿಲಾಚೆ ಬಂದು ದೂರ ಹೋಗುತ್ತಿದ್ದ ವಿಕ್ರಮ್‌ಗೆ ಕೂಗಿ ಹೇಳಿದ ಜಂಬಣ್ಣ.

★ ★ ★

''ನಿಮ್ಮ ಹೆಸರು ರಾಣಿ ತಾನೆ?'' ಬಾಗಿಲು ತೆರೆದ ಯುವತಿಯನ್ನು ಕೇಳಿದ.
''ಹೌದು, ನಾನೇ ರಾಣಿ... ನೀವು ಯಾರು?'' ಆಕೆ ಆಗಂತುಕನನ್ನು ಅನುಮಾನದಿಂದ ಕೇಳಿದಳು.
''ನಿಮ್ಮೊಂದಿಗೆ ಸ್ವಲ್ಪ ಮಾತಾಡಬೇಕು...''
''ಯಾವ ವಿಷಯದ ಬಗ್ಗೆ?''
''ಮಿಸ್ ರಾಣಿ ನನ್ನ ಬಗ್ಗೆ ನೀವು ಅನುಮಾನ ಪಡಬೇಕಾಗಿಲ್ಲ ಅಥವಾ ಹೆದರಬೇಕಾಗಿಲ್ಲ.. ಅಲ್ಲದೆ ಬೀದೀಲಿ ಆ ವಿಷಯ ಮಾತಾಡೋಕೆ ಆಗೋದಿಲ್ಲ, ಒಳಗೆ ಬರಲೆ?''
''ನೀವು ಯಾರು ಮೊದಲು ಹೇಳಿ'' ಆಕೆ ಹೆದರಲಿಲ್ಲ. ಗಡಸುಗಾತಿಯೆನ್ನಿಸಿತು. ಶರತ್ ತನ್ನ ಕಾರ್ಡು ಆಕೆಗೆ ನೀಡಿದ. ಆಕೆ ಅದನ್ನು ಓದಿದಳು. ಡಿಟೆಕ್ಟೀವ್ ಎಂದು ತಿಳಿದರೂ ಸ್ವಲ್ಪವೂ ವಿಚಲಿತಳಾಗಲಿಲ್ಲ.
''ಸರಿ, ಆದ್ರೆ ಯಾವ ವಿಷಯ? ಯಾರ ಬಗ್ಗೆ ಮಾತಾಡ್ಬೇಕೂನ್ನೋದಾದ್ರೂ ಹೇಳಿ.''
''ಕೃಷ್ಣನ ಬಗ್ಗೆ.''
ಶರತ್ ಅವಳ ಮುಖಭಾವವನ್ನೇ ಪರೀಕ್ಷಿಸುತ್ತಾ ಹೇಳಿದ. ಆಕೆಯ ಮುಖದಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ,
''ಒಳಕ್ಕೆ ಬನ್ನಿ...''
ಶರತ್ ಅವಳ ಹಿಂದೆ ನಡೆದ.
ವರಾಂಡದಲ್ಲಿ ಸೋಫಾ ತೋರಿಸಿದಳು.
ಶರತ್ ಕುಳಿತು ಸುತ್ತ ದೃಷ್ಟಿ ಹಾಯಿಸಿ ಅನಂತರ ದೃಷ್ಟಿ ರಾಣಿಯೆಡೆಗೆ ತಿರುಗಿತು. ಕೃಷ್ಣನಂಥ ಶ್ರೀಮಂತ ಯುವಕನನ್ನು ಆಕರ್ಷಿಸುವಷ್ಟು ಸೌಂದರ್ಯ ಅವಳಲ್ಲಿತ್ತು. ಗೌರವರ್ಣದ ಆಕೆಯ ದೇಹ ಮಾಟವಾಗಿತ್ತು. ಮುಖದಲ್ಲಿ ಕಣ್ಣುಗಳು ಆಕರ್ಷಕವಾಗಿದ್ದವು. ಆದರೆ ಮುಖ ಮಾತ್ರ ಖಾಲಿ ತೆರೆಯಂತೆ! ಯಾವ ಭಾವವೂ ಅಲ್ಲಿ ಪ್ರಕಟವಾಗುವುದೇ ಇಲ್ಲವೇನೋ ಎಂಬಂಥ ಮೇಣದ ಮುಖ!
''ನಾನು ಕೃಷ್ಣ ಅವರ ವಿಷಯ ಮಾತಾಡೋಕೆ ಬಂದಿದೀನಿ.'' ಶರತ್ ಮಾತು ಪ್ರಾರಂಭಿಸಿದ.
''ಅದನ್ನಾಗಲೇ ಹೇಳಿದ್ರಲ್ಲ?''
ಆಕೆ ಮಾತುಗಳು ಮೊನಚಾಗಿದ್ದವು. ಇಷ್ಟು ಮೊನಚಾಗಿ, ಗಂಭೀರವಾಗಿ ಮಾತಾಡುವಾಕೆ ಕೃಷ್ಣನನ್ನು ಹೇಗೆ ಆಕರ್ಷಿಸಿದಳು? ಅಥವಾ ಅವನೇ ಇವಳ ಹಿಂದೆ ಬಿದ್ದನೋ?
''ಡಿಸೆಂಬರ್ ಇಪ್ಪತ್ತನೆಯ ತಾರೀಖು ಯಾವ ವಾರ ನೆನಪಿದೆಯೆ?'' ಶರತ್ ಕೇಳಿದ.
ಆಕೆ ತಲೆಯೆತ್ತಿ ಕ್ಯಾಲೆಂಡರ್ ನೋಡಿದಳು.
''ಶನಿವಾರ.''
''ಅವತ್ತು ಕೃಷ್ಣ ಇಲ್ಲಿಗೆ ಬಂದಿದ್ದರೆ?''
''ಹೌದು ಬಂದಿದ್ದರು.''
''ಅವತ್ತು ಏನಾಯ್ತು ಹೇಳ್ತೀರಾ?''
''ಮೊದಲಿಗೆ ನಾನು ನಿಮ್ಮ ಪ್ರಶ್ನೆಗೆ ಯಾಕೆ ಉತ್ತರ ಕೊಡಬೇಕು? ನೀವೇನೂ ಪೊಲೀಸ್ ಅಲ್ಲ. ನಿಮಗೆ ನನ್ನನ್ನ ಪ್ರಶ್ನೆ ಮಾಡೋದಕ್ಕೆ ಅಧಿಕಾರ ಇಲ್ಲ. ಕೃಷ್ಣ ಮತ್ತು ನನ್ನದು ವೈಯುಕ್ತಿಕ ವಿಚಾರ. ಕೃಷ್ಣನ ಬಗ್ಗೆ ನನ್ನ ಯಾಕೆ ಕೇಳ್ತಿದೀರಿ?''
ಆಕೆಯ ಸುಂದರ ಮುಖಕ್ಕೂ ಅವಳ ದನಿಗೂ ಹೊಂದಾಣಿಕೆಯಾಗಲಿಲ್ಲ.
''ಮಿಸ್. ರಾಣಿ, ನನ್ನ ಪ್ರಶ್ನೆಗೆ ನೀವು ಉತ್ತರ ಯಾಕೆ ಹೇಳಬೇಕೂಂದ್ರೆ ನಿಮಗೂ ಕೃಷ್ಣನಿಗೆ ಸಂಬಂಧವಿದೆ... ಕೃಷ್ಣನ ತಾತ ಅನುಮಾನಾಸ್ಪದವಾಗಿ ಸತ್ತಿದ್ದಾರೆ. ಅದರ ತನಿಖೆ ನಾವು ಮಾಡ್ತಿದ್ದೀವಿ. ಆದ್ದರಿಂದ ಕೃಷ್ಣನ ಬಗ್ಗೆ ನೀವು ಉತ್ತರ ಹೇಳಲೇಬೇಕು''
''ಹೇಳೋದಿಲ್ಲ ಅಂದರೆ?''
''ತೊಂದರೆಗೆ ಸಿಕ್ಕಿ ಹಾಕ್ಕೋತೀರಿ. ಕೃಷ್ಣನ ತಾತ ಯಶವಂತರಾವ್ ಅವರ ವಿಷಯ ನಿಮಗೆ ಈಗಾಗಲೇ ಸಾಕಷ್ಟು ಗೊತ್ತಿರಬಹುದೂಂತ ಭಾವಿಸ್ತೇನೆ. ಕೃಷ್ಣ ಆಸ್ತಿಗಾಗಿ ತನ್ನ ತಾತನ ಕೊಲೆ ಮಾಡಿರಬಹುದೂಂತ ಪೊಲೀಸರು ಅನುಮಾನ ಪಡ್ತಿದಾರೆ. ಕೃಷ್ಣ ತೊಂದರೇಲಿ ಸಿಕ್ಕಿಹಾಕೋತಾನೆ. ಇಲ್ಲೀವರೆಗೆ ಪೊಲೀಸಿನವರು ಹೆಚ್ಚಿಗೆ ತನಿಖೆ ಮಾಡಿಲ್ಲ. ನಿಮಗೂ ಅವನಿಗೂ ಸಂಬಂಧ ಇರೋ ವಿಷಯ ಗೊತ್ತಾದ್ರೆ ಪೊಲೀಸಿನೋರು ದಿನಾ ನಿಮ್ಮ ಮನೇ ಮುಂದೆ ಅಲೀತಾರೆ. ಅದಕ್ಕೇ ನಿಮ್ಮ ಹತ್ರ ಬಂದಿಲ್ಲ. ಒಂದ್ಸಲ ನಿಮ್ಮ ವಿಷಯ ಅವರಿಗೆ ತಿಳಿದರೆ ಅವರು ಕೇಳೋ ಪ್ರಶ್ನೆಗಳಿಂದ ನಿಮಗೆ ತುಂಬಾ ಮುಜುಗರವಾಗೋದ್ರಲ್ಲಿ ಅನುಮಾನವೇ ಇಲ್ಲ. ಇರೋ ವಿಷಯ ಹೇಳಿದರೆ ಪೊಲೀಸಿಗೂ ನಿಮಗೂ ಮಧ್ಯೆ ನಾವು ಇರ್ತೀವಿ. ಆದ್ರಿಂದ ನಿಮಗೂ ಅನುಕೂಲವಾಗುತ್ತೆ, ಮುಜುಗರಗಳು ತಪ್ಪುತ್ತವೆ.''
''ನನ್ನ ಬಗ್ಗೆ ನಿಮಗೆ ಯಾರು ಹೇಳಿದರು?''
''ಕೃಷ್ಣ.''
''ಸುಳ್ಳು. ಅವರು ಎಲ್ಲೂ ನನ್ನ ಹೆಸರು ಎತ್ತೋದಿಲ್ಲ! ನೀವು ಸುಳ್ಳು ಹೇಳ್ತಿದೀರ...''
''ಅಷ್ಟು ಯಾಕೆ? ಬೇಕಾದ್ರೆ ಫೋನ್ ಮಾಡಿ ಅವರನ್ನೇ ಕೇಳಿ.''
''ನಂಗೆ ಹೆಚ್ಚು ಸಮಯ ಇಲ್ಲ. ಏನು ಬೇಕೋ ಬೇಗ ಕೇಳಿ.''
ಆ ಸಮಯಕ್ಕೆ ಸರಿಯಾಗಿ ಮನೆಯ ಒಳಭಾಗದಿಂದ ಸುಮಾರು ಐವತ್ತರ ಹೆಂಗಸೊಬ್ಬಳು ಬಾಗಿಲಲ್ಲಿ ಕಾಣಿಸಿದಳು. ಆಕೆ ಬಾಗಿಲನ್ನು ಹಿಡಿದು ಮಗಳು ಮತ್ತು ಶರತ್ ಕಡೆ ನೋಡಿದಳು. ಕಣ್ಣುಗಳ ಗುಡ್ಡೆಗಳು ಬೆಳ್ಳಗಿದ್ದವು! ಅಂದರೆ ಆಕೆ ಅಂಧಳೆ?
''ಯಾರು? ಕೃಷ್ಣನೇ...?'' ಆಕೆ ಕೇಳಿದಳು.
''ನೀನ್ಯಾಕಮ್ಮ ಈಚೆ ಬಂದೆ? ಒಳಗೆ ಹೋಗು.'' ರಾಣಿ ಅಸಹನೆಯಿಂದ ಹೇಳಿದಳು.
''ಇಲ್ಲಾ.. ಇವತ್ತು ಕೃಷ್ಣನಿಗೆ ಒಂದು ಮಾತು ಹೇಳಬೇಕು. ನೋಡಿ, ತುಂಬಾ ದಿವಸ ಹೀಗಿರೋದು ಸರಿಯಲ್ಲ. ಮದುವೆ ಬಗ್ಗೆ ಗಂಭೀರವಾಗಿ ಯೋಚ್ನೆ ಮಾಡಿ. ನನ್ನ ಮಗಳನ್ನ ಮದ್ವೆಯಾಗ್ತೀರಿ ಅನ್ನೋ ನಂಬಿಕೆಯಿಂದ ಜೀವ ಹಿಡ್ಕೊಂಡಿದ್ದೀನಿ...''
''ಅಮ್ಮಾ... ಇವರು ಕೃಷ್ಣ ಅಲ್ಲ! ಅದೆಲ್ಲಾ ಇವರತ್ರ ಯಾಕೆ ಮಾತು?''
''ಮತ್ತೆ ಇವರ‍್ಯಾರು?''
''ಕೃಷ್ಣ ಅವರ ಸ್ನೇಹಿತರು.''
''ನೀನು ಸುಮ್ನಿರು ರಾಣಿ. ನೀನು ಸುಮ್ಮನೆ ಇರೋದಕ್ಕೇ ಇಲ್ಲೀವರೆಗೂ ಮದ್ವೆ ವಿಷಯ ತಳ್ಳಿಕೊಂಡು ಬಂದಿರೋದು. ಇವರು ಕೃಷ್ಣನ ಸ್ನೇಹಿತರು ಅಂದ್ರೆ ಒಳ್ಳೇದೇ ಆಯ್ತಲ್ಲ? ನೋಡಪ್ಪಾ, ನಿಮ್ಮೆಸರೇನೋ ನನಗೆ ಗೊತ್ತಿಲ್ಲ, ಆದ್ರೆ ನಿಮ್ಮ ಸ್ನೇಹಿತರಿಗೆ ಹೇಳಿ... ನಮ್ಮ ರಾಣಿಗೆ ಅನ್ಯಾಯವಾಗಬಾರದು! ಇವಳನ್ನ ಮದ್ವೆಯಾಗ್ತಾರೆ ಅನ್ನೋ ಭರವಸೆಯಿಂದ ಸುಮ್ಮನಿದ್ದೀನಿ...''

(ಮುಂದುವರಿಯುವುದು)

ಪಿಯುಸಿ ಎಂಬ ತಿರುವು

ನೂರಾರು ಕೋರ್ಸ್‌ಗಳು ಸಾವಿರಾರು ಉದ್ಯೋಗಾವಕಾಶಗಳು

ಭಾಗ-1

❑ ಎನ್. ಅನಂತನಾಗ್

ಇದು ಎಐ ಯುಗ. ಇಲ್ಲಿ ತಂತ್ರಜ್ಞಾನಕ್ಕೆ ಹೆಚ್ಚು ಮಹತ್ತ್ವ. ನಿಮಗೆ ಗೊತ್ತಿರಲಿ, ಮೆಡಿಕಲ್ ಅಥವಾ ಎಂಜಿನಿಯರಿಂಗ್ ಹೊರತಾಗಿಯೂ ಉತ್ತಮ ಭವಿಷ್ಯ ಕಂಡುಕೊಳ್ಳಲು ಅನೇಕ ವೃತ್ತಿಪರ ಶೈಕ್ಷಣಿಕ ಕೋರ್ಸ್‌ಗಳಿವೆ. ಉತ್ತಮ ಜೀವನ ಕಲ್ಪಿಸಿಕೊಡಬಲ್ಲ ವೃತ್ತಿಪರವಾದ ಅಂಥ ಕೋರ್ಸ್‌ಗಳ ಮಾಹಿತಿಯನ್ನು 'ತರಂಗ' ಎರಡು ಭಾಗಗಳಲ್ಲಿ ನಿಮ್ಮ ಮುಂದಿಡುತ್ತಿದೆ. ಪಿಯುಸಿ ಬಳಿಕ ಅಧ್ಯಯನದ ಅವಕಾಶಗಳು, ಅವುಗಳನ್ನು ಕಲಿಸಿಕೊಡುವ ಕಾಲೇಜುಗಳ ಬಗ್ಗೆ ಹಾಗೂ ಈ ಕೋರ್ಸ್‌ಗಳ ಕಲಿಕೆಯಿಂದ ಜೀವನದ ಭೂಮಿಕೆಯಲ್ಲಿ ಹೊಂದಬಹುದಾದ ಫಲವೇನು -ಎಂಬುದರ ಮಾಹಿತಿ ಇಲ್ಲಿದೆ. ಉತ್ತಮ ಭವಿಷ್ಯಕ್ಕೆ ಉನ್ನತ ಆಯ್ಕೆ ನಿಮ್ಮದಾಗಲಿ. ಆಲ್ ದ ಬೆಸ್ಟ್...

'ನನ್ನ ಮಾತು ಕೇಳು, ನೀನು ಈ ಕೋರ್ಸ್ ಮಾಡಿದರೆ ಉತ್ತಮ ಕೆಲಸ ಸಿಕ್ಕಿ ನೆಮ್ಮದಿಯಾಗಿ ಇರ್ತೀಯಾ?' ಎಂದು ಪೋಷಕರು ತಮ್ಮ ಮಕ್ಕಳಿಗೆ ಹೇಳುವುದನ್ನು ನೋಡಿದ್ದೇವೆ. 'ನಾವಂತೂ ಚೆನ್ನಾಗಿ ಓದಲಿಲ್ಲ, ನೀನಾದ್ರೂ ಚೆನ್ನಾಗಿ ಓದಿ ಒಳ್ಳೆಯ ಕೆಲ್ಸ ಹಿಡಿದರೆ ಜೀವನ ಚೆನ್ನಾಗಿರುತ್ತೆ' ಎಂದು ತಂದೆ-ತಾಯಿ ತಮ್ಮ ಮಕ್ಕಳಿಗೆ ಬೋಧಿಸುವುದೂ ಇದೆ. ಆದರೆ ಏನು ಓದಬೇಕು ಎಂದು ಹೇಳುವಷ್ಟು ಶಕ್ತರಾಗಿರುವುದಿಲ್ಲ. 'ನಾನು ಇದೇ ವಿಷಯವನ್ನು ಆಯ್ಕೆ ಮಾಡಿಕೊಂಡು ಗುರಿ ಸಾಧಿಸುತ್ತೇನೆ' ಎಂದು ಕೆಲವು ವಿದ್ಯಾರ್ಥಿಗಳು ಮುಂದೆ ಸಾಗುತ್ತಾರೆ. ಕೆಲವರು 'ತಮ್ಮ ಮಿತ್ರನ ಆಯ್ಕೆಯೇ ನನ್ನ ಆಯ್ಕೆ' ಎಂದು ಮುಂದುವರಿಯುವುದಿದೆ. ಇನ್ನು ಕೆಲವರು 'ಈ ಕೋರ್ಸ್ ನಾನು ತೆಗೆದುಕೊಳ್ಳಬಾರದಿತ್ತು' ಎಂದು ಮಧ್ಯದಲ್ಲಿಯೇ ಕೈಬಿಟ್ಟು, ಬೇರೆ ವಿಷಯ ಆಯ್ಕೆ ಮಾಡಿಕೊಳ್ಳುತ್ತಾರೆ. ಮತ್ತೆ ಕೆಲವರು ಕ್ರ್ಯಾಶ್ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಂಡು ಸುಲಭದ ಕಸುಬಿನಲ್ಲಿ ಗಳಿಕೆ ಕಡೆಗೆ ಮುಖ ಮಾಡುತ್ತಾರೆ.

ಇದು ಎಐ ಕಾಲ. ಯಾವುದೋ ಒಂದು ಕೋರ್ಸ್ ಆಯ್ಕೆ ಮಾಡಿಕೊಂಡು ಓದಿದರಾಯಿತು ಎಂಬ ಮಕ್ಕಳು ಈಗಿಲ್ಲ. ಇದೇ ವಿಷಯ, ಇದೇ ಕಾಲೇಜಿನಲ್ಲಿ ಓದುತ್ತೇನೆ ಎಂದು ಹಠ ಹಿಡಿಯುವ ಕಾಲ. ಇದಕ್ಕಾಗಿ 'ಸಾಲವಾದರೂ ಸರಿ ತಂದು ಸವಾಲು ಎದುರಿಸುತ್ತೇನೆ' ಎಂಬುದು ಇಂದಿನ ವಿದ್ಯಾರ್ಥಿಗಳ ಮನಃಸ್ಥಿತಿ. ಜತೆಗೆ, ಕಾಲ ಬದಲಾದಂತೆ ಹೊಸ ವಿಷಯಗಳು ಶೈಕ್ಷಣಿಕವಾಗಿ ಸೇರ್ಪಡೆಯಾಗುತ್ತಿವೆ. ಕೆಲವು ಸಾಂಪ್ರದಾಯಿಕ ವಿಷಯಗಳು ವಿಂಗಡಣೆಯಾಗಿ ಹೊಸ ವಿಷಯಗಳನ್ನು ಸೃಷ್ಟಿಸುತ್ತಿವೆ. ಹೀಗಾಗಿ ಪದವಿಪೂರ್ವ ಶಿಕ್ಷಣವನ್ನು ಮುಗಿಸಿ, ಪದವಿ ಗಳಿಸುವ ಬಯಕೆಯಲ್ಲಿರುವ ಯುವ ಮನಸ್ಸುಗಳಿಗೆ ಪ್ರಾರಂಭದಲ್ಲಿ ಗೊಂದಲಗಳಂತೂ ಇದ್ದೇ ಇರುತ್ತವೆ.

ಯಾರಾದರೂ ಉತ್ತಮ ಮಾರ್ಗದರ್ಶನ ಮಾಡಿದರೆ ಒಳ್ಳೆಯ ಕೋರ್ಸ್ ಗಿಟ್ಟಿಸಿಕೊಂಡು ಒಳ್ಳೆಯ ಕೆಲಸಕ್ಕೆ ಸೇರಬಹುದು ಎಂಬ ಬೆಂಗಾವಲಿನ ಮಾತೂ ಬೇಕೆನಿಸುತ್ತದೆ. ಅಲ್ಲದೆ ಪದವಿಪೂರ್ವ ಶಿಕ್ಷಣ ಮುಗಿಸುವ ಮುನ್ನ ಕಾಲೇಜಿನಲ್ಲಿ ಪ್ರಾಧ್ಯಾಪಕರು ಕಲೆ, ವಿಜ್ಞಾನ, ವಾಣಿಜ್ಯ ವಿಷಯಗಳ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆ. ಜೊತೆಗೆ, ಹೊಸಯುಗದಲ್ಲಿ ಹೊಸ ಅವಕಾಶಗಳನ್ನು ಸೃಷ್ಟಿಸುವ ಹೊಸ ಕೋರ್ಸ್‌ಗಳ ಬಗೆಗೂ ಒಂದಷ್ಟು ಮಾಹಿತಿ ಇಲ್ಲಿದೆ. ಆಯ್ಕೆ ನಿಮ್ಮದು.

ಈಗಿನ ಟ್ರೆಂಡ್ ಹೇಗಿದೆ?

ಒಂದು ಕಾಲವಿತ್ತು. ಪಿಯುಸಿ ಮುಗಿದರೆ ಬಿ.ಎ., ಬಿ.ಎಸ್ಸಿ, ಬಿ.ಕಾಂ ಇವೇ ಮೊದಲ ಆಯ್ಕೆಯಾಗಿರುತ್ತಿದ್ದವು. ಬಳಿಕ ಅಂದಿನ ಬಹುತೇಕ ವಿದ್ಯಾರ್ಥಿಗಳ

ಆಯ್ಕೆ ಅವಕಾಶ ತೆರೆದುಕೊಳ್ಳುತ್ತಿದ್ದದ್ದು ಎಂಜಿನಿಯರಿಂಗ್ ಮತ್ತು ವೈದ್ಯಕೀಯ ವಿಷಯಗಳತ್ತ. ಇವು ಶ್ರೀಮಂತರ ಆಯ್ಕೆಗಳು ಎಂದು ಬ್ರ್ಯಾಂಡ್ ಆಗಿದ್ದವು. ಎಂಜಿನಿಯರ್- ಡಾಕ್ಟರ್ ಓದುತ್ತಿದ್ದಾನೆ/ಳೆ ಎಂದರೆ, ಹುಬ್ಬೇರಿಸಿ ನೋಡುತ್ತಿದ್ದ ಸಮಯವೂ ಹೌದು. ಅಲ್ಲದೆ ನಮ್ಮ ಕೈಲಿ ಡಾಕ್ಟರ್- ಎಂಜಿನಿಯರ್ ಅಂತ ಅಷ್ಟೊಂದು ಓದಿಸಕಾಗಲ್ಲ ಎಂದು ಪೋಷಕರೇ ಹಿಂದೇಟು ಹಾಕುತ್ತಿದ್ದರು. ಅದಕ್ಕೆ ಕಾಲೇಜುಗಳ ಅಲಭ್ಯತೆ ಮತ್ತು ಆರ್ಥಿಕ ಪರಿಸ್ಥಿತಿಯೂ ಕಾರಣವಾಗಿತ್ತು. ಈಗಿನ ಸ್ಥಿತಿ ಹಾಗಿಲ್ಲ. ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಆನ್ ಲೈನ್ ಕೋರ್ಸ್ ಸೇರಿಕೊಳ್ಳುವಷ್ಟು ಅಧ್ಯಯನ ಸಮಯ ಬೆಳೆದಿದೆ. ಜತೆಗೆ, ಇದೇ ರಾಜ್ಯದಲ್ಲಿ ಅಲ್ಲದಿದ್ದರೂ ಬೇರೆ ರಾಜ್ಯದಲ್ಲಿಯಾದರೂ ನಮಗೆ ಸೀಟ್ ಸಿಗುತ್ತದೆ ಎಂಬ ನಂಬಿಕೆ ವಿದ್ಯಾರ್ಥಿಗಳಿಗಿದೆ. ಜತೆಗೆ ಅತಿಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳು ನಮ್ಮ ವಿವಿಯಲ್ಲಿದ್ದರೆ ಉತ್ತಮ ಎಂದು ವಿವಿಗಳೇ ವಿದ್ಯಾರ್ಥಿಗಳಿಗಾಗಿ ಪರಿತಪಿಸುವಂತಾಗಿದೆ.

ಪರ ರಾಜ್ಯಗಳ ಕಾಲೇಜುಗಳಿಂದ ವಿದ್ಯಾರ್ಥಿಗಳ ಮನೆಗಳಿಗೆ ಕರೆ

ಇದೊಂದು ಹೊಸ ಟ್ರೆಂಡ್ ಅಂತಲೇ ಹೇಳಬೇಕು. ಪಿಯುಸಿ ಪರೀಕ್ಷೆ ಮುಗಿಯುತ್ತಿದ್ದಂತೆ ಪರೀಕ್ಷೆ ಬರೆದಿರುವ ವಿದ್ಯಾರ್ಥಿಗಳ ಪಟ್ಟಿಯನ್ನು ವಿಶ್ವವಿದ್ಯಾಲಯಗಳ ಮೂಲಕ ಪದವಿ ಕಾಲೇಜುಗಳು ಸಂಗ್ರಹಿಸುತ್ತವೆ. ಮಕ್ಕಳ ಆಂತರಿಕ ಗುಣಮಟ್ಟ, ವಿದ್ಯಾರ್ಥಿಗಳು ಈ ಹಿಂದಿನ ತರಗತಿಗಳಲ್ಲಿ ಪಡೆದಿರುವ ಅಂಕಗಳನ್ನು ಅವರೇ ಲೆಕ್ಕಹಾಕುತ್ತಾರೆ. ಈ ವಿದ್ಯಾರ್ಥಿಗಳಿಗೆ ಯಾವ ಕೋರ್ಸ್ ಸೂಕ್ತ ಎಂದು ಅವರೇ ಒಂದು ಸ್ಥೂಲ ಲೆಕ್ಕಾಚಾರ ಮಾಡುತ್ತಾರೆ. ಆ ಆಧಾರದ ಮೇಲೆ ಮಕ್ಕಳ ಮನೆಗಳಿಗೆ ಫೋನ್ ಮಾಡಿ ಪೋಷಕರ ಮನವೊಲಿಸಲು ಮುಂದಾಗುತ್ತಾರೆ. ಇತ್ತೀಚೆಗೆ ಈ ಲೇಖಕನ ಸ್ನೇಹಿತರ ಮಗ ಪಿಯುಸಿ ಪರೀಕ್ಷೆ ಬರೆದಿದ್ದು, ಅವರ ಮನೆಗೆ ಈಗಾಗಲೇ ಗುಜರಾತ್‌ನಲ್ಲಿರುವ ಕಾಲೇಜುಗಳು, ಮಧ್ಯಪ್ರದೇಶದ ಕಾಲೇಜುಗಳು ಸೇರಿದಂತೆ ಬೇರೆ ಬೇರೆ ರಾಜ್ಯದ ಕಾಲೇಜುಗಳು ಅವರ ಮನೆ ಬಾಗಿಲು ತಟ್ಟಿವೆ.

ಆ ಕಾಲೇಜುಗಳು ಕೇಳುವ ಪ್ರಶ್ನೆಯೆಂದರೆ, ‘ನಿಮ್ಮ ಮಗ/ಮಗಳನ್ನು ನಮ್ಮ ರಾಜ್ಯದಲ್ಲಿ ಓದಿಸಲು ನಿಮಗೆ ಇಚ್ಛೆ ಇದೆಯೇ?’ ಎನ್ನುವುದು. ಇಚ್ಛೆ ಇದ್ದಲ್ಲಿ ತಮ್ಮ ಕಾಲೇಜಿನಲ್ಲಿ ಉಳಿದುಕೊಳ್ಳಲು ಇರುವ ವ್ಯವಸ್ಥೆ, ಮುಂಜಾನೆ ಯೋಗ-ಧ್ಯಾನ, ಆಹಾರ-ವಿಹಾರ, ಕ್ರೀಡೆ- ಉತ್ತಮ ಪ್ರಯೋಗಾಲಯ, ಪರಿಣತ ಪ್ರಾಧ್ಯಾಪಕರು ಸೇರಿದಂತೆ ತಮ್ಮಲ್ಲಿರುವ ಸೌಲಭ್ಯಗಳ ಬಗ್ಗೆ ಪೋಷಕರಿಗೆ ಹೇಳಿ ಅವರ ಮನಸ್ಸನ್ನು ತಮ್ಮೆಡೆಗೆ ಒಲಿಸಿಕೊಳ್ಳಲು ಯತ್ನಿಸುತ್ತಾರೆ. ಬಳಿಕ ವಿದ್ಯಾರ್ಥಿಯ ಈ ಹಿಂದಿನ ತರಗತಿಗಳ ಸಾಧನೆಗಳನ್ನು ತಂದೆ-ತಾಯಿಯ ಮುಂದೆ ಬಣ್ಣಿಸುತ್ತಾರೆ. ಜತೆಗೆ ಪದವಿಯಲ್ಲಿ ವರ್ಷದಿಂದ ವರ್ಷಕ್ಕೆ ಉತ್ತಮ ಅಂಕಗಳನ್ನು ಗಳಿಸಿದರೆ, ವಿದ್ಯಾರ್ಥಿವೇತನವನ್ನು ನೀಡುವುದಾಗಿ ಹೇಳುತ್ತಾರೆ. ಜತೆಗೆ, ಇಂತಿಷ್ಟು ಕಡಿಮೆ ಶುಲ್ಕವನ್ನು ಪಾವತಿಸಿ ನಮ್ಮ ಕಾಲೇಜನ್ನು ಸೇರಿಕೊಂಡರೆ ನಾವು ವಿದ್ಯಾರ್ಥಿಗಳ ಪೂರ್ಣ ಜವಾಬ್ದಾರಿಯನ್ನು ಹೊರುವುದಾಗಿಯೂ, ಕೋರ್ಸ್ (ಎಂಜಿನಿಯರ್) ಮುಗಿಯುತ್ತಿದ್ದಂತೆ ಕೊನೆ ಸೆಮಿಸ್ಟರ್ ಕ್ಯಾಂಪಸ್ ಸೆಲೆಕ್ಷನ್‌ನಲ್ಲಿ ಅವಕಾಶವಿದ್ದು ಉತ್ತಮ ಉದ್ಯೋಗ ಕೊಡಿಸುವುದಾಗಿಯೂ ಭರವಸೆ ನೀಡುತ್ತಾರೆ. ಇವೆಲ್ಲವೂ ವಿದ್ಯಾರ್ಥಿಗಳು ಪಿಯುಸಿಯಲ್ಲಿ ಗಳಿಸುವ ಉತ್ತಮ ಅಂಕಗಳ ಮೇಲೆ ನಿರ್ಧಾರಿತವಾಗಿರುತ್ತದೆ ಎಂದು ಕೊನೆಯಲ್ಲಿ ತಿಳಿಸುತ್ತಾರೆ.

ಒಟ್ಟಿನಲ್ಲಿ ಪೋಷಕರು ಒಪ್ಪಿಕೊಳ್ಳಲು ಏನೇನು ಮಾಡಬೇಕೋ ಅವೆಲ್ಲವನ್ನು ಮಾಡುತ್ತಾರೆ. ಅದೂ ಅವರ ಸ್ಥಳೀಯ ಭಾಷೆಯಲ್ಲಿ. ಕೆಲವರು ಒಪ್ಪಿಕೊಳ್ಳಲೂಬಹುದು. ಇನ್ನು ಕೆಲವರು ಇದು ಸ್ಕ್ಯಾಮ್ ಇರಬಹುದು ಎಂದು ಭಯಗೊಂಡು ಜಾರಿಕೊಳ್ಳುತ್ತಾರೆ. ಇನ್ನು ಕೆಲವು ಪೋಷಕರು ಮಕ್ಕಳು ನಮ್ಮ ಕಣ್ಣ ಮುಂದೆಯೇ ಓದಿಕೊಂಡಿರಲಿ, ಎಲ್ಲೂ ಹೋಗುವುದು ಬೇಡ. ನಮ್ಮ ಹತ್ತಿರದ ಪಟ್ಟಣದಲ್ಲಿಯೇ ಉತ್ತಮ ಕಾಲೇಜುಗಳಿವೆ ಎಂದು ಮಗ/ಮಗಳು ಏನು ಇಷ್ಟಪಡುತ್ತಾನೋ/ಳೋ ಆ ವಿಷಯವನ್ನೇ ಆಯ್ಕೆ ಮಾಡಿಕೊಳ್ಳಲಿ ಎಂದು ಕಾಲೇಜುಗಳಿಗೆ ತಮ್ಮ ನಿರ್ಧಾರ ತಿಳಿಸುತ್ತಾರೆ.

ಪ್ರತಿಷ್ಠಿತ ಕಾಲೇಜು ಪ್ರವೇಶಕ್ಕೆ ಪರೀಕ್ಷೆ ಕಡ್ಡಾಯ

ನಾನು ಪಿಯುಸಿ ಮುಗಿದ ಬಳಿಕ ಇಂಥ ಪ್ರತಿಷ್ಠಿತ ಕಾಲೇಜಿನಲ್ಲಿಯೇ ಓದಬೇಕು ಎಂದು ಕನಸು ಕಟ್ಟಿಕೊಂಡು ಕಾಯುತ್ತಿರುವ ವಿದ್ಯಾರ್ಥಿಗಳು ಅನೇಕ ಪ್ರವೇಶ ಪರೀಕ್ಷೆಗಳನ್ನು ಎದುರಿಸಲು ಸಿದ್ಧರಾಗಿರಬೇಕು. ಪಿಯುಸಿ ಬಳಿಕ ಎಂಜಿನಿಯರಿಂಗ್ ಅಥವಾ ವೈದ್ಯಕೀಯ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಲು ಸಿಇಟಿ ಅಥವಾ ಕಾಮೆಡ್-ಕೆಯಂಥ ಪ್ರವೇಶ ಪರೀಕ್ಷೆಗಳನ್ನು ಸರಕಾರವೇ ನಡೆಸುತ್ತದೆ. ಇದರ ಬಳಿಕವೂ ಕೆಲವು ಪ್ರತಿಷ್ಠಿತ ಕಾಲೇಜುಗಳು ತಮ್ಮ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಸೀಟ್ ಪಡೆಯಲು ಮತ್ತೊಂದು ಪ್ರವೇಶ ಪರೀಕ್ಷೆಯನ್ನು ನಡೆಸುತ್ತವೆ. ಇಂಥ ಕಾಲೇಜುಗಳು ಸಿಇಟಿಯಲ್ಲಿ ಉತ್ತಮ ಸಾಧನೆ ಮಾಡಿದ್ದರೂ ಕಾಲೇಜಿನಲ್ಲಿ ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ಅನುತ್ತೀರ್ಣರಾದರೆ ಅವರು ವಿದ್ಯಾರ್ಥಿಗಳ ಪ್ರವೇಶಕ್ಕೆ ನಿರ್ಬಂಧ ಹೇರುತ್ತಾರೆ. ಸಿಇಟಿಯಲ್ಲಿ ಕಡಿಮೆ ಅಂಕಗಳನ್ನು ಸಾಧಿಸಿ ತಮ್ಮ ಕಾಲೇಜಿನ ಪ್ರವೇಶ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಿದರೆ ಅಂಥವರಿಗೆ ಪ್ರವೇಶ ನೀಡುವುದುಂಟು. ಇದು ಕಾಲೇಜುಗಳೇ ತಮ್ಮ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುವ ಪ್ರಕ್ರಿಯೆ ಎನ್ನಬಹುದು. ಇದಕ್ಕೆ ಮೂಲ ಕಾರಣ, ಕಾಲೇಜಿನ ಮೇಲೆ ಬೇರೆ ಬೇರೆ ಮೂಲಗಳಿಂದ ಉಚಿತ ಅಥವಾ ಕಡಿಮೆ ಶುಲ್ಕದ ಸೀಟ್‌ಗಾಗಿ ಎದುರಾಗುವ ಒತ್ತಡ. ಕಾಲೇಜು ಕೊಡುವ ಉತ್ತಮ ಸೌಲಭ್ಯಕ್ಕೆ ಅರ್ಹರ ಆಯ್ಕೆಯ ಅಪೇಕ್ಷೆ. ಜತೆಗೆ ತಮ್ಮ ಕಾಲೇಜಿನ ಪ್ರತಿಷ್ಠೆಯನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುವ ಗುರಿಯೂ ಇದಾಗಿರಬಹುದು.

ಇಂಥ ಕಾಲೇಜಿನಲ್ಲಿ ನಮ್ಮ ಮಗ ಓದುತ್ತಿದ್ದಾನೆ ಎಂದು ಪೋಷಕರು ಹೇಳಿಕೊಳ್ಳುವುದುಂಟು. ಹಾಗೆಯೇ ಇಂಥ ಕಾಲೇಜಿನಲ್ಲಿ ನಾನು ಓದಿನ ಕಾರಣಕ್ಕೆ ನನಗೆ ಇಂಥ ಕೆಲಸ ಸಿಕ್ಕಿತು ಎಂದು ಅನೇಕ ವಿದ್ಯಾರ್ಥಿಗಳು ಹೇಳುವುದನ್ನು ಕೇಳಿದ್ದೇವೆ. ಇದು ಬರೀ ಪ್ರತಿಷ್ಠಿತ ಕಾಲೇಜಿನ ದೊಡ್ಡಸ್ತಿಕೆಯಲ್ಲ. ಅಂಥ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಪ್ರಾಧ್ಯಾಪಕರು ನೀಡುವ ಪ್ರವಚನಗಳ ಗುಣಮಟ್ಟ ಮತ್ತು ಕಲಿಕೆಯ ಮಟ್ಟವನ್ನು ಇದು ಆಧರಿಸಿರುತ್ತದೆ.

ಸಾಂಪ್ರದಾಯಿಕ ಕೋರ್ಸ್‌ಗಳು

ಕಲೆ, ವಿಜ್ಞಾನ, ವಾಣಿಜ್ಯ ವಿಷಯಗಳ ಆಧಾರದ ಮೇಲೆಯೇ ಹಲವು ವಿಶೇಷ ಕೋರ್ಸ್‌ಗಳು ಸೃಷ್ಟಿಯಾಗಿವೆ. ಬಿ.ಎ., ಬಿ.ಎಸ್ಸಿ, ಬಿ.ಕಾಂ, ಬಿಬಿಎಂ ಇತ್ಯಾದಿ ಕೋರ್ಸ್‌ಗಳನ್ನು ಸಾಂಪ್ರದಾಯಿಕ ಕೋರ್ಸ್‌ಗಳೆನ್ನುತ್ತಾರೆ. ಭಾರತ ಸರಕಾರವು ಸ್ವಾತಂತ್ರ್ಯಾನಂತರ ಪ್ರಾರಂಭ ಹಂತದಲ್ಲಿ ಪದವಿಯಲ್ಲಿ ಈ ಕೋರ್ಸ್‌ಗಳನ್ನು ಪರಿಚಯಿಸಿ ಭಾಷಾ ವಿಷಯಗಳ (ಕನ್ನಡ, ಇಂಗ್ಲಿಷ್, ಹಿಂದಿ) ಜತೆ ಹಲವು ಐಚ್ಛಿಕ ವಿಷಯಗಳನ್ನು (ವಿಜ್ಞಾನ, ಗಣಿತ ಇತ್ಯಾದಿ) ಸೇರಿಸಿ ತರಗತಿಗಳನ್ನು ಸೃಷ್ಟಿಸಿತು. ಇದರ ಆಧಾರದ ಮೇಲೆ ಕಲಾ ಕಾಲೇಜುಗಳು, ವಿಜ್ಞಾನ ಕಾಲೇಜುಗಳು ಹಾಗೂ ವಾಣಿಜ್ಯ ಕಾಲೇಜುಗಳು ಸೃಷ್ಟಿಯಾದವು. ಹಾಗೆಯೇ ಬಿ.ಎ. ಬಳಿಕ ಕಾನೂನು ಅಭ್ಯಾಸ ಮಾಡುವವರಿಗೆ ಕಾನೂನು ಕಾಲೇಜುಗಳು ಬಂದವು. ಬಳಿಕ ಒಂದೊಂದು ವಿಷಯದ ಪೂರ್ಣ ಜ್ಞಾನ ಸಂಪಾದನೆ ಅಂದರೆ, ಸ್ನಾತಕೋತ್ತರ ಪದವಿ ಗಳಿಕೆಗೆ ವಿಶ್ವವಿದ್ಯಾಲಯಗಳಲ್ಲಿ ಬೇರೆ ಬೇರೆ ವಿಭಾಗಗಳನ್ನು (ಡಿಪಾರ್ಟ್‌ಮೆಂಟ್) ಸೃಷ್ಟಿ ಮಾಡಿ ಅದಕ್ಕೆ ಒಬ್ಬ ಮುಖ್ಯಸ್ಥರನ್ನು ನೇಮಿಸಿ ಅವರ ಕೆಳಗೆ ಉಪನ್ಯಾಸಕರನ್ನು ನಿಯೋಜಿಸಲಾಯಿತು.

ಎಂಜಿನಿಯರಿಂಗ್‌ನಲ್ಲಿಯೂ ಸಿವಿಲ್, ಮೆಕ್ಯಾನಿಕಲ್‌ನಂಥ ಸಾಂಪ್ರದಾಯಿಕ ಕೋರ್ಸ್‌ಗಳಿದ್ದವು. ಬೇಡಿಕೆ ಹೆಚ್ಚಿದಂತೆಲ್ಲಾ ಅವುಗಳಲ್ಲಿಯೂ ವಿಭಾಗಗಳು ಬೆಳೆದವು. ಹೀಗಾಗಿ ವಿಶೇಷ ವಿಷಯಗಳ ಕುರಿತು ಅಧ್ಯಯನ ಮಾಡುವವರ ಆಸಕ್ತಿಗೆ ತಕ್ಕಂತೆ ಅಧ್ಯಯನ ವಿಷಯಗಳು ಬೆಳೆದಿವೆ. ಪ್ರಸ್ತುತ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (ಎಐ)ಮೂಲಕ ಹೊಸ ಕೋರ್ಸ್‌ಗಳ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೂ ಬೇಡಿಕೆ ಹೆಚ್ಚಾಗಿಯೇ ಇದೆ.

ಎಐ ಎಂಬ ಹೊಸ ಅವಕಾಶಗಳ ಬುಟ್ಟಿ

ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (ಎಐ) ಹಲವು ವೃತ್ತಿಪರರ ಅವಕಾಶವನ್ನು ಕಿತ್ತುಕೊಂಡಿತು ಎಂದು ಹೇಳುವುದಿದೆ. ವಾಸ್ತವವಾಗಿ ಹಾಗೇನಿಲ್ಲ, ಹೊಸತನಕ್ಕೆ



ನಮ್ಮನ್ನು ನಾವು ತೆರೆದುಕೊಳ್ಳದಿದ್ದರೆ ವೃತ್ತಿಪರತೆಯ ಅನೇಕ ಸವಾಲುಗಳ ಮುಂದೆ ನಾವು ಸೋಲಬೇಕಾಗುತ್ತದೆ. ಎಐ ಎಂಬ ಹೊಸತನವನ್ನು ರೂಢಿಸಿಕೊಂಡರೆ ವೃತ್ತಿಯಲ್ಲಿ ಹೊಸ ಅವಕಾಶಗಳನ್ನು ಸೃಷ್ಟಿಸಲು ಅನುಕೂಲವಾಗುತ್ತದೆ. ಕಷ್ಟದ ಕೆಲಸವನ್ನು ಸುಲಭಗೊಳಿಸುವ ಸಾಧನವಾಗಿ ಕೃತಕಬುದ್ಧಿಮತ್ತೆಯನ್ನು ಬಳಸಿದರೆ ಅದು ನಿಮ್ಮ ಕಾರ್ಯಕೌಶಲವನ್ನು ಹೆಚ್ಚಿಸುತ್ತದೆ.

ಕೃತಕ ಬುದ್ಧಿಮತ್ತೆ ಆಧಾರಿತ ಮಾಹಿತಿ ತಂತ್ರಜ್ಞಾನ ಓದಲು, ಪರೀಕ್ಷೆ ನಿರ್ವಹಿಸಲು, ಪ್ರಯೋಗಾಲಯದ ವೈವೋಗಳಲ್ಲಿ, ಉತ್ತಮ ಪುಸ್ತಕಗಳ ಖರೀದಿ, ವಿಶೇಷ ಉಪನ್ಯಾಸಗಳನ್ನು ಕೇಳಲು, ವಿವಿಧ ವಸ್ತುಪ್ರದರ್ಶನಗಳಿಗೆ ತೆರಳಲು, ತಾವು ಬಯಸುವ ಉದ್ಯೋಗ ಆಧಾರಿತ ವಿಷಯಗಳ ವಿವಿಧ ಪರೀಕ್ಷೆ ಎದುರಿಸಲು ಅನುಕೂಲವಾಗಿದೆ.

ಪದವಿಪೂರ್ವ ತರಗತಿಗಳನ್ನು ಮುಗಿಸಿ ಹೊಸ ಕೋರ್ಸ್‌ಗಳನ್ನು ಮಾಡುವವರಿಗೆ ಎಐ ಎಂಬುದು ಹೊಸ ಅವಕಾಶಗಳ ಬುಟ್ಟಿಯಂತಿದೆ. ಏಕೆಂದರೆ, ತಾವು ಇಂಥದ್ದೇ ವೃತ್ತಿಯನ್ನು ಅರಸಿ ಮುನ್ನಡೆಯುವ ವಿದ್ಯಾರ್ಥಿಗಳಿಗೆ ಎಐ ಆಧಾರಿತ ಹಲವು ತಂತ್ರಾಂಶಗಳು ಅಥವಾ ಕ್ರ್ಯಾಶ್ ಕೋರ್ಸ್‌ಗಳು ಓದುವ ಸಮಯದಲ್ಲಿಯೇ ವಿದ್ಯಾರ್ಥಿಗಳಿಗೆ ಸಾಥ್ ನೀಡುತ್ತವೆ. ವಿಜ್ಞಾನ ವಿಭಾಗದಲ್ಲಿ ಬಿ.ಟೆಕ್ ಇನ್ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಆ್ಯಂಡ್ ಮಿಷನ್ ಲರ್ನಿಂಗ್, ಬಿ.ಎಸ್ಸಿ ಇನ್ ಡಾಟಾ ಸೈನ್ಸ್ ಅಥವಾ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಕೋರ್ಸ್ ಅಧ್ಯಯನ ಮಾಡಬಹುದು. ವಾಣಿಜ್ಯ ವಿಭಾಗದಲ್ಲಿ ಬಿಸಿಎ (ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್)ನಲ್ಲಿ ಎಐ ಸ್ಪೆಷಿಫಿಕೇಷನ್ ಮಾಡಬಹುದು. ಬಿಬಿಎ ಇನ್ ಬಿಸಿನೆಸ್ ಅನಾಲಿಟಿಕ್ಸ್ ಮಾಡಬಹುದು. ಇನ್ನು ಕಲಾ ವಿಭಾಗದಲ್ಲಿ ಬಿ.ಡಿಎಸ್(ಬ್ಯಾಚುಲರ್ ಆಫ್ ಡಿಸೈನ್) ಎಐ ಇಂಟೆಲಿಜೆನ್ಸ್, ಡಿಪ್ಲೊಮಾ ಇನ್ ಎಐ ಜತೆಗೆ ಸರ್ಟಿಫಿಕೇಷನ್ ಕೋರ್ಸ್‌ಗಳನ್ನು ಮಾಡಬಹುದು. ಎಐ ಕೋರ್ಸ್‌ಗಳನ್ನು ಈಗಿರುವ ಕೆಲವು ಕೋರ್ಸ್‌ಗಳ ಜತೆಗೆ ಸ್ಪೆಸಿಫಿಕೇಷನ್ ಕೋರ್ಸ್‌ಗಳಾಗಿ ಸೇರಿಸಿದ್ದು ಇದೇ ಪ್ರತ್ಯೇಕ ಕ್ಷೇತ್ರವಾಗಿ ಮುಂದೆ ಬೆಳೆಯಲಿದೆ. ಜತೆಗೆ ತನ್ನದೇ ಕ್ಷೇತ್ರದ ವೈಶಿಷ್ಟ್ಯವನ್ನು ಪ್ರತಿಪಾದಿಸಲಿದೆ.

ಇಂದಿನ ಡಿಜಿಟಲ್ ಜಗತ್ತಿನಲ್ಲಿ, ಸಂಸ್ಥೆಗಳು ಸಂವೇದಕಗಳು, ಬಳಕೆದಾರರ ಸಂವಹನಗಳು ಮತ್ತು ಸಿಸ್ಟಮ್ ಲಾಗ್‌ಗಳಿಂದ ಅಗಾಧ ಪ್ರಮಾಣದ ಡೇಟಾವನ್ನು ಉತ್ಪಾದಿಸುತ್ತವೆ. ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಕಾರ್ಯಾಚರಣೆ ಮೂಲಕ ಈ ಡೇಟಾವನ್ನು ಗ್ರಾಹಕ ಬೆಂಬಲವನ್ನು ಹೆಚ್ಚಿಸಿಕೊಳ್ಳುವ, ಮಾರ್ಕೆಟಿಂಗ್ ತಂತ್ರಗಾರಿಕೆ ವೃದ್ಧಿಸುವ ಹಾಗೂ ಸುಧಾರಿತ ವಿಶ್ಲೇಷಣೆಗಳ ಮೂಲಕ ಕಾರ್ಯ ಸಾಧನೆ ಮಾಡಲು ಅನುಕೂಲವಾಗುತ್ತದೆ. ಹೀಗೆ ಎಐ ಸಂಸ್ಥೆಗಳ ಹಂತದಲ್ಲಿ ತನ್ನ ಸಾಮರ್ಥ್ಯ ಪ್ರದರ್ಶಿಸುತ್ತಿದೆ.

ಎಐ ಕೋರ್ಸ್ ಅನ್ನು ಅಧ್ಯಯನ ಮಾಡಲು ಅಂಕಿಅಂಶಗಳು, ಸಂಭವನೀಯತೆ ಸಿದ್ಧಾಂತ, ರೇಖೀಯ ಬೀಜಗಣಿತ ಮತ್ತು ಪೈಥಾನ್ ಪ್ರೋಗ್ರಾಮಿಂಗ್ ಭಾಷೆಯ ಮೂಲಭೂತ ಜ್ಞಾನದ ಜತೆಗೆ ಪದವಿಯನ್ನು ಹೊಂದಿರುವುದು ಆವಶ್ಯಕ. ಸಾಫ್ಟ್‌ವೇರ್ ಎಂಜಿನಿಯರ್, ಸಾಫ್ಟ್‌ವೇರ್ ಡೆವಲಪ್‌ನಿಂದ ಹಿಡಿದು ಆರ್ಕಿಟೆಕ್ಟ್ ಮತ್ತು ಕಂಪ್ಯೂಟರ್ ಸೈನ್ಸ್ ಪದವೀಧರರು ಎಐ ಕೋರ್ಸ್‌ಗಳನ್ನು ಮಾಡಿ ತಮ್ಮ ಕೌಶಲವನ್ನು ಹೆಚ್ಚಿಸಿಕೊಳ್ಳಬಹುದು.

ಎಐ ಆಧಾರಿತ ಸರ್ಟಿಫಿಕೇಟ್ ಕೋರ್ಸ್‌ಗಳು

- ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಫಾರ್ ಬಿಗಿನರ್ಸ್ (10 ವಾರಗಳ ಕೋರ್ಸ್)
- ಕೋರ್ಸ್ ಎರಾ ಎಐ ಮಾರ್ಕೆಟಿಂಗ್ ಸರ್ಟಿಫಿಕೇಟ್ (10 ಗಂಟೆಗಳ ಕೋರ್ಸ್)
- ಎಐ ಫಾರ್ ಡಿಸ್ಕವರಿ (25 ಗಂಟೆಗಳ ಕೋರ್ಸ್)
- ಫಿಲಾಸಫಿ ಆಫ್ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (10 ವಾರಗಳ ಕೋರ್ಸ್)
- ಎಐ ಫಾರ್ ಬಿಸಿನೆಸ್ (4 ವಾರಗಳ ಕೋರ್ಸ್)
- ಡೆವಲಪಿಂಗ್ ಎಐ ಅಪ್ಲಿಕೇಷನ್ಸ್ (1 ತಿಂಗಳ ಕೋರ್ಸ್)
- ಎಐ ಲೀಡರ್‌ಶಿಪ್ (6 ವಾರಗಳ ಕೋರ್ಸ್)
- ಎಐ ಆ್ಯಂಡ್ ಮಿಷಿನ್ ಲರ್ನಿಂಗ್ ಫಾರ್ ಬಿಸಿನೆಸ್ (6 ವಾರಗಳ ಕೋರ್ಸ್)
- ಪ್ರೊಫೆಶನಲ್ ಸರ್ಟಿಫಿಕೆಟ್ ಇನ್ ಡೇಟಾ ಎಂಜಿನಿಯರಿಂಗ್ (6 ತಿಂಗಳ ಕೋರ್ಸ್)
- ಗ್ರ್ಯಾಜುಯೇಟ್ ಸರ್ಟಿಫಿಕೇಟ್ ಆಫ್ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (8 ತಿಂಗಳ ಕೋರ್ಸ್)
- ಜನರೇಟೀವ್ ಎಐ (4 ವಾರಗಳ ಕೋರ್ಸ್)

ಹೀಗೆ ಇನ್ನೂ ಅನೇಕ ಕೋರ್ಸ್‌ಗಳು ಕಲೆ, ವಾಣಿಜ್ಯ, ವಿಜ್ಞಾನ ಸಂಬಂಧಿತವಾಗಿ ಲಭ್ಯವಿವೆ. ಅಲ್ಲದೆ ಕೆಲವು ಆಯಾ ವೃತ್ತಿಪರತೆಗೆ ಸಂಬಂಧಿಸಿದ ಕೋರ್ಸ್‌ಗಳಿವೆ.

ಬಿಗ್ ಡಾಟಾ ಅನಾಲಿಟಿಕ್ಸ್ ಕೋರ್ಸ್

ವಾಣಿಜ್ಯ ಸಂಘಟನೆಗಳಿಗೆ ಮಾಹಿತಿ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆಯ ಮೂಲಕ ದೇಶದ ಎಲ್ಲ ಕ್ಷೇತ್ರಗಳ ದತ್ತಾಂಶಗಳನ್ನು ಬಳಸಿಕೊಂಡು ವಾಣಿಜ್ಯ ಅಥವಾ ವ್ಯಾಪಾರ ಯೋಜನೆಗಳನ್ನು ರೂಪಿಸುವವರು ಬಿಗ್ ಡಾಟಾ ಅನಾಲಿಸ್ಟ್‌ಗಳು (ವಿಮರ್ಶಕರು). ದತ್ತಾಂಶಗಳ ಮೂಲಕ ವ್ಯಾಪಾರ ಕ್ಷೇತ್ರ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ನಿರೂಪಿಸುವ ಕಾರ್ಯ ಇವರದು.

ಬಿಗ್ ಡಾಟಾ ಅನಾಲಿಸ್ಟ್‌ಗಳಾಗಬೇಕೆಂದರೆ ಪಿಯುಸಿ ಬಳಿಕ ಪದವಿಯಲ್ಲಿ ಅರ್ಥಶಾಸ್ತ್ರ, ಗಣಿತ, ಮಾರ್ಕೆಟಿಂಗ್ ವಿಷಯಗಳಿರುವಂತೆ ಆಯ್ಕೆ ಮಾಡಿಕೊಂಡು ಅಧ್ಯಯನ ನಡೆಸಬೇಕು. ವಾಣಿಜ್ಯ/ಗಣಿತ ವಿಷಯಗಳಿರುವಂತೆ ಸ್ನಾತಕೋತ್ತರ ಪದವಿ ಪೂರೈಸಿ ಡಾಟಾ ವಿಮರ್ಶಾ ಪ್ರಾವೀಣ್ಯ ಸಾಧಿಸಿದರೆ ಬಿಗ್ ಡಾಟಾ ಅನಾಲಿಸ್ಟ್‌ಗಳಾಗಬಹುದು. ಮತ್ತೊಂದೆಡೆ ಪದವಿಯ ಜತೆಜತೆಗೆ ಎಐ ಆಧಾರಿತ ಡಾಟಾ ಅನಾಲಿಸ್ಟ್ ಕೋರ್ಸ್‌ಗಳನ್ನು ಮಾಡಿಯೂ ಗುರಿ ಸಾಧಿಸಬಹುದು.

ಇದರ ಜತೆಗೆ ಡಾಟಾ ಸಂಬಂಧಿತ ದತ್ತಾಂಶಗಳ ಸಂಗ್ರಹಣೆ, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್, ವಿಮರ್ಶಾಗುಣ ಅವಶ್ಯ. ಮಾರುಕಟ್ಟೆ ತಲ್ಲಣ, ಮಾರುಕಟ್ಟೆ ಟ್ರೆಂಡ್ಸ್, ಗ್ರಾಹಕರ ಆವಶ್ಯಕತೆ ನಿರ್ಧರಿಸುವ ಶಕ್ತಿ, ಮಲ್ಟಿ ಮೀಡಿಯಾ/ ಸೋಶಿಯಲ್ ಮೀಡಿಯಾವನ್ನು ನಿರ್ವಹಿಸುವ ತಂತ್ರಗಾರಿಕೆ, ಡಾಟಾ ಮೆಷಿನ್‌ಗಳ ತಿಳುವಳಿಕೆ, ಸಹನೆ, ಸಮೂಹದಲ್ಲಿ ಕಾರ್ಯನಿರ್ವಹಿಸುವ/ ಸಮಸ್ಯೆಯನ್ನು ಎದುರಿಸುವ ಕೌಶಲ ಅಗತ್ಯ.

ಅವಕಾಶಗಳು

ಐಟಿ ಕ್ಷೇತ್ರ, ಸಾಫ್ಟ್‌ವೇರ್ ವಲಯ, ಆನ್‌ಲೈನ್ ಬಿಸಿನೆಸ್, ಟ್ರಾವೆಲ್ ಮತ್ತು ಹಾಸ್ಪಿಟಾಲಿಟಿ, ಸರಕಾರಿ ಕ್ಷೇತ್ರ, ಹೆಲ್ತ್‌ಕೇರ್, ರಿಟೇಲ್ ಕನ್ಸಲ್ಟೆನ್ಸಿ , ದೊಡ್ಡ ಪ್ರಮಾಣದ ವ್ಯಾಪಾರಗಳು, ಇಂಟರ್ನೆಟ್ ಡಾಟಾ ಬಿಸ್‌ನೆಸ್‌ಗಳಲ್ಲಿ ಅವಕಾಶ.

ಕಾಲೇಜುಗಳು

- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇನ್ಫರ್‌ಮೇಷನ್ ಟೆಕ್ನಾಲಜಿ (ಐಐಐಟಿ) ಬೆಂಗಳೂರು.
- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್‌ಇ), ಬೆಂಗಳೂರು.
- ಎಸ್‌ಜೆಇಎಸ್ ಕಾಲೇಜ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಮೈಕ್ರೋಸಾಫ್ಟ್ ಐಟಿ ಅಕಾಡೆಮಿ, ಬೆಂಗಳೂರು .
- ಮಣಿಪಾಲ್ ಅಕಾಡೆಮಿ ಆಫ್ ಗ್ಲೋಬಲ್ ಸೈನ್ಸ್, ಬೆಂಗಳೂರು
- ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇನ್ಫಾರ್ಮೇಶನ್ ಟೆಕ್ನಾಲಜಿ, ಬೆಂಗಳೂರು.
- ದಯಾನಂದ ಸಾಗರ ವಿವಿ ಕಾಲೇಜು (ಡಿಎಸ್‌ಯು), ಬೆಂಗಳೂರು.

ಆಕ್ಚ್ಯುವರಿಯಲ್ ಅನಾಲಿಸ್ಟ್

ವಿಮೆಗೆ ಸಂಬಂಧಿಸಿದ ಲೆಕ್ಕಾಚಾರ, ಕಂತುಗಳ ಗಣನೆ, ವ್ಯಕ್ತಿಯ ಸಾವಿನ ಅನಂತರ ಸಿಗಬಹುದಾದ ಹಣ, ವಿಮೆಯಿಂದ ಕಂಪೆನಿಗಾಗುವ ಲಾಭ –ಹೀಗೆ ಲೆಕ್ಕಾಚಾರ ಹಾಕಿ ಹೊಸ ಹೊಸ ರೀತಿಯ ವಿಮೆಗಳನ್ನು ವಿನ್ಯಾಸಗೊಳಿಸುವವರು ಆಕ್ಚ್ಯುವರಿಯಲ್ ಅನಾಲಿಸ್ಟ್‌ಗಳು. ಇವರು ವಿಮಾ ಕಂಪೆನಿಗಳ ಜೀವಾಳ; ಇವರಿಂದಲೇ ಎಲ್ಲ ಕಂಪೆನಿಗಳಲ್ಲಿ ನೌಕರರಿಗೆ ಆರೋಗ್ಯ ವಿಮೆ, ಜೀವವಿಮೆಗಳು ದೊರಕುವುದು.

ಪಿಯು ಬಳಿಕ ಗಣಿತ ವಿಷಯವನ್ನೇ ಪ್ರಧಾನವಾಗಿ ಇರಿಸಿಕೊಂಡು ಆಕ್ಚ್ಯುವರಿಯಲ್ ಸೈನ್ಸ್‌ನಲ್ಲಿ ಪದವಿ ಮುಗಿಸಿ ಇನ್‌ಸ್ಟಿಟ್ಯೂಟ್ ಆಫ್ ಆಕ್ಚ್ಯುವರಿಯಲ್ ಆಫ್ ಇಂಡಿಯಾ (ಐಎಐ) ನಡೆಸುವ ಎಸಿಇಟಿ ಪರೀಕ್ಷೆ ಮಾಡಿದರೆ ಆಕ್ಚ್ಯುವರಿಯಲ್ ಅನಾಲಿಸ್ಟ್ ಆಗಬಹುದು. ವಿಮಾ ಕಂಪೆನಿಗಳಲ್ಲಿ ಉನ್ನತ ಸ್ಥಾನವನ್ನು ಗಳಿಸಬಹುದು.

ಅವಕಾಶಗಳು

ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟ್ ಆಫ್ ಇಂಡಿಯಾ, ಇನ್‌ಸ್ಟಿಟ್ಯೂಟ್ ಆಫ್ ಕಾಸ್ಟ್ ಆ್ಯಂಡ್ ವರ್ಕ್ ಅಕೌಂಟ್ಸ್ ಆಫ್ ಇಂಡಿಯಾ, ಸರ್ಟಿಫೈಡ್ ಇನ್‌ಸ್ಟಿಟ್ಯೂಟ್ ಆಫ್ ಫೈನಾನ್ಶಿಯಲ್ ಅನಾಲಿಸ್ಟ್ಸ್ ಆಫ್ ಇಂಡಿಯಾ, ಫೆಲೋ ಆಫ್ ಇನ್ಶೂರೆನ್ಸ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಹಾಗೂ ಖಾಸಗಿ ವಿಮಾ ಕಂಪೆನಿಗಳಲ್ಲಿ ಅವಕಾಶಗಳಿವೆ.

ಕಾಲೇಜುಗಳು

- ಬಿಎಚ್‌ಯು (ಬನಾರಸ್ ಹಿಂದೂ ಯೂನಿವರ್ಸಿಟಿ), ಬನಾರಸ್
- ಪಾಟ್ಕರ್– ವರ್ದೆ ಕಾಲೇಜು, ಮುಂಬೈ
- ಬೆಂಗಳೂರು ವಿಶ್ವವಿದ್ಯಾನಿಲಯ– ಸಿಟಿ ಕಾಲೇಜು, ಬೆಂಗಳೂರು
- ಕ್ರೈಸ್ಟ್ (ಪರಿಗಣಿತ ವಿವಿ) ಬೆಂಗಳೂರು
- ಅಡ್ಮಿನಿಸ್ಟ್ರೇಟಿವ್ ಮ್ಯಾನೇಜ್‌ಮೆಂಟ್ ಕಾಲೇಜು (ಎಎಂಸಿ), ಬೆಂಗಳೂರು.

ಓಶನೋಗ್ರಾಫರ್

ಸಮುದ್ರದ ಗಡಿಯಲ್ಲಿ, ಸಮುದ್ರದಲ್ಲಿ ಆಗುವ ಬದಲಾವಣೆ, ಜಲಚರಗಳ ಪರ್ಯಟನೆ, ಸಾಗರಾಂತರಾಳದಲ್ಲಾಗುವ ರಾಸಾಯನಿಕ ಪ್ರಕ್ರಿಯೆ, ಸಾಗರದ ವಿಲಿಳಿತಗಳನ್ನು ಗಮನಿಸುವ ಕಾರ್ಯವನ್ನು ನಿರ್ವಹಿಸುವವರೇ ಓಶನೋಗ್ರಾಫರ್‌ಗಳು. ಇವರನ್ನು ಸಮುದ್ರದ ಸರ್ವೇಯರ್‌ಗಳು ಎನ್ನಬಹುದು.

ಪಿಯುಸಿಯಲ್ಲಿ ವಿಜ್ಞಾನ ಅಧ್ಯಯನದ ಬಳಿಕ ಬಿ.ಎಸ್ಸಿ ಮೆರೈನ್ ಸೈನ್ಸ್ ಅಭ್ಯಸಿಸಿ, ಅನಂತರ ಸ್ನಾತಕೋತ್ತರ ಪದವಿಯಲ್ಲಿ ಓಶನೋಗ್ರಫಿ ಅಧ್ಯಯನ ಮಾಡಬೇಕು. ಅಥವಾ ಪಿಯುಸಿ ಮುಗಿಸಿ ಪದವಿಗೆ ಜೆಇಇ ಅಡ್ವಾನ್ಸ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಓಶನ್ ಎಂಜಿನಿಯರಿಂಗ್ ಕೋರ್ಸ್ ಮಾಡಿದರೂ ಓಶನೋಗ್ರಾಫರ್ ಆಗಬಹುದು.

ನಿಧಿ, ನಿಕ್ಷೇಪ, ಸಮುದ್ರಗಡಿ, ಅಲೆಗಳ ಉಬ್ಬರ ಇಳಿತ, ಚಂಡಮಾರುತದ ಬಗೆಗೆ ಅಧ್ಯಯನ, ಮಾಹಿತಿ ಸಂಗ್ರಹಣ ಕಲೆ, ಸಮುದ್ರದಾಳದ ಜೀವಿಗಳ ಬಗ್ಗೆ ಅರಿವು, ಭೌತಶಾಸ್ತ್ರ, ಗಣಿತ, ಕಂಪ್ಯೂಟರ್ ಕೌಶಲಗಳಿದ್ದರೆ ಅವಕಾಶ ಹೆಚ್ಚು

ಅವಕಾಶಗಳು

- ಜಿಯಾಲಜಿಕಲ್ ಸರ್ವೇ ಆಫ್ ಇಂಡಿಯಾ, ಮಿಟಿಯೊರಾಜಿಕಲ್ ಡಿಪಾರ್ಟ್‌ಮೆಂಟ್, ಗ್ಯಾಸ್ ಆ್ಯಂಡ್ ಆಯಿಲ್ ಎಕ್ಸ್‌ಪ್ಲೊರೇಷನ್, ಆಕ್ವಾ ಕಲ್ಚರ್ ಮತ್ತು ಫಿಶರಿ, ವೇಸ್ಟ್ ಡಿಸ್ಪೋಸಲ್ ಪ್ಲಾಂಟ್ಸ್, ಮೆರಿಟೈಮ್ ಟ್ರೇಡ್ಸ್, ಎನ್ವಯರ್ಮೆಂಟಲ್ ಕನ್ಸರ್ವೇಷನ್ ಆ್ಯಂಡ್ ಪ್ರೊಟೆಕ್ಷನ್, ಮೆರೈನ್ ಪ್ರಾಡೆಕ್ಟ್ ಇಂಡಸ್ಟ್ರಿ (ಸಾಗರೋತ್ಪನ್ನ ಘಟಕ)ಗಳಲ್ಲಿ ಅವಕಾಶಗಳಿವೆ.

ಕಾಲೇಜುಗಳು

- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್‌ಇ), ಬೆಂಗಳೂರು.
- ಕರ್ನಾಟಕ ಯೂನಿವರ್ಸಿಟಿ ಕಾಲೇಜು. ಪೈವೇಟ್‌ನಗರ, ಧಾರವಾಡ.
- ಮಂಗಳೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿ, ಮಂಗಳೂರು,
- ಚೆನ್ನೈ ಯೂನಿವರ್ಸಿಟಿ ಕಾಲೇಜು, ಚೆನ್ನೈ.
- ಉತ್ಕಲ್ ಯೂನಿವರ್ಸಿಟಿ ಕಾಲೇಜು, ಭುವನೇಶ್ವರ, ಒಡಿಶಾ.

ಅರ್ಬನ್ ಪ್ಲಾನರ್

ಯಾವುದೇ ಪ್ರದೇಶವನ್ನು ನಗರವನ್ನಾಗಿ ಪರಿವರ್ತಿಸಲು ಅಲ್ಲಿನ ಮೂಲಸೌಕರ್ಯ, ಅಗತ್ಯ ಮತ್ತು ಜನಸಂಪನ್ಮೂಲವನ್ನು ನಿರ್ಧರಿಸಿ ನಗರಕ್ಕೆ ಬೇಕಾದ ಆವಶ್ಯಕತೆಗಳನ್ನು ಲೆಕ್ಕ ಹಾಕಿ ಕಾರ್ಯಯೋಜನೆಯನ್ನು ರೂಪಿಸುವವರು ಅರ್ಬನ್ ಪ್ಲಾನರ್‌ಗಳು. ಇವರು ಸರಕಾರದ ಕೊಂಡಿಯಂತೆ ಕಾರ್ಯನಿರ್ವಹಿಸಿ ಸಲಹೆ, ಸೂಚನೆ ನೀಡುತ್ತಾರೆ. ಕೆಲವೊಮ್ಮೆ ಸರಕಾರವೇ ಇವರನ್ನು ನೇಮಿಸಿಕೊಂಡು ಅಗತ್ಯ ಮಾಹಿತಿ ಪಡೆಯುತ್ತದೆ.

ಅರ್ಬನ್ ಪ್ಲಾನರ್ ಆಗಬಯಸುವವರು ಪಿಯುಸಿ ಬಳಿಕ ಪದವಿಯಲ್ಲಿ ಬಿಎ (ಎಕನಾಮಿಕ್ಸ್, ಸೋಷಿಯಾಲಜಿ) ಅಥವಾ ಬಿ.ಆರ್ಕಿಟೆಕ್ಟ್ ಆರಿಸಿಕೊಳ್ಳಿ, ಸ್ನಾತಕೋತ್ತರ ಪದವಿಯಲ್ಲಿ ಎಂ.ಎ. ಅಥವಾ ಎಂ. ಪ್ಲಾನಿಂಗ್ ವಿಷಯವನ್ನು ಓದಿದರೆ ಅಥವಾ ವಿಜ್ಞಾನ ವಿಷಯದಲ್ಲಿ ಪಿಯುಸಿ ಬಳಿಕ ಪದವಿಯಲ್ಲಿ ಬಿ.ಆರ್ಕಿಟೆಕ್ಟ್ ಅಥವಾ ಬಿ.ಟೆಕ್ ಅಭ್ಯಾಸ ಮಾಡಿ, ಎಂ.ಟೆಕ್ ಪ್ಲಾನಿಂಗ್ ಅಧ್ಯಯನ ಮಾಡಿದರೆ ಅರ್ಬನ್ ಪ್ಲಾನರ್ ಆಗುವುದು ಸುಲಭ.

ಜತೆಗೆ ನಗರ ಪ್ರದೇಶಗಳ ರಚನೆ, ಮೂಲಸೌಕಯಗಳ ಬಳಕೆ, ರಸ್ತೆ, ನಿವೇಶನ, ಉಪವನ, ಭವನ, ಸರಕಾರಿ ವಲಯ – ಹೀಗೆ ಪ್ರತಿ ವಿಷಯಗಳ ಬಗೆಗೆ ಜ್ಞಾನ ಅಗತ್ಯ. ಆಯಾ ಪ್ರದೇಶದ ಹಿನ್ನೆಲೆ. ಪ್ರಾಕೃತಿಕ ನಿಯಮದ ಬಗ್ಗೆ ಅರಿವಿರಬೇಕು. ಸ್ಕೆಚ್‌ಗಳನ್ನು ರಚಿಸುವ, ವಿಷಯ ಸಂಬಂಧಿತ ತಂತ್ರಾಂಶ ಬಳಸುವ ತಿಳುವಳಿಕೆ ಅಗತ್ಯ. ಅಲ್ಲದೆ ಸಮೂಹದಲ್ಲಿ ಕಾರ್ಯನಿರ್ವಹಿಸುವ, ಸಮಸ್ಯೆಗಳನ್ನು ಎದುರಿಸುವ, ಉತ್ತಮ ಸಂವಹನ ಕೌಶಲವಿರಬೇಕು.

ಅವಕಾಶಗಳು

ಸೆಂಟ್ರಲ್ ಬಿಲ್ಡಿಂಗ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಕನ್ಸಲ್ಟೆನ್ಸಿಗಳು, ಟ್ರಾನ್ಸ್‌ಪೋರ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್, ಟೌನ್ ಆ್ಯಂಡ್ ಕಂಟ್ರಿಪ್ಲಾನಿಂಗ್ ಆರ್ಗನೈಜೇಷನ್, ರಿಯಲ್ ಎಸ್ಟೇಟ್ ಡೆವಲಪರ್ ವಲಯ, ಹೌಸಿಂಗ್ ಆ್ಯಂಡ್ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಅಥಾರಿಟೀಸ್, ಮೆಟ್ರೋ ಟ್ರಾನ್ಸ್‌ಪೋರ್ಟ್ ಆರ್ಗನೈಸೇಷನ್, ಸೆಂಟ್ರಲ್ ಆ್ಯಂಡ್ ಸ್ಟೇಟ್ ಪೊಲ್ಯೂಷನ್ ಕಂಟ್ರೋಲ್ ಬೋರ್ಡ್, ಸೆಂಟ್ರಲ್ ಬಿಲ್ಡಿಂಗ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಎನ್‌ಜಿಒಗಳು ಮತ್ತು ಬಹುರೂಪಿಯ ಸಂಘಟನೆಗಳಲ್ಲಿ ಅವಕಾಶಗಳಿವೆ.

ಕಾಲೇಜುಗಳು

- ಮಣಿಪಾಲ್ ಸ್ಕೂಲ್ ಆಫ್ ಆರ್ಕಿಟೆಕ್ಚರ್ ಆ್ಯಂಡ್ ಪ್ಲ್ಯಾನಿಂಗ್, ಮಣಿಪಾಲ.
- ಎಸ್‌ಜೆಬಿ ಸ್ಕೂಲ್ ಆಫ್ ಆರ್ಕಿಟೆಕ್ಟ್ ಆ್ಯಂಡ್ ಪ್ಲಾನಿಂಗ್, ಬೆಂಗಳೂರು.
- ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
- ಆರ್.ವಿ. ಕಾಲೇಜು, ಬೆಂಗಳೂರು.
- ಸೃಷ್ಟಿ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್ಸ್, ಡಿಸೈನ್ ಆ್ಯಂಡ್ ಟೆಕ್ನಾಲಜಿ, ಬೆಂಗಳೂರು.

ಆ್ಯಕ್ಸೆಸರಿ ಡಿಸೈನರ್

ಆಧುನಿಕ ಯುಗದ ಫ್ಯಾಷನ್ ಇಮೇಜಿನ ವಸ್ತ್ರಗಳು, ಜ್ಯುವೆಲ್ಲರಿ, ಪಾದರಕ್ಷೆ, ಹೇರ್‌ಕಟ್, ಉಡುಗೊರೆ ವಸ್ತುಗಳು, ವಾಚ್‌ಗಳು, ಲೆದರ್ ಬ್ಯಾಗ್‌ಗಳು, ಕ್ರಾಫ್ಟ್ ಮತ್ತು ಜೀವನಾವಶ್ಯಕ ವಸ್ತುಗಳನ್ನು ವ್ಯಕ್ತಿಗಳ ಆಸಕ್ತಿಗೆ ಅನುಗುಣವಾಗಿ ನಿರ್ಧರಿಸಿ ಹೊಂದಿಸಿಕೊಡುವವರು ಆ್ಯಕ್ಸೆಸರಿ ಡಿಸೈನರ್‌ಗಳು. ಹೊಸ ಹೊಸ ವಿನ್ಯಾಸಗಳ ಟ್ರೆಂಡ್ ಸೃಷ್ಟಿಸುವವರು ಇವರೇ. ಫ್ಯಾಷನ್ ಡಿಸೈನರ್‌ಗಳಂತೆ ಕಂಡರೂ ಇವರ ಕಾರ್ಯವೈಖರಿ ಅವರಿಗಿಂತ ಭಿನ್ನವಾಗಿದೆ.

ಪಿಯುಸಿ ವಿದ್ಯಾಭ್ಯಾಸದ ಬಳಿಕ ಎನ್‌ಐಎಫ್ಟಿ ಬಿ.ಡೆಸ್ ಡಿಸೈನಿಂಗ್ ಕೋರ್ಸ್ ಮಾಡಬೇಕು ಅಥವಾ ಎನ್‌ಐಡಿ ಬ್ಯಾಚುಲರ್ ಆಫ್ ಡಿಸೈನಿಂಗ್ ವಿಷಯ ಅಭ್ಯಸಿಸಿ, ಪದವಿಯಲ್ಲಿ ಆ್ಯಕ್ಸೆಸರಿ ಡಿಸೈನ್ ಅಧ್ಯಯನ ಮಾಡಿ ಆ್ಯಕ್ಸೆಸರಿ ಡಿಸೈನರ್ ಆಗಬಹುದು. ಕ್ರಿಯೇಟಿವ್ ಎಬಿಲಿಟಿ ಟೆಸ್ಟ್ (ಸಿಎಟಿ) ಜನರಲ್ ಎಬಿಲಿಟಿ ಟೆಸ್ಟ್ ಮಾಡಿ, ಎನ್‌ಐಎಫ್ಟಿ ಅಭ್ಯಸಿಸಿ ಲೆದರ್ ಜ್ಯುವೆಲರಿ, ಜೆಮ್ಮಾಲಜಿ ವಿಷಯಗಳ ಡಿಪ್ಲೊಮಾ ಮಾಡಿಯೂ ಆ್ಯಕ್ಸೆಸರಿ ಡಿಸೈನರ್ ಆಗಬಹುದು.

ಜತೆಗೆ ಚಿನ್ನ, ಬೆಳ್ಳಿ, ರತ್ನಗಳು, ವಸ್ತ್ರಗಳು, ವಿವಿಧ ಮಾದರಿ ಚರ್ಮವಸ್ತುಗಳ ಬಗೆಗಿನ ಜ್ಞಾನ, ಲೋಹದ ಬಗ್ಗೆಯೂ ತಿಳುವಳಿಕೆ, ಮಾನವನ ನಿತ್ಯ ಬಳಕೆಯಿಂದ ನಿರ್ದಿಷ್ಟ ಬಳಕೆ ವಸ್ತುಗಳವರೆಗೂ ಗಮನಿಸುವಿಕೆ, ಫ್ಯಾಷನ್ ಬಗ್ಗೆ ತಿಳುವಳಿಕೆ, ಚಿತ್ರಕಲಾ ಮತ್ತು ಸೃಜನಾತ್ಮಕ ಕೌಶಲ ಅಗತ್ಯ.

ಅವಕಾಶಗಳು

- ಆಭರಣ ಮಳಿಗೆಗಳು, ಲೈಫ್‌ಸ್ಟೈಲ್ ಸಂಬಂಧಿತ ಫ್ಯಾಶನ್ ವಲಯ, ಟೈಟಾನ್ ಸಮೂಹ, ಬ್ರ್ಯಾಂಡ್ ವಸ್ತ್ರಗಳ ವಿನ್ಯಾಸ ಮಳಿಗೆಗಳು, ಚರ್ಮ ಸಂಬಂಧಿತ ವಿನ್ಯಾಸಕ ಸಂಸ್ಥೆಗಳು,

ಕಾಲೇಜುಗಳು

- ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ. (ಎನ್‌ಐಎಫ್‌ಟಿ) ಬೆಂಗಳೂರು
- ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್ (ಎನ್‌ಐಡಿ), ಬೆಂಗಳೂರು.
- ಪೆರೆಲ್ ಅಕಾಡೆಮಿ, ಬೆಂಗಳೂರು.
- ಜೆಮ್ಮಾಲಜಿಕಲ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ, ಕಾರ್ನಿ ರೋಡ್, ಮುಂಬೈ.
- ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಶನ್ ಟೆಕ್ನಾಲಜಿ, ದೆಹಲಿ.

ಆಟೋಮೋಟಿವ್ ಡಿಸೈನರ್

ಮಾರುಕಟ್ಟೆಯಲ್ಲಿ ಹೊಸ ಬಗೆಯ ಐಶಾರಾಮಿ ವಾಹನಗಳಿಂದ ಹಿಡಿದು, ಜನಸಾಮಾನ್ಯರು ಉಪಯೋಗಿಸುವ ಸಾಮಾನ್ಯ ವಾಹನಗಳವರೆಗೂ ವಿವಿಧ ವಿನ್ಯಾಸದ ಆಯ್ಕೆಗಳನ್ನು ಸೃಷ್ಟಿಸಿ ವಾಹನ ಸವಾರನು ಚಾಲನೆಯ ಸುಖವನ್ನನುಭವಿಸುವಂತೆ ಮಾಡುವ ಜಾದೂಗಾರರೆಂದರೆ, ಆಟೋಮೋಟಿವ್ ಎಂಜಿನಿಯರ್‌ಗಳು. ಆಕರ್ಷಕವಾಗಿ ವಾಹನಗಳ ಚಿತ್ರಗಳನ್ನು ರಚಿಸಿ, ಅದಕ್ಕೆ ಜೀವ ತುಂಬುವವರು ಇವರೇ, ಇವರನ್ನು ವಾಹನ ವಿನ್ಯಾಸಕರು ಎಂದು ಕರೆಯಬಹುದು.

ಯಾವುದೇ ವಿಷಯದಲ್ಲಿ ಪಿಯುಸಿ ಮುಗಿಸಿದ ಬಳಿಕ ಎನ್‌ಐಟಿಯಲ್ಲಿ ಡಿಎಟಿ ಪೂರ್ವಭಾವಿ ಪರೀಕ್ಷೆ ಪಾಸ್ ಮಾಡಿ ಅನಂತರ ಪದವಿಯಲ್ಲಿ ಬಿ.ಡೆಸ್ ಅಭ್ಯಸಿಸಿ, ಎಂ.ಡೆಸ್ ಅಥವಾ ಆಟೋಮೋಟಿವ್ ಇಂಟರ್ನ್‌ಶಿಪ್ ಮುಗಿಸಿದರೆ ಆಟೋಮೋಟಿವ್ ಡಿಸೈನರ್ ಆಗಬಹುದು. ಅಥವಾ ಪಿಯುಸಿ ಬಳಿಕ ಪದವಿಯಲ್ಲಿ ಆಟೋಮೊಬೈಲ್ ಸಂಬಂಧಿತ ಬಿ.ಟೆಕ್ ಪದವಿಯನ್ನು ಪೂರೈಸಿ ಸ್ನಾತಕೋತ್ತರ ಪದವಿಯಲ್ಲಿ ಎಂ.ಡೆಸ್ ಪೂರೈಸಿದರೂ ಆಟೋಮೋಟಿವ್ ಡಿಸೈನರ್ ಆಗಬಹುದು.

ಇದರ ಜತೆಗೆ ವಾಹನಗಳ ಒಳಾಂಗಣ ವಿನ್ಯಾಸ, ಹೊರಾಂಗಣ ವಿನ್ಯಾಸದ ಬಗ್ಗೆ ಅರಿವು, ವಾಹನ ಸಂಬಂಧಿತ ಉಪಕರಣಗಳ ಬಗ್ಗೆ ಜ್ಞಾನ, ವಿವಿಧ ಮಾದರಿಯ ಸ್ಕೆಚ್, 2ಡಿ, 3ಡಿ ಮಾದರಿ ಸೃಜಿಸುವ ತಂತ್ರಾಂಶಗಳ ಬಗ್ಗೆ ತಿಳುವಳಿಕೆ. ಹೊಸ ಮಾದರಿ ಸೃಜಿಸುವ ಮತ್ತು ಹೊಸ ಮಾದರಿಗಳನ್ನು ಒಪ್ಪಿಕೊಳ್ಳುವ ಗುಣ, ಸಮೂಹದಲ್ಲಿ ಕಾರ್ಯನಿರ್ವಹಿಸುವ, ಸಮಸ್ಯೆಯನ್ನು ಎದುರಿಸುವ ಸಾಮರ್ಥ್ಯ ಇದ್ದರೆ ಅನುಕೂಲ.

ಅವಕಾಶಗಳು

ಕಾರು ನಿರ್ಮಾಣ ಘಟಕ, ವಾಹನಗಳ ಟೂಲ್ (ಪರಿಕರ) ವಿನ್ಯಾಸ ಘಟಕ, ಭಾರೀ ಗಾತ್ರದ ವಾಹನಗಳ ತಯಾರಿಕೆ, ಆಟೋಮೊಬೈಲ್ ಎಂಜಿನಿಯರಿಂಗ್ ವರ್ಕ್ಸ್, ದ್ವಿಚಕ್ರ-ತ್ರಿಚಕ್ರ, ಚತುಶ್ಚಕ್ರ ಬಿಡಿ ಭಾಗಗಳ ತಯಾರಿಕಾ ಘಟಕಗಳಲ್ಲಿ ಅವಕಾಶಗಳಿವೆ.

ಕಾಲೇಜುಗಳು

- ಜೆಎಸ್‌ಎಸ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ, ಮೈಸೂರು.
- ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಣಿಪಾಲ.
- ಮೋಟರ್ ಮೈಂಡ್ ಆಟೋಮೋಟಿವ್ ಡಿಸೈನ್, ಬೆಂಗಳೂರು.
- ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್ ಕಾಲೇಜು, ಬೆಂಗಳೂರು.

ಏರ್ ಹೋಸ್ಟೆಸ್

ವಿದೇಶಿ ಯಾತ್ರಿಕರನ್ನು ಆತ್ಮೀಯವಾಗಿ ಸ್ವಾಗತಿಸುವುದು, ಪ್ರಯಾಣಿಕರಿಗೆ ಸೀಟ್ ಬೆಲ್ಟ್ ಹಾಕಲು ಹೇಳುವುದು/ ಹಾಕುವುದು; ಕಾಫಿ, ತಿಂಡಿ, ಪಾನೀಯ ಒದಗಿಸುವುದು, ಪ್ರಯಾಣದ ವೇಳೆ ತಲೆಸುತ್ತು, ಸುಸ್ತು ಮುಂತಾದ ತೊಂದರೆಗಳಾದರೆ ಪ್ರಥಮ ಚಿಕಿತ್ಸೆ ನೀಡುವುದು ಗಗನಸಖಿಯರ (ಏರ್‌ಹೋಸ್ಟೆಸ್‌ಗಳ) ಕೆಲಸ. ಯಾವಾಗಲೂ ಗಗನದಲ್ಲಿ ಹಾರಾಡುತ್ತಾ ವಿದೇಶಗಳನ್ನೆಲ್ಲಾ ಸುಲಭವಾಗಿ ನೋಡುವ ಅವಕಾಶ ಇವರದು.

ಪಿಯುಸಿ ಓದಿನ ಬಳಿಕ ಪದವಿಗೆ ಹೋಮ್ ಸೈನ್ಸ್ ಅಥವಾ ಹೊಟೇಲ್ ಮ್ಯಾನೇಜ್‌ಮೆಂಟ್ ಅಥವಾ ಯಾವುದೇ ಪದವಿ ವಿದ್ಯಾಭ್ಯಾಸ ಮಾಡಿ,

ಆ ಬಳಿಕ ವಿಮಾನ ಸಂಸ್ಥೆಗಳ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿ ಏರ್ ಹೋಸ್ಟೆಸ್ ತರಬೇತಿ ಪಡೆದರೆ ಈ ಉದ್ಯೋಗ ಸಿಗಬಹುದು. ಜತೆಗೆ ಇಂಗ್ಲಿಷ್, ಹಿಂದಿ, ದೇಶೀಯ ಭಾಷೆಗಳು, ವಿದೇಶೀ ಭಾಷೆಗಳ ಬಗ್ಗೆ ಜ್ಞಾನ ಬೇಕು.

ಗಗನಸಖಿಯರಿಗೆ/ಸಖರಿಗೆ ದೈಹಿಕ ಸೌಂದರ್ಯ ಕಾಪಾಡಿಕೊಳ್ಳಲು ಯೋಗ, ವ್ಯಾಯಾಮ, ಸೌಂದರ್ಯವರ್ಧಕಗಳ ಬಳಕೆ ಅಗತ್ಯ. ವಸ್ತ್ರ ಸಂಹಿತೆಯ ಬಗ್ಗೆ ಅರಿವು, ಇಂಗ್ಲಿಷ್ ಸೇರಿದಂತೆ ಐದಾರು ಭಾಷೆಗಳ ಬಳಕೆ ಮತ್ತು ಸಂವಹನ ಕೌಶಲ, ಪ್ರಯಾಣಿಕರ ಆರೋಗ್ಯ ಸಮಸ್ಯೆಗೆ ಪ್ರಥಮ ಚಿಕಿತ್ಸೆ ನೀಡುವ ತಿಳುವಳಿಕೆ; ಉಪಾಹಾರ, ಪಾನೀಯ, ನಿಯತಕಾಲಿಕೆಗಳು ಇತ್ಯಾದಿಗಳ ಅರಿವು; ಪ್ರಯಾಣಿಕರಿಗೆ ಅಗತ್ಯ ಮಾಹಿತಿ ನೀಡುವ, ಸಲಹೆ ಸ್ವೀಕರಿಸುವ ಗುಣ, ಗಣಕ ಮತ್ತು ವೈಮಾನಿಕ ತಾಂತ್ರಿಕ ಉಪಕರಣಗಳ ಬಳಕೆ, ಸಹನೆ, ತಾಳ್ಮೆ ಅತ್ಯಗತ್ಯ.

ಅವಕಾಶಗಳು

ಏರ್‌ಲೈನ್ಸ್‌ಗಳು, ಇಂಟರ್‌ನ್ಯಾಷನಲ್ ಕ್ಯಾರಿಯರ್, ಏರ್‌ಲೈನ್ ಟ್ರೈನಿಂಗ್ ಅಕಾಡೆಮಿ, ಇಂಡಿಯನ್ ಜೆಟ್ ಏರ್‌ಲೈನ್ಸ್‌ಗಳು.

ಕಾಲೇಜುಗಳು

- ಫ್ರಾಂಕ್‌ಫಿನ್ ಇನ್‌ಸ್ಟಿಟ್ಯೂಟ್ ಆಫ್ ಏರ್‌ಹೋಸ್ಟೆಸ್ ಟ್ರೈನಿಂಗ್, ಬೆಂಗಳೂರು.
- ಬೆಂಗಳೂರ್ ಏವಿಯೇಷನ್ ಅಕಾಡೆಮಿ, ಬೆಂಗಳೂರು.
- ಸ್ಕೈಬರ್ಡ್ ಏವಿಯೇಷನ್ ಅಕಾಡೆಮಿ, ಬೆಂಗಳೂರು.
- ಪಿಟಿಸಿ ಏವಿಯೇಷನ್ ಅಕಾಡೆಮಿ, ಬೆಂಗಳೂರು.
- ಚಂಡೀಗಢ, ಮುಂಬೈ, ಪುಣೆಯಲ್ಲಿರುವ ಏರ್ ಹೋಸ್ಟೆಸ್ ಅಕಾಡೆಮಿಯಲ್ಲಿ ವಿದ್ಯಾಭ್ಯಾಸ ಲಭ್ಯ.

ಫುಟ್‌ವೇರ್ ಡಿಸೈನರ್ (ಶೂ ಮೇಕರ್)

ಚಪ್ಪಲಿ, ಶೂ ತಯಾರಿಕೆ ಒಂದು ಉದ್ಯಮ. ಇಲ್ಲಿ ಗ್ರಾಹಕರನ್ನು ಆಕರ್ಷಿಸಲು ಹೊಸ ಮಾದರಿಗಳನ್ನು ವಿನ್ಯಾಸಗೊಳಿಸಿ ಬ್ರ್ಯಾಂಡ್ ಸೃಷ್ಟಿಸುವವರೇ ಫುಟ್‌ವೇರ್ ಡಿಸೈನರ್‌ಗಳು. ಫುಟ್‌ವೇರ್ ಸ್ಕೆಚ್ ತಯಾರಿಸಿ, ಪಾದಗಳಿಗೆ ಅನುಕೂಲವಾಗುವ ರೀತಿಯಲ್ಲಿ ಪಾದರಕ್ಷೆಗಳನ್ನು ವಿನ್ಯಾಸ ಮಾಡುವುದೇ ಇವರ ಕೆಲಸ.

ಪಿಯುಸಿ ಬಳಿಕ ಎನ್‌ಐಎಫ್ಟಿ ಪ್ರವೇಶ ಪರೀಕ್ಷೆ ಉತ್ತೀರ್ಣರಾಗಿ ಬಿ.ಡೆಸ್., ಎಂ.ಡೆಸ್., ಎಂಬ ಲೆದರ್ ಡಿಸೈನಿಂಗ್ ಕೋರ್ಸ್ ಮಾಡಿಕೊಳ್ಳಬೇಕು. ಅಥವಾ ಸ್ನಾತಕೋತ್ತರ ಪದವಿಯಲ್ಲಿ ಫುಟ್‌ವೇರ್ ಡಿಸೈನಿಂಗ್ ಎಂಬಿಎ ಮಾಡಿ ಪಾದರಕ್ಷೆ ವಿನ್ಯಾಸಕಾರರಾಗಬಹುದು. ಅಥವಾ ಫುಟ್‌ವೇರ್ ಡಿಸೈನ್ ಡಿಪ್ಲೊಮಾ ಕೋರ್ಸ್ ಮುಗಿಸಿ ಫುಟ್‌ವೇರ್ ಟೆಕ್ನಾಲಜಿ ಸ್ನಾತಕೋತ್ತರ ಪದವಿ ಪಡೆದೂ ಗುರಿ ಸಾಧಿಸಬಹುದು.

ಇದರ ಜತೆಗೆ ಗಣಕ ಸಂಬಂಧಿತ ವಿನ್ಯಾಸ ತಂತ್ರಾಂಶಗಳ ಜ್ಞಾನ; ಮಕ್ಕಳು, ಪುರುಷರು, ಮಹಿಳೆಯರ ಪಾದಗಳ ಅಳತೆ, ಅಂಗವಿಕಲರ ಪಾದ ಸಂಬಂಧಿತ ಅರಿವು, ಅಂಗರಚನಾಶಾಸ್ತ್ರದ ಬಗ್ಗೆ ಜ್ಞಾನ; ಪಾದರಕ್ಷೆಗಳಿಗೆ ಬಳಸುವ ಬಣ್ಣ ಬಣ್ಣಗಳ ಮಿಶ್ರಣ; ಚರ್ಮ, ಮರ ಇತರ ಪರಿಕರಗಳ ಬಗ್ಗೆ ಅರಿವು ಮತ್ತು ಚಿತ್ರಕಲೆ ಕುರಿತ ಜ್ಞಾನ, ಸಂಶೋಧನಾ ಗುಣ, ಟೆಕ್ಸ್‌ಟೈಲ್, ಜಾಗತಿಕ ಪಾದರಕ್ಷೆ ಟ್ರೆಂಡ್‌ಗಳ ತಿಳುವಳಿಕೆ ಅಗತ್ಯ.

ಕ್ರ್ಯಾಶ್ ಕೋರ್ಸ್‌ಗಳೆಂಬ ಭಾಗ್ಯದ ಬಾಗಿಲು

ಪಿಯು ವಿದ್ಯಾಭ್ಯಾಸ ಮುಗಿಸಿದ ಅನಂತರ ಆರ್ಥಿಕ ಕಾರಣದಿಂದಲೋ ಮಾಹಿತಿ ಕೊರತೆಯಿಂದಲೋ ಉತ್ತಮ ವಿಷಯದ ಆಯ್ಕೆ ಮಾಡಿಕೊಳ್ಳದೆ ಮುಂದೆ ಉತ್ತಮ ಕೆಲಸ ಸಿಗದೆ ಆತಂಕಗೊಳ್ಳುವ ಅಭ್ಯರ್ಥಿಗಳಿಗೆ ಕೈ ಹಿಡಿಯುವುದು ಕ್ರ್ಯಾಶ್ ಕೋರ್ಸ್‌ಗಳು. ಇವು ವೃತ್ತಿಪರತೆಯ ಕೌಶಲವನ್ನು ಹೆಚ್ಚಿಸಿಕೊಡುತ್ತವೆ. ಹೀಗಾಗಿಯೇ ಬಿ.ಎಸ್ಸಿ, ಬಿ.ಕಾಂ ಓದಿದ್ದರೂ ಅನೇಕ ಸಾಫ್ಟ್‌ವೇರ್ ಕಂಪೆನಿಗಳಲ್ಲಿ ಎಂಜಿನಿಯರ್‌ಗಳಂತೆಯೇ ಕಾರ್ಯನಿರ್ವಹಿಸುವ ಮಂದಿ ನಮಗೆ ಕಾಣಸಿಗುತ್ತಾರೆ.

ಒಂದು ವಿಷಯದ ಸಂಪೂರ್ಣ ಪಠ್ಯಕ್ರಮವನ್ನು ಅಲ್ಪಾವಧಿಯಲ್ಲಿಯೇ ಅಧ್ಯಯನ ಮಾಡಲು ವಿನ್ಯಾಸಗೊಳಿಸಲಾದ ತ್ವರಿತ ಕಲಿಕೆ ಕಾರ್ಯಕ್ರಮವನ್ನು 'ಕ್ರ್ಯಾಶ್ ಕೋರ್ಸ್' ಗಳೆಂದು ಕರೆಯಲಾಗುತ್ತದೆ. ಸಮಯದ ಉಳಿತಾಯ, ಪರಿಕಲ್ಪನೆಯ ಸ್ಪಷ್ಟತೆ, ಆತ್ಮವಿಶ್ವಾಸವನ್ನು ಈ ಕೋರ್ಸ್ ಹೆಚ್ಚಿಸುತ್ತದೆ. ಇದು ಕೇವಲ ಪಿಯು ಮುಗಿಸಿ ಹೊಸ ವಿಷಯ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗಷ್ಟೇ ಅಲ್ಲ, ಹೊಸ ಅಧ್ಯಯನ ನಡೆಸಬಯಸುವ ವೃತ್ತಿಪರರು ಹಾಗೂ ಒಂದು ವಿಷಯದಿಂದ ಬೇರೆ ವಿಷಯಗಳಿಗೆ ತಮ್ಮ ಸ್ಥಾನವನ್ನು ಬದಲಿಸಿಕೊಳ್ಳಬಯಸುವ ಪ್ರತಿಯೊಬ್ಬರಿಗೂ ಅನುಕೂಲವಾಗಿದೆ. ಹೀಗಾಗಿಯೇ ಅನೇಕ ವಿಷಯಗಳಲ್ಲಿ ಪರಿಣತಿ ಸಾಧಿಸಿದ ಅನೇಕ ಮಂದಿ ತಾವು ಓದಿದ ವಿಷಯ ಮತ್ತು ತಾವು ವೃತ್ತಿ ನಿರ್ವಹಿಸುವ ವಿಷಯ ಬೇರೆಯೇ ಆಗಿರುತ್ತದೆ.

ಕ್ರ್ಯಾಶ್ ಕೋರ್ಸ್‌ಗಳು ಅಲ್ಪಾವಧಿಯವಾಗಿದ್ದು 4-5 ಗಂಟೆಯಿಂದ 10 ತಿಂಗಳು ಅಥವಾ ವರ್ಷದವರೆಗೆ ಇರುತ್ತವೆ. ಅಲ್ಲದೆ ಇವನ್ನು ಕೆಲವೆಡೆ ತಮ್ಮ ವೃತ್ತಿಗಳಲ್ಲಿ ಹಿನ್ನಡೆಯಿರುವ ನೌಕರರಿಗೆ ಕಂಪನಿಯೇ ಮಾಡಿಸುತ್ತವೆ. ಪಿಯು-ಪದವಿ ಮುಗಿಸಿ ಕೆಲಸಕ್ಕೆ ಸೇರುವ ಅಭ್ಯರ್ಥಿಗಳಿಗೆ ಸರಕಾರ ಅಥವಾ ಕಂಪೆನಿಗಳು ಪ್ರಾರಂಭದಲ್ಲಿ ನಡೆಸುವ ಟ್ರೈನಿಂಗ್ ಸಹ ಇದೇ ಮಾದರಿಯ ಕ್ರ್ಯಾಶ್ ಕೋರ್ಸ್ ಆಗಿದೆ. ಅಂದರೆ ವೃತ್ತಿಪರತೆಗೆ ಅನುಕೂಲವಾಗುವಂತೆ ಅಭ್ಯರ್ಥಿಯನ್ನು ಮಾಡ್ಯೂಲ್ ಮಾಡುವ ಪ್ರಕ್ರಿಯೆ ಇದು.

ಕೆಲವು ವೃತ್ತಿಪರ ಕ್ರ್ಯಾಶ್ ಕೋರ್ಸ್‌ಗಳು

- ಕ್ರ್ಯಾಶ್‌ಕೋರ್ಸ್ ಇನ್ ಫುಲ್ ಸ್ಟ್ಯಾಕ್ ಡೆವಲಪ್ ಮೆಂಟ್ (18 ಗಂಟೆಗಳ ಕೋರ್ಸ್)
- ಕ್ರ್ಯಾಶ್ ಕೋರ್ಸ್ ಆನ್ ಪೈಥಾನ್ (48 ಗಂಟೆಗಳ ಕೋರ್ಸ್)
- ಪ್ರಿ ಎಕ್ಸೆಲ್ ಕ್ರ್ಯಾಸ್ ಕೋರ್ಸ್- ಸ್ಪ್ರೆಡ್‌ಶೀಟ್ ಟ್ಯುಟೋರಿಯಲ್ (4ಗಂಟೆಗಳ ಕೋರ್ಸ್)
- ಕ್ರ್ಯಾಶ್ ಕೋರ್ಸ್ ಆನ್ ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್ ಆ್ಯಂಡ್ ಲಾಜಿಕಲ್ ರೀಸನಿಂಗ್ (6 ಗಂಟೆಗಳ ಕೋರ್ಸ್)
- ಸಮ್ಮರ್ ಕ್ರ್ಯಾಶ್ ಕೋರ್ಸ್ ಇನ್ ಆ್ಯನಿಮೇಷನ್ (6 ಗಂಟೆಗಳ ಕೋರ್ಸ್)
- ಎಜೈಲ್ ಕ್ರ್ಯಾಶ್ ಕೋರ್ಸ್; ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ (4 ಗಂಟೆಗಳ ಕೋರ್ಸ್)
- ಕ್ರ್ಯಾಶ್ ಕೋರ್ಸ್ ಇನ್ ಫಿಲಾಸಫಿ (8 ಗಂಟೆಗಳ ಕೋರ್ಸ್)
- ಕ್ರ್ಯಾಶ್ ಕೋರ್ಸ್ ಇನ್ ಎಲೆಕ್ಟ್ರಾನಿಕ್ಸ್ ಆ್ಯಂಡ್ ಪಿಸಿಬಿ ಡಿಸೈನ್ (112 ಗಂಟೆಗಳ ಕೋರ್ಸ್)
- ಕ್ರ್ಯಾಶ್ ಕೋರ್ಸ್ ಇನ್ ಮಿಶನ್ ಲರ್ನಿಂಗ್ (42 ಗಂಟೆಗಳ ಕೋರ್ಸ್)
- ಎಕ್ಸೆಲ್ ಫಾರ್ ಮಾರ್ಕೆಟರ್ಸ್ ಕ್ರ್ಯಾಶ್ ಕೋರ್ಸ್ (4 ಗಂಟೆಗಳ ಕೋರ್ಸ್)
- ಗ್ರೂಮಿಂಗ್ ಕ್ರ್ಯಾಶ್ ಕೋರ್ಸ್ (2 ದಿನಗಳು)
- ಕ್ರ್ಯಾಶ್ ಕೋರ್ಸ್ ಇನ್ ಆ್ಯನಿಮೇಷನ್ (3ತಿಂಗಳ ಕೋರ್ಸ್)
- ಕ್ರ್ಯಾಶ್ ಕೋರ್ಸ್ ಆನ್ ಎಸ್‌ಕ್ಯೂಎಲ್ (7 ಗಂಟೆಗಳ ಕೋರ್ಸ್)
- ಆ್ಯಂಗುಲರ್ ಕ್ರ್ಯಾಶ್ ಕೋರ್ಸ್ ಫಾರ್ ಬಿಜಿ ಡೆವೆಲಪರ್ಸ್ (17 ಗಂಟೆಗಳ ಕೋರ್ಸ್)
- ಕ್ರ್ಯಾಶ್ ಕೋರ್ಸ್ ಆನ್ ಡಾಟಾ ಸ್ಟ್ರಕ್ಚರ್ಸ್ (9 ಗಂಟೆಗಳ ಕೋರ್ಸ್)
- ಫಾರ್ಟಿಗೇಟ್ ಫೈರ್‌ವಾಲ್- ಅಡ್ಮಿನ್ ಕ್ರ್ಯಾಶ್ ಕೋರ್ಸ್ (4 ಗಂಟೆಗಳ ಕೋರ್ಸ್)
- ಇಂಟೆಲೆಕ್ಚ್ಯುಯಲ್ ಪ್ರಾಪರ್ಟಿ ಬೈ ಕ್ರ್ಯಾಶ್ ಕೋರ್ಸ್ (1 ತಿಂಗಳ ಕೋರ್ಸ್)
- ಕ್ರ್ಯಾಶ್ ಕೋರ್ಸ್ ಇನ್ ಡಾಟಾ ಸೈನ್ಸ್ (7 ಗಂಟೆಗಳ ಕೋರ್ಸ್)
- ಬ್ಯಾಚ್ ಸ್ಕ್ರಿಪ್ಟ್ ಪ್ರೋಗ್ರಾಮಿಂಗ್ ಕ್ರ್ಯಾಶ್ ಕೋರ್ಸ್ (4 ಗಂಟೆಗಳ ಕೋರ್ಸ್)
- ಫೈನಾನ್ಶಿಯಲ್ ಅಕೌಂಟಿಂಗ್: ಕ್ರ್ಯಾಶ್ ಕೋರ್ಸ್ (10 ಗಂಟೆಗಳ ಕೋರ್ಸ್)
- ಕ್ರ್ಯಾಶ್ ಕೋರ್ಸ್ ಆನ್ ಲೀಡರ್‌ಶಿಪ್ ಸ್ಕಿಲ್ ಡೆವಲಪ್‌ಮೆಂಟ್ (4 ಗಂಟೆಗಳ ಕೋರ್ಸ್)
- ಫಾರೆಕ್ಸ್ ಟ್ರೇಡಿಂಗ್ ಸ್ಟ್ರ್ಯಾಟರ್ಜಿ- ಅಡ್ವಾನ್ಸ್ಡ್ ಟ್ರೆಂಡ್ ಟ್ರೇಡಿಂಗ್ ಕ್ರ್ಯಾಶ್ ಕೋರ್ಸ್ (12 ಗಂಟೆಗಳ ಕೋರ್ಸ್)
- ಕ್ರ್ಯಾಶ್ ಕೋರ್ಸ್ ಆನ್ ಆಲ್ಗರಿದಮ್ (10 ಗಂಟೆಗಳ ಕೋರ್ಸ್)
- ಕ್ರ್ಯಾಶ್ ಕೋರ್ಸ್ ಇನ್ ಅಡ್ವಾನ್ಸ್ಡ್ ಲೈಬ್ರರಿ ಸೈನ್ಸ್ (4 ಗಂಟೆಗಳ ಕೋರ್ಸ್)
- ಡಾಟಾ ಮ್ಯಾನ್ಯುಪುಲೇಷನ್ ಇನ್ ಪೈಥಾನ್- ಕ್ರ್ಯಾಶ್ ಕೋರ್ಸ್ (9 ಗಂಟೆಗಳ ಕೋರ್ಸ್)
- ಡಿಸೈನ್ ಥಿಂಕಿಂಗ್ ಕ್ರ್ಯಾಶ್ ಕೋರ್ಸ್ ಫಾರ್ ಬಿಗಿನರ್ಸ್ (4 ಗಂಟೆಗಳ ಕೋರ್ಸ್)
- ಕ್ರ್ಯಾಶ್ ಕೋರ್ಸ್: ಮಾಸ್ಟರ್ ಎಕ್ಸೆಲ್ ಫಾರ್ ಫೈನಾನ್ಶಿಯಲ್ ಅನಾಲಿಸಿಸ್ (4 ಗಂಟೆಗಳ ಕೋರ್ಸ್)
- ಕ್ರ್ಯಾಶ್ ಕೋರ್ಸ್ ಫಾರ್ ಐಇಎಲ್‌ಟಿಎಸ್ ಪ್ರಿಪರೇಷನ್ (5 ಗಂಟೆಗಳ ಕೋರ್ಸ್)
- ಕ್ರ್ಯಾಶ್ ಕೋರ್ಸ್ ಆನ್ ಕಂಪೈಲರ್ ಡಿಸೈನ್ (20 ಗಂಟೆಗಳ ಕೋರ್ಸ್)
- ಕ್ರ್ಯಾಶ್ ಕೋರ್ಸ್ ಇನ್ ಕ್ಲೌಡ್ ಕಂಪ್ಯೂಟಿಂಗ್ (20 ಗಂಟೆಗಳ ಕೋರ್ಸ್)
- ಕ್ರ್ಯಾಶ್ ಕೋರ್ಸ್ ಆನ್ ಆಪರೇಟಿಂಗ್ ಸಿಸ್ಟಮ್ (12 ಗಂಟೆಗಳ ಕೋರ್ಸ್)
- ದ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕ್ರ್ಯಾಶ್ ಕೋರ್ಸ್ (4 ಗಂಟೆಗಳ ಕೋರ್ಸ್)
- ದ ಸಿಎಸ್‌ಎಸ್ ಆ್ಯಂಡ್ ಸಿಎಸ್‌ಎಸ್‌ತ್ರಿ ಕ್ರ್ಯಾಶ್ ಕೋರ್ಸ್ (13 ಗಂಟೆಗಳ ಕೋರ್ಸ್)
- ಅಡಾಬ್ ಆಫ್ಟರ್ ಇಫೆಕ್ಟ್ ಕ್ರ್ಯಾಶ್ ಕೋರ್ಸ್ ಫಾರ್ ಕ್ರಿಯೆಟೀವ್ಸ್ (11 ಗಂಟೆಗಳ ಕೋರ್ಸ್)

ಹೀಗೆ ನೂರಾರು ಕ್ರ್ಯಾಶ್ ಕೋರ್ಸ್‌ಗಳು ತಂತ್ರಾಂಶ, ಕಲೆ, ವಿಜ್ಞಾನ, ವಾಣಿಜ್ಯ ಸೇರಿದಂತೆ ಅನೇಕ ವಿಷಯಗಳು, ಆಂತರಿಕ ವಿಷಯಗಳನ್ನು ಆಧರಿಸಿವೆ. ಹೀಗಾಗಿ ವಿದ್ಯಾರ್ಥಿಗಳಿಗೆ, ವೃತ್ತಿಪರರಿಗೆ ಕ್ರ್ಯಾಶ್ ಕೋರ್ಸ್‌ಗಳು ಭಾಗ್ಯದ ಬಾಗಿಲಾಗಿವೆ.

ಅವಕಾಶಗಳು

ಶೂ ತಯಾರಿಕಾ ಘಟಕಗಳು, ಆ್ಯಕ್ಸೆಸರಿ ವಿನ್ಯಾಸ ವಲಯ, ವಿನ್ಯಾಸ ಸಲಹಾ ಸಂಸ್ಥೆಗಳು, ವುಡ್‌ಲ್ಯಾಂಡ್‌ಗಳು, ಬಾಟಾ ಇಂಡಿಯಾ, ಆ್ಯಕ್ಷನ್ ಶೂಸ್, ಲಿಬರ್ಟಿ ಮೊದಲಾದ ಕಂಪೆನಿಗಳು.

ಕಾಲೇಜುಗಳು

- ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಲೆದರ್ ಆ್ಯಂಡ್ ಫ್ಯಾಷನ್ ಟೆಕ್ನಾಲಜಿ (ಕೆಐಎಲ್ಎಫ್‌ಟಿ), ಬೆಂಗಳೂರು.
- ಜೆಡಿ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ, ಬೆಂಗಳೂರು.
- ಸೆಂಟ್ರಲ್ ಫುಟ್‌ವೇರ್ ಟ್ರೈನಿಂಗ್ ಸೆಂಟರ್, ಚೆನ್ನೈ, ಮತ್ತು ಆಗ್ರಾ.
- ಚೆನ್ನೈ ಸೆಂಟ್ರಲ್ ಲೆದರ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ಗಳಲ್ಲಿ ಪ್ರಾವೀಣ್ಯತೆ ಪಡೆಯಬಹುದು.

ಶೆಫ್

ಜಾಗತೀಕರಣದಿಂದಾಗಿ ಜಗತ್ತಿನ ವಿವಿಧ ದೇಶಗಳ ಸಂಸ್ಕೃತಿಯ ಪರಿಚಯದ ಜತೆಗೆ ಆಹಾರ ಪದ್ಧತಿಗಳನ್ನೂ ಅರಿಯುವಂತಾಗಿದೆ. ಹೀಗಾಗಿ ಪೌರಸ್ತ್ಯ, ಪಾಶ್ಚಾತ್ಯ ಖಾದ್ಯಗಳೆಲ್ಲವೂ ಜನರನ್ನು ಆಕರ್ಷಿಸುತ್ತಿವೆ. ಇಂಥ ಪಾಕವನ್ನು ಉಣಬಡಿಸುವವರೇ ಶೆಫ್‌ಗಳು, ಪಾಕತಜ್ಞರಿಂದ ಪರಿಣಿತಿ ಪಡೆದು ದೇಶಿ, ವಿದೇಶಿ ತಿನಿಸುಗಳನ್ನು ಸಾಮಾನ್ಯ ಜನರಿಗೆ ರುಚಿ ಹಿಡಿಸುವವರೂ ಇವರೇ.

ಯಾವುದೇ ವಿಷಯದಲ್ಲಿ ಪಿಯುಸಿ ಮುಗಿಸಿದ ಬಳಿಕ ಹೊಟೇಲ್ ಮ್ಯಾನೇಜ್‌ಮೆಂಟಿನಲ್ಲಿ ಪ್ರವೇಶ ಪಡೆದು, ಅದರಲ್ಲಿಯೇ ಪದವಿ ಅಥವಾ ಡಿಪ್ಲೊಮಾ ಮಾಡಿಕೊಳ್ಳಬೇಕು. ಅದೇ ಕೋರ್ಸ್‌ನಲ್ಲಿ ವಿಶೇಷ ಅಧ್ಯಯನ ಮಾಡಿದರೆ ಶೆಫ್ ಆಗಬಹುದು. ಮತ್ತೊಂದು ಮಾರ್ಗದಲ್ಲಿ ಪಿಯು ಬಳಿಕ ಪಾಕಶಾಸ್ತ್ರದ ಬಗ್ಗೆ ಅಪ್ರೆಂಟೀಸ್ ಆಗಿ ವಿವಿಧ ಮಾದರಿಯ ಅಡುಗೆಯನ್ನು ಕಲಿಯುವ ಜತೆಗೆ ಹೊಟೇಲ್ ಮ್ಯಾನೇಜ್‌ಮೆಂಟ್ ಅಧ್ಯಯನ ಮಾಡಿದರೆ ಮಾಸ್ಟರ್ ಶೆಫ್ ಆಗಬಹುದು.

ಇದರೊಂದಿಗೆ ಆಹಾರ ಪದಾರ್ಥಗಳ ಬಗ್ಗೆ, ಅಡುಗೆ ಸಂಬಂಧಿತ ಎಲ್ಲ ಪರಿಕರಗಳ ಬಗ್ಗೆ ತಿಳಿವಳಿಕೆ, ಹೊಸ ಪ್ರಯೋಗಕ್ಕೆ ತೆರೆದುಕೊಳ್ಳುವ/ ಹೊಸದನ್ನು ಕಲಿಯುವ ಉತ್ಸಾಹಬೇಕು. ರುಚಿ ಮತ್ತು ವಾಸನೆ ಗ್ರಹಿಸುವ ಶಕ್ತಿ, ಒತ್ತಡದಲ್ಲಿ ಉತ್ತಮ ಆಹಾರ ತಯಾರಿಸುವ ಮತ್ತು ಕಡಿಮೆ ಜಾಗದಲ್ಲಿ ಕಾರ್ಯನಿರ್ವಹಿಸುವ ಕೌಶಲ ದೈಹಿಕ ಸಾಮರ್ಥ್ಯ ಮತ್ತು ತಾಳ್ಮೆ ಹೊಂದಿರಬೇಕು. ಶುಚಿತ್ವದ ಬಗ್ಗೆ ಜ್ಞಾನ, ಸಹಪಾಠಿಗಳೊಂದಿಗೆ ಸಹಕಾರ, ಗುಂಪಿನಲ್ಲಿ ಕಾರ್ಯನಿರ್ವಹಿಸುವ ಸಾಮರ್ಥ್ಯವಿರಬೇಕು. ಆಹಾರ ಪದ್ಧತಿಯಲ್ಲಾಗುತ್ತಿರುವ ನಿರಂತರ ಬದಲಾವಣೆಗಳನ್ನು ಗಮನಿಸುತ್ತಿರಬೇಕು, ಆಹಾರ ಮೇಳಗಳಲ್ಲಿ ಭಾಗವಹಿಸಿದರೆ ಅನುಕೂಲ.

ಅವಕಾಶಗಳು

ಆಹಾರ ತಯಾರಿಕಾ ಘಟಕಗಳು, ಹೊಟೇಲ್‌ಗಳು, ಫುಡ್ ಇಂಡಸ್ಟ್ರಿಗಳು(ಆಹಾರ ಉದ್ಯಮ ಸಂಸ್ಥೆಗಳು), ಏರ್ ಲೈನ್ಸ್, ರೆಸ್ಟೋರೆಂಟ್, ಫುಡ್ ಪಾರ್ಕ್, ಕ್ಯಾಂಟೀನ್, ಫುಡ್ ಪ್ಯಾಕ್ಟರಿಗಳಲ್ಲಿ ಉದ್ಯೋಗ ಮಾಡಬಹುದು ಅಥವಾ ಸ್ವತಂತ್ರ ಉದ್ಯೋಗವನ್ನೂ ಮಾಡಬಹುದು.

ಕಾಲೇಜುಗಳು

- ಇಂಡಿಯನ್ ಕ್ಯುಲಿನರೀ ಅಕಾಡೆಮಿ, ಬೆಂಗಳೂರು.
- ಇನ್‌ಸ್ಟಿಟ್ಯೂಟ್ ಆಫ್ ಹೊಟೇಲ್ ಮ್ಯಾನೇಜ್‌ಮೆಂಟ್, ಬೆಂಗಳೂರು.
- ಎಂ. ಎಸ್. ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್, ಬೆಂಗಳೂರು.
- ಎಐಎಸ್‌ಕೆ ಇನ್‌ಸ್ಟಿಟ್ಯೂಟ್ ಆಫ್ ಹಾಸ್ಪಿಟಾಲಿಟಿ ಮ್ಯಾನೇಜ್‌ಮೆಂಟ್ ಆ್ಯಂಡ್ ಕ್ಯುಲಿನರೀ ಆರ್ಟ್, ಬೆಂಗಳೂರು.

ಆ್ಯನಿಮೇಷನ್ (3ಡಿ, ವಿಎಫ್ಎಕ್ಸ್)

ಚಿತ್ರಗಳನ್ನು ರಚಿಸಿ, ಬಣ್ಣಗಳನ್ನು ತುಂಬಿ, ಅದಕ್ಕೆ ಚಲನೆ ನೀಡಿ, ದೃಶ್ಯ-ಶ್ರವ್ಯ- ರೂಪ ನೀಡುವವರು ಆ್ಯನಿಮೇಟರ್‌ಗಳು. ಆ್ಯನಿಮೇಷನ್ ಕ್ಷೇತ್ರದಲ್ಲಿ 2ಡಿ, 3ಡಿ ಮಾದರಿಗಳನ್ನು ಅಭಿವೃದ್ಧಿಪಡಿಸಿದ್ದು ಸಿನೆಮಾ ಕ್ಷೇತ್ರದಲ್ಲಿ ಉತ್ತಮ ಸ್ಪಂದನೆ ವ್ಯಕ್ತವಾಗಿರುವುದೂ ಹೌದು. ಕಾರ್ಟೂನ್ ಚಾನೆಲ್, ಗೇಮ್‌ಗಳಿಗೂ ಇವರೇ ಜೀವಾಳ.

ಪಿಯುಸಿ ಓದಿನ ಬಳಿಕ ಎನ್‌ಐಡಿ ಡಿಎಟಿ ಪ್ರವೇಶ ಪರೀಕ್ಷೆಯಲ್ಲಿ ಪಾಸಾಗಿ ಅನಂತರ ಅದರಲ್ಲಿಯೇ ಫಿಲ್ಮ್ ಡಿಸೈನಿಂಗ್ ಕೋರ್ಸ್ ಮುಗಿಸಿಕೊಳ್ಳಬೇಕು

ಅಥವಾ ಪಿಯು ಬಳಿಕ ಬ್ಯಾಚುಲರ್ ಆಫ್ ಫೈನ್ ಆರ್ಟ್ಸ್, ಅಪ್ಲೈಡ್ ಆರ್ಟ್ಸ್ ಕೋರ್ಸ್ ಅನ್ನು ಪೂರೈಸಿಯೂ ಆ್ಯನಿಮೇಷನ್ ಡಿಸೈನರ್ ಆಗಬಹುದು.

ಉತ್ತಮ ಕಲ್ಪನಾಶಕ್ತಿ, ಬಣ್ಣಗಳನ್ನು ಕುರಿತ ಜ್ಞಾನ, ಚಿತ್ರಕಲಾ ಕೌಶಲ, ಕ್ಯಾಡ್, ಮ್ಯಾಕ್ಸ್, ಮಾಯಾ ತಂತ್ರಾಂಶಗಳ ಬಗೆಗೆ ಜ್ಞಾನ, ಚಿತ್ರಕಲೆ ಸಂಬಂಧಿತ ಹೊಸ ಆಲೋಚನೆ ಮತ್ತು ಕ್ರಿಯಾಶೀಲತೆ ಅಗತ್ಯ. ಜತೆಗೆ, ಸಮೂಹದಲ್ಲಿ ಕಾರ್ಯನಿರ್ವಹಿಸುವ ತಂತ್ರಗಾರಿಕೆಯೊಂದಿಗೆ ಗಣಕದ ತಿಳುವಳಿಕೆ ಅತ್ಯಗತ್ಯ.

ಅವಕಾಶಗಳು

ಆ್ಯನಿಮೇಷನ್ ಸ್ಟುಡಿಯೋಗಳು, ಮಲ್ಟಿ ಮೀಡಿಯಾ ಹೌಸ್‌ಗಳು, ಫಿಲ್ಮ್ ಲ್ಯಾಬ್‌ಗಳು, 2ಡಿ, 3ಡಿ ವಲಯ, ಸಿನೆಮಾದ ಸ್ಟೋರಿಬೋರ್ಡ್ ತಯಾರಿಕೆ, ಲೇಔಟ್ ತಯಾರಿಕೆ, ಜತೆಗೆ ಆಡಿಯೋ ಆ್ಯಂಡ್ ವಿಜ್ಯುವಲೈಸಿಂಗ್ ಸ್ಪೆಷಲಿಸ್ಟ್ ಆಗಿ, ಟೆಕ್ಚರ್ ಮತ್ತು ಲೈಟಿಂಗ್ ಆರ್ಟಿಸ್ಟ್ ಆಗಿಯೂ ಕಾರ್ಯನಿರ್ವಹಿಸಬಹುದು.

ಕಾಲೇಜುಗಳು

- ಅರೇನಾ ಆ್ಯನಿಮೇಷನ್, ಜಯನಗರ, ಬೆಂಗಳೂರು.
- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಫಿಲ್ಮ್ ಆ್ಯಂಡ್ ಆ್ಯನಿಮೇಷನ್, ಬೆಂಗಳೂರು.
- ಬೆಂಗಳೂರ್ ಸ್ಕೂಲ್ ಆಫ್ ಡಿಸೈನ್ ಆ್ಯಂಡ್ ಟೆಕ್ನಾಲಜಿ, ಬೆಂಗಳೂರು.
- ದಯಾನಂದ ಸಾಗರ್ ಯೂನಿವರ್ಸಿಟಿ, ಬೆಂಗಳೂರು.

ಸೆರಾಮಿಕ್ ಆರ್ಟಿಸ್ಟ್

ಮಣ್ಣನ್ನು ಪ್ರಧಾನವಾಗಿಟ್ಟುಕೊಂಡು ಗೃಹೋಪಯೋಗಿ, ಅಲಂಕಾರಿಕ ವಸ್ತುಗಳನ್ನು ನಿರ್ಮಿಸಿಕೊಡುವವರೇ ಸೆರಾಮಿಕ್ ಆರ್ಟಿಸ್ಟ್‌ಗಳು. ಈ ಕರಕುಶಲ ತಂತ್ರಗಾರಿಕೆಗೆ ಕುಂಬಾರಕಲೆ ಮೂಲವಾದರೂ ಗಾಜು, ಮರಗಳು, ಬಣ್ಣಗಳನ್ನು ಬಳಸಿ ಅಲಂಕಾರಿಕ ಪ್ರದರ್ಶನದ ವಸ್ತುಗಳನ್ನು ವಿವಿಧ ವಿನ್ಯಾಸಗಳಲ್ಲಿ ತಯಾರಿಸುವುದು ಸೆರಾಮಿಕ್ ಆರ್ಟಿಸ್ಟ್‌ಗಳ ಪ್ರಾವೀಣ್ಯ.

ಯಾವುದೇ ವಿಷಯದಲ್ಲಿ ಪಿಯುಸಿ ಓದಿನ ಬಳಿಕ ಪದವಿಯಲ್ಲಿ ಬ್ಯಾಚುಲರ್ ಆಫ್ ಫೈನ್ ಆರ್ಟ್ಸ್, ಸೆರಾಮಿಕ್ ಆರ್ಟ್ ಟ್ರೈನಿಂಗ್ ಪಡೆಯಬೇಕು. ಅಥವಾ ಪಿಯುಸಿ ಬಳಿಕ ಸೆರಾಮಿಕ್ ಸ್ಟುಡಿಯೋದಲ್ಲಿ ಅಪ್ರೆಂಟೀಸ್ ಆಗಿ ಕಾರ್ಯನಿರ್ವಹಿಸಿ ಸೆರಾಮಿಕ್ ಆರ್ಟಿಸ್ಟ್ ಆಗಬಹುದು. ಅಲ್ಲದೆ ಇನ್ನೊಂದು ವಿಧದಲ್ಲಿ ಪಿಯು ಬಳಿಕ ಎನ್‌ಐಡಿ ಪ್ರವೇಶ ಪರೀಕ್ಷೆ ಬರೆದು ಪದವಿಯಲ್ಲಿ ಸೆರಾಮಿಕ್ ಆ್ಯಂಡ್ ಗ್ಲಾಸ್ ಡಿಸೈನ್ ಕೋರ್ಸ್ ಮಾಡಿ ಗುರಿ ಸಾಧಿಸಬಹುದು.

ಕರಕುಶಲತೆ ಮತ್ತು ಮಣ್ಣಿನ ಗುಣಾವಗುಣಗಳ ಬಗ್ಗೆ ತಿಳುವಳಿಕೆ ಅಗತ್ಯ. ಮಣ್ಣು, ಗಾಜು, ಪಾಟ್, ಚರ್ಮ, ರತ್ನಗಳ ಬಳಕೆ ಬಗೆಗಿನ ಜ್ಞಾನ, ಬಣ್ಣಗಳ ಮಿಶ್ರಣ ಮತ್ತು ಮಣ್ಣಿನ ಮಿಶ್ರಣ ಕುರಿತ ಜ್ಞಾನ, ಕಲ್ಪನಾಶಕ್ತಿ, ಬೆಂಕಿಯ ಬಳಕೆ ಬಗೆಗೆ ಅರಿವು ಅಗತ್ಯ.

ಅವಕಾಶಗಳು

ಆರ್ಟ್ ಗ್ಯಾಲರಿಗಳು, ಆರ್ಟ್ಸ್ ಸ್ಕೂಲ್ ಮತ್ತು ಕಾಲೇಜುಗಳಲ್ಲಿ ಅವಕಾಶವಿದೆ. ಅಲ್ಲದೆ ಸೆರಾಮಿಕ್ ಉತ್ಪನ್ನ ಕಾರ್ಖಾನೆಗಳು ಮತ್ತು

ಸ್ಟುಡಿಯೋಗಳು, ಗುಡಿ ಕೈಗಾರಿಕೆಗಳು, ಕ್ರಾಫ್ಟ್ ಎಂಪೋರಿಯಂ, ಸ್ವಯಂ ಉದ್ಯೋಗ, ನ್ಯಾಷನಲ್ ಮ್ಯೂಸಿಯಮ್‌ಗಳಲ್ಲಿ ಅವಕಾಶ ಮುಂತಾದ ಹಲವು ಅವಕಾಶಗಳಿವೆ.

ಕಾಲೇಜುಗಳು

- ಕಾಲೇಜ್ ಆಫ್ ಫೈನ್ ಆರ್ಟ್ಸ್, ಬೆಂಗಳೂರು.
- ಸೃಷ್ಟಿ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್ಸ್, ಡಿಸೈನ್ ಆ್ಯಂಡ್ ಟೆಕ್ನಾಲಜಿ, ಬೆಂಗಳೂರು
- ಪಿಇಎಸ್ ಕಾಲೇಜ್ ಆಫ್ ಎಂಜಿನಿಯರಿಂಗ್, ಬೆಂಗಳೂರು.
- ಪಿಡಿಎ ಕಾಲೇಜ್ ಆಫ್ ಎಂಜಿನಿಯರಿಂಗ್, ಗುಲ್ಬರ್ಗಾ.

ಕೊರಿಯೋಗ್ರಾಫರ್

ದೇಶದಲ್ಲಿ ಭರತನಾಟ್ಯದಿಂದ ಕಥಕ್‌ವರೆಗೂ ವಿವಿಧ ಬಗೆಯ ನೃತ್ಯ ಮಾದರಿಗಳಿವೆ. ಇತ್ತೀಚೆಗೆ ವಿದೇಶೀ ನೃತ್ಯಗಳೂ ದೇಶಿಯರಿಗೆ ಪ್ರಿಯವೆನಿಸಿವೆ. ಇಂಥ ಕಲೆಯನ್ನು ರಿಯಾಲಿಟಿ ಶೋ, ಸಿನೆಮಾ, ವೇದಿಕೆಗಳಿಗೆ ಅನುಗುಣವಾಗಿ ರೂಪಿಸಿಕೊಡುವವರು ಕೊರಿಯೋಗ್ರಾಫರ್‌ಗಳು. ಇವರು ನೃತ್ಯ ವಿಷಯದಲ್ಲಿ ಕಲಾರಂಜಕರಾಗಿ ಕಾರ್ಯನಿರ್ವಹಿಸುತ್ತಾರೆ.

ಪಿಯುಸಿಯಲ್ಲಿ ಯಾವುದೇ ವಿಷಯ ಅಭ್ಯಾಸ ಮಾಡಿದ ಬಳಿಕ ಪದವಿಯಲ್ಲಿ ನೃತ್ಯವನ್ನು ಆಯ್ಕೆ ಮಾಡಿಕೊಂಡು ಕೊರಿಯೋಗ್ರಾಫರ್ ಆಗಬಹುದು. ಅಥವಾ ಡ್ಯಾನ್ಸ್ ಅಕಾಡೆಮಿಗಳಲ್ಲಿ ತರಬೇತಿ ಪಡೆದೂ ಗುರಿ ಸಾಧಿಸಬಹುದು. ಇಲ್ಲಿ ಪ್ರಾವೀಣ್ಯ ಮುಖ್ಯ.

ಸಮೂಹದಲ್ಲಿ ಸೌಹಾರ್ದ ಕಾಯ್ದುಕೊಂಡು ಕಾರ್ಯನಿರ್ವಹಿಸುವ ತಂತ್ರಗಾರಿಕೆ, ದೈಹಿಕ ಸಾಮರ್ಥ್ಯ, ಸಮತೋಲನ ಕಾಪಾಡಿಕೊಳ್ಳುವ ಸಾಮರ್ಥ್ಯ, ಭಾರತೀಯ ನೃತ್ಯಗಳ ಚರಿತ್ರೆ- ನಾಟ್ಯಶಾಸ್ತ್ರದ ಬಗೆಗಿನ ಅರಿವು, ದೇಶ-ವಿದೇಶಗಳ ನೃತ್ಯ ಕಲೆಗಳ ಬಗೆಗಿನ ಜ್ಞಾನ, ಉತ್ತಮ ಸಂವಹನ ಮತ್ತು ನಾಯಕತ್ವ ಗುಣ ಅಗತ್ಯ.

ಅವಕಾಶಗಳು

ಡ್ಯಾನ್ಸ್ ಕಂಪೆನಿಗಳು, ಸಿನೆಮಾ ಸ್ಟುಡಿಯೋಗಳು, ಟಿವಿ, ರಿಯಾಲಿಟಿ ಶೋಗಳು, ಥಿಯೇಟರ್‌ಗಳಲ್ಲಿ ಅವಕಾಶ.

ಕಾಲೇಜುಗಳು

- ನಾಟ್ಯ ಇನ್‌ಸ್ಟಿಟ್ಯೂಟ್ ಆಫ್ ಕಥಕ್ ಆ್ಯಂಡ್ ಕೊರಿಯೋಗ್ರಫಿ, ಬೆಂಗಳೂರು.
- ರೇವಾ ವಿಶ್ವವಿದ್ಯಾಲಯ, ಯಲಹಂಕ, ಬೆಂಗಳೂರು.
- ಆಳ್ವಾಸ್ ಕಾಲೇಜು, ಮೂಡಿಬಿದಿರೆ, ಮಂಗಳೂರು.
- ಎಐಎಂಎಸ್ ಇನ್‌ಸ್ಟಿಟ್ಯೂಟ್, ಪೀಣ್ಯ, ಬೆಂಗಳೂರು.

ಕಮರ್ಷಿಯಲ್ ಆರ್ಟಿಸ್ಟ್

ಆಧುನಿಕ ಯುಗದಲ್ಲಿ ಫೈನ್ ಆರ್ಟ್ ಕಲಾವಿದರು ಹೊಸ ಅವಕಾಶಗಳಿಗೆ ತೆರೆದುಕೊಂಡು ತಮ್ಮ ಕಲೆಯನ್ನು ಗಣಕ ತಂತ್ರಗಾರಿಕೆಯಲ್ಲಿ ಸೃಜಿಸುತ್ತಾ, ಫೋಟೋಗಳು, ಗ್ರಾಫಿಕ್‌ಗಳು, ಚಿತ್ರಕಲೆ ಮತ್ತು ಬಣ್ಣಗಳನ್ನು ಜಾಹೀರಾತುಗಳನ್ನು ಸೃಷ್ಟಿಸಿಕೊಡಬಹುದು. ಇವರೇ ಕಮರ್ಷಿಯಲ್ ಆರ್ಟಿಸ್ಟ್‌ಗಳು.

ಪಿಯು ಬಳಿಕ ಕಮರ್ಷಿಯಲ್ ಆರ್ಟ್‌ನಲ್ಲಿ ಡಿಪ್ಲೊಮಾ ಮಾಡಿ, ಅಥವಾ ಪಿಯುಸಿ ಬಳಿಕ ಪದವಿಯಲ್ಲಿ ಅಪ್ಲೈಡ್ ಅಥವಾ ಕಮರ್ಷಿಯಲ್ ಆರ್ಟ್ ವಿಷಯವನ್ನು ಅಭ್ಯಾಸ ಮಾಡಿ ಕಮರ್ಷಿಯಲ್ ಆರ್ಟಿಸ್ಟ್ ಆಗಬಹುದು.

ಫೋಟೋಗ್ರಫಿ, ಗ್ರಾಫಿಕ್ ತಂತ್ರಾಂಶಗಳ ಬಗೆಗಿನ ತಿಳುವಳಿಕೆ, ಸೃಜನಾತ್ಮಕತೆ, ವಸ್ತು -ವಿಷಯಗಳ ಬಗ್ಗೆ ನೈಜತೆ ತುಂಬುವ ಕೌಶಲ; ಬಣ್ಣ- ದೃಶ್ಯ - ಶಬ್ದಗಳ ಬಳಕೆ; ಪ್ರಾಪಂಚಿಕ ಬದಲಾವಣೆಗಳ ಕುರಿತ ಗಮನಿಸುವಿಕೆ, ಸಮೂಹ ಮತ್ತು ಒತ್ತಡದಲ್ಲಿ ಕಾರ್ಯನಿರ್ವಹಿಸುವ ಸಹನೆ, ಚಿತ್ರಕಲೆ ಬಗ್ಗೆ ತಿಳುವಳಿಕೆ ಅತ್ಯಗತ್ಯ.

ಅವಕಾಶಗಳು

ಜಾಹೀರಾತು ಏಜೆನ್ಸಿಗಳು, ಪತ್ರಿಕೆಗಳು ಮತ್ತು ದೃಶ್ಯ ಮಾಧ್ಯಮ, ಜಾಲತಾಣ ನಿರ್ಮಾಣ ಸಂಸ್ಥೆಗಳು, ಗ್ರಾಫಿಕ್ ಡಿಸೈನಿಂಗ್ ವಲಯ, ಗ್ರಾಫಿಕ್ ವಿನ್ಯಾಸ ಕಂಪೆನಿಗಳು, ಅಕಾಡೆಮಿಗಳಲ್ಲಿ ಅವಕಾಶ.

ಕಾಲೇಜುಗಳು

- ಕಾಲೇಜ್ ಆಫ್ ಫೈನ್ ಆರ್ಟ್ (ಚಿತ್ರಕಲಾ ಪರಿಷತ್), ಬೆಂಗಳೂರು.
- ಸೃಷ್ಟಿ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್ ಡಿಸೈನಿಂಗ್ ಆ್ಯಂಡ್ ಟೆಕ್ನಾಲಜಿ, ಬೆಂಗಳೂರು.
- ಎಎಟಿ ಕಾಲೇಜ್- ಸೌಂಡ್ ಎಂಜಿನಿಯರಿಂಗ್ ಆ್ಯಂಡ್ ಫಿಲ್ಮ್ ಮೇಕಿಂಗ್, ಬೆಂಗಳೂರು.
- ಆಚಾರ್ಯ ಸ್ಕೂಲ್ ಆಫ್ ಡಿಸೈನ್, ಬೆಂಗಳೂರು

ಫ್ಯಾಷನ್ ಡಿಸೈನರ್

ಸಾಂಪ್ರದಾಯಿಕ ಉಡುಗೆ- ತೊಡುಗೆಯಿಂದ ಹಿಡಿದು ಐಶಾರಾಮಿ ಬ್ರ್ಯಾಂಡ್ ವಸ್ತ್ರಗಳವರೆಗೂ ಉಡುಪುಗಳ ಗುಣಮಟ್ಟ, ಬಣ್ಣ, ಅಳತೆಗೆ ಅನುಗುಣವಾಗಿ ವಿನ್ಯಾಸಗಳನ್ನು ಸೃಷ್ಟಿಸುವವರು ಫ್ಯಾಷನ್ ಡಿಸೈನರ್‌ಗಳು. ಮಾರುಕಟ್ಟೆಯಲ್ಲಿ ಜನರನ್ನು ಆಕರ್ಷಿತರನ್ನಾಗಿ ಮಾಡುವ ವಸ್ತ್ರಗಳ ಹಿಂದೆ ಇವರ ಕೈಚಳಕ ಸದಾ ಇರುತ್ತದೆ.

ಪಿಯುಸಿ ಬಳಿಕ ಎನ್‌ಐಎಫ್‌ಟಿ ಅಥವಾ ಎನ್‌ಐಡಿಯ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪದವಿಯಲ್ಲಿ ಫ್ಯಾಷನ್ ಡಿಸೈನ್ ಕಲಿಯಬೇಕು. ಅಥವಾ ಎನ್‌ಐಡಿ ಪ್ರವೇಶ ಪರೀಕ್ಷೆ ಬರೆದು ಎನ್‌ಐಡಿ ಎಂ. ಡೆಸ್ ಪದವಿ ಗಳಿಸಿದರೂ ಫ್ಯಾಷನ್ ಡಿಸೈನರ್ ಆಗಬಹುದು.

ಕ್ರಿಯಾತ್ಮಕ ಚಿತ್ರಕಲಾ ಪ್ರವೃತ್ತಿ, ಹೊಸ ಉತ್ಪನ್ನಗಳ ಬಗ್ಗೆ ತಿಳುವಳಿಕೆ, ಬಣ್ಣಗಳು ಹಾಗೂ ಛಾಯಾವರ್ಣ (ಶೇಡ್)ಗಳ ಜ್ಞಾನ, ಉತ್ತಮ ಕಲ್ಪನಾ ಶಕ್ತಿ, ಜನರ ಜೀವನ ಶೈಲಿ ಮತ್ತು ಮಾರುಕಟ್ಟೆ ಅಪೇಕ್ಷೆ ಬಗೆಗಿನ ಅರಿವು, ಸಂಶೋಧನಾ ಗುಣ, ಫ್ಯಾಷನ್ ಸಂಬಂಧಿ ತಂತ್ರಾಂಶಗಳ ಕುರಿತ ಕೌಶಲ ಅಗತ್ಯ.

ಅವಕಾಶಗಳು

ಟೆಕ್ಸ್‌ಟೈಲ್ಸ್ ಸಂಸ್ಥೆಗಳಲ್ಲಿ, ಗಾರ್ಮೆಂಟ್ ಮತ್ತು ಹ್ಯಾಂಡ್‌ಲೂಮ್ ಘಟಕಗಳಲ್ಲಿ ಚಿಲ್ಲರೆ ಮತ್ತು ಸಗಟು ಗಾರ್ಮೆಂಟ್ಸ್(ಪುರುಷರ, ಮಹಿಳೆಯರ, ಮಕ್ಕಳ ಸಿದ್ಧ ಉಡುಪು) ಕಂಪೆನಿಗಳಲ್ಲಿ, ಸರಕಾರಿ ಮತ್ತು ಖಾಸಗಿ ಕೈಮಗ್ಗ ಬಟ್ಟೆ ಉತ್ಪಾದನಾ ಘಟಕಗಳಲ್ಲಿ ವಿದ್ಯುತ್ ಮಗ್ಗಗಳ ಬಟ್ಟೆಗಳ, ಫ್ಯಾಷನ್ ಕ್ಷೇತ್ರದ ಕಾಸ್ಟ್ಯೂಮ್ ಡಿಸೈನಿಂಗ್ ವಲಯ, ಫಿಲ್ಮ್ ಪ್ರೊಡಕ್ಷನ್ ವಲಯ, ಉಪನ್ಯಾಸಕ ವೃತ್ತಿ ಮುಂತಾದವುಗಳಲ್ಲಿ ಅವಕಾಶಗಳಿವೆ.

ಕಾಲೇಜುಗಳು

- ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ(ಎನ್‌ಐಎಫ್‌ಟಿ), ಬೆಂಗಳೂರು.
- ಆರ್ಮಿ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಆ್ಯಂಡ್ ಡಿಸೈನ್ (ಎಐಎಫ್‌ಡಿ), ಬೆಂಗಳೂರು.
- ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನಿಂಗ್. ಬೆಂಗಳೂರು.
- ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ ಕಾಲೇಜು, ದೆಹಲಿ.
- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ, ಬೆಂಗಳೂರು.

ಫಿಲ್ಮ್ ಎಡಿಟರ್

ಯಾವುದೇ ಚಲನಚಿತ್ರದ ನಿರ್ಮಾಣೋತ್ತರ (ಪೋಸ್ಟ್ ಪ್ರೊಡಕ್ಷನ್) ಹಂತದಲ್ಲಿ ಅನಗತ್ಯವಾದ ದೃಶ್ಯಗಳನ್ನು ಕತ್ತರಿಸಿ ಅಗತ್ಯವಾದ ದೃಶ್ಯಗಳನ್ನು ಸೇರಿಸಿ ಚಿತ್ರದ ಭವ್ಯತೆಯನ್ನು ಹೆಚ್ಚಿಸುವವರು ಚಿತ್ರ ಸಂಕಲನಕಾರರು ಅಥವಾ ಫಿಲ್ಮ್ ಎಡಿಟರ್‌ಗಳು. ಇವರು ಚಿತ್ರದ ಪ್ರತಿ ಸನ್ನಿವೇಶವನ್ನು ಬೆಸೆದು ನೋಡುಗರಿಗೆ ಮನಸೆಳೆವ ದೃಶ್ಯಗಳನ್ನು ಕಟ್ಟಿಕೊಡುತ್ತಾರೆ.

ಚಿತ್ರ ಸಂಕಲನಕಾರರಾಗಲು ಯಾವುದೇ ವಿಷಯದಲ್ಲಿ ಪಿಯುಸಿ ಅಥವಾ ಪದವಿಯನ್ನು ಪಡೆದ ಮೇಲೆ ಫಿಲ್ಮ್ ಆ್ಯಂಡ್ ವೀಡಿಯೋ ಎಡಿಟಿಂಗ್ ಕೋರ್ಸ್ ಮಾಡಿ ಸರ್ಟಿಫಿಕೆಟ್ ಪಡೆಯಬೇಕು.

ಜತೆಗೆ ಚಿತ್ರಕಲೆ ಮತ್ತು ದೃಶ್ಯ ಸಂಕಲನ ತಂತ್ರಾಂಶದ ಬಗ್ಗೆ ಅರಿವು, ಚಲನಚಿತ್ರಗಳ ಬಗ್ಗೆ ಒಲವು, ಅನೇಕ ಚಲನಚಿತ್ರಗಳ ರಿಯಾಲಿಟಿಗಳ ಕುರಿತ ಜ್ಞಾನ, ದೃಶ್ಯಗಳನ್ನು ಸನ್ನಿವೇಶಗಳಿಗೆ ಅನುಗುಣವಾಗಿ (ಸ್ಟೋರಿ ಬೋರ್ಡ್) ತಯಾರಿಸಿಟ್ಟುಕೊಳ್ಳುವ ತಿಳುವಳಿಕೆ, ಸಮೂಹ ಮತ್ತು ಒತ್ತಡದಲ್ಲಿ ಕಾರ್ಯನಿರ್ವಹಿಸುವ ಸಾಮರ್ಥ್ಯ, ಸಮಯಪಾಲನೆಯ ಗುಣಗಳು ಇರಬೇಕು.

ಅವಕಾಶಗಳು

ಜಾಹೀರಾತು ಏಜೆನ್ಸಿಗಳು, ಆ್ಯನಿಮೇಷನ್ ಸ್ಟುಡಿಯೋಗಳು, ಫಿಲ್ಮ್ ಸ್ಟುಡಿಯೋಗಳು, ಸರಕಾರಿ ಫಿಲ್ಮ್ ಪ್ರೊಡಕ್ಷನ್ ಘಟಕ, ಟಿವಿ ಸ್ಟುಡಿಯೋಗಳು.

ಕಾಲೇಜುಗಳು

- ರಿಲಯನ್ಸ್ ಎಜ್ಯುಕೇಷನ್: ವಿಎಫ್ಎಕ್ಸ್ ಆ್ಯಂಡ್ ಆ್ಯನಿಮೇಷನ್ ಅಕಾಡೆಮಿ, ಬೆಂಗಳೂರು
- ಸೃಷ್ಟಿ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್, ಡಿಸೈನ್ ಆ್ಯಂಡ್ ಟೆಕ್ನಾಲಜಿ, ಬೆಂಗಳೂರು
- ಇನ್ನೋವೇಟಿವ್ ಫಿಲ್ಮ್ ಅಕಾಡೆಮಿ, ಬೆಂಗಳೂರು.
- ಸರಕಾರಿ ಫಿಲ್ಮ್ ಮತ್ತು ದೂರದರ್ಶನ ಕೇಂದ್ರ. ಬೆಂಗಳೂರು.
- ನ್ಯಾಷನಲ್ ಅಕಾಡೆಮಿ ಆಫ್ ಸಿನೆಮಾ ಆ್ಯಂಡ್ ಟೆಲಿವಿಷನ್, ಬೆಂಗಳೂರು.

ಫರ್ನಿಚರ್ ಡಿಸೈನರ್

ಆಧುನಿಕ ಯುಗದ ಗೃಹೋಪಯೋಗಿ ವಸ್ತುಗಳು ಶೋಭಾಯಮಾನವಾಗಿ ಕಾಣುವಂತೆ ಮಾಡುವ ಟಿವಿ ಸ್ಟ್ಯಾಂಡಿನಿಂದ, ಮಲಗುವ ಮಂಚದವರೆಗೂ ನೈಪುಣ್ಯವನ್ನು ರೂಪಿಸುವ ಕಾರ್ಯ ಮಾಡುವವರು ಫರ್ನಿಚರ್ ಡಿಸೈನರ್‌ಗಳು. ಇವರು ಆಧುನಿಕ ಕಾಲದ ಬಡಗಿಗಳೂ ಹೌದು. ಮನೆ ನಿರ್ಮಾಣದಲ್ಲಿ ಇವರ ಜವಾಬ್ದಾರಿಯೂ ಹೆಚ್ಚು

ಯಾವುದೇ ವಿಷಯದಲ್ಲಿ ಪಿಯುಸಿ ಮಾಡಿದ ಬಳಿಕ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನಿಂಗ್‌ನ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಳಿಕ ಬಿ.ಡೆಸ್ ಮತ್ತು ಎಂ.ಡೆಸ್‌ನಲ್ಲಿ ಫರ್ನಿಚರ್ ಆ್ಯಂಡ್ ಪ್ರಾಡಕ್ಟ್ ಡಿಸೈನ್ ವಿಷಯ ಅಭ್ಯಾಸ ಮಾಡಿದರೆ ಫರ್ನಿಚರ್ ಡಿಸೈನರ್ ಆಗಬಹುದು.

ಕ್ರಿಯಾತ್ಮಕ ಚಿತ್ರಕಲಾ ಪ್ರವೃತ್ತಿ, ಹೊಸ ಉತ್ಪನ್ನಗಳ ಬಗ್ಗೆ ತಿಳುವಳಿಕೆ, ಫರ್ನಿಚರ್ ಪರಿಕರಗಳ ಬಗೆಗೆ ಅರಿವು, ಉತ್ತಮ ಕಲ್ಪನಾ ಶಕ್ತಿ, ಹೊಸ ವಿನ್ಯಾಸಗಳ ಬಗ್ಗೆ ತಿಳುವಳಿಕೆ ಸಂಶೋಧನಾ ಗುಣ, ಫರ್ನಿಚರ್ ಸಂಬಂಧಿತ ತಂತ್ರಾಂಶಗಳ ತಿಳುವಳಿಕೆ, ಒತ್ತಡದಲ್ಲಿ ಕಾರ್ಯನಿರ್ವಹಿಸುವ ಕೌಶಲ ಅಗತ್ಯ.

ಅವಕಾಶಗಳು

ಪೀಠೋಪಕರಣಗಳ ಉತ್ಪಾದನಾ ಘಟಕ, ಪ್ರಯಾಣಿಕರ ಹಡಗು ಉತ್ಪಾದನಾ ಘಟಕ, ವಿಮಾನ ತಯಾರಿಕಾ ಘಟಕ, ಆರೋಗ್ಯ ಕೇಂದ್ರಗಳ ಉಪಕರಣಗಳ ಉತ್ಪಾದನೆ, ಕ್ರಾಫ್ಟ್ ತಯಾರಿಕೆ, ರೈಲ್ವೇ, ಹೋಟೇಲ್ ಮತ್ತು ರೆಸ್ಟೋರೆಂಟ್‌ಗಳ ನಿರ್ಮಾಣದಲ್ಲಿ ಇವರ ಪಾತ್ರ ಹಿರಿದು.

ಕಾಲೇಜುಗಳು

- ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನಿಂಗ್, ಬೆಂಗಳೂರು.
- ಸೃಷ್ಟಿ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್ ಡಿಸೈನಿಂಗ್ ಆ್ಯಂಡ್ ಟೆಕ್ನಾಲಜಿ, ಬೆಂಗಳೂರು.
- ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ (ಎನ್‌ಐಎಫ್‌ಟಿ), ಬೆಂಗಳೂರು.
- ಜೆಡಿ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ, ಬೆಂಗಳೂರು.
- ಎಐಡಿ – (ಅಪೀಜೆ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್), ಮೆಹ್ರೋಲಿ, ದೆಹಲಿ.

ಗೇಮ್ ಡಿಸೈನರ್

ಮಕ್ಕಳಿಗಾಗಿ ಹೊಸ ಹೊಸ ಮಾದರಿಯ ಆನ್‌ಲೈನ್ ಮತ್ತು ಆಫ್‌ಲೈನ್ ಆಟಗಳನ್ನು ನಿರ್ಮಿಸಿಕೊಡುವವರು ಗೇಮ್ ಡಿಸೈನರ್‌ಗಳು. ಇವರು ಗಣಕದಲ್ಲಿ ಹೊಸ ಮಾದರಿಯ ಪ್ರೋಗ್ರಾಮ್‌ಗಳನ್ನು ರೂಪಿಸಿ ಗೇಮ್‌ಗಳನ್ನು ತಯಾರಿಸುತ್ತಾರೆ.

ಯಾವುದೇ ವಿಷಯದಲ್ಲಿ ಪಿಯುಸಿ ಪೂರೈಸಿದ ಬಳಿಕ ಅಥವಾ ಪದವಿ ಬಳಿಕ ಡಿಜಿಟಲ್ ಗೇಮ್ ಡಿಸೈನ್ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಡಿಜಿಟಲ್ ಗೇಮ್‌ನಲ್ಲಿ ಎಂ.ಡೆಸ್ ಮಾಡಿಕೊಳ್ಳಬೇಕು.ಅಥವಾ ಪಿಯುಸಿ ಬಳಿಕ ಬಿಎಫ್‌ಎ, ಎನ್‌ಐಡಿ ಪದವಿ ಅಥವಾ ಡಿಪ್ಲೊಮಾ ಜತೆ ಕಂಪ್ಯೂಟರ್ ಗೇಮ್ ಕೋರ್ಸ್ ಮಾಡಿ ಗೇಮ್ ಡಿಸೈನರ್ ಆಗಬಹುದು.

ಉತ್ತಮ ಕಲ್ಪನಾಶಕ್ತಿ, ಚಿತ್ರಕಲೆ ಮತ್ತು ಕಾರ್ಟೂನ್‌ಗಳನ್ನು ಬಳಸಿಕೊಳ್ಳುವ ಕಲೆ – ಶ್ರವ್ಯ ಮತ್ತು ದೃಶ್ಯಗಳನ್ನು ಸೃಜಿಸುವ ಜ್ಞಾನ ಅಗತ್ಯ. ಅಲ್ಲದೆ ಮಕ್ಕಳಿಗೆ ಮನೋರಂಜನೆ ಮತ್ತು ಮಾಹಿತಿ ತುಂಬುವ ಕೌಶಲವಿರಬೇಕು. ತಂತ್ರಜ್ಞಾನ

ಮತ್ತು ಗೇಮ್ ಕುರಿತ ತಂತ್ರಾಂಶಗಳ ಬಗ್ಗೆ ತಿಳುವಳಿಕೆ ಇರಬೇಕು. ಆಟಸಂಗೆ ಒಳಗಾಗುವ ಮಕ್ಕಳ ಕುರಿತ ಎಚ್ಚರಿಕೆ/ಜ್ಞಾನ ಅಗತ್ಯ.

ಅವಕಾಶಗಳು

ಮನೋರಂಜನಾ ಆಟಗಳ ರೂಪಣ ಕಲೆಯ ಸಂಸ್ಥೆ (ಗೇಮ್ ಡೆವಲಪ್‌ಮೆಂಟ್ ಫರ್ಮ್), ಗೇಮ್ ಪಬ್ಲಿಷರ್, ಗೇಮ್ ಪ್ರೊಡಕ್ಷನ್ ಸಂಸ್ಥೆಗಳು, ವಿಡಿಯೋ ಗೇಮ್ ಸ್ಟುಡಿಯೋಗಳು, ವಿದ್ಯಾ ಸಂಸ್ಥೆಗಳು, ಮಾಹಿತಿ ತಂತ್ರಜ್ಞಾನ ವಲಯ, ಮಾರುಕಟ್ಟೆ ಕಲೆ (ಮಾರ್ಕೆಟಿಂಗ್) ಮತ್ತು ಜಾಹೀರಾತು ಏಜೆನ್ಸಿಗಳು, ಮೊಬೈಲ್ ಫೋನ್ ಕಂಪೆನಿಗಳು, ಡಿಸೈನಿಂಗ್ ಕಂಪೆನಿಗಳಲ್ಲಿ ಅವಕಾಶ.

ಕಾಲೇಜುಗಳು

- ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್, ಬೆಂಗಳೂರು.
- ಅರೇನಾ ಆ್ಯನಿಮೇಷನ್ ಅಕಾಡೆಮಿ, ಬೆಂಗಳೂರು.
- ಐಸಿಎಟಿ ಡಿಸೈನ್ ಆ್ಯಂಡ್ ಮೀಡಿಯಾ ಕಾಲೇಜ್, ಬೆಂಗಳೂರು.
- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಫಿಲ್ಮ್ ಆ್ಯಂಡ್ ಆ್ಯನಿಮೇಷನ್, ಬೆಂಗಳೂರು.
- ಐಐಎಫ್‌ಎ ಮಲ್ಟಿಮೀಡಿಯಾ, ಬೆಂಗಳೂರು.

ಗ್ರಾಫಿಕ್ ಡಿಸೈನರ್

ವಿವಿಧ ಬಣ್ಣಗಳು, ಚಿತ್ರಗಳನ್ನು ಬಳಸಿಕೊಂಡು ಸಾಮಾನ್ಯರಿಗೂ ಅರ್ಥವಾಗುವಂತೆ ಯಾವುದೇ ವಿಷಯದ ಬಗ್ಗೆ ವಿವರಣೆ ನೀಡುತ್ತಿರುವಂತೆ ಮತ್ತೊಂದು ವೈಭವಪೂರ್ಣವಾದ ಚಿತ್ರಗಳನ್ನು ಸೃಷ್ಟಿಸುವವರು ಗ್ರಾಫಿಕ್ ಡಿಸೈನರ್‌ಗಳು. ಇವರು ವಿವಿಧ ಮಾದರಿಯ ಅರ್ಥಪೂರ್ಣ ಚಿತ್ರಗಳನ್ನು, ಲೋಗೋಗಳನ್ನು, ವಿನ್ಯಾಸಗಳನ್ನು ಸೃಜಿಸಿ ನೋಡುಗರನ್ನು ಮಂತ್ರಮುಗ್ಧರನ್ನಾಗಿಸುತ್ತಾರೆ.

ಪಿಯುಸಿ ಬಳಿಕ ಪದವಿಯಲ್ಲಿ ಬಿ.ಎಫ್.ಎ ಅಥವಾ ಬಿ.ಎ ಅಪ್ಲೈಡ್ ಆರ್ಟ್ ಅಭ್ಯಾಸ ಮಾಡಿದರೆ, ಅಥವಾ ಪಿಯುಸಿ ಬಳಿಕ ಎನ್‌ಡಿಎ ಪ್ರವೇಶ ಪರೀಕ್ಷೆ ಬರೆದು ಬಿ. ಡೆಸ್ ಮತ್ತು ಎಂ. ಡೆಸ್ ಗ್ರಾಫಿಕ್ ಡಿಸೈನಿಂಗ್ ಮಾಡಿದರೆ ಗ್ರಾಫಿಕ್ ಡಿಸೈನರ್ ಆಗಬಹುದು.

ಇದರ ಜತೆಗೆ ಚಿತ್ರಕಲೆಯಲ್ಲಿ ಪ್ರಾವೀಣ್ಯ, ಚಿತ್ರಗಳನ್ನು ಸೃಷ್ಟಿಸುವ ಕಲೆ, ಬಣ್ಣಗಳ ಬಳಕೆ ಕುರಿತ ಅರಿವು, ಉತ್ತಮ ಸಂವಹನ ಕೌಶಲ, ಗಣಕ ಸಂಬಂಧಿ ತಂತ್ರಾಂಶಗಳ ಬಳಕೆ, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಅರಿವು ಅತ್ಯಗತ್ಯ.

ಅವಕಾಶಗಳು

ಜಾಹೀರಾತು ಏಜೆನ್ಸಿಗಳು, ಮಾರ್ಕೆಟಿಂಗ್ ವಲಯ, ಜಾಲತಾಣ ವಿನ್ಯಾಸ ಕ್ಷೇತ್ರ, ಮುದ್ರಣ ಮತ್ತು ಪ್ರಕಾಶನ, ಡಿಸೈನಿಂಗ್ ಸ್ಟುಡಿಯೋಗಳು, ಟಿವಿ ಮತ್ತು ಚಲನಚಿತ್ರ ಅಕಾಡೆಮಿಗಳು, ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ಗಳು ಇತ್ಯಾದಿ.

ಕಾಲೇಜುಗಳು

- ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ (ಎನ್‌ಐಎಫ್‌ಟಿ), ಬೆಂಗಳೂರು.
- ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನಿಂಗ್, ಬೆಂಗಳೂರು.
- ಐಐಎಫ್‌ಎ ಮಲ್ಟಿಮೀಡಿಯಾ, ಬೆಂಗಳೂರು
- ವಿಷ್ಯನ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್, ಬೆಂಗಳೂರು.
- ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ ದೆಹಲಿ.

ಇಂಟರಾಕ್ಷನ್ ಡಿಸೈನರ್

ತಂತ್ರಜ್ಞಾನವನ್ನು ಬಳಸಿ, ಪ್ರೋಗ್ರಾಮಿಂಗ್ ಮಾಡಿ ಒಂದು ಯಂತ್ರವು ಮಾನವನೊಂದಿಗೆ ಸಂವಹನ ನಡೆಸುವಂತೆ ಮಾಡುವವರೇ ಇಂಟರಾಕ್ಷನ್ ಡಿಸೈನರ್‌ಗಳು. ಗೂಗಲ್ ಅಸಿಸ್ಟೆಂಟ್, ಅಮೆಝಾನ್ ಎಕೋ ಮಾದರಿಯ ತಂತ್ರಜ್ಞಾನ ಸೃಜಿಸಿ ನಿರ್ವಹಿಸುತ್ತಿರುವವರೂ ಇವರೇ.

ಯಾವುದೇ ವಿಷಯದಲ್ಲಿ ಪಿಯುಸಿ ಪೂರೈಸಿದ ಬಳಿಕ ಎನ್‌ಐಡಿ ಡಿಸೈನಿಂಗ್ ಆಪ್ಟಿಟ್ಯೂಡ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪದವಿಯಲ್ಲಿ ಬಿ. ಡೆಸ್ ಇಂಟರಾಕ್ಷನ್ ಡಿಸೈನಿಂಗ್ ತರಬೇತಿಯನ್ನು ಪಡೆದು ಕೊಳ್ಳಬೇಕು. ಅಥವಾ ಮತ್ತೊಂದು ವಿಧಾನದಲ್ಲಿ ಬಿ.ಡೆಸ್., ಎಂ.ಡೆಸ್ ಪೂರೈಸಿಯೂ ಇಂಟರಾಕ್ಷನ್ ಡಿಸೈನರ್ ಆಗಬಹುದು.

ವಿದ್ಯಾಭ್ಯಾಸದ ಜತೆಗೆ ಕಂಪ್ಯೂಟರ್ ಫೋಟೋಶಾಪ್, ಇಲಸ್ಟ್ರೇಟರ್, ಆಡಿಶನ್ ತಂತ್ರಾಂಶಗಳ ಬಗ್ಗೆ ಜ್ಞಾನ ಅಗತ್ಯ ಅಲ್ಲದೆ ದೃಶ್ಯ-ಶ್ರವ್ಯಗಳ ಬಗ್ಗೆ ಅರಿವು, ವಿಶ್ಲೇಷಣಾತ್ಮಕ ಚಿತ್ರಗಳ ಬಳಕೆ ಬಗ್ಗೆ ತಿಳುವಳಿಕೆ, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಕುರಿತ ಜ್ಞಾನ ಅಗತ್ಯ.

ಅವಕಾಶಗಳು

ಕಂಪ್ಯೂಟರ್ ಸಾಫ್ಟ್‌ವೇರ್ ವಲಯ, ಐಟಿ/ಐಟಿಎಸ್ ವಲಯ, ಟೆಕ್ ಕಾಲೇಜುಗಳು, ಮೊಬೈಲ್ ಮತ್ತು ಕಂಪ್ಯೂಟರ್ ತಯಾರಿಕಾ ಘಟಕ, ವೆಬ್/ಮೊಬೈಲ್ ವಿನ್ಯಾಸ ಕ್ಷೇತ್ರ, ಇಂಟರ್ನೆಟ್ ವ್ಯಾಪಾರ ಕ್ಷೇತ್ರಗಳಲ್ಲಿ ಅವಕಾಶ.

ಕಾಲೇಜುಗಳು

- ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನಿಂಗ್, ಬೆಂಗಳೂರು.
- ಸೃಷ್ಟಿ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್, ಡಿಸೈನ್, ಆ್ಯಂಡ್ ಟೆಕ್ನಾಲಜಿ, ಬೆಂಗಳೂರು.
- ಜೈನ್ ಸ್ಕೂಲ್ ಆಫ್ ಡಿಸೈನ್, ಮೀಡಿಯಾ ಆ್ಯಂಡ್ ಕ್ರಿಯೇಟಿವ್ ಆರ್ಟ್, ಬೆಂಗಳೂರು.
- ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ, ಬೆಂಗಳೂರು.
- ಅರೇನಾ ಆ್ಯನಿಮೇಷನ್, ಜಯನಗರ, ಬೆಂಗಳೂರು.

ಇಂಟೀರಿಯರ್ ಡಿಸೈನರ್

ಮನೆಯ ಒಳಾಂಗಣದಲ್ಲಿ ಸ್ಥಳದ ಕೊರತೆ ನೀಗಿಸಿ, ಗಾಳಿ, ಬೆಳಕು ಹೆಚ್ಚು ಬರುವಂತೆ ಮಾಡಿ ಮನೆಗೆ ತಕ್ಕ ಬಣ್ಣ, ಪೀಠೋಪಕರಣ, ಗೃಹಾಲಂಕಾರ ವಸ್ತುಗಳನ್ನು ಬಳಸಿ ಮನೆ ಅಥವಾ ಭವನದ ಸೌಂದರ್ಯವನ್ನು ಹೆಚ್ಚಿಸುವವರು ಇಂಟೀರಿಯರ್ ಡಿಸೈನರ್‌ಗಳು. ಇವರು ಮನೆಗೆ ಸಂಬಂಧಿಸಿದ ಹೊಸ ಆಯ್ಕೆಗಳ ಸಲಹೆಗಾರರೂ ಹೌದು.

ವಿಜ್ಞಾನ ವಿಷಯದಲ್ಲಿ ಪಿಯುಸಿ ಮುಗಿಸಿದ ಬಳಿಕ ಸಿಇಪಿಟಿ ಇಂಟೀರಿಯರ್ ಡಿಸೈನರ್ ಸೆಲೆಕ್ಷನ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಅನಂತರ ಪದವಿಯಲ್ಲಿ ಇಂಟೀರಿಯರ್ ಡಿಸೈನಿಂಗ್ ವಿಷಯ ಅಭ್ಯಾಸ ಮಾಡಬೇಕು. ಅಥವಾ ಯಾವುದೇ ವಿಷಯದಲ್ಲಿ ಪಿಯುಸಿ ಮಾಡಿದ ಬಳಿಕ ಇಂಟೀರಿಯರ್ ಡಿಸೈನಿಂಗ್ ಡಿಪ್ಲೊಮಾ ಮಾಡಿಯೂ ಗುರಿ ಸಾಧಿಸಬಹುದು.

ಇದರ ಜತೆಗೆ ಗೃಹ ಸಂಬಂಧಿ ಎಲ್ಲ ವಸ್ತು ವಿಷಯಗಳ ಬಗೆಗೆ ಜ್ಞಾನ; ಬಣ್ಣ, ಗೃಹಾಲಂಕಾರ ವಸ್ತುಗಳ ಬಗ್ಗೆ ತಿಳುವಳಿಕೆ, ಗೃಹ ಸಂಬಂಧಿ ಮಾರುಕಟ್ಟೆಯ ಹೊಸ ಟ್ರೆಂಡ್ ಬಗೆಗೆ ಅರಿವು, ಸ್ಕೆಚ್ ಮಾಡುವ ಕಲೆ, ಸಮೂಹದಲ್ಲಿ ಕಾರ್ಯನಿರ್ವಹಿಸುವ, ಎಐ ತಂತ್ರಜ್ಞಾನ ಬಳಸಿಕೊಳ್ಳುವ ಉತ್ತಮ ಸಂವಹನ ಕೌಶಲ ಅಗತ್ಯ.

ಅವಕಾಶಗಳು

ಆರ್ಕಿಟೆಕ್ಟ್ ವಲಯ, ಕಟ್ಟಡ ನಿರ್ಮಾಣ ಕ್ಷೇತ್ರ, ಒಳಾಂಗಣ ವಿನ್ಯಾಸ ವಲಯ ಇತ್ಯಾದಿ.

ಕಾಲೇಜುಗಳು

- ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್, ಬೆಂಗಳೂರು.
- ಬೆಂಗಳೂರು ಸ್ಕೂಲ್ ಆಫ್ ಡಿಸೈನ್ ಆ್ಯಂಡ್ ಟೆಕ್ನಾಲಜಿ, ಬೆಂಗಳೂರು.
- ಎನ್‌ಐಟಿಟಿಇ ಸ್ಕೂಲ್ ಆಫ್ ಫ್ಯಾಷನ್ ಟೆಕ್ನಾಲಜಿ ಆ್ಯಂಡ್ ಇಂಟೀರಿಯರ್ ಡಿಸೈನ್, ಬೆಂಗಳೂರು.
- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ, ಬೆಂಗಳೂರು.

ಜ್ಯುವೆಲ್ಲರಿ ಡಿಸೈನರ್

ಚಿನ್ನ, ಬೆಳ್ಳಿ, ಪ್ಲಾಟಿನಮ್ ಮತ್ತು ರತ್ನಗಳನ್ನು ಬಳಸಿಕೊಂಡು ಹೊಸ ವಿನ್ಯಾಸದ ಆಭರಣಗಳ ತಯಾರಿಕೆಗೆ ಸಹಾಯ ಮಾಡುವವರೇ ಜ್ಯುವೆಲ್ಲರಿ ಡಿಸೈನರ್‌ಗಳು. ನವನವೀನ ವಿನ್ಯಾಸಗಳನ್ನು ಚಿನ್ನದ ಕೆಲಸಗಾರರಿಗೆ ನೀಡಿ ಚಿನ್ನಾಭರಣ ತಯಾರಿಕೆಗೆ ರೂಪುರೇಷೆ ನೀಡುವುದು ಇವರ ಕಾರ್ಯ. ಚಿನ್ನದ ಬಳಕೆ, ಬೆಲೆ ಹೆಚ್ಚಿದಂತೆ ಇವರ ಸೇವೆಯ ಬೇಡಿಕೆಯೂ ಹೆಚ್ಚಿದೆ.

ಪಿಯುಸಿ ವಿದ್ಯಾಭ್ಯಾಸ ಪೂರೈಸಿದ ಬಳಿಕ ಜೆಮ್ಮಾಲಜಿ ಡಿಪ್ಲೊಮಾ ವಿಷಯ ಆರಿಸಿಕೊಳ್ಳಬೇಕು. ಅಥವಾ ಎನ್‌ಐಎಫ್‌ಟಿ ಪ್ರವೇಶ ಪರೀಕ್ಷೆ ಬರೆದು ಬಳಿಕ ಆ್ಯಕ್ಸೆಸರಿ ಡಿಸೈನ್ ಮಾಡಿಯೂ ಜ್ಯುವೆಲ್ಲರಿ ಡಿಸೈನರ್ ಆಗಬಹುದು.

ಇದರ ಜತೆಗೆ ಫ್ಯಾಷನ್ ಕ್ಷೇತ್ರದ ಬಗ್ಗೆ ಜ್ಞಾನ; ಚಿನ್ನ, ಬೆಳ್ಳಿ ಮತ್ತಿತರ ಲೋಹಗಳ ಗುಣಾವಗುಣಗಳ ಬಗ್ಗೆ ತಿಳುವಳಿಕೆ, ಸ್ಕೆಚ್ ಮಾಡುವ ಕಲೆ, ರತ್ನಶಾಸ್ತ್ರದ ಅರಿವು ಅಗತ್ಯ.

ಅವಕಾಶಗಳು

ಚಿನ್ನಾಭರಣ ತಯಾರಿಕೆ ಘಟಕ, ಚಿನ್ನಾಭರಣ ತಯಾರಿಕೆ ಮತ್ತು ಸಂಶೋಧನ ವಲಯ, ಚಿನ್ನಾಭರಣ ಮಳಿಗೆಗಳು, ಲೋಹ ವಿನ್ಯಾಸ ಕ್ಷೇತ್ರ ಇತ್ಯಾದಿಗಳಲ್ಲಿ

ಕಾಲೇಜುಗಳು

- ವೋಗ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಆ್ಯಂಡ್ ಟೆಕ್ನಾಲಜಿ, ಬೆಂಗಳೂರು.
- ಜೆಡಿ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟಕ್ನಾಲಜಿ, ಬೆಂಗಳೂರು.
- ಸಾಲಿಟೈರ್ ಡೈಮೆಂಡ್ ಇನ್‌ಸ್ಟಿಟ್ಯೂಟ್, ಬೆಂಗಳೂರು.
- ವೆಲ್ಲಿಸ್ಕೂಲ್ ಆಫ್ ಕ್ರಿಯೇಟಿವಿಟಿ, ಡಿಸೈನ್ ಆ್ಯಂಡ್ ಮ್ಯಾನೇಜ್‌ಮೆಂಟ್, ಬೆಂಗಳೂರು.
- ಜೆಮ್ಮಾಲಜಿಕಲ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಮುಂಬಯಿ.

ಟಿವಿ ಫೋಟೋಗ್ರಾಫರ್

ಚಿತ್ರಕಲೆ ಮಾದರಿಯಲ್ಲಿ ಮಾನವ ಜೀವಮಾನದ ರಸನಿಮಿಷಗಳನ್ನು ಚಿತ್ರಗಳಲ್ಲಿ ಸೆರೆಹಿಡಿಯುವವರು ಛಾಯಾಗ್ರಾಹಕರು. ಸಂವಹನ ಕ್ಷೇತ್ರದ ಸಂಪರ್ಕ ತಂತುವಾಗಿ ಮಾಧ್ಯಮ, ಫ್ಯಾಷನ್, ಡಿಜಿಟಲ್, ಮಾಡರ್ನ್ ವಲಯದ ರಾಯಭಾರಿಯಾಗಿ ಇವರ ಕಾರ್ಯ ದೊಡ್ಡದು. ಛಾಯಾಚಿತ್ರದಲ್ಲಿ ಫೋಟೋ ಜರ್ನಲಿಸ್ಟ್, ಕಮರ್ಷಿಯಲ್ ಫೋಟೋಗ್ರಫಿ, ಫ್ಯಾಷನ್, ಫುಡ್, ಸೈಂಟಿಫಿಕ್, ವೈಲ್ಡ್‌ಲೈಫ್... ಹೀಗೆ ವಿವಿಧ ಮಾದರಿಗಳಿವೆ.

ಪಿಯುಸಿ ಪೂರೈಸಿದ ಬಳಿಕ ಅನ್ವಯಿಕ ಕಲೆ (ಅಪ್ಲೈಡ್ ಆರ್ಟ)ಯಲ್ಲಿ ಫೋಟೋಗ್ರಫಿ ಅಥವಾ ಎನ್‌ಐಡಿಯಲ್ಲಿ ಛಾಯಾಚಿತ್ರಗ್ರಹಣದ ಪದವಿಯನ್ನು ವ್ಯಾಸಂಗ ಮಾಡಿ ಫೋಟೋಗ್ರಾಫರ್ ಆಗಬಹುದು. ಅಥವಾ ಮಾಸ್ ಕಮ್ಯೂನಿಕೇಷನ್ ವಿದ್ಯಾಭ್ಯಾಸದೊಂದಿಗೆ ಫೋಟೋಗ್ರಫಿ ಕೋರ್ಸ್ ಮಾಡಿಯೂ ಫೋಟೋಗ್ರಾಫರ್ ಆಗಬಹುದು.

ಇದರ ಜತೆಗೆ ಕ್ಯಾಮರಾ, ಲೆನ್ಸ್‌ಗಳ ಬಗ್ಗೆ ತಿಳುವಳಿಕೆ; ವಿಜುಯಲ್ ಫ್ರೇಮ್, ಡೈರೆಕ್ಷನ್, ಬೆಳಕು-ನೆರಳುಗಳ ಅರಿವು; ಸಹನೆ, ದೃಶ್ಯ ಮತ್ತು ಶ್ರವ್ಯ ಮಾಧ್ಯಮ ಕುರಿತ ಆಸಕ್ತಿ ಅಗತ್ಯ.

ಅವಕಾಶಗಳು

ಪತ್ರಿಕೆಗಳು ಮತ್ತು ಟಿವಿ ಕಾರ್ಯಾಲಯಗಳು, ಸ್ಟುಡಿಯೋಗಳು, ಮುದ್ರಣ ವಲಯ, ಜಾಹೀರಾತು ಏಜೆನ್ಸಿಗಳು, ಕೈಗಾರಿಕಾ ಘಟಕಗಳು, ವೈದ್ಯಕೀಯ ಸಂಸ್ಥೆಗಳು, ಎನ್‌ಜಿಒಗಳು, ಫ್ರೀಲ್ಯಾನ್ಸ್, ಫೋಟೋಗ್ರಫಿ ಇತ್ಯಾದಿ.

ಕಾಲೇಜುಗಳು

- ಗವರ್ನ್‌ಮೆಂಟ್ ಫಿಲ್ಮ್ ಆ್ಯಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್, ಬೆಂಗಳೂರು.
- ಜೆಡಿ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ, ಬೆಂಗಳೂರು.
- ಐಸಿಎಟಿ ಡಿಸೈನ್ ಆ್ಯಂಡ್ ಮೀಡಿಯಾ ಕಾಲೇಜು, ಬೆಂಗಳೂರು.
- ಸಿಇಆರ್‌ಒ ವೆಲ್ಲಿಸ್ಕೂಲ್ ಆಫ್ ಫಿಲ್ಮ್ ಆ್ಯಂಡ್ ಟೆಲಿವಿಷನ್, ಬೆಂಗಳೂರು.
- ಐಐಎಫ್‌ಎ ಮಲ್ಟಿಮೀಡಿಯಾ ಕಾಲೇಜು, ಬೆಂಗಳೂರು.

ಬಾಡಿಗಾರ್ಡ್

ಪ್ರತಿಷ್ಠಿತ ವ್ಯಕ್ತಿಗಳ ಜೀವಭದ್ರತೆ ಮತ್ತು ಆತ್ಮರಕ್ಷಣೆಯನ್ನು ಮಾಡುವವರು ಬಾಡಿಗಾರ್ಡ್‌ಗಳು. ಗಣ್ಯ ವ್ಯಕ್ತಿಗಳ ಸಹಚರರಾಗಿದ್ದುಕೊಂಡು ಆಹಾರ-ವಿಹಾರ, ಪರ್ಯಟನೆಯ ವೇಳೆ ಭದ್ರತೆ ಒದಗಿಸುವುದು ಇವರ ಕೆಲಸ.

ಪಿಯುಸಿ ಜತೆಯಲ್ಲಿ ಎನ್‌ಸಿಸಿಯಲ್ಲಿ ಭಾಗವಹಿಸಿ, ಪದವಿಯಲ್ಲಿ ಸಾಮಾನ್ಯ ವ್ಯಾಸಂಗದ ಜತೆ ಎನ್‌ಸಿಸಿ ಪೂರೈಸಿ, ಬಾಡಿಗಾರ್ಡ್ ಟ್ರೈನಿಂಗ್ ಪಡೆದುಕೊಳ್ಳಬೇಕು. ಅಥವಾ ಎನ್‌ಸಿಒ ಅಥವಾ ಕಾನ್‌ಸ್ಟೆಬಲ್ ತರಬೇತಿ ಮತ್ತು ಬಾಡಿಗಾರ್ಡ್ ಟ್ರೈನಿಂಗ್ ಪಡೆದರೂ ಅಂಗರಕ್ಷಕರಾಗಬಹುದು. ಪ್ಯಾರಾಮಿಲಿಟರಿ ಸರ್ವಿಸ್ ತರಬೇತಿಯ ಬಳಿಕ ಅಂಗರಕ್ಷಕ ತರಬೇತಿ ಹೊಂದಿಯೂ ಬಾಡಿಗಾರ್ಡ್ ಆಗಬಹುದು.

ಇದಕ್ಕೆ ದೇಹದ ತೂಕ, ಉದ್ದಳತೆ ಜೊತೆ ಫಿಟ್ನೆಸ್, ವರ್ಕೌಟ್ ಅಗತ್ಯ. ಕರಾಟೆ, ಮಾರ್ಷಲ್ ಆರ್ಟ್ (ಯುದ್ಧಕಲೆ), ವೆಪನ್ ಟ್ರೈನಿಂಗ್ (ಶಸ್ತ್ರ ಪ್ರಯೋಗ ತರಬೇತಿ) ಅವಶ್ಯ. ಮೂರು-ನಾಲ್ಕು ಭಾಷೆಗಳು ಗೊತ್ತಿರಬೇಕು. ಸಮಸ್ಯೆ ಎದುರಿಸುವ ನಾಯಕತ್ವ ಗುಣ ಮತ್ತು ಸಂವಹನ ಕೌಶಲ ಅಗತ್ಯ. ವಾಹನ ಚಾಲನೆ, ಈಜು ತಿಳಿದಿರಬೇಕು. ನಿಗಾ ವಹಿಸುವ ಸಾಮರ್ಥ್ಯ, ಪ್ರಥಮ ಚಿಕಿತ್ಸಾ ಕೌಶಲವಿರಬೇಕು.

ಅವಕಾಶಗಳು

ಸರಕಾರಿ ವಲಯ, ರಾಜಕೀಯ ಪಕ್ಷಗಳು, ದೊಡ್ಡ ಮಟ್ಟದ ಕಂಪೆನಿಗಳು, ಪ್ರತಿಷ್ಠಿತ ವ್ಯಕ್ತಿಗಳಲ್ಲಿ ಸೇವಾವಕಾಶ.

ಕಾಲೇಜುಗಳು

- ಗರುಡ ಸೆಕ್ಯೂರಿಟಿ ಸರ್ವೀಸ್, ಬೆಂಗಳೂರು.
- ನ್ಯಾಷನಲ್ ಮಾರ್ಷಲ್ ಆರ್ಟ್ ಆ್ಯಂಡ್ ಫಿಟ್ನೆಸ್ ಅಕಾಡೆಮಿ, ಬೆಂಗಳೂರು.
- ವಿಐಪಿ ಬಾಡಿಗಾರ್ಡ್ ಟ್ರೈನಿಂಗ್ ಸರ್ವೀಸ್, 5 ಫೋರ್ಸ್ ಸೆಕ್ಯೂರಿಟಿ ಬೆಂಗಳೂರು.
- ಅನು ಸೆಕ್ಯೂರಿಟಿ ಆ್ಯಂಡ್ ಮ್ಯಾನ್ ಪವರ್ ಸರ್ವೀಸ್, ಬೆಂಗಳೂರು.

ಕ್ರಿಮಿನಾಲಜಿಸ್ಟ್

ಅಪರಾಧಕೃತ್ಯಗಳಲ್ಲಿ ಬೆರಳಚ್ಚು, ಕೃತ್ಯ ನಡೆದ ಜಾಗದ ಪರಿಸ್ಥಿತಿ, ಕೃತ್ಯ ಹೇಗೆ ನಡೆದಿರಬಹುದೆಂಬ ಕಲ್ಪನೆ, ಅಪರಾಧಿಯ ಮೂಲ ಉದ್ದೇಶ (ಮೋಟಿವ್), ಬಳಸಲಾದ ಶಸ್ತ್ರಾಸ್ತ್ರ (ಬಂದೂಕು ಇತ್ಯಾದಿ) ಹೀಗೆ ಪ್ರತಿಯೊಂದನ್ನು ಸೂಕ್ಷ್ಮವಾಗಿ ಗಮನಿಸಿ ಆರಕ್ಷಕರು ತೆಗೆದುಕೊಳ್ಳುವ ನಿರ್ಧಾರಗಳ ನೀತಿ ನಿರೂಪಣೆ ಮಾಡುವವರು ಕ್ರಿಮಿನಾಲಜಿಸ್ಟ್‌ಗಳು ಅಥವಾ ಅಪರಾಧಶಾಸ್ತ್ರಜ್ಞರು.

ಕ್ರಿಮಿನಾಲಜಿಯು ಮನಃಶಾಸ್ತ್ರ (ಸೈಕಾಲಜಿ), ಮಾನವ ಶಾಸ್ತ್ರ (ಆ್ಯಂಥ್ರೋಪಾಲಜಿ), ಜನಸಂಖ್ಯಾ ವಿಜ್ಞಾನ (ಡೆಮಾಗ್ರಫಿ), ಅಂಕಿ-ಅಂಶ ವ್ಯಾಸಂಗ ಶಾಸ್ತ್ರ (ಸ್ಟಾಟಿಸ್ಟಿಕ್ಸ್) ಹಾಗೂ ಇತರ ಅನೇಕ ವಿಷಯಗಳನ್ನು ಒಳಗೊಂಡಿದೆ.

ಅಪರಾಧಶಾಸ್ತ್ರಜ್ಞರಾಗಬಯಸುವ ವಿದ್ಯಾರ್ಥಿಗಳು ಪಿಯುಸಿಯಲ್ಲಿ ಸಮಾಜಶಾಸ್ತ್ರ (ಸೋಷಿಯಾಲಜಿ), ಮನಃಶಾಸ್ತ್ರ ಓದಿ ಅದನ್ನು ಪದವಿಯಲ್ಲೂ ಮುಂದುವರಿಸಬೇಕು. ಜತೆಗೆ ಔಷಧಿಗಳ ಬಗ್ಗೆ ತಿಳುವಳಿಕೆ ಪಡೆಯಬೇಕು. ಸ್ನಾತಕೋತ್ತರ ಪದವಿಯಲ್ಲಿ ಕ್ರಿಮಿನಾಲಜಿ ವಿಷಯವನ್ನು ಅಭ್ಯಾಸಮಾಡಿ ಅಪರಾಧಶಾಸ್ತ್ರಜ್ಞರಾಗಬಹುದು. ಮತ್ತೊಂದು ವಿಧದಲ್ಲಿ ಪಿಯುಸಿಯಲ್ಲಿ ಯಾವುದೇ ವಿಷಯವನ್ನು ಅಭ್ಯಸಿಸಿ ಎಲ್‌ಎಲ್‌ಬಿ ಪದವಿ ಪಡೆದು, ಸ್ನಾತಕೋತ್ತರ ಪದವಿಯಲ್ಲಿ ಕ್ರಿಮಿನಾಲಜಿ ಅಭ್ಯಾಸ ಮಾಡಿಯೂ ಗುರಿ ಸಾಧಿಸಬಹುದು.

ಕಾಯ್ದೆ, ಸೆಕ್ಷನ್‌ಗಳ ಬಗ್ಗೆ ತಿಳುವಳಿಕೆ, ಮಾನವ ಸಂಬಂಧ, ನಡಾವಳಿ/ರೂಢಿ/ಪದ್ಧತಿ, ಜಾತಿ ಪದ್ಧತಿ, ಮಾನವ ಗುಣಾವಗುಣಗಳ ವಿಶ್ಲೇಷಣಾ ಜ್ಞಾನ, ವಿಷಯ, ಪರಿಸ್ಥಿತಿ, ವಾತಾವರಣಗಳನ್ನು ಅರಿಯುವ ಗುಣ, ಅಪರಾಧಗಳ ಮೂಲ, ಪ್ರಾಕೃತಿಕ ಮತ್ತು ನೈಜ ಕಾರಣ ತಿಳಿಯುವ ಚಾಣಾಕ್ಷತೆ, ಅಪರಾಧಗಳ ನಡೆಯನ್ನು ತಿಳಿಯಲು ಬೇಕಾದ ಪರಿಕರಗಳ ಬಳಕೆ ಬಗ್ಗೆ ಅರಿವು; ಕೃತ್ಯದಲ್ಲಿ ವಿಷ, ವಿಷಾಹಾರ ಮತ್ತು ರಾಸಾಯನಿಕ ವಸ್ತುಗಳ ಬಳಕೆ ಬಗ್ಗೆ ತಿಳುವಳಿಕೆ; ಮೊಬೈಲ್, ಗಣಕ ಸೇರಿದಂತೆ ತಾಂತ್ರಿಕ ವಿಷಯಗಳ ಬಗೆಗಿನ ಅರಿವು, ಯಾಂತ್ರಿಕ ಪರಿಕರಗಳ ಬಗ್ಗೆ ತಿಳುವಳಿಕೆ ಅಗತ್ಯ.

ಅವಕಾಶಗಳು

ಪೊಲೀಸ್ ಇಲಾಖೆ, ತನಿಖಾ ಇಲಾಖೆ, ತನಿಖೆ/ತಪಾಸಣೆ ಏಜೆನ್ಸಿಗಳು, ಕಾನೂನು ಸಂಸ್ಥೆಗಳು, ಜೈಲು ಮತ್ತು ರಿಮ್ಯಾಂಡ್ ಹೋಮ್, ಕರೆಕ್ಷನಲ್ ಹೌಸ್‌ಗಳು, ಸಮಾಜ ಕಲ್ಯಾಣ ಸಂಸ್ಥೆಗಳು, ಎನ್‌ಜಿಒಗಳು.

ಕಾಲೇಜುಗಳು

- ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
- ಮೈಸೂರು ವಿಶ್ವವಿದ್ಯಾಲಯ, ಮೈಸೂರು.
- ನ್ಯಾಷನಲ್ ಫಾರೆನ್ಸಿಕ್ ಸರ್ವೀಸ್ ಯೂನಿವರ್ಸಿಟಿ ಗಾಂಧಿನಗರ ಕ್ಯಾಂಪಸ್ ಗುಜರಾತ್.
- ಇನ್‌ಸ್ಟಿಟ್ಯೂಟ್ ಆಫ್ ಡಿಸ್ಟೆನ್ಸ್ ಎಜ್ಯುಕೇಷನ್, ಮದ್ರಾಸ್ ವಿವಿ, ಚೇಪಾಕ್, ಚೆನ್ನೈ.
- ರಾಷ್ಟ್ರೀಯ ರಕ್ಷಾ ಯೂನಿವರ್ಸಿಟಿ, ಗಾಂಧಿನಗರ, ಅಹಮ್ಮದಾಬಾದ್.

ಡಿಸ್ಕ್ ಜಾಕಿ

ಯುವಕರಿಗಾಗಿ ಅಬ್ಬರದ ಸಂಗೀತ ಮಾದರಿಗಳನ್ನು ಸೃಷ್ಟಿಸುವ, ಒಂದೇ ಹಾಡನ್ನು ವಿವಿಧ ರೀತಿಯಲ್ಲಿ ರಿಮಿಕ್ಸ್ ಮಾಡಿ ಕೇಳಿಸುತ್ತ ಮನೋರಂಜನೆ ನೀಡುವ ಕೆಲಸ ಡಿಸ್ಕ್ ಜಾಕಿಗಳದ್ದು. ಇವರು ಶ್ರವ್ಯ ಕ್ಷೇತ್ರದಲ್ಲಿ ನಿರೂಪಕರಾಗಿಯೂ ಕಾರ್ಯ ನಿರ್ವಹಿಸುತ್ತಾರೆ.

ಯಾವುದೇ ವಿಷಯದಲ್ಲಿ ಪಿಯುಸಿ ಮುಗಿಸಿದ ಬಳಿಕ ಡಿಜೆ ಪ್ರೊಫೆಷನಲ್ ಟ್ರೈನಿಂಗ್ ಕೋರ್ಸ್ ಮಾಡಿಕೊಳ್ಳಬಹುದು.

ಇದರೊಂದಿಗೆ ಶಾಸ್ತ್ರೀಯ, ಪಾಶ್ಚಾತ್ಯ ಸಂಗೀತ ಜ್ಞಾನ, ಧ್ವನಿ ಸಂಕಲನ ತಂತ್ರಾಂಶಗಳ ಬಳಕೆ, ಸಂಗೀತ ವಾದ್ಯಗಳ ಬಗ್ಗೆ ತಿಳುವಳಿಕೆ, ತಾಳ-ಲಯದ ಬಗ್ಗೆ ಕೌಶಲ ಅಗತ್ಯ.

ಅವಕಾಶಗಳು

ಬಾಂಕ್ವೆಟ್ ಸಭಾಂಗಣಗಳು, ಕ್ಲಬ್‌ಗಳು, ಡಿಸ್ಕೋಗಳು, ಈವೆಂಟ್ ಕಂಪೆನಿಗಳು, ರೇಡಿಯೋ ಕೇಂದ್ರಗಳಲ್ಲಿ ಅವಕಾಶ.

ಕಾಲೇಜುಗಳು

- ಬೀಟ್‌ವಾಕ್ಸ್ ಸ್ಟುಡಿಯೋ ಸ್ಟೇಷನ್, ಬೆಂಗಳೂರು.
- ಪಾರ್ಟಿ ಮ್ಯಾಪ್ ಡಿಜೆ ಅಕಾಡೆಮಿ, ಬೆಂಗಳೂರು.
- ಆಡಿಯೋ ಲೈಫ್: ಸ್ಕೂಲ್ಸ್ ಆಫ್ ಸೌಂಡ್ ಎಂಜಿನಿಯರಿಂಗ್, ಬೆಂಗಳೂರು.
- ಸ್ಕ್ರ್ಯಾಚ್ ಡಿಜೆ ಅಕಾಡೆಮಿ, ಬೆಂಗಳೂರು.

ಮಾಡೆಲ್

ವಿವಿಧ ಮಾರ್ಕೆಟಿಂಗ್ ಕಂಪೆನಿಗಳು ಜಾಹೀರಾತಿಗಾಗಿ, ಸಿನೆಮಾ ಕ್ಷೇತ್ರದವರು ಉತ್ತಮ ನಟನೆಗಾಗಿ ಅಪೇಕ್ಷಿಸುವುದು ಸುರೂಪ ಸೌಂದರ್ಯ ಉಳ್ಳ ಮಾಡೆಲ್‌ಗಳನ್ನು. ಫ್ಯಾಷನ್ ಕ್ಷೇತ್ರದಲ್ಲಿ ಇವರಿಗೆ ಹೆಚ್ಚು ಬೇಡಿಕೆ.

ಯಾವುದೇ ವಿಷಯದಲ್ಲಿ ಪಿಯುಸಿ ಅಥವಾ ಪದವಿ ಪೂರೈಸಿದ ಬಳಿಕ ಅಪಿಯರೆನ್ಸ್/ಫಿಟ್ನೆಸ್ ಮೂಲಕ, ಛಾಯಾಗ್ರಾಹಕರ ಮೂಲಕ ಪೋರ್ಟ್‌ಫೋಲಿಯೋ ತಯಾರಿಸಿಕೊಂಡು ಮಾಡೆಲಿಂಗ್ ಸ್ಪರ್ಧೆಗಳಲ್ಲಿ ಪ್ರವೇಶ ಪಡೆದು, ತರಬೇತಿ ಹೊಂದಿದರೆ ಮಾಡೆಲ್ ಆಗಬಹುದು. ಮತ್ತೊಂದು

ಮಾರ್ಗದಲ್ಲಿ ಮಾಡೆಲಿಂಗ್ ಡಿಪ್ಲೊಮಾ ಕೋರ್ಸ್ ಮಾಡಿಯೂ ಮಾಡೆಲ್ ಆಗಬಹುದು. ಇದರಲ್ಲಿ ಪ್ರಾಡಕ್ಟ್, ರ್‍ಯಾಂಪ್ ಇತ್ಯಾದಿ ಮಾಡೆಲಿಂಗ್ ಪ್ರಕಾರಗಳಿವೆ.

ಇದರ ಜತೆಗೆ ಸೌಂದರ್ಯವರ್ಧಕಗಳ ಬಗ್ಗೆ ಜ್ಞಾನ, ಡ್ರೆಸ್ ಸೆನ್ಸ್ (ಉಡುಗೆ-ತೊಡುಗೆ ಕುರಿತ ಜ್ಞಾನ), ದೈಹಿಕ ಸೌಂದರ್ಯಕ್ಕಾಗಿ ವ್ಯಾಯಾಮ, ಯೋಗ, ಜಿಮ್ ಬಳಕೆ, ಆಂಗ್ಲ ಮತ್ತು ಮೂರು- ನಾಲ್ಕು ಭಾಷೆಗಳ ಜ್ಞಾನ, ಸಭಾ ಮರ್ಯಾದೆ ಪಾಲಿಸುವ ಸಂಯಮ ಇತ್ಯಾದಿ ಕೌಶಲಗಳು ಇರಬೇಕು.

ಅವಕಾಶಗಳು

ಫ್ಯಾಷನ್ ಹೌಸ್‌ಗಳು, ಜಾಹೀರಾತು ಏಜೆನ್ಸಿಗಳು, ಫ್ಯಾಷನ್ ಡಿಸೈನರ್, ಮಾಡೆಲಿಂಗ್ ವಲಯ, ಸೌಂದರ್ಯ ಸ್ಪರ್ಧೆಗಳು, ವಿಶೇಷ ಕಾರ್ಯಕ್ರಮಗಳಲ್ಲಿ ಅವಕಾಶಗಳಿವೆ.

ಕಾಲೇಜುಗಳು

- ಎಂಫಿಲ್ ಇಂಟರ್‌ನ್ಯಾಷನಲ್ ಕಾಲೇಜು, ಜಯನಗರ, ಬೆಂಗಳೂರು.
- ಆರ್ಕೆ ಫಿಲ್ಮ್ ಆ್ಯಂಡ್ ಮೀಡಿಯಾ ಅಕಾಡೆಮಿ, ಕರೋಲ್ ಬಾಗ್, ದೆಹಲಿ.
- ಸೆಂಟರ್ ಫಾರ್ ರಿಸರ್ಚ್ ಇನ್ ಆರ್ಟ್ ಆಫ್ ಫಿಲ್ಮ್ ಆ್ಯಂಡ್ ಟೆಲಿವಿಷನ್, ದೆಹಲಿ.
- ಪೆರೆಲ್ ಅಕಾಡೆಮಿ ಅಂಧೇರಿ (ಪೂರ್ವ)ಮುಂಬಯಿ.

ರೇಡಿಯೋ, ಟಿ.ವಿ. ಆ್ಯಂಕರ್

ಸ್ಪಷ್ಟ ಮಾತುಗಾರಿಕೆ, ಉತ್ತಮ ಧ್ವನಿ, ವಿಮರ್ಶಾತ್ಮಕ ಗುಣದೊಂದಿಗೆ ಉತ್ತಮ ವ್ಯಕ್ತಿತ್ವ, ಆಂಗಿಕ ಸೌಂದರ್ಯ ಹೊಂದಿರುವವರು ರೇಡಿಯೋ ಅಥವಾ ಟಿವಿ ನಿರೂಪಕರು. ಇವರಿಗೆ ಸಾಮಾನ್ಯ ಜ್ಞಾನ ಮತ್ತು ಪ್ರಚಲಿತ ವಿದ್ಯಮಾನಗಳ ಬಗ್ಗೆ ತಿಳುವಳಿಕೆಯಿರುತ್ತದೆ.

ಯಾವುದೇ ವಿಷಯದಲ್ಲಿ ಪಿಯುಸಿ ಅಥವಾ ಪದವಿ ಪೂರೈಸಿದ ಬಳಿಕ ಪಬ್ಲಿಕ್ ಸ್ಪೀಕಿಂಗ್/ಆ್ಯಂಕರಿಂಗ್ ಕೋರ್ಸ್ ಮಾಡಿದರೆ ನಿರೂಪಕರಾಗಬಹುದು ಅಥವಾ ಪತ್ರಿಕೋದ್ಯಮ ಪದವಿಯನ್ನು ಪಡೆದು ಟಿವಿ, ರೇಡಿಯೋ ಕೇಂದ್ರಗಳಲ್ಲಿ ಇಂಟರ್ನ್‌ಶಿಪ್ ಮಾಡಿಯೂ ಗುರಿ ಸಾಧಿಸಬಹುದು.

ಧ್ವನಿ, ಮಾತುಗಾರಿಕೆ ಬಗ್ಗೆ ಎಚ್ಚರಿಕೆ; ಉತ್ತಮ ಸಂವಹನಶಕ್ತಿ, ಪ್ರಚಲಿತ ವಿದ್ಯಮಾನಗಳ ಬಗ್ಗೆ ಅರಿವು ಗ್ರಂಥಗಳ ಓದು, ಸಾಮಾನ್ಯ ಜ್ಞಾನ ಮುಖ್ಯ. ದೈಹಿಕ ಸೌಂದರ್ಯಕ್ಕೆ ಅಗತ್ಯವಾದ ವ್ಯಾಯಾಮ, ಯೋಗ, ಸೌಂದರ್ಯವರ್ಧಕಗಳ ಬಗೆಗಿನ ಅರಿವು ಅಗತ್ಯ. ಸಮೂಹದಲ್ಲಿ ಕಾರ್ಯನಿರ್ವಹಿಸುವ, ಜವಾಬ್ದಾರಿಯನ್ನು ಹೊರುವ ಸಾಮರ್ಥ್ಯ ಇರಬೇಕು. ಒತ್ತಡದಲ್ಲಿ ಕಾರ್ಯನಿರ್ವಹಿಸಲು ತಯಾರಿರಬೇಕು.

ಅವಕಾಶಗಳು

ರೇಡಿಯೋ ಕೇಂದ್ರಗಳು, ಟಿವಿ ಚಾನೆಲ್‌ಗಳು, ಕಾರ್ಯಕ್ರಮಗಳ ನಿರೂಪಕರಾಗಿ, ಹಾಸ್ಯ, ಸಂಗೀತ, ಡ್ಯಾನ್ಸ್ ಇತ್ಯಾದಿ ರಿಯಾಲಿಟಿ ಶೋಗಳ ನಿರೂಪಕರಾಗಿ ಕಾರ್ಯನಿರ್ವಹಿಸಬಹುದು.

ಕಾಲೇಜುಗಳು

- ನ್ಯಾಷನಲ್ ಸ್ಕೂಲ್ ಆಫ್ ಜರ್ನಲಿಸಂ, ಬೆಂಗಳೂರು.
- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಜರ್ನಲಿಸಂ ಆ್ಯಂಡ್ ನ್ಯೂಮೀಡಿಯಾ, ಬೆಂಗಳೂರು.
- ಡಬ್ಲ್ಯೂಎಲ್‌ಸಿ ಕಾಲೇಜ್ ಇಂಡಿಯಾ, ಬೆಂಗಳೂರು.
- ಸ್ಕೂಲ್ ಆಫ್ ಕಮ್ಯೂನಿಕೇಷನ್, ಮಣಿಪಾಲ್ ವಿಶ್ವವಿದ್ಯಾಲಯ, ಮಣಿಪಾಲ.
- ಆಳ್ವಾಸ್ ಕಾಲೇಜು, ಮೂಡಬಿದಿರೆ, ಮಂಗಳೂರು.

ಸೈಬರ್ ಲಾಯರ್

ದೇಶದ ಯಾವುದೋ ಭಾಗದಲ್ಲಿ ಕುಳಿತು ಅಂತರ್ಜಾಲದ ಮುಖಾಂತರ ನಡೆಸುವ ಅಪರಾಧ, ಎಸ್‌ಎಂಎಸ್ ಒಟಿಪಿ ಮೂಲಕ ದರೋಡೆ, ಕರೆ ಮಾಡಿ 'ಗಿಫ್ಟ್ ಬಂದಿದೆ' ಎಂದು ತಮ್ಮ ಖಾತೆಗಳಿಗೆ ಹಣ ಹಾಕಿಸಿಕೊಳ್ಳುವ, ಬ್ಯಾಂಕ್ ಖಾತೆಗಳನ್ನು ಹ್ಯಾಕ್ ಮಾಡುವ ಪ್ರಕರಣಗಳನ್ನು ಹಾಗೂ ಇತರ ವ್ಯಾಜ್ಯಗಳನ್ನು ಇತ್ಯರ್ಥಪಡಿಸುವವರು ಸೈಬರ್ ಲಾಯರ್‌ಗಳು. ಇವರು ಸೈಬರ್ ಕಾಯ್ದೆಗಳನ್ನು ಬಳಸಿ ಅಪರಾಧಿಗೆ ಶಿಕ್ಷೆಯಾಗುವಂತೆ ಮಾಡುತ್ತಾರೆ.

ಪಿಯುಸಿ ಬಳಿಕ ಸಿಎಲ್ಎಟಿ, ಎಲ್ಎಸ್ಎಟಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪದವಿಯಲ್ಲಿ ಎಲ್ಎಲ್‌ಬಿ ಮತ್ತು ಸ್ನಾತಕೋತ್ತರ ಪದವಿ

(ಎಲ್‌ಎಲ್‌ಎಂ) ಅಥವಾ ಕಾನೂನಿನ ವಿಷಯದಲ್ಲಿ ಡಿಪ್ಲೊಮಾ ಮಾಡಿಕೊಳ್ಳಬೇಕಾಗುತ್ತದೆ. ಅಥವಾ ಎಲ್‌ಎಲ್‌ಬಿ (ಮೂರು ವರ್ಷ), ಎಲ್‌ಎಲ್‌ಎಂ (ಎರಡು ವರ್ಷ) ಪೂರೈಸಿ ಸೈಬರ್ ಲಾಯರ್ ಆಗಬಹುದು.

ಇದರ ಜತೆಗೆ ಸೈಬರ್, ಕಾಯ್ದೆಗಳ ಬಗ್ಗೆ ತಿಳುವಳಿಕೆ, ಸೈಬರ್ ಅಪರಾಧಗಳ ಬಗೆಗಿನ ಜ್ಞಾನ, ಉತ್ತಮ ಕಂಪ್ಯೂಟರ್ ಜ್ಞಾನ, ವಿಮರ್ಶಾತ್ಮಕ ಗುಣ, ಸಮಸ್ಯೆಯನ್ನು ಎದುರಿಸುವ ಸಾಮರ್ಥ್ಯ ಅಗತ್ಯ.

ಅವಕಾಶಗಳು

ಆದಾಯ ತೆರಿಗೆ (ಐಟಿ) ವಲಯ, ಕನ್ಸಲ್ಟೆನ್ಸಿ ಘಟಕಗಳು, ಬ್ಯಾಂಕುಗಳು, ಪೊಲೀಸ್ ಮತ್ತು ಇನ್ವೆಸ್ಟಿಗೇಶನ್ ಏಜೆನ್ಸಿ, ಕಾನೂನು ವಲಯ, ವೆಬ್ ಡೆವಲಪ್‌ಮೆಂಟ್ ಕ್ಷೇತ್ರ, ಕಾರ್ಪೊರೇಟ್ ವಲಯ, ಸರಕಾರ ಮಾಹಿತಿ ಕ್ಷೇತ್ರ, ಕಾನೂನು ಕಾಲೇಜುಗಳು, ಬಹುರಾಷ್ಟ್ರೀಯ ಕಂಪೆನಿಗಳಲ್ಲಿ ಅವಕಾಶ.

ಕಾಲೇಜುಗಳು

- ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ, ಬೆಂಗಳೂರು.
- ಮಣಿಪಾಲ್ ಅಕಾಡೆಮಿ ಫಾರ್ ಹೈಯರ್ ಎಜುಕೇಷನ್, ಮಣಿಪಾಲ.
- ಕರ್ನಾಟಕ ಸ್ಟೇಟ್ ಲಾ ಯೂನಿವರ್ಸಿಟಿ, ಹುಬ್ಬಳ್ಳಿ.
- ಎಂ.ಎಸ್. ರಾಮಯ್ಯ ಕಾಲೇಜ್ ಆಫ್ ಲಾ, ಬೆಂಗಳೂರು.
- ಎಸ್‌ಡಿಎಂ ಲಾ ಕಾಲೇಜು, ಮಂಗಳೂರು.
- ಸರ್ವೋದಯ ಲಾ ಕಾಲೇಜ್, ಬೆಂಗಳೂರು.

ಬೇಕರ್

ಕೇಕ್, ಬ್ರೆಡ್, ಕುಕೀಸ್, ಬಿಸ್ಕೆಟ್‌ಗಳನ್ನು ತಯಾರಿಸಿ ಇತರ ಬೇಕರಿಗಳಿಗೆ ರವಾನೆ ಮಾಡುತ್ತಾ ಚಿಲ್ಲರೆ ವ್ಯಾಪಾರ ಮಾಡುವವರೇ ಬೇಕರ್‌ಗಳು. ಇವರು ಹಲವು ಬಗೆಯ ಸಿಹಿ ತಿನಿಸುಗಳು ವಿವಿಧ ಅಡುಗೆಗಳನ್ನು ತಯಾರಿಸಿಕೊಡುವುದುಂಟು. ಮದುವೆ ಸಮಾರಂಭ, ವಿಶೇಷ ಔತಣ ಕೂಟದಲ್ಲಿ ಇವರ ಪಾತ್ರ ಹಿರಿದು.

ಪಿಯುಸಿ ಬಳಿಕ ಬೇಕಿಂಗ್ ಆ್ಯಂಡ್ ಕನ್ಫೆಕ್ಷನರಿ ಡಿಪ್ಲೊಮಾ ಮಾಡಿ ಕ್ರಾಫ್ಟ್‌ಮನ್ ಅಪ್ರೆಂಟಿಸ್ (ತರಬೇತಿ) ಕೋರ್ಸ್ ಬಳಿಕ ಬೇಕರ್ ಆಗಬಹುದು. ಅಲ್ಲದೆ ಪದವಿಯಲ್ಲಿ ಹೋಟೇಲ್ ಮ್ಯಾನೇಜ್‌ಮೆಂಟ್ ಕೋರ್ಸನ್ನು ಅಭ್ಯಸಿಸಿ, ಕ್ರಾಫ್ಟ್‌ಮೆನ್ ತರಬೇತಿ ಪಡೆದೂ ಗುರಿ ಸಾಧಿಸಬಹುದು.

ಪಾಕಶಾಸ್ತ್ರದ ಬಗೆಗಿನ ಜ್ಞಾನ, ಬೇಕಿಂಗ್ ಪ್ರಾವೀಣ್ಯ, ಉತ್ತಮ ಸಂವಹನ ಕೌಶಲ, ಕ್ಯುಲೀನರಿ (ಪಾಕ) ಕಲೆಯಲ್ಲಿ ಆಸಕ್ತಿ, ವ್ಯವಸ್ಥಾಪನ ಸಾಮರ್ಥ್ಯ, ಒತ್ತಡದಲ್ಲಿ ಕಾರ್ಯನಿರ್ವಹಿಸುವ, ಸಮಯಕ್ಕೆ ಸರಿಯಾಗಿ ತಿನಿಸುಗಳನ್ನು ತಯಾರಿಸುವ ಶಕ್ತಿ ಅತ್ಯಗತ್ಯ.

ಅವಕಾಶಗಳು

ಬೇಕಿಂಗ್ ವಸ್ತುಗಳ ಉತ್ಪಾದನಾ ಘಟಕ; ರಿಟೇಲ್, ಸ್ಪೆಷಲಿಸ್ಟ್ ಬೇಕರಿಗಳು; ಹೊಟೇಲ್ ಮತ್ತು ರೆಸ್ಟೋರೆಂಟ್‌ಗಳು, ಕ್ಯಾಟರರ್ ಮತ್ತು ಕ್ಯಾಂಟೀನ್‌ಗಳು, ಫಾಸ್ಟ್‌ಫುಡ್ ಮಳಿಗೆಗಳು, ಇಂಟರ್‌ನ್ಯಾಷನಲ್ ಫುಡ್ ಸರ್ವೀಸ್ ಪ್ರೊವೈಡರ್ ಘಟಕ, ಏರ್‌ಲೈನ್ ಕ್ಯಾಟರರ್.

ಕಾಲೇಜುಗಳು

- ಲಾವೊನ್ ಅಕಾಡೆಮಿ ಆಫ್ ಬೇಕಿಂಗ್ ಸೈನ್ಸ್ ಆ್ಯಂಡ್ ಪೇಸ್ಟ್ರಿ ಆರ್ಟ್ಸ್, ಬೆಂಗಳೂರು.
- ಇನ್‌ಸ್ಟಿಟ್ಯೂಟ್ ಆಫ್ ಹೊಟೇಲ್ ಮ್ಯಾನೇಜ್‌ಮೆಂಟ್ (ಐಎಚ್‌ಎಂ), ಬೆಂಗಳೂರು.
- ಇನ್‌ಸ್ಟಿಟ್ಯೂಟ್ ಆಫ್ ಬೇಕಿಂಗ್ ಟೆಕ್ನಾಲಜಿ ಆ್ಯಂಡ್ ವ್ಯಾಲ್ಯೂ ಅಡಿಶನ್, ಬೆಂಗಳೂರು.
- ವೈಟ್‌ಕ್ಯಾಪ್ ಇಂಟರ್‌ನ್ಯಾಷನಲ್ ಸ್ಕೂಲ್ ಆಫ್ ಪೇಸ್ಟ್ರಿ, ಬೆಂಗಳೂರು.
- ಕುಕ್ ಆ್ಯಂಡ್ ಬೇಕ್ ಅಕಾಡೆಮಿ ದೆಹಲಿ.

ವೆಬ್ ಡಿಸೈನರ್

ಜಾಲತಾಣಗಳ ಪರದೆಯ ಮೇಲೆ ಕಾಣುವ ಚಿತ್ತಾಕರ್ಷಕ ಚಿತ್ರ, ದೃಶ್ಯ, ಚಿಕ್ಕ ಆ್ಯನಿಮೇಷನ್‌ಗಳು. ಜತೆಗೆ ಸಮಗ್ರ ಮಾಹಿತಿ ಇವೆಲ್ಲವನ್ನು, ತಂತ್ರಾಂಶಗಳ ಮೂಲಕ ಅಂತರ್ಜಾಲದಲ್ಲಿ ತುಂಬುವವರು ವೆಬ್ ಡಿಸೈನರ್‌ಗಳು. ಯಾವುದೇ ಮಾಹಿತಿಯನ್ನು ಒಮ್ಮೆಲೇ ವಿಶ್ವದ ಎಲ್ಲ ವ್ಯಕ್ತಿಗಳಿಗೆ ಹಂಚುವ ಕೆಲಸ ಇವರದು.

ವಿಜ್ಞಾನ, ಕಂಪ್ಯೂಟರ್ ವಿಷಯದಲ್ಲಿ ಪಿಯುಸಿ ಮಾಡಿ, ಪದವಿಯಲ್ಲಿ ಬಿ.ಎಸ್ಸಿ, ಬಿಇ (ಮಲ್ಟಿಮೀಡಿಯಾ, ವೆಬ್ ಡಿಸೈನಿಂಗ್) ಪೂರೈಸಿ ಸ್ನಾತಕೋತ್ತರ ಪದವಿಯಲ್ಲಿ ವೆಬ್ ಡಿಸೈನಿಂಗ್ ಕೋರ್ಸ್ ಮಾಡಿದರೆ ವೆಬ್ ಡಿಸೈನರ್ ಆಗಬಹುದು ಅಥವಾ ಯಾವುದೇ ವಿಷಯದಲ್ಲಿ ಪಿಯುಸಿ ಓದಿ ಪದವಿಯಲ್ಲಿ ಡಿಸೈನ್ ಅಥವಾ ಡಿಪ್ಲೊಮಾ ಅಭ್ಯಸಿಸಿ, ಸ್ನಾತಕೋತ್ತರ ಪದವಿಯಲ್ಲಿ ವೆಬ್ ಡಿಸೈನ್ ಮಾಡಿದರೂ ಗುರಿ ಸಾಧಿಸಬಹುದು.

ಕಂಪ್ಯೂಟರ್ ಜ್ಞಾನ, ಬಣ್ಣಗಳ ಬಳಕೆ – ವೆಬ್ ವಿನ್ಯಾಸಗಳ ಅಧ್ಯಯನ ಬಗೆಗಿನ ತಿಳುವಳಿಕೆ, ಆ್ಯನಿಮೇಷನ್ ಕುರಿತ ಜ್ಞಾನ, ಗ್ರಾಫಿಕ್, ಎಐ, ಮಲ್ಟಿಮೀಡಿಯಾ ತಂತ್ರಾಂಶಗಳ ಬಗ್ಗೆ ಅರಿವು; ಸಮಯಪಾಲನಾ ಗುಣ, ಹೊಸ ವಿಚಾರಗಳಿಗೆ ತೆರೆದುಕೊಳ್ಳುವ ಕೌಶಲ ಅಗತ್ಯ.

ಅವಕಾಶಗಳು

ಸಾಫ್ಟ್‌ವೇರ್ ಕಂಪೆನಿಗಳು, ಶೈಕ್ಷಣಿಕ ವಲಯ, ವ್ಯಾಪಾರ ಕ್ಷೇತ್ರ, ಮೀಡಿಯಾ ಏಜೆನ್ಸಿಗಳು, ಡಿಸೈನ್ ಸ್ಟುಡಿಯೋಗಳು, ಪ್ರಕಾಶಕ ವಲಯ, ಆಡಿಯೋ – ವಿಷ್ಯುವಲ್ ಮೀಡಿಯಾ ಕಂಪೆನಿಗಳು, ಮಾರ್ಕೆಟಿಂಗ್ ಕ್ಷೇತ್ರ, ಖಾಸಗಿ ಮತ್ತು ಸರಕಾರಿ ಸಂಘಟನೆಗಳಲ್ಲಿ ಅವಕಾಶ.

ಕಾಲೇಜುಗಳು

- ಐಐಎಫ್‌ಎ ಲ್ಯಾನ್‌ಕ್ಯಾಸ್ಟರ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್, ಬೆಂಗಳೂರು.
- ವೋಗ್ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್ ಆ್ಯಂಡ್ ಡಿಸೈನ್, ಬೆಂಗಳೂರು.
- ಸೃಷ್ಟಿ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್, ಡಿಸೈನ್ ಆ್ಯಂಡ್ ಟೆಕ್ನಾಲಜಿ, ಬೆಂಗಳೂರು.
- ಅರೇನಾ ಎಜುಕೇಷನ್ ಅಕಾಡೆಮಿ, ಅರೇನಾ ಆ್ಯನಿಮೇಷನ್ ಬೆಂಗಳೂರು.

• ಐಐಎಫ್‌ಎ ಮಲ್ಟಿಮೀಡಿಯಾ, ಶಿವಾಜಿನಗರ, ಬೆಂಗಳೂರು.
• ಜೆಡಿ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ, ಬೆಂಗಳೂರು.

ಡಿಜಿಟಲ್ ಮಾರ್ಕೆಟಿಂಗ್ ಮ್ಯಾನೇಜರ್

ಡಿಜಿಟಲ್ ಟೆಕ್ನಾಲಜಿ ಮೂಲಕ ಮಾರುಕಟ್ಟೆಯ ಸಾಧ್ಯತೆಗಳನ್ನು ಅರಿತು ವ್ಯಾಪಾರ ಕ್ಷೇತ್ರದ ಗುರಿಸಾಧನೆ ಮಾಡುವವರು ಡಿಜಿಟಲ್ ಮಾರ್ಕೆಟಿಂಗ್ ಮ್ಯಾನೇಜರ್‌ಗಳು. ಇವರು ಕಂಪೆನಿಗಳ ಲಾಭ-ನಷ್ಟ ನಿರ್ಧರಿಸುವ ವ್ಯವಸ್ಥಾಪಕರು.

ಯಾವುದೇ ವಿಷಯದಲ್ಲಿ ಪಿಯುಸಿ ಓದಿದ ಬಳಿಕ ಬಿ.ಎಸ್ಸಿ/ಬಿ.ಕಾಮ್/ಬಿ.ಸ್ಟ್ಯಾಟ್/ಬಿಸಿಎ ಪದವಿ ಪೂರೈಸಿ ಸ್ನಾತಕೋತ್ತರ ಪದವಿಯಲ್ಲಿ ಡಿಜಿಟಲ್ ಮಾರ್ಕೆಟಿಂಗ್ ಸಂಬಂಧಿತ ಎಂಬಿಎ, ಎಂ.ಎಸ್ಸಿ ಮತ್ತು ಡಿಪ್ಲೊಮಾ ಇನ್ ಡಿಜಿಟಲ್ ಮಾರ್ಕೆಟಿಂಗ್ ಪದವಿ ಗಳಿಸಿದರೆ ಡಿಜಿಟಲ್ ಮಾರ್ಕೆಟಿಂಗ್ ಮ್ಯಾನೇಜರ್ ಆಗಬಹುದು.

ಇದರ ಜತೆಗೆ ಅಂತರ್ಜಾಲದ ತಿಳಿವಳಿಕೆ, ಉತ್ತಮ ಸಂವಹನ ಕೌಶಲ, ಮಾರ್ಕೆಟಿಂಗ್ ಕ್ಷೇತ್ರದ ಜ್ಞಾನ, ಸಮೂಹ/ಒತ್ತಡದಲ್ಲಿ ಕಾರ್ಯನಿರ್ವಹಿಸುವ ಕಲೆ, ಸಮಸ್ಯೆಯನ್ನು ನಿವಾರಿಸುವ ಕೌಶಲ ಅತ್ಯಗತ್ಯ.

ಅವಕಾಶಗಳು

ಮಾಹಿತಿ ತಂತ್ರಜ್ಞಾನ ಕ್ಷೇತ್ರ, ಗ್ರಾಹಕರ ಜಾಲತಾಣ ಮತ್ತು ಸೋಷಿಯಲ್ ಮೀಡಿಯಾ ಜಾಲತಾಣಗಳು, ವ್ಯಾಪಾರಕ್ಷೇತ್ರ ಮತ್ತು ಜಾಲತಾಣ, ಅಂತರ್ಜಾಲ ಮಾರ್ಕೆಟಿಂಗ್ ಜಾಲತಾಣಗಳು (ಅಮೆಜಾನ್, ಫ್ಲಿಪ್‌ಕಾರ್ಟ್), ಆನ್‌ಲೈನ್ ರೀಟೆಲ್ ಸ್ಟೋರ್, ಡಿಜಿಟಲ್ ಮಾರ್ಕೆಟಿಂಗ್ ಕಂಪೆನಿಗಳಲ್ಲಿ ಅವಕಾಶಗಳಿವೆ.

ಕಾಲೇಜುಗಳು

• ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂರು.
• ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಗ್ರ್ಯಾಜುಯೇಟ್ ಸ್ಟಡೀಸ್, ಬೆಂಗಳೂರು.
• ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಜಿಟಲ್ ಮಾರ್ಕೆಟಿಂಗ್, ಬೆಂಗಳೂರು.
• ಸಿಎಂಎಸ್ ಬಿಸಿನೆಸ್ ಸ್ಕೂಲ್, ಜೈನ್ ಯೂನಿವರ್ಸಿಟಿ, ಬೆಂಗಳೂರು.
• ಇನ್‌ಸ್ಟಿಟ್ಯೂಟ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್ ಆ್ಯಂಡ್ ಟೆಕ್ನಾಲಜಿ, ಬೆಂಗಳೂರು.

(ಮುಂದುವರಿಯಲಿದೆ)

ಯಾವ ಹಾದಿ ಎಲ್ಲಿಗೆ ಪಯಣ...
ಎಲ್ಲಿದೆ ಗುರಿ ನಿಲ್ದಾಣ...?

❑ ಶಶಿಕಲಾ ತೊಕ್ಕೊಟ್ಟು

ಪಿಯುಸಿ ಮುಗಿಯಿತೆಂದರೆ ಅದು ವಿದ್ಯಾರ್ಥಿ ಜೀವನದ ಸಂಧಿಸಮಯ. ಹುಡುಗಾಟಿಕೆ ಬಿಟ್ಟು, ಜವಾಬ್ದಾರಿಯನ್ನು ತನ್ನದಾಗಿಸಿಕೊಳ್ಳುವ ಹೊತ್ತು. ಕನಸುಗಳಿಗೆ ರೆಕ್ಕೆ ಕಟ್ಟಿ ಹಾರುವ ಮನಸ್ಸಿಗೆ ಸರಿಯಾದ ದಿಕ್ಕು ತೋರಿಸುವ ನಿರ್ಣಾಯಕ ಘಟ್ಟ. ಜೆಇಇ, ಸಿಇಟಿ, ನೀಟ್ ಪರೀಕ್ಷೆಗಳೆಲ್ಲ ಅಗ್ನಿಪರೀಕ್ಷೆಗಳೇ. ಈ ಪರೀಕ್ಷೆಗಳಲ್ಲಿ ಕೇವಲ ಪಾಸಾದರೆ ಸಾಲದು. ಅಗ್ರ ಶ್ರೇಯಾಂಕದಲ್ಲಿ ಹೆಸರು ದಾಖಲಾದರೆ ಮಾತ್ರ ವಿದ್ಯಾರ್ಥಿಗಳ ಕನಸಿನ ಹಾದಿಯ ಬಾಗಿಲು ಸಕಾಲದಲ್ಲಿ ತೆರೆಯುತ್ತದೆ. ಈಗ ಅಭಿರುಚಿಗಳೊಂದಿಗೆ ಪರಿಸ್ಥಿತಿ ಬದಲಾಗಿ ಕಣ್ಣಮುಂದೆ ವೃತ್ತಿಪರ ಶಿಕ್ಷಣದ ಆಯ್ಕೆಯ ಸಾಧ್ಯತೆಗಳ ಮಹಾಪೂರವೇ ಹರಿದುಬರುತ್ತಿದೆ. ಬರಲಿರುವ ದಿನಗಳ ಆವಶ್ಯಕತೆಗಳನ್ನು, ಮಾರುಕಟ್ಟೆ ಸೃಷ್ಟಿಸಬಹುದಾದ ಉದ್ಯೋಗಾವಕಾಶಗಳ ಸಾಧ್ಯತೆಯನ್ನು, ಮುಖ್ಯವಾಗಿ ತಮ್ಮೊಳಗಿನ ಆಸಕ್ತಿಯನ್ನು ಮುಂದಿಟ್ಟುಕೊಂಡು ವಿದ್ಯಾರ್ಥಿಗಳು ಭವಿಷ್ಯ ರೂಪಿಸುವ ಹೊಸ ಹೊಸ ಕೋರ್ಸ್‌ಗಳತ್ತ ಹೆಜ್ಜೆಯಿಡಬೇಕಾಗಿದೆ. ಕೌಶಲಗಳಿದ್ದರೆ ನೂರಾರು ಹಾದಿಗಳು ತಾನಾಗಿ ಎದುರಾಗುತ್ತವೆ ಎನ್ನುತ್ತಾರೆ ಲೇಖಕಿ.

ಕೆಲವೊಮ್ಮೆ ಅನೂಹ್ಯವೆನಿಸುವ ಸಂಗತಿಗಳು ಕಣ್ಣಮುಂದೆ ಸಾಕ್ಷಾತ್ಕಾರಗೊಳ್ಳಲು ಹೆಚ್ಚು ಸಮಯಾವಕಾಶದ ಅಗತ್ಯವೇ ಇಲ್ಲ; ಕೋವಿಡ್ ಲಾಕ್‌ಡೌನ್‌ನಂತೆ ಹಿಂದೆಂದೂ ಕೇಳದ, ನೋಡದ ಒಂದು ಹೊಸ ಅನುಭವವನ್ನೇ ಆಗ ಲಾಕ್‌ಡೌನ್ ತೆರೆದಿಟ್ಟಿತ್ತು. ಐಶ್ವರ್ಯ, ಅಧಿಕಾರ ಯಾವುದರ ಗಣನೆಯೇ ಇಲ್ಲದೆ, ಮೇಲುಕೀಳು, ಜಾತಿ, ಧರ್ಮಗಳ ಭೇದಭಾವವಿಲ್ಲದೆ ಬದುಕಿನ ನಶ್ವರತೆಯನ್ನು ಸರ್ವರಿಗೂ ಸಾರಿ ಹೇಳಿದ ಕಾಲಘಟ್ಟ.

ಲಾಕ್‌ಡೌನ್ ಎಂದರೆ ಬದಲಾವಣೆಯ ಒಂದು ಪರ್ವ. ಲಾಕ್‌ಡೌನ್ ಆದರೂ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ಆನ್‌ಲೈನ್ ತರಗತಿಗಳ ಹೊಸ ವ್ಯವಸ್ಥೆಯೊಂದು ದಿಲ್ಲಿಯಿಂದ ಹಳ್ಳಿಯವರೆಗೆ ಸೃಷ್ಟಿಯಾಯಿತು. ಕಂಪೆನಿಗಳ ಉದ್ಯೋಗಿಗಳು ಮನೆಯಲ್ಲಿಯೇ ಕುಳಿತು ಕೆಲಸಮಾಡುವ 'ವರ್ಕ್‌ಫ್ರಮ್ ಹೋಮ್' ಎಂಬ ಹೊಸ ಪರಿಕಲ್ಪನೆ ಈ ಲಾಕ್‌ಡೌನ್‌ನದೇ ಕೊಡುಗೆ. ಕಂಪೆನಿಗಳಿಗೆ ಇದು ತಮ್ಮ ಖರ್ಚುವೆಚ್ಚಗಳನ್ನು ತಗ್ಗಿಸುವ ಉಪಾಯವಾದರೆ, ಉದ್ಯೋಗಿಗಳಿಗೆ ಟ್ರಾಫಿಕ್‌ನಲ್ಲಿ ಒದ್ದಾಡಿಕೊಂಡು ಮನೆ, ಕಚೇರಿ ಎನ್ನುವ ಪರದಾಟದಿಂದ ಶರೀರದ ಶಕ್ತಿಯೆಲ್ಲ ಸೋರಿ ಹಿಪ್ಪೆಯಾದಂತೆ ಅನಿಸುವ ನಿಸ್ಸಾರ ಅನುಭವಕ್ಕಿಂತ, ಮನೆಯಲ್ಲಿ ಕುಳಿತು ಕೆಲಸ ಮಾಡುವುದೇ ಹೆಚ್ಚು ಆರಾಮದಾಯಕವೆನಿಸಿತು.

ಲಾಕ್‌ಡೌನ್‌ನ ತಾಪ ತಾಳದೆ ನೂರಾರು ಕಂಪೆನಿಗಳು ಬಾಗಿಲು ಮುಚ್ಚಿದಾಗ ಲಕ್ಷಾಂತರ ಜನರು ಉದ್ಯೋಗ ಕಳೆದುಕೊಂಡರು. ಕೆಲವರಿಗೆ ಅವರು ದುಡಿದ ಸಂಬಳವೂ ಸಿಗಲಿಲ್ಲ. ಒಪ್ಪೊತ್ತಿನ ಊಟಕ್ಕೂ ಚಿಂತಿಸಬೇಕಾದಂಥ ಜನರ ಪರಿಸ್ಥಿತಿಯನ್ನು ಸುದ್ದಿ ಮಾಧ್ಯಮಗಳು ವರದಿ ಮಾಡಿದವು. ಇನ್ನೊಂದೆಡೆ, ಬಹಳ ಅಪರೂಪವೆನಿಸುವಂತೆ ಕೆಲವರು ಅಂಥ ಕಠಿಣ ಪರಿಸ್ಥಿತಿಯಲ್ಲಿಯೂ ಫೀನಿಕ್ಸ್ ಹಕ್ಕಿಯಂತೆ ಗೆದ್ದು ಬೀಗಿದರು. ಹೀಗೆ ಸಾಧನೆ ಮಾಡಿದವರಲ್ಲಿ ಹೆಚ್ಚಿನವರಿಗೆ ಅವರ ಕೈಹಿಡಿದದ್ದು ಅವರ ಡಿಗ್ರಿ ಸರ್ಟಿಫಿಕೇಟ್‌ಗಳಲ್ಲ, ಬದಲಿಗೆ ಅವರಲ್ಲಿದ್ದ ಕೌಶಲಗಳು.

ಈ ಲೇಖಕಿಯ ಹಿರಿಯ ಸಹೋದ್ಯೋಗಿಯೊಬ್ಬರ ಮಗಳು ಲಾಕ್‌ಡೌನ್ ಸಮಯದಲ್ಲಿ ಕೆಲಸ ಬಿಟ್ಟು, ಬೆಂಗಳೂರಿನಿಂದ ಊರಿಗೆ ಬರಬೇಕಾಯಿತು. ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವ ಜೊತೆಗೆ ಆಕೆ ರಾಷ್ಟ್ರೀಯ ಮಟ್ಟದ ಚೆಸ್ ಆಟಗಾತಿಯೂ ಆಗಿದ್ದರು. ಊರಿಗೆ ಬಂದ ಕೂಡಲೇ ಆಕೆ ಚೆಸ್‌ನ ಆನ್‌ಲೈನ್ ತರಬೇತಿಯನ್ನು ಆರಂಭಿಸಿದರು. ಸಂಬಂಧಿಕರು, ಗೆಳತಿಯರು ಮತ್ತು ಪರಿಚಯಸ್ಥರ ಮೂಲಕ ಅನೇಕ ಆಸಕ್ತರು ಆಕೆಯ ಚೆಸ್ ತರಗತಿಗೆ ಇಂದು ಭಾರತ ಮಾತ್ರವಲ್ಲ, ದುಬೈ, ಅಮೆರಿಕಾ ಸೇರಿದಂತೆ ವಿದೇಶಗಳಿಂದಲೂ ಅವರಿಂದ ಚೆಸ್ ತರಬೇತಿಯನ್ನು ಪಡೆಯುತ್ತಿದ್ದಾರೆ. ಅಷ್ಟಕ್ಕೇ ಆಕೆ ಸುಮ್ಮನಾಗಲಿಲ್ಲ, ಆಕೆಗೆ ಬೇಕಿಂಗ್ ಕಲೆಯೂ ಗೊತ್ತಿತ್ತು. ಹುಟ್ಟುಹಬ್ಬ, ನಿಶ್ಚಿತಾರ್ಥ, ವಾರ್ಷಿಕೋತ್ಸವ ಎಂದು ಸಮಾರಂಭಗಳಿಗೆ ಬಗೆಬಗೆಯ ಶೈಲಿಯ, ಆಕರ್ಷಕ ಕೇಕ್‌ಗಳನ್ನು ಮಾಡಿ ಜನರ ಬೇಡಿಕೆಯನ್ನು ಪೂರೈಸತೊಡಗಿದರು. ಕೈ ತುಂಬಾ ಆದಾಯ, ನೆಮ್ಮದಿ ಎಲ್ಲವೂ ಆಕೆಯದಾಯಿತು. ಕೆಲಸ ಹೋಯಿತೆಂದು ಆಕೆ ಕೊರಗುತ್ತಾ ಕುಳಿತುಕೊಳ್ಳಲಿಲ್ಲ, ತನ್ನ ಕೌಶಲಗಳನ್ನು ದುಡಿಸಿಕೊಳ್ಳುವುದರಲ್ಲಿ ಒಂದಿನಿತೂ ಬಿಡುವಿಲ್ಲದೆ ತಮ್ಮನ್ನು ಸಮರ್ಪಿಸಿಕೊಂಡರು. ಲಕ್ಷಾಂತರ ರೂಪಾಯಿ ಫೀಸು ಕಟ್ಟಿ, ರಾತ್ರಿ-ಹಗಲು ಎಡೆಬಿಡದೆ ಓದಿ, ಇಂಜಿನಿಯರ್ ಪರೀಕ್ಷೆ ಪಾಸು ಮಾಡಿ ಪಡೆದಿದ್ದ ಹೈಟೆಕ್ ಉದ್ಯೋಗ ಕಷ್ಟಕಾಲದಲ್ಲಿ ಕೈಬಿಟ್ಟಿತ್ತು. ಆದರೆ ಅಭಿರುಚಿಯನ್ನು ಪೋಷಿಸಲೆಂದು ಕಲಿತ ಕೌಶಲಗಳು ಅವರ ಜೀವನವನ್ನು ಮುನ್ನಡೆಸಿದವು.

ಜಾಗೃತ ಪೋಷಕರ ಅತಿಯಾದ ಕಾಳಜಿ

ಹೆಚ್ಚು ವರ್ಷಗಳೇನೂ ಕಳೆದಿಲ್ಲ; ಸುಮಾರು 15ರಿಂದ 20 ವರ್ಷಗಳ ಹಿಂದಿರಬಹುದು. ಶಾಲೆ ಸೇರಿದಂತೆ ಎಲ್ಲ ದಾಖಲೆಗಳಲ್ಲಿಯೂ ತಮ್ಮ ಹೆಸರು ಒಂದೇ ತೆರನಾಗಿರಬೇಕೆಂಬ ಸರಳ ಜ್ಞಾನವೂ ಜನರಿಗೆ ಇರಲಿಲ್ಲ. ಮತದಾರರ ಗುರುತುಪತ್ರ, ಪ್ಯಾನ್ ಕಾರ್ಡ್, ಆಧಾರ್ ಕಾರ್ಡ್ ಎಲ್ಲದರಲ್ಲಿಯೂ ಹೆಸರು ಒಂದೊಂದು ತೆರನಾಗಿರುತ್ತಿತ್ತು. ಹೆಸರು ಸರಿಪಡಿಸಬೇಕೆಂದರೆ ಇಲ್ಲಸಲ್ಲದ ಒದ್ದಾಟವನ್ನು ಅನುಭವಿಸಬೇಕಿತ್ತು. ಆದರೆ ಈಗ...? ಈ ತಿಳುವಳಿಕೆ ಇಲ್ಲದವರು ಬಹಳ ಅಪರೂಪ. ಅಷ್ಟೇ ಅಲ್ಲ, ಪುಟ್ಟದಾಗಿ ಎರಡು-ಮೂರು ಅಕ್ಷರಗಳ ಹೆಸರು ಇಟ್ಟರೆ ಸಾಲುವುದಿಲ್ಲ ಎನ್ನುವ ತಿಳುವಳಿಕೆಯೂ ಎಲ್ಲರಿಗೂ ಇದೆ. ಹೆಸರಿನಲ್ಲಿ ಮೊದಲ, ಮಧ್ಯದ ಮತ್ತು ಕೊನೆಯ ಹೆಸರು ಎಂದು ಮೂರು ಭಾಗಗಳಿರುತ್ತವೆ ಎನ್ನುವ ಸಾಮಾನ್ಯಜ್ಞಾನದ ಅರಿವಿದೆ. ಪಾಸ್‌ಪೋರ್ಟ್‌ಗೆ ಹೆಸರು ಈ ಬಗೆಯಲ್ಲಿ ಇರಬೇಕು, ಕನಿಷ್ಠ ಒಂದು ಹೆಸರಿನಲ್ಲಿ ಎರಡು ಭಾಗಗಳಾದರೂ ಇರಲೇಬೇಕು ಎನ್ನುವ ತಿಳುವಳಿಕೆ ಇರುವುದರಿಂದಲೇ ಹೆತ್ತವರು ಮಗುವಿನ ಹೆಸರು ನೋಂದಾಯಿಸುವ ಸಮಯದಲ್ಲಿಯೇ ಈಗ ಹೆಚ್ಚು ಜಾಗರೂಕರಾಗಿದ್ದಾರೆ. ಇದು, ಆ ಮಗುವಿನ ಮುಂದೊಂದು ದಿನದ ವಿದೇಶ ಪ್ರಯಾಣದ ಪೂರ್ವಭಾವಿ ತಯಾರಿ.

ಶಿಕ್ಷಣದ ಸ್ವರೂಪವೂ ಈಗ ಬದಲಾಗಿದೆ. ಕೇವಲ ಪಠ್ಯಕ್ರಮದಲ್ಲಿ ಇರುವುದನ್ನಷ್ಟೇ ಕಲಿಸಿ ಕುಳಿತುಕೊಳ್ಳುವ ಪರಿಪಾಠ ಹಳೆಯದಾಗಿದೆ. ಶಾಲೆಗಳಲ್ಲಿ ಈಗ ಒಂದನೆಯ ತರಗತಿಯಿಂದಲೇ ವಿದ್ಯಾರ್ಥಿಗಳನ್ನು ಅವರ ಜ್ಞಾನದ ವ್ಯಾಪ್ತಿಯನ್ನು ಪರಿಶೀಲಿಸುವ ಉದ್ದೇಶದ ಒಲಿಂಪಿಯಾಡ್ ಪರೀಕ್ಷೆ ಬರೆಸುತ್ತಾರೆ. ಅಗ್ರ ಶ್ರೇಣಿ ಪಡೆದವರಿಗೆ ವಿದ್ಯಾರ್ಥಿವೇತನ ದೊರಕುವುದು ನಿಜವಾದರೂ, ಮುಂದೆ ಪಿಯುಸಿಯ ಬಳಿಕ ವಿದ್ಯಾರ್ಥಿಗಳು ಸಿಇಟಿ, ಜೆಇಇ, ನೀಟ್, ನಾಟಾ ಮೊದಲಾದ ಪರೀಕ್ಷೆಗಳನ್ನು ಎದುರಿಸುವವರಾದ್ದರಿಂದ, ಒಲಿಂಪಿಯಾಡ್ ಕೂಡ ಒಂದು ಬಗೆಯ ಪರೀಕ್ಷಾ ತಯಾರಿಯೇ. ಜೊತೆಗೆ ಎಂಟನೆಯ ತರಗತಿಯಿಂದಲೇ ಜೆಇಇ, ಸಿಇಟಿ, ನೀಟ್ ಮತ್ತು ನಾಟಾ ಪರೀಕ್ಷೆಗಳ ತರಬೇತಿಯನ್ನೂ ಈಗ ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ. ಮೆಟ್ರೋಪಾಲಿಟನ್ ನಗರಗಳಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಆರನೆಯ ತರಗತಿಯಿಂದಲೇ ಈ ತರಬೇತಿಗಳನ್ನು ನೀಡುವ ಸಂಸ್ಥೆಗಳಿವೆ.

ಒಂದಕ್ಕಿಂತ ಒಂದು ಉತ್ತಮ ಆಯ್ಕೆ ಪ್ರತಿ ಊರಿನಲ್ಲಿ ಇದ್ದರೂ ತಮ್ಮ ಮಕ್ಕಳನ್ನು ಯಾವ ಸಂಸ್ಥೆಗೆ ಕಳುಹಿಸಿದರೆ ಉತ್ತಮ ಫಲಿತಾಂಶ ಬರಬಹುದು ಎನ್ನುವ ಪ್ರಶ್ನೆ, ಗೊಂದಲದಲ್ಲಿ ಹೆತ್ತವರು ಅಲೆದಾಡುತ್ತಾರೆ. ಅವರ ತಲೆಬಿಸಿಯನ್ನು ಕಡಿಮೆ ಮಾಡುವಂತೆ, ಇಂಥ ಸಂಸ್ಥೆಗಳು ಯಾವು ಯಾವುದೋ ಮೂಲಗಳಿಂದ ಈ ಹೆತ್ತವರ ಮೊಬೈಲ್ ಸಂಖ್ಯೆಗಳನ್ನು ಸಂಗ್ರಹಿಸಿ, ತಮ್ಮ ಸಂಸ್ಥೆಗೆ ಬರಮಾಡಿಕೊಂಡು ಅಥವಾ ಅವರನ್ನು ಆನ್‌ಲೈನ್ ಸಭೆಗಳಿಗೆ ಆಹ್ವಾನಿಸಿ, ತಮ್ಮ ವೈಶಿಷ್ಟ್ಯಗಳನ್ನು ತಿಳಿಸುತ್ತಾರೆ. ತಾವು ಯಾವ ರೀತಿಯಲ್ಲಿ ವಿದ್ಯಾರ್ಥಿಗಳನ್ನು ಸಿದ್ಧಪಡಿಸುತ್ತಾರೆ ಎನ್ನುವುದನ್ನು ವಿವರಿಸುತ್ತಾರೆ. ತಮ್ಮ ಮಕ್ಕಳಿಗೆ ಅತ್ಯುತ್ತಮವಾದುದೇ ಸಿಗಬೇಕು, ತಮಗೆ ಸಾಧ್ಯವಾಗದ್ದೆಲ್ಲ ತಮ್ಮ ಮಕ್ಕಳಿಗೆ ಸುಲಭದಲ್ಲಿ ದೊರಕಬೇಕು, ತಮ್ಮ ಮಕ್ಕಳಿಗೆ ಯಾವ ರೀತಿಯಿಂದಲೂ ಕಷ್ಟವಾಗಬಾರದೆನ್ನುವ ಮನೋಭಾವ ಈಗಿನ ಹೆತ್ತವರದಾದ್ದರಿಂದ, ಎಷ್ಟೇ ಕಷ್ಟಪಟ್ಟಾದರೂ ಹೆತ್ತವರು, ಇರುವುದರಲ್ಲೇ ಅತ್ಯುತ್ತಮ ಎಂದು ತಮಗನಿಸಿದ ಸಂಸ್ಥೆಗೆ ತಮ್ಮ ಮಕ್ಕಳ ನೋಂದಣಿ ಮಾಡಿಬಿಡುವ ಸ್ಥಿತಿಯಲ್ಲಿರುತ್ತಾರೆ. ಕಾರ್ಖಾನೆಯಲ್ಲಿ ತಯಾರಾಗುವ ಉತ್ಪನ್ನಗಳಂತೆ ಸಿದ್ಧಗೊಳ್ಳುವ ಈ ಮಕ್ಕಳು, ತಮ್ಮ ಒಲವು ಯಾವುದರಲ್ಲಿದೆಯೋ ಆ ಕೋರ್ಸನ್ನು ಆಯ್ಕೆಮಾಡಿಕೊಳ್ಳುವುದಕ್ಕಿಂತ, ಎಷ್ಟು ಒಳ್ಳೆಯ ಅಂಕ ಸಿಗುವುದೋ ಅಷ್ಟು ಒಳ್ಳೆಯ ಕೋರ್ಸ್ ಎನ್ನುವ ಮನಸ್ಥಿತಿಯಿಂದ ಮುಂದುವರಿಯುತ್ತಿರುತ್ತಾರೆ.

ಪೋಷಕರ ಕನಸಿಗೆ ಮಕ್ಕಳೇ ಸಾಧನ

ಎಷ್ಟೋ ವಿದ್ಯಾರ್ಥಿಗಳಿಗೆ 'ತಮ್ಮದು' ಎಂದೆನ್ನುವ ಆಯ್ಕೆ ಇರುವುದಿಲ್ಲ. ಹೆತ್ತವರು ಹೇಳಿದ್ದಾರೆ, ಇಂಥ ಕೋರ್ಸಿಗೆ ಹೋದರೆ ಕೆಲಸ ಬೇಗ ಸಿಗುತ್ತದೆ, ಸಂಬಳವೂ ಜಾಸ್ತಿ; ವಿದೇಶಕ್ಕೆ ಹೋಗುವ ಅವಕಾಶವೂ ಇದೆ... ಹೀಗೆ ಬೇರೆ ಬೇರೆ ಕಾರಣಗಳು ಅವರನ್ನು ಒಂದು ಕೋರ್ಸಿನ ಹಿಂದೆ ಹೋಗುವಂತೆ ಮಾಡಬಹುದು. ನಿಜವಾಗಿಯೂ 'ಇಂಥ ಕೋರ್ಸ್ ಇಷ್ಟ, ಇಲ್ಲಿ ನಾನು ಸಾಧಿಸಬಲ್ಲೆ' ಎಂದು ಆಯ್ಕೆ ಮಾಡುವವರು ತುಂಬಾ ವಿರಳ. ಮಕ್ಕಳ ಆಯ್ಕೆಗೆ ಹೆತ್ತವರ ಬೆಂಬಲ ಸಿಗುವುದೂ ಅಪರೂಪವಾದ್ದರಿಂದ ಕೇವಲ ಮಕ್ಕಳನ್ನು ದೂಷಿಸುವುದು ಸರಿಯಲ್ಲ. ಎಷ್ಟೋ ಹೆತ್ತವರಿಗೆ ತಮ್ಮ ಮಕ್ಕಳು ಇಂಜಿನಿಯರ್ ಅಥವಾ ಡಾಕ್ಟರ್ ಆಗುವುದೇ ಒಂದು ಕನಸು. ಇನ್ನು ಕೆಲವರಿಗೆ ಪ್ರತಿಷ್ಠೆಯ ಸಂಗತಿ.

ಈ ಲೇಖಕಿಗೆ ಪರಿಚಯವಿರುವ ಜ್ಯೋತಿ ಎಂಬಾಕೆ ತಮ್ಮ ಮಗ ಸಾಫ್ಟ್‌ವೇರ್ ಇಂಜಿನಿಯರ್ ಆಗಬೇಕು ಎನ್ನುವ ಜಿದ್ದಿಗೆ ಬಿದ್ದು, ಬ್ಯಾಂಕ್‌ನಲ್ಲಿ ಸಾಲ ಪಡೆದು ಆ ಕೋರ್ಸಿಗೆ ಸೇರಿಸಿದ್ದರು. ಆತ ಶೈಕ್ಷಣಿಕವಾಗಿ ಬಹಳ ಸಾಮಾನ್ಯ ವಿದ್ಯಾರ್ಥಿಯಾಗಿದ್ದ. ಅವನ ಇಚ್ಛೆ ಏನಿತ್ತೋ, ತಿಳಿಯದು. ಅಮ್ಮನ ಕನಸನ್ನು ನನಸಾಗಿಸಲು ಆತ ಒಲ್ಲದ ಕೋರ್ಸನ್ನು ಬಹಳ ಕಷ್ಟಪಟ್ಟು ಓದುತ್ತಿದ್ದ. ಪ್ರತಿ ಸೆಮಿಸ್ಟರ್‌ನಲ್ಲಿಯೂ ಎರಡು-ಮೂರು ವಿಷಯಗಳಲ್ಲಿ ನಪಾಸು. ವಿದ್ಯಾರ್ಥಿ ನಪಾಸಾದ ಕಾರಣ ಮುಂದಿನ ವರ್ಷದ ಫೀಸು ಕಟ್ಟಲು ಬೇಕಾದ ಸಾಲದ ಮೊತ್ತವನ್ನು ಬ್ಯಾಂಕ್ ಬಿಡುಗಡೆ ಮಾಡಲಿಲ್ಲ.

ವಿದ್ಯಾಭ್ಯಾಸದ ಖರ್ಚಿಗೆಂದು ಬ್ಯಾಂಕ್‌ನಲ್ಲಿ ಸಾಲ ತೆಗೆದುಕೊಂಡರೆ, ಬ್ಯಾಂಕ್ ಆ ಸಾಲದ ಹಣವನ್ನು ಒಂದೇ ಸಲಕ್ಕೆ ಬಿಡುಗಡೆ ಮಾಡುವುದಿಲ್ಲ. ಪ್ರತಿ ವರ್ಷದ ಫೀಸಿಗೆ ಅನುಗುಣವಾಗಿ, ಹಂತಹಂತವಾಗಿ ಬಿಡುಗಡೆ ಮಾಡುತ್ತದೆ. ಎಷ್ಟೋ ಹೆತ್ತವರಿಗೆ ಈ ಮಾಹಿತಿ ಇರುವುದಿಲ್ಲ. ಜ್ಯೋತಿಗೆ ಕೂಡ. ನಪಾಸಾದರೂ ವಿದ್ಯಾರ್ಥಿ ಮುಂದಿನ ಸೆಮಿಸ್ಟರ್‌ಗೆ ಹೋಗಬಹುದು. ಹೊಸ ಸೆಮಿಸ್ಟರ್‌ನ ವಿಷಯಗಳ ಜೊತೆಗೆ ಹಿಂದಿನ ಸೆಮಿಸ್ಟರ್‌ನಲ್ಲಿ ನಪಾಸಾದ ವಿಷಯಗಳನ್ನೂ ಕೂಡ ಪರೀಕ್ಷೆ ಬರೆದು ಪಾಸಾಗಬೇಕು. ಆದ್ದರಿಂದ ಮುಂದಿನ

ಸೆಮಿಸ್ಟರ್‌ನ ಫೀಸ್ ಕಟ್ಟಲು ಸಾಲದ ಹಣವನ್ನು ಪಡೆಯಲು ಬ್ಯಾಂಕಿಗೆ ಬಂದಿದ್ದ ಜ್ಯೋತಿಗೆ, ವಿದ್ಯಾರ್ಥಿ ಪಾಸಾಗದ ಹೊರತು ಸಾಲದ ಮೊತ್ತ ಬಿಡುಗಡೆಯಾಗುವುದಿಲ್ಲ ಎಂದು ತಿಳಿದು ಆಘಾತವಾಯಿತು. ವಿದ್ಯಾಭ್ಯಾಸ ಮುಂದುವರಿಯಲೇಬೇಕಲ್ಲ, ಮಗನನ್ನು ಇಂಜಿನಿಯರ್ ಮಾಡುವ ಪಣತೊಟ್ಟ ಆ ತಾಯಿ ಪಟ್ಟ ಪಾಡು ಅಷ್ಟಿಷ್ಟಲ್ಲ.

ಬದಲಾದ ಕಾಲದ ಭಿನ್ನ ಅಭಿರುಚಿ

ಕಾಲ ಒಂದೊಂದು ಕೋರ್ಸಿಗೆ ಒಂದೊಂದು ರೀತಿಯಲ್ಲಿ ಅನುಕೂಲಕರವಾಗಿ ಪರಿಣಮಿಸುತ್ತದೆ. ಒಂದೊಮ್ಮೆ ನರ್ಸಿಂಗ್ ಕ್ಷೇತ್ರವು ವಿಪುಲವಾದ ಉದ್ಯೋಗಾವಕಾಶಗಳನ್ನು ನೀಡಿದ್ದರೆ, ಶಿಕ್ಷಣ ಕ್ಷೇತ್ರದಲ್ಲಾಗುತ್ತಿರುವ ಕ್ರಾಂತಿಕಾರಿ ಬದಲಾವಣೆಗಳು ಬೋಧನಾ ಕ್ಷೇತ್ರವನ್ನು ಬೆಂಬಲಿಸಿದವು. ಆ ಬಳಿಕ ಸಾಫ್ಟ್‌ವೇರ್ ಕ್ಷೇತ್ರ ಚಿನ್ನದ ಗಣಿಯಂತೆ ತೋರಲಾರಂಭಿಸಿತು. ಈಗ ಈ ಸ್ಥಾನವನ್ನು ಎ.ಐ. (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್-ಕೃತಕ ಬುದ್ಧಿಮತ್ತೆ) ತುಂಬುವಂತೆ ಕಾಣುತ್ತಿದೆ. ಅಷ್ಟೇ ಅಲ್ಲ, ಮುಂದಿನ ದಿನಗಳಲ್ಲಿ ಸಮಾಜದ ಪ್ರತಿಯೊಂದು ರಂಗವನ್ನೂ ಎ.ಐ. ಪ್ರವೇಶಿಸಲಿದೆ. ಎಲ್ಲೆಡೆಯೂ ಎ.ಐ.ಯ ಪ್ರಸ್ತುತಿಯು ಕಂಪೆನಿಗಳು ತಮ್ಮಲ್ಲಿರುವ ಉದ್ಯೋಗಾವಕಾಶಗಳನ್ನು ಮೊಟಕುಗೊಳಿಸುವ ಅನಿವಾರ್ಯತೆಯನ್ನು ಸೃಷ್ಟಿಸುತ್ತವೆ. ಆಗ ಬಹು ಮಂದಿ ತಮ್ಮ ಉದ್ಯೋಗಗಳನ್ನು ಕಳೆದುಕೊಳ್ಳಬೇಕಾದ ಅಪಾಯವನ್ನು ನಾವು ಈಗಿನಿಂದಲೇ ಗ್ರಹಿಸಬೇಕಾಗಿದೆ.

ಉದಾಹರಣೆಗೆ, ಸಾಫ್ಟ್‌ವೇರ್ ಕಂಪೆನಿಗಳಲ್ಲಿ ಕೋಡ್ ಬರೆಯುವ ಕೆಲಸವನ್ನು ಸಾಫ್ಟ್‌ವೇರ್ ಇಂಜಿನಿಯರ್‌ಗಳು ಮಾಡುತ್ತಾರೆ. ಈಗ ಎ.ಐ. ಕೂಡ ಕೋಡ್ ಬರೆಯುವ ಕೆಲಸವನ್ನು ಸುಲಲಿತವಾಗಿ ಮಾಡಬಲ್ಲದು. ಸಾಫ್ಟ್‌ವೇರ್ ಕಂಪೆನಿಗಳು ಮನುಷ್ಯರ ಬದಲಿಗೆ ಎ.ಐ.ಯನ್ನೇ ಅಳವಡಿಸಿಕೊಂಡರೆ, ಸಾಫ್ಟ್‌ವೇರ್ ಇಂಜಿನಿಯರ್‌ಗಳು ಉದ್ಯೋಗ ಕಳೆದುಕೊಳ್ಳಬೇಕಾಗುತ್ತದೆ. ಈ ಅಪಾಯ ಸಾಫ್ಟ್‌ವೇರ್ ಇಂಜಿನಿಯರ್‌ಗಳಿಗೆ ಮಾತ್ರವಲ್ಲ, ತಜ್ಞರ ಅಭಿಪ್ರಾಯದಂತೆ, ಮುಂದಿನ ದಿನಗಳಲ್ಲಿ ಎ.ಐ. ಎಲ್ಲ ಕ್ಷೇತ್ರಗಳ ಮೇಲೂ ಏಕಸ್ವಾಮ್ಯವನ್ನು ಸಾಧಿಸಲಿದೆ. ಎ.ಐ.ಯ ತಾಕತ್ತನ್ನು ಅಂದಾಜಿಸುವ ಸಾಮರ್ಥ್ಯವೂ ನಮಗಿಲ್ಲ, ಕನಿಷ್ಠ ಅದರ ವ್ಯಾಪ್ತಿಯನ್ನೂ ನಾವು ಲೆಕ್ಕ ಹಾಕಲಾರೆವು. ಅಷ್ಟೊಂದು ವಿಸ್ತಾರ, ಅಷ್ಟೊಂದು ಆಳ. ವಿದ್ಯಾರ್ಥಿಗಳು ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ತಮ್ಮ ಮುಂದಿನ ಆಯ್ಕೆಯನ್ನು ಮಾಡಬೇಕಾಗುತ್ತದೆ.

ಎಷ್ಟೋ ಸಲ ಪಡೆದುಕೊಂಡ ಡಿಗ್ರಿಗೆ ಸರಿಯಾಗಿ ಉದ್ಯೋಗ ಸಿಗಲಿಕ್ಕಿಲ್ಲ, ಅಥವಾ ತಮಗೆ ದೊರೆತ ಅಂಕಗಳಿಗೆ ಸೂಕ್ತವಾದ ಕೋರ್ಸನ್ನು ಅಭ್ಯಾಸ ಮಾಡಿರುವ ವಿದ್ಯಾರ್ಥಿಗಳು ಉದ್ಯೋಗದ ವಿಷಯ ಬಂದಾಗ ತಮ್ಮ ಅಭಿರುಚಿಯನ್ನು ಹುಡುಕಿ ಹೊರಡಬಹುದು. ಸಾಫ್ಟ್‌ವೇರ್ ಇಂಜಿನಿಯರ್‌ಗಳು ಬ್ಯಾಂಕ್ ಸೇರಿದ ಉದಾಹರಣೆಗಳಿವೆ. ಎಂ.ಬಿ.ಬಿ.ಎಸ್. ಮಾಡಿ ಎಂ.ಬಿ.ಎ. ಪದವಿ ಪಡೆಯುತ್ತಾರೆ. 'ಎಂ.ಬಿ.ಬಿ.ಎಸ್.ಗೂ ಎಂ.ಬಿ.ಎ.ಗೂ ಹೇಗೆ ತಾಳೆಯಾಗುತ್ತದೆ?' ಎಂದು ಕೇಳಿದರೆ, ಈ ವಿದ್ಯಾರ್ಥಿಗಳು ರೋಗಿಗಳನ್ನು ನೋಡುವುದಿಲ್ಲ, ಬದಲಿಗೆ ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿನ ಆಡಳಿತ ವ್ಯವಸ್ಥೆಯನ್ನು ನಿರ್ವಹಿಸುತ್ತಾರೆ. ನೀವು ಇಂಥ ಬೇಕಾದಷ್ಟು ಉದಾಹರಣೆಗಳಿವೆ.

ಸಮಾಜದಲ್ಲಿ ತಂತ್ರಜ್ಞಾನ ಮತ್ತು ಸ್ವಯಂಚಾಲಿತ ವ್ಯವಸ್ಥೆಯ ಆವಶ್ಯಕತೆಯು ಹೆಚ್ಚಿದಂತೆ ಎಷ್ಟೋ ಕೋರ್ಸ್‌ಗಳು ಮತ್ತು ಉದ್ಯೋಗಗಳು ತುಂಬಾ ಅಪ್ರಸ್ತುತ ಎನಿಸುತ್ತವೆ. ಆದರೆ ಅವು ಉದ್ಯೋಗಗಳ ಹೊಸ ಪರಿಕಲ್ಪನೆಯ ಉದಯಕ್ಕೆ ಕಾರಣವಾಗಿವೆ. ಒಂದೊಮ್ಮೆ ಮುದ್ರಣ, ಕೈಮಗ್ಗ, ಕೃಷಿ... ಹೀಗೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಯಂತ್ರಗಳ ಪಾದಾರ್ಪಣೆಯಾದಾಗಲೂ ಉದ್ಯೋಗಾವಕಾಶಗಳಿಗೆ ಆಪತ್ತು ಬಂದಿತ್ತು. ಆದರೆ ಒಂದೆಡೆ ತಪ್ಪಿಹೋದ ಅವಕಾಶಗಳು ಇನ್ನೊಂದೆಡೆ ಸೃಷ್ಟಿಯಾದವು. ಹಾಗೆಯೇ ಎ.ಐ.ಯ ಅವತಾರದ ಈ ಕಠಿಣ ಪರಿಸ್ಥಿತಿಯಲ್ಲಿಯೂ ಹೊಸ ಅವಕಾಶಗಳು ಸೃಷ್ಟಿಯಾಗುವ ನಿರೀಕ್ಷೆಯನ್ನು ಬಿಟ್ಟುಬಿಡಬಾರದು. ಮಾರುಕಟ್ಟೆಯ ಆವಶ್ಯಕತೆಗಳನ್ನು ಗುರುತಿಸುವ ಚಾಣಾಕ್ಷತೆ ಸಿದ್ಧಿಸಬೇಕು. ಹಾಗಾಗಬೇಕಾದರೆ, ವಿದ್ಯಾರ್ಥಿಗಳು ಕಾಲಕ್ಕೆ ತಕ್ಕಂತೆ ತಮ್ಮನ್ನು ತಾವು ಪರಿಷ್ಕರಣೆಗೆ ಒಳಪಡಿಸಿಕೊಳ್ಳಬೇಕು. ಸಾಫ್ಟ್‌ವೇರ್ ಇಂಜಿನಿಯರ್ ಒಬ್ಬ ಎ.ಐ. ಪ್ರವೀಣನೂ ಆದರೆ ಬದಲಾವಣೆಯ ಪ್ರವಾಹದಲ್ಲಿ ಈಜಬಹುದು ತಾನೇ?

ಅಸಾಂಪ್ರದಾಯಿಕ ಹಾದಿಯಲ್ಲಿ 'ಜೆನ್ ಝೀ'

ಕಾಲ ಬದಲಾದಂತೆ ಅಪ್ರಸ್ತುತರೆನಿಸುವ ಅಪಾಯ ಎಲ್ಲ ಕ್ಷೇತ್ರಗಳಲ್ಲಿಯೂ ಇದೆ. ಸಮಾಜದ, ವೃತ್ತಿರಂಗದ ಆಗುಹೋಗುಗಳ ನಿಖರವಾದ ಮಾಹಿತಿ ಇದ್ದಾಗ, ಕಾಲಕ್ಕೆ ತಕ್ಕಂತೆ ಹೇಗೆ ಪ್ರಸ್ತುತರೆನಿಸಿಕೊಳ್ಳುವುದು ಎನ್ನುವ ತಿಳುವಳಿಕೆಯೂ ಮೂಡುತ್ತದೆ. ಆಸ್ಪತ್ರೆಗಳಲ್ಲಿ ಸ್ಕ್ಯಾನಿಂಗ್, ಎಕ್ಸ್‌ರೇ, ಆಪರೇಶನ್... ಹೀಗೆ ಬೇರೆ ಬೇರೆ ವಿಭಾಗಗಳಲ್ಲಿ ಹೊಸ ಹೊಸ ಅತ್ಯಾಧುನಿಕ ಬದಲಾವಣೆಗಳನ್ನು ನೋಡುತ್ತಿರುತ್ತೇವೆ. ವೈದ್ಯರು ಅವರೇ ಆಗಿರುತ್ತಾರೆ. ತಂತ್ರಜ್ಞಾನ ಬದಲಾಗುತ್ತಾ ಇರುತ್ತದೆ. ಹೊಸದಾಗಿ ಪರಿಚಯವಾದ ತಂತ್ರಜ್ಞಾನವನ್ನು ಆ ವೈದ್ಯರು ಅರ್ಥಮಾಡಿಕೊಂಡಿರುತ್ತಾರೆ. ಬೇಕಾದ ಜ್ಞಾನ, ತರಬೇತಿಯನ್ನು ಪಡೆದುಕೊಂಡಿರುತ್ತಾರೆ. ಹೀಗೆ ತಾಂತ್ರಿಕವಾಗಿ ಪರಿಷ್ಕರಣೆಗೊಂಡ, ನವೀಕರಣಗೊಂಡ ಆಸ್ಪತ್ರೆಗೆ ಮಾತ್ರ ನಾವೂ ಹೋಗುತ್ತೇವೆ.

ಕಾಲದ ಮಹಿಮೆಯೇ ಅಂಥದ್ದು. ಇಂದು ವರ್ಣರಂಜಿತವಾಗಿ ಕಂಡದ್ದು ನಾಳೆ ಬಣ್ಣ ಕಳೆದುಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಇದು ಬಹಳ ಕಠಿಣವಾದ ಸಮಯ. ಪ್ರಸ್ತುತ ಬಹಳ ಆಕರ್ಷಕವಾಗಿ, ಸ್ಥಿರವಾಗಿ, ಭವಿಷ್ಯದಲ್ಲಿ ತುಂಬಾ ಅವಕಾಶಗಳನ್ನು ಹೊತ್ತು ತರಬಲ್ಲ ಆಯ್ಕೆಯಂತೆ ಕಂಡರೂ ಕೂಡ, ಎ.ಐ. ಶಕ್ತಿಸಹಿತವಾದ ಮುಂಬರುವ ದಿನಗಳಲ್ಲಿ ಅವು ಸಪ್ಪೆಯಾಗಿ ಅಸ್ತಿತ್ವವನ್ನು ಕಳೆದುಕೊಳ್ಳಬಹುದು. ಹಾಗಾಗಿ ಹೆತ್ತವರು ತಮ್ಮ ಮಕ್ಕಳ ಬೆಂಬಲಕ್ಕೆ ನಿಲ್ಲಬೇಕು. ಏಕೆಂದರೆ ಮಕ್ಕಳು ಆಲೋಚನೆ ಮಾಡುವ ವಿಧಾನವೇ ಈಗ ಬದಲಾಗಿದೆ. ಇತ್ತೀಚಿನ ಬೆಳವಣಿಗೆಯನ್ನು ಪರಿಶೀಲಿಸಿದಾಗ ಒಂದು ವಿಧವಾದ ಭಾರೀ ಪರಿವರ್ತನೆಯನ್ನು ವೃತ್ತಿರಂಗದಲ್ಲಿ ಗುರುತಿಸಬಹುದು. ಬೆಳಗ್ಗಿನ ಒಂಬತ್ತರಿಂದ ಐದು ಗಂಟೆಯ ವರೆಗೆ ದುಡಿಯುವ ಮನೋಭಾವ ಈಗ ಬದಲಾಗಿದೆ. ಉದ್ಯೋಗವೆಂದರೆ ಜೀವನಕ್ಕೆ ಒಂದು ಅರ್ಥವನ್ನು ತುಂಬಬೇಕು. ಜೀವನವನ್ನು ಬೇಕಾದಂತೆ ಬಾಗಿಸುವ ಮತ್ತು ಬಳುಕಿಸುವಂಥ ಒಂದು ನವ್ಯತೆಯನ್ನು ಹಾಗೂ ಭವಿಷ್ಯದತ್ತ ಒಂದು ವಿಶಿಷ್ಟ ದೂರದೃಷ್ಟಿಯನ್ನು ನೀಡಬಲ್ಲಂಥ ಶಕ್ತಿಯಾಗಬೇಕು.

ಯಾವುದಾದರೂ ಒಂದು ಒಳ್ಳೆಯ, ಸುದೃಢ ಕಂಪೆನಿಗೆ ಸ್ಥಿರವಾಗಿ ಅಂಟಿಕೊಳ್ಳಬೇಕೆನ್ನುವುದು ದಶಕಗಳಿಂದ ಸಾಗಿಬಂದ ಸಾಮಾನ್ಯ ಅಭಿಪ್ರಾಯ. ಅಷ್ಟೇ ಅಲ್ಲ, ಇಷ್ಟವಾಗಲಿಲ್ಲವೆಂದು ಅರ್ಧಕ್ಕೇ ಕೆಲಸ ಬಿಟ್ಟುಬಿಟ್ಟರೆ, ಸಮಯ ಮತ್ತು ಶ್ರಮ ಎರಡೂ ನಷ್ಟವಾದಂತೆ ಎನ್ನುವ ಅಭಿಪ್ರಾಯವೂ ಹಿಂದೆ ಇತ್ತು. ಆದರೆ 'ಜೆನ್ ಝೀ' ಯುವಕ-ಯುವತಿಯರು ಇದಕ್ಕೆ ತದ್ವಿರುದ್ಧವಾಗಿ ಅಸಾಂಪ್ರದಾಯಿಕ ವೃತ್ತಿಮಾರ್ಗವನ್ನು ಅನುಸರಿಸುತ್ತಿದ್ದಾರೆ. ತಾವು ಆಯ್ದುಕೊಂಡ ದಾರಿಯಲ್ಲಿ ಯಶಸ್ಸು ಕಷ್ಟವೆನಿಸಿದರೆ ಅಥವಾ

ಅದು ಸಪ್ಪೆಯಾಗಿ ಕಂಡುಬಂದರೆ, ಆ ದಾರಿಯನ್ನು ಅಲ್ಲೇ ಬಿಟ್ಟು ಹೊಸ ದಾರಿಯಲ್ಲಿ ಮತ್ತೆ ಪಯಣ ಆರಂಭಿಸಲು ಅವರು ಒಂದಿನಿತೂ ತಡಮಾಡುವುದಿಲ್ಲ. ಇದು ಹೆತ್ತವರ ದೃಷ್ಟಿಯಲ್ಲಿ ಹುಚ್ಚುತನ ಅನ್ನಿಸಬಹುದು. ಆದರೂ ಕೂಡ ಸಮಯದ ಪರಿಧಿಯಲ್ಲಿದ್ದುಕೊಂಡು ಹೆತ್ತವರು ತಮ್ಮ ಮಕ್ಕಳ ಆಸೆ, ಆಕಾಂಕ್ಷೆ, ಗುರಿ ಮತ್ತು ನಿಲುವುಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು.

ಹೆತ್ತವರ ವಿದ್ಯಾಭ್ಯಾಸದ ಕಾಲಕ್ಕೂ ಈಗಿನ 'ಜೆನ್ ಝೀ' ಪೀಳಿಗೆಯವರ ವಿದ್ಯಾಭ್ಯಾಸಕ್ಕೂ ಅಜಗಜಾಂತರ ಇದೆ. ಮಕ್ಕಳಿಗೆ ಹೆತ್ತವರ ಸಂಪೂರ್ಣ ಬೆಂಬಲ ಮತ್ತು ಮಾರ್ಗದರ್ಶನದ ಆವಶ್ಯಕತೆ ಇದೆ. ಸಮಾಜ ಮತ್ತು ಮಾರುಕಟ್ಟೆಯಲ್ಲಿ ಯಾವುದು ಪ್ರಸ್ತುತ ಮತ್ತು ಯಾವುದು ಅಪ್ರಸ್ತುತ ಎನ್ನುವ ತಿಳುವಳಿಕೆ ವಿದ್ಯಾರ್ಥಿಗಳ ಜೊತೆಗೆ ಹೆತ್ತವರಿಗೂ ಇರಬೇಕಾದುದು ಅತ್ಯಗತ್ಯ. ತಮ್ಮ ಮಕ್ಕಳ ಆಸಕ್ತಿಯ ಜೊತೆಗೆ ಪ್ರಸ್ತುತ ಔದ್ಯಮಿಕ ರಂಗದಲ್ಲಿ ಯಾವ ಕ್ಷೇತ್ರ ಹೆಚ್ಚಿನ ಅವಕಾಶಗಳನ್ನು ಸೃಷ್ಟಿಸುತ್ತಿದೆ ಎನ್ನುವ ಅರಿವಿದ್ದರೆ, ಮುಂದಿನ ಪ್ರಯತ್ನ ಸುಲಲಿತ.

ಸಮಾಜದಲ್ಲಿ ಈಗ ಅತಿ ಹೆಚ್ಚಿನ ಬೇಡಿಕೆಯಲ್ಲಿರುವ ಮತ್ತು ವೈವಿಧ್ಯಮಯ ಉದ್ಯೋಗಾವಕಾಶಗಳನ್ನು ನೀಡಬಲ್ಲ ಕೆಲವು ಕ್ಷೇತ್ರಗಳ ಬಗ್ಗೆ ನೋಡೋಣ.

ದತ್ತಾಂಶ ವಿಜ್ಞಾನ ಮತ್ತು ಎ.ಐ.

ಸ್ವಿಟ್ಜರ್ಲ್ಯಾಂಡ್‌ನಲ್ಲಿ ಅಂತಾರಾಷ್ಟ್ರೀಯ ಮಟ್ಟದ ಉದ್ಯಮಿಗಳು, ಜಾಗತಿಕ ನಾಯಕರು ಮತ್ತು ಚಿಂತಕರು ಸೇರಿ ಪ್ರತಿ ವರ್ಷವೂ ಸಭೆಯೊಂದನ್ನು ನಡೆಸುತ್ತಾರೆ. 'ವಿಶ್ವ ಆರ್ಥಿಕ ವೇದಿಕೆ' (ವರ್ಲ್ಡ್ ಇಕನಾಮಿಕ್ ಫೋರಂ – ಡಬ್ಲ್ಯೂ.ಇ.ಎಫ್) ಎಂದು ಹೆಸರು. ಇತ್ತೀಚಿನ ಶೃಂಗಸಭೆಯಲ್ಲಿ ಒಂದು ವಿಚಾರ ಮುನ್ನೆಲೆಗೆ ಬಂದಿದೆ. ಅದೇನೆಂದರೆ, ದತ್ತಾಂಶ ವಿಜ್ಞಾನಕ್ಕೆ ಸಂಬಂಧಪಟ್ಟಂತೆ ಭವಿಷ್ಯದಲ್ಲಿ ಜಾಗತಿಕವಾಗಿ ಸುಮಾರು 11.5 ಮಿಲಿಯದಷ್ಟು ಉದ್ಯೋಗಗಳು ಸೃಷ್ಟಿಯಾಗುವ ವಿಷಯ. ಕಳೆದ ವರ್ಷ ಭಾರತದಲ್ಲಿ ದತ್ತಾಂಶ ವಿಜ್ಞಾನದ ತಜ್ಞರ ಬೇಡಿಕೆಯು ಶೇ. 45ಕ್ಕೇರಿತ್ತು. ಇನ್ನು ದತ್ತಾಂಶ ವಿಜ್ಞಾನಕ್ಕೆ ಎ.ಐ.ಯ ಬೆಂಬಲ ಬೇಕೇ ಬೇಕು. ಇದರ ಅರ್ಥ ಏನೆಂದರೆ, ಮುಂದಿನ ದಿನಗಳಲ್ಲಿ ಎ.ಐ. ಮತ್ತು ದತ್ತಾಂಶ ವಿಜ್ಞಾನಕ್ಕೆ ಬೇಡಿಕೆಯು ಗಗನಕ್ಕೇರಲಿದೆ. ಅಧ್ಯಯನಗಳು ತಿಳಿಸುವಂತೆ, ಎ.ಐ. ಮತ್ತು ದತ್ತಾಂಶ ವಿಜ್ಞಾನವನ್ನು ವಿದ್ಯಾರ್ಥಿಗಳು ವಿಶೇಷ ವಿಷಯಗಳಾಗಿ ಪರಿಗಣಿಸಬಾರದು. ಏಕೆಂದರೆ ಈಗಾಗಲೇ ಅವು ಮುಖ್ಯವಾಹಿನಿಯ ಕೌಶಲಗಳೆಂಬಂತಾಗಿವೆ. ಸುಮಾರು 30 ವರ್ಷಗಳ ಹಿಂದೆ ಕಂಪ್ಯೂಟರ್ ಕಲಿಯುವುದೇ ಒಂದು ವಿಶೇಷವಾಗಿತ್ತು. ಆದರೆ ಇಂದು? ಕಂಪ್ಯೂಟರ್ ಕೂಡ ಸಾಮಾನ್ಯ ಜನಜೀವನದ ಒಂದು ಕೌಶಲ. ಹಾಗೆಯೇ ಎ.ಐ. ಮತ್ತು ದತ್ತಾಂಶ ವಿಜ್ಞಾನವೂ ಸಾಮಾನ್ಯ ಜನಜೀವನವನ್ನು ಪ್ರವೇಶಿಸಿದೆ. ಮಾತ್ರವಲ್ಲ, ಪ್ರತಿಯೊಂದು ಕ್ಷೇತ್ರವೂ ಎ.ಐ. ಮತ್ತು ದತ್ತಾಂಶ ವಿಜ್ಞಾನಕ್ಕೆ ಅನುಗುಣವಾಗಿ ಹೊಸದಾಗಿ ಪುನರ್‌ವಿನ್ಯಾಸಗೊಳ್ಳುತ್ತಿದೆ.

ಸೃಜನಶೀಲ ಆರ್ಥಿಕತೆ

ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಯೂಟ್ಯೂಬ್, ಬ್ಲಾಗ್ ಮೊದಲಾದವುಗಳಿಗೆ ತಮ್ಮ ಸೃಜನಶೀಲ ಚಟುವಟಿಕೆಗಳನ್ನು – ಹಾಡುವುದು, ಅಭಿನಯ, ನೃತ್ಯ, ಅಡುಗೆ ಮೊದಲಾದವುಗಳನ್ನು ಬಳಸಿ ವಿಡಿಯೋಗಳನ್ನು ಮಾಡಿ, ಹರಿಬಿಡುವುದು ನಿಮಗೆಲ್ಲ ಗೊತ್ತೇ ಇದೆ. ಇಂಥವರನ್ನು 'ಕಂಟೆಂಟ್ ಕ್ರಿಯೇಟರ್ಸ್' ಎನ್ನುತ್ತಾರೆ. ಸೃಜನಶೀಲ ವಸ್ತುವಿಷಯಗಳನ್ನು ತಯಾರು ಮಾಡುವುದೇ ಕಂಟೆಂಟ್ ಕ್ರಿಯೇಟರ್ಸ್ ಕೆಲಸ. ಒಂದೊಮ್ಮೆ ಬಹಳ ಅಪರೂಪವೆನಿಸಿದ್ದು, ಇದೀಗ ಒಂದು ಜನಪ್ರಿಯ ಬಿಜ್ನೆಸ್ ಎನಿಸಿದೆ. ಇದನ್ನು 'ಕ್ರಿಯೇಟರ್ ಇಕಾನಮಿ' ಅಂದರೆ 'ಸೃಜನಶೀಲ ಆರ್ಥಿಕತೆ' ಎನ್ನುತ್ತಾರೆ. ಒಂದು ಅಂದಾಜಿನ ಪ್ರಕಾರ, 2030ರ ವೇಳೆಗೆ ಈ ಸೃಜನಶೀಲ ಆರ್ಥಿಕತೆಯು ಐದು ಸಾವಿರ ಕೋಟಿ ರೂಪಾಯಿಗಳನ್ನು ದಾಟುವ ನಿರೀಕ್ಷೆಯಿದೆ.

ಈ ಬಗೆಯಲ್ಲಿ ಕ್ರಿಯೇಟರ್ ಇಕಾನಮಿಯ ಪ್ರಾಮುಖ್ಯ ಹೆಚ್ಚಿರುವುದರಿಂದ, ಇದಕ್ಕೆ ಸಂಬಂಧಪಟ್ಟ ತಂತ್ರಜ್ಞರು ಮತ್ತು ಸೃಜನಶೀಲ ಕಂಟೆಂಟ್ ಕ್ರಿಯೇಟರ್‌ಗಳ ಆವಶ್ಯಕತೆಯೂ ಹೆಚ್ಚಿದೆ. **'ಕಂಟೆಂಟ್ ಸ್ಟ್ರಾಟಜಿಸ್ಟ್' (ವಸ್ತುವಿಷಯಗಳ ಯೋಜನಕಾರ), ಆರ್ಥಿಕ ತಜ್ಞರು (ಡಿಜಿಟಲ್ ವಸ್ತುವಿಷಯಗಳು ಹೇಗೆ ಆದಾಯ ತರಬಲ್ಲದೆಂಬುದಕ್ಕೆ ಮಾರ್ಗದರ್ಶನ ಮಾಡುವವರು), ಬ್ರ್ಯಾಂಡ್ ಕೋಲ್ಯಾಬ್ ಮ್ಯಾನೇಜರ್ಸ್ (ವಿವಿಧ ಬ್ರ್ಯಾಂಡ್‌ಗಳ ನಡುವೆ ಸಹಭಾಗಿತ್ವ ಏರ್ಪಡಿಸುವವರು), ವಿಡಿಯೋ ಎಡಿಟರ್‌ಗಳು (ಚಿತ್ರೀಕರಿಸಿದ ದೃಶ್ಯಗಳನ್ನು ಡಿಜಿಟಲ್ ಮೀಡಿಯಾದಲ್ಲಿ ಹರಿಬಿಡಲು ಯೋಗ್ಯವಾಗುವಂತೆ ಕತ್ತರಿಸಿ, ಜೋಡಿಸಿ, ಸಂಪಾದನೆ ಮಾಡುವವರು)** ಮೊದಲಾದ ಹುದ್ದೆಗಳ ಆವಶ್ಯಕತೆ ಉಂಟಾಗಿದೆ. ಇವೆಲ್ಲ ಕೇವಲ ಮನೋರಂಜನೆ ಮಾತ್ರ ಎಂದುಕೊಂಡರೆ ತಪ್ಪಾಗುತ್ತದೆ. ಆರೋಗ್ಯ, ಶಿಕ್ಷಣ, ಕ್ರೀಡೆ, ಹಣಕಾಸು, ಆಹಾರ, ವ್ಯಾಯಾಮ, ಉತ್ಪನ್ನಗಳ ವಿಶ್ಲೇಷಣೆ... ಹೀಗೆ ಕ್ರಿಯೇಟರ್ ಇಕಾನಮಿ ಕ್ಷೇತ್ರದ ವ್ಯಾಪ್ತಿ ನಾವು ಎಣಿಸಿದ್ದಕ್ಕಿಂತಲೂ ಹೆಚ್ಚಿರುವುದರಿಂದ ಇಲ್ಲಿ ಸೃಷ್ಟಿಯಾಗುವ ಹುದ್ದೆಗಳ ಸಂಖ್ಯೆಯನ್ನು ಅಂದಾಜು ಮಾಡಿ. ಈಗ ಸಾಮಾನ್ಯ ಕಂಪೆನಿ ಕೂಡ ಕಂಟೆಂಟ್ ಕ್ರಿಯೇಟರ್‌ಗಳನ್ನು ಪೂರ್ಣಾವಧಿ ಹುದ್ದೆಗೆ ನೇಮಿಸುತ್ತಿದೆ.

ಭಾರತ ಸರಕಾರವು ತನ್ನ ಈ ಬಾರಿಯ ಬಜೆಟ್‌ನಲ್ಲಿ, ದೇಶಾದ್ಯಂತದ ಸುಮಾರು 15 ಸಾವಿರ ಪ್ರೌಢ ಶಾಲೆಗಳಲ್ಲಿ ಕಂಟೆಂಟ್ ಕ್ರಿಯೇಟರ್ ಲ್ಯಾಬ್‌ಗಳನ್ನು ರೂಪಿಸುವ ಬಗ್ಗೆ ಘೋಷಣೆ ಮಾಡಿದೆ. ಈ ಲ್ಯಾಬ್‌ಗಳು **ಎವಿಜಿಸಿ (ಆ್ಯನಿಮೇಶನ್, ವಿಷುವಲ್ ಇಫೆಕ್ಟ್ಸ್, ಗೇಮಿಂಗ್ ಮತ್ತು ಕಾಮಿಕ್ಸ್)** ಬಗ್ಗೆ ಗಮನ ಹರಿಸುವ ಮೂಲಕ ವಿದ್ಯಾರ್ಥಿಗಳಿಗೆ ಪ್ರೌಢಶಾಲೆಯಿಂದಲೇ ಕ್ರಿಯೇಟರ್ ಇಕಾನಮಿಯಲ್ಲಿ ಹೇಗೆ ವೃತ್ತಿಜೀವನವನ್ನು ರೂಪಿಸಿಕೊಳ್ಳಬಹುದು ಎಂಬ ತರಬೇತಿ ನೀಡುವ ಗುರಿ ಇರಿಸಿಕೊಂಡಿವೆ. ಗುಜರಾತ್‌ನ ಅಹಮದಾಬಾದ್‌ನ **ಮುದ್ರಾ ಇನ್‌ಸ್ಟಿಟ್ಯೂಟ್ ಆಫ್ ಕಮ್ಯುನಿಕೇಶನ್ಸ್ (ಎಂಐಸಿಎ)** ಸಂಸ್ಥೆಯು ವಿದ್ಯಾರ್ಥಿಗಳಿಗೆ ವಿವಿಧ ಕ್ರಿಯೇಟರ್ ಇಕಾನಮಿ ಕೋರ್ಸ್‌ಗಳನ್ನು ನಡೆಸುತ್ತಿದೆ. ಭಾರತದ ಆರ್ಥಿಕತೆಯಲ್ಲಿ ಈ ಕ್ಷೇತ್ರದ ಪಾತ್ರ ಮಹತ್ವದ್ದಾದ್ದರಿಂದ ಈ ಕೋರ್ಸ್‌ಗಳಿಗೂ ವಿಶೇಷ ಮಹತ್ವ ಇದೆ ಮತ್ತು ಈ ಕೋರ್ಸ್‌ಗಳ ತರಬೇತಿಯನ್ನು ಪಡೆದವರಿಗೆ ಕೂಡ.

ಗೇಮಿಂಗ್

ಇಲ್ಲಿ ಗೇಮಿಂಗ್ ವಿಷಯ ಏಕೆ ಬಂತು? ಈ ಪ್ರಶ್ನೆಗೆ ಉತ್ತರ ಬೇಕಾದರೆ, ಗೇಮಿಂಗ್ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಕಂಪ್ಯೂಟರ್, ಮೊಬೈಲ್‌ನಂಥ ಎಲೆಕ್ಟ್ರಾನಿಕ್ ವಸ್ತುಗಳಲ್ಲಿ ಡಿಜಿಟಲ್ ಆಟಗಳನ್ನು ಆಡುವುದೇ 'ಗೇಮಿಂಗ್'. **'ಕ್ಯಾಂಡಿ ಕ್ರಶ್'** ಒಂದು ಜನಪ್ರಿಯ ಮೊಬೈಲ್ ಆಟ. ಒಂದು ಅಂದಾಜಿನ ಪ್ರಕಾರ, ಐದು ಮಿಲಿಯಕ್ಕೂ ಹೆಚ್ಚು ಡಿಜಿಟಲ್ ಆಟಗಳು ಜಗತ್ತಿನಾದ್ಯಂತ ಇವೆ. ಪ್ರತಿ ವರ್ಷವೂ ಸಾವಿರಾರು ಆಟಗಳು ಈ ಪಟ್ಟಿಗೆ ಸೇರುತ್ತಿವೆ.

ಡಿಜಿಟಲ್ ಆಟಗಳು ಪರಸ್ಪರ ಸಂವಾದಾತ್ಮಕ. ಗೇಮಿಂಗ್‌ನಲ್ಲಿ ಆಡುವವರ ಅನುಭವವನ್ನು ನೈಜಗೊಳಿಸಲು **ಎ.ಆರ್./ವಿ.ಆರ್. ತಂತ್ರಜ್ಞಾನವನ್ನು** ಬಳಸಲಾಗುತ್ತದೆ. ಎ.ಆರ್. ಅಂದರೆ 'ಆಗ್ಮೆಂಟೆಡ್ ರಿಯಾಲಿಟಿ'. ಅಂದರೆ, ಡಿಜಿಟಲ್ ಅಂಶಗಳನ್ನು ನೈಜ ಜಗತ್ತಿಗೆ ತರುವುದು. ವಿ.ಆರ್. ಅಂದರೆ 'ವರ್ಚುವಲ್ ರಿಯಾಲಿಟಿ'. ಡಿಜಿಟಲ್ ಪರಿಸರದಲ್ಲಿ ನೈಜ ಅನುಭವವನ್ನು ಆಟಗಾರರಿಗೆ ನೀಡುವುದು. ಇದರಲ್ಲಿ ಆಟಗಾರರು ತಾವು ಸ್ವತಃ ಆಟದ ಒಳಗೆಯೇ ಇದ್ದಂಥ ಅನುಭವವನ್ನು ಪಡೆಯುತ್ತಾರೆ.

ಡಿಜಿಟಲ್ ಆಟಗಳು ಹಾನಿಕಾರಕ. ಸಮಯ, ಮನಃಸ್ಥಿತಿ ಮತ್ತು ಹಣ ಎಲ್ಲವನ್ನೂ ದೋಚುತ್ತವೆ ಎಂಬ ಆರೋಪಗಳೆಲ್ಲ ಒಂದೆಡೆ. ಇನ್ನೊಂದೆಡೆ, ಈ ಗೇಮಿಂಗ್ ಉದ್ಯಮವನ್ನು ಪರಿಶೀಲಿಸಿದಾಗ, ಜಾಗತಿಕವಾಗಿ ಸಿನೆಮಾ ಮತ್ತು ಸಂಗೀತ ಈ ಎರಡೂ ಉದ್ಯಮಗಳ ಒಟ್ಟು ವ್ಯವಹಾರಕ್ಕಿಂತಲೂ ಹೆಚ್ಚು ವ್ಯವಹಾರ ಅಂದರೆ, ಬಿಲಿಯನ್‌ಗಳ ಲೆಕ್ಕದಲ್ಲಿ, ಈ ಗೇಮಿಂಗ್ ಉದ್ಯಮದಲ್ಲಾಗುತ್ತಿದೆ. ಅಂಥ ದೊಡ್ಡ ಮಟ್ಟದ ಉದ್ಯಮವನ್ನು ಮುಂದುವರಿಸಿಕೊಂಡು ಹೋಗಲು, ತಂತ್ರಜ್ಞರೂ ದೊಡ್ಡ ಮಟ್ಟದಲ್ಲಿಯೇ ಬೇಕಾಗುತ್ತಾರೆ. ಭಾರತದಲ್ಲಿಯೇ ಈ ಉದ್ಯಮದಿಂದ ವ್ಯವಹಾರವು 2026ರಲ್ಲಿ ಹತ್ತೂವರೆ ಸಾವಿರ ಕೋಟಿ ರೂಪಾಯಿಗಳನ್ನು ದಾಟುವ ನಿರೀಕ್ಷೆಯಿದೆ. ಆದ್ದರಿಂದಲೇ ಇಲ್ಲಿ ಆಟಗಳ ವಿನ್ಯಾಸ, **3ಡಿ ಕಲೆ, ವಿ.ಆರ್. ಆರ್ಕಿಟೆಕ್ಚರ್** (ಕಟ್ಟಡಗಳ ವಿನ್ಯಾಸಕ್ಕೆ ವರ್ಚುವಲ್ ರಿಯಾಲಿಟಿಯನ್ನು ಅಳವಡಿಸಿ, ತಮ್ಮ ಗ್ರಾಹಕರಿಗೆ ಒಂದು ನೈಜವಾದ ಅನುಭವವನ್ನು ಸೃಷ್ಟಿಸುವುದು) ಮತ್ತು **ಇ-ಸ್ಪೋರ್ಟ್ಸ್ ಮ್ಯಾನೇಜ್ಮೆಂಟ್** (ಡಿಜಿಟಲ್ ಆಟಗಳ ಜಗತ್ತಿನಲ್ಲಿ ಆಟಗಳನ್ನು ಆಯೋಜಿಸುವುದು, ಸ್ಪರ್ಧೆಗಳನ್ನು ಹಮ್ಮಿಕೊಳ್ಳುವುದು ಹಾಗೂ ಇವೆಲ್ಲವುಗಳ ಒಟ್ಟು ನಿರ್ವಹಣೆ) ಉದ್ಯೋಗಗಳ ಅವಕಾಶಗಳು ಹೆಚ್ಚುತ್ತಿವೆ. ಅಷ್ಟೇ ಅಲ್ಲ, ಡಿಜಿಟಲ್ ಆಟಗಳನ್ನು ವಿನ್ಯಾಸಗೊಳಿಸುವ ಶಿಬಿರಗಳೂ ಇತ್ತೀಚೆಗೆ ಆನ್‌ಲೈನ್‌ನಲ್ಲಿ ನಡೆಯುತ್ತಿವೆ. ಆಶ್ಚರ್ಯಕರ ಸಂಗತಿ ಎಂದರೆ, ಹೆತ್ತವರೇ ತಮ್ಮ ಮಕ್ಕಳನ್ನು ಇಂಥ ಶಿಬಿರಗಳಿಗೆ ಸೇರಿಸುತ್ತಿದ್ದಾರೆ.

ಹಸುರು ಉದ್ಯೋಗ

ಜಾಗತಿಕವಾಗಿ ಹವಾಮಾನದಲ್ಲಾಗುತ್ತಿರುವ ಬದಲಾವಣೆಯನ್ನು ಚರ್ಚಿಸುವ ಸಲುವಾಗಿ

ವಿಶ್ವಸಂಸ್ಥೆಯು ಪ್ರತಿ ವರ್ಷವೂ ನಡೆಸುವ ಅಂತಾರಾಷ್ಟ್ರೀಯ ಸಮ್ಮೇಳನ UNFCCC - ಯುನೈಟೆಡ್ ನೇಶನ್ಸ್ ಫ್ರೇಮ್ ವರ್ಕ್ ಕನ್ವೆನ್ಶನ್ ಆನ್ ಕ್ಲೈಮೇಟ್ ಚೇಂಜ್ ದಲ್ಲಿ ಯುರೋಪಿಯನ್ ಒಕ್ಕೂಟ ಮತ್ತು ಭಾರತವೂ ಸೇರಿದಂತೆ ಇತರ ಸುಮಾರು 200 ರಾಷ್ಟ್ರಗಳು ಇದರಲ್ಲಿ ಭಾಗಿಯಾಗುತ್ತವೆ. 2015ರ ಡಿಸೆಂಬರ್‌ನಲ್ಲಿ, ಪ್ಯಾರಿಸ್‌ನಲ್ಲಿ ಈ ಸಮ್ಮೇಳನ ನಡೆದ ಸಂದರ್ಭದಲ್ಲಿ COP21 (COP – ಕಾನ್ಫರೆನ್ಸ್ ಆಫ್ ದ ಪಾರ್ಟೀಸ್ ಅಂದರೆ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವ ಸಮ್ಮೇಳನದ ಒಂದು ಅಂಗ. COP21 ಅಂದರೆ, ಅದು 21ನೆಯ ಸಮ್ಮೇಳನವಾಗಿತ್ತು.) ಜಗತ್ತಿನ ರಾಷ್ಟ್ರಗಳೆಲ್ಲ ಜಾಗತಿಕ ತಾಪಮಾನವನ್ನು ಕೂಡಲೇ 1.5°C (ಸೆಲ್ಶಿಯಸ್) ಗೆ ಇಳಿಸಬೇಕು ಮತ್ತು 2070ರ ವೇಳೆಗೆ ಜಾಗತಿಕ ತಾಪಮಾನವನ್ನು 'ನೆಟ್ ಝೀರೋ' (net zero) – ಅಂದರೆ 'ನಿವ್ವಳ ಶೂನ್ಯ'ಕ್ಕೆ ಇಳಿಸುವ ಗುರಿಯನ್ನು ಹಾಕಿಕೊಳ್ಳಬೇಕು ಎಂಬ ಅಭಿಪ್ರಾಯಕ್ಕೆ ಬರಲಾಯಿತು. ಇದನ್ನು ಆ ಸಮ್ಮೇಳನದಲ್ಲಿ ಭಾಗವಹಿಸಿದ್ದ ರಾಷ್ಟ್ರಗಳೆಲ್ಲ ಒಪ್ಪಿ, ತಾವೆಲ್ಲರೂ 'ನೆಟ್ ಝೀರೋ' ಗುರಿಗೆ ಬದ್ಧರಾಗಿರುವುದಾಗಿ, ಒಂದು ಒಪ್ಪಂದಕ್ಕೆ ಸಹಿ ಹಾಕಿದರು. ಇದೇ ಪ್ಯಾರಿಸ್ ಒಪ್ಪಂದ. ಭಾರತವೂ ಪ್ಯಾರಿಸ್ ಒಪ್ಪಂದಕ್ಕೆ ಸಹಿ ಹಾಕಿರುವುದರಿಂದ, ನೆಟ್ ಝೀರೋ ಗುರಿಯನ್ನು ತಲುಪಲು ರಾಷ್ಟ್ರಾದ್ಯಂತ ಕೇಂದ್ರ ಸರಕಾರದ ಮುತುವರ್ಜಿಯಿಂದ ಬಹಳಷ್ಟು ಕೆಲಸಗಳಾಗುತ್ತಿವೆ. ಇದರ ಪರಿಣಾಮವೇ **ಹಸುರು ಉದ್ಯೋಗ**ಗಳ ಹುಟ್ಟು. **ಕ್ಲೈಮೇಟ್ ರಿಸ್ಕ್ ಅನಾಲಿಸ್ಟ್** (ಹವಾಮಾನದ ಅಪಾಯಗಳ ವಿಶ್ಲೇಷಕ), **ಎನ್ವೈರ್ನ್‌ಮೆಂಟಲ್ ಕನ್ಸಲ್ಟೆಂಟ್** (ಪರಿಸರ ಸಲಹೆಗಾರ) ಮತ್ತು **ಕಾರ್ಬನ್ ಫುಟ್‌ಪ್ರಿಂಟ್ ಸ್ಟ್ರಾಟೆಜಿಸ್ಟ್** (ಇಂಗಾಲದ ವಿಸರ್ಜನೆಯನ್ನು ಗುರುತಿಸುವ ಮತ್ತು ನೆಟ್ ಝೀರೋ ಗುರಿಯನ್ನು ತಲುಪಲು ಬೇಕಾದ ತಂತ್ರಗಳನ್ನು ಹೆಣೆಯುವ ತಂತ್ರಜ್ಞ) ಹುದ್ದೆಗಳನ್ನು ಎನ್.ಜಿ.ಒ.ಗಳು ಮಾತ್ರವಲ್ಲ, ಇತರ ಕಂಪೆನಿಗಳೂ ಸೃಷ್ಟಿಸಿವೆ. **ಹವಾಮಾನ ತಜ್ಞರು, ಹಸುರು ಶಕ್ತಿ** (ಗ್ರೀನ್ ಎನರ್ಜಿ – ನೀರು, ಗಾಳಿ ಮತ್ತು ಸೌರ ಶಕ್ತಿಯಂಥ ನೈಸರ್ಗಿಕ ಮತ್ತು ನವೀಕರಿಸಬಹುದಾದ ಶಕ್ತಿ) **ಪರಿಣತರು** ಮತ್ತು **ಸಸ್ಟೈನೆಬಿಲಿಟಿ ಕನ್ಸಲ್ಟೆಂಟ್** (ಸುಸ್ಥಿರ ಪರಿಸರ ಸಲಹೆಗಾರ – ಸಂಸ್ಥೆಗಳು ಪರಿಸರದ ಮೇಲೆ ಬೀರಬಹುದಾದ ಪರಿಣಾಮವನ್ನು ಕಡಿಮೆ ಮಾಡುವ ತಂತ್ರಗಳು, ಸಂಪನ್ಮೂಲಗಳನ್ನು ಜಾಣತನದಿಂದ ಪರಿಣಾಮಕಾರಿಯಾಗಿ ಬಳಸುವ ತಂತ್ರಗಳು ಹಾಗೂ ಹವಾಮಾನ ಮತ್ತು ಸಾಮಾಜಿಕ ಬದ್ಧತೆಗಳಿಗನುಗುಣವಾಗಿ ಗುರಿಗಳನ್ನು ತಲುಪುವ ತಂತ್ರಗಳನ್ನು ಹೆಣೆಯುವವರು) ಉದ್ಯೋಗಗಳ ಬೇಡಿಕೆಯೂ ಈಗ ಹೆಚ್ಚುತ್ತಿದೆ.

ಸ್ವಾಸ್ಥ್ಯ ಸಂಬಂಧಿ ಅವಕಾಶಗಳು

ಸ್ವಸ್ಥ ಸಮಾಜಕ್ಕೆ ಶಾರೀರಿಕ ಆರೋಗ್ಯದ ಜೊತೆಗೆ ಮಾನಸಿಕ ಮತ್ತು ಭಾವನಾತ್ಮಕ ಆರೋಗ್ಯವೂ ಮುಖ್ಯ. ತಂತ್ರಜ್ಞಾನವು ಮನುಷ್ಯನ ಬೆರಳ ತುದಿಯನ್ನು ತಲುಪಿದಾಗಿನಿಂದ ಒತ್ತಡವೂ ನೆರಳಿನಂತೆ ಹಿಂಬಾಲಿಸುತ್ತಿದೆ. ಹಿಂದೆಲ್ಲ ಮದುವೆ, ನಿಶ್ಚಿತಾರ್ಥ ಮೊದಲಾದ ಸಮಾರಂಭಗಳನ್ನು ಸಂಬಂಧಿಕರು, ಸ್ನೇಹಿತರು, ನೆರೆಹೊರೆಯವರು ಎಲ್ಲರೂ ಒಟ್ಟುಸೇರಿ ನಿಭಾಯಿಸಿಬಿಡುತ್ತಿದ್ದರು.

ಇಂದು ಅಂಥ ಸಮಾರಂಭಗಳ ನಿಭಾವಣೆಗೆಂದೇ **ಕಾರ್ಯಕ್ರಮ ವ್ಯವಸ್ಥಾಪಕರು (ಇವೆಂಟ್ ಮ್ಯಾನೇಜರ್ಸ್)** ಇದ್ದಾರೆ. ಕಾರ್ಯಕ್ರಮದ ಆಯೋಜಕರಿಗೆ ಒಂದಿನಿತೂ ಒತ್ತಡವಿಲ್ಲ; ಕಾರ್ಯಕ್ರಮದಲ್ಲಿ ನಗುನಗುತ್ತಾ ಪಾಲ್ಗೊಳ್ಳಬಹುದು. ಹೀಗೆ ಒತ್ತಡವನ್ನು ಬೇರೆ ಕಡೆಗೆ ವರ್ಗಾಯಿಸುವ ವಿವಿಧ ಉಪಾಯಗಳನ್ನು ಮನುಷ್ಯ ಕಂಡುಕೊಂಡರೂ ಕೂಡ ಕೆಲವೊಮ್ಮೆ ಅನಿವಾರ್ಯವಾಗಿ ಒತ್ತಡದೊಂದಿಗೆ ಬದುಕಬೇಕಾಗುತ್ತದೆ. ಆಗ **ಮನೋವೈದ್ಯರು, ಮಾನಸಿಕ ಆರೋಗ್ಯದ ಸಲಹೆಗಾರರು** (ಕೌನ್ಸೆಲರ್‌ಗಳು), **ಮಕ್ಕಳ ಮನೋವೈದ್ಯರು, ಸ್ವಾಸ್ಥ್ಯ ತರಬೇತುದಾರರು, ಯೋಗ ಮತ್ತು ಧ್ಯಾನ ಸಾಧಕರು** ಮೊದಲಾದ ವಿಶೇಷಜ್ಞರ ಸಹಾಯ ಬೇಕಾಗುತ್ತದೆ. ಇಂದು ದೊಡ್ಡ ದೊಡ್ಡ ಕಂಪೆನಿಗಳು ತಮ್ಮ ಉದ್ಯೋಗಿಗಳ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಉತ್ತೇಜಿಸಲು ಇಂಥ ವಿಶೇಷಜ್ಞರನ್ನು ನೇಮಿಸಿಕೊಳ್ಳಲಾರಂಭಿಸಿವೆ. ಶಾಲೆಗಳಲ್ಲಿ ಕೌನ್ಸೆಲರ್ ಹುದ್ದೆಯೂ ಸೃಷ್ಟಿಯಾಗಿದೆ. ಭಾವನಾತ್ಮಕ ಬುದ್ಧಿಮತ್ತೆಗೆ ಪ್ರಾಮುಖ್ಯ ದೊರಕುತ್ತಿರುವುದರಿಂದ ಮುಂದಿನ ದಿನಗಳಲ್ಲಿ ಈ ದಿಕ್ಕಿನಲ್ಲಿ ಬೇಡಿಕೆ ಮತ್ತಷ್ಟು ಹೆಚ್ಚುವ ನಿರೀಕ್ಷೆಯಿದೆ. ಮನಃಶಾಸ್ತ್ರ, ಯೋಗ-ಧ್ಯಾನ, ಕೌನ್ಸೆಲಿಂಗ್, ದೈಹಿಕ ಆರೋಗ್ಯ ಮತ್ತು ವ್ಯಾಯಾಮ ಕ್ಷೇತ್ರಗಳಲ್ಲಿ ಪದವಿ ಪಡೆದುಕೊಳ್ಳಬೇಕೆನ್ನುವ ಇಚ್ಛೆ ಉಳ್ಳವರಿಗೆ ನಿರಾಶೆಯಾಗುವುದಿಲ್ಲ.

ನಿರಂತರ ಕಲಿಕೆ, ಸತತ ಪ್ರಯತ್ನ

ಒಟ್ಟಾರೆಯಾಗಿ ಹೇಳುವುದಾದರೆ, ಸಮಾಜದಲ್ಲಾಗಿರುವ ಬದಲಾವಣೆಯಿಂದಾಗಿ, ಸೂಕ್ತ ಶೈಕ್ಷಣಿಕ ಆಯ್ಕೆಯ ಮೂಲಕ ವಿದ್ಯಾರ್ಥಿಗಳು ತಮ್ಮ ವೃತ್ತಿಜೀವನವನ್ನು ಯಾವ ಬಗೆಯಲ್ಲಿ ವಿನ್ಯಾಸಗೊಳಿಸಬೇಕೆನ್ನುವ ಆವಶ್ಯಕತೆಯು ಉಂಟಾಗಿದೆ. ಇದನ್ನು ತಮಗೆ ಎದುರಾದ ಸಂಕಟ ಎಂದು ವಿದ್ಯಾರ್ಥಿಗಳು ತಿಳಿದುಕೊಳ್ಳಬಾರದು. ವಿದ್ಯಾರ್ಥಿಯ ಕೌಶಲ, ಆಸಕ್ತಿ ಮತ್ತು ಚುರುಕುತನವೇ ಅವರ ಶೈಕ್ಷಣಿಕ ಜೀವನವನ್ನು, ಆ ಬಳಿಕ ಅವರ ವೃತ್ತಿಜೀವನವನ್ನೂ ನಿರ್ಣಯಿಸುವುದರಿಂದ, ಸಮಾಜದಲ್ಲಾಗಿರುವ ಬದಲಾವಣೆಯನ್ನು ವಿದ್ಯಾರ್ಥಿಗಳು ತಮ್ಮ ಜೀವನವನ್ನು ವಿನ್ಯಾಸಗೊಳಿಸಲಿಕ್ಕೆಂದೇ ಬಂದಿರುವ ಆಹ್ವಾನ ಎಂದು ತಿಳಿಯಬೇಕು. ಹಿಂದಿನಂತೆ, ಕೋರ್ಸ್ ಒಂದನ್ನು ಆಯ್ಕೆ ಮಾಡಿಕೊಂಡು, ಅದು ಪೂರ್ಣಗೊಂಡ ಕೂಡಲೇ ಒಳ್ಳೆಯ ಕಂಪೆನಿ ಹುಡುಕಿ ಉದ್ಯೋಗಕ್ಕೆ ಸೇರಿಕೊಂಡರೆ, ಅಲ್ಲಿಗೆ ಜವಾಬ್ದಾರಿ ಮುಗಿಯುವುದಿಲ್ಲ. ಕೆಲವೊಮ್ಮೆ ಮತ್ತೆ ಮತ್ತೆ ಓದುವ, ಕೋರ್ಸ್ ಮಾಡುವ ಆವಶ್ಯಕತೆಯೂ ಮೂಡಿಬರಬಹುದು. ಹಾಗಾಗಿ ಕಲಿಕೆ ಎಂದರೆ ತಾತ್ಕಾಲಿಕವಲ್ಲ, ಈಗಿನ ಪರಿಭಾಷೆಯಲ್ಲಿ ಅದು ನಿರಂತರ, ಜೀವನಪರ್ಯಂತದ ಆವಶ್ಯಕತೆ.

ಅಂತರ್ಜಾಲದಲ್ಲಿ **ಕೋರ್ಸೆರಾ** (Coursera), **ಅಪ್‌ಗ್ರೇಡ್** (upGrade) ಮತ್ತು **ಸ್ಕಿಲ್‌ಶೇರ್** (Skillshare) – ಇವು ಮೂರು ಬಹು ಪ್ರಮುಖವಾದ ಆನ್ಲೈನ್ ಕಲಿಕಾ ಕೇಂದ್ರಗಳು. ಇಲ್ಲಿ ನೀಡಲಾಗುವ ಕೋರ್ಸ್‌ಗಳು ದೇಶಾದ್ಯಂತ ಬಹಳ ಮಾನ್ಯತೆ ಪಡೆದಿವೆ. ಬೇರೆ ಬೇರೆ ಕಂಪೆನಿಗಳು ಕೂಡ ಈ ಕೋರ್ಸ್‌ಗಳನ್ನು ಅನುಮೋದಿಸಿರುವುದರಿಂದ, ಇಲ್ಲಿ ವಿದ್ಯಾರ್ಥಿಗಳು ಪ್ರಮಾಣಪತ್ರ ಪಡೆದು ಅವರ ಬಯೋಡೇಟಾದ ತೂಕವನ್ನು ಹೆಚ್ಚಿಸಿಕೊಳ್ಳಬಹುದು.

ಕಾರ್ಪೊರೇಟ್ ಜಗತ್ತಿನಲ್ಲಿ ಈಗ ಕೇವಲ ಪದವಿಯಷ್ಟೇ ಸಾಲುವುದಿಲ್ಲ. ಅಭ್ಯರ್ಥಿಗಳಲ್ಲಿ ಶೈಕ್ಷಣಿಕ ಪದವಿಯಲ್ಲದೆ, ಇನ್ನೂ ಏನೇನು ಪ್ರಮಾಣಪತ್ರಗಳಿವೆ, ಇನ್ನೂ ಏನೇನು ಕೌಶಲಗಳಿವೆ ಎಂದು ನೋಡಲಾಗುತ್ತದೆ. ಹೀಗೆ ಬೇರೆ ಬೇರೆ ಸಾಮರ್ಥ್ಯ, ಕ್ಷಮತೆಗಳಿಂದ ವಿಭಿನ್ನವಾಗಿರುವ ಬಯೋಡೇಟಾಕ್ಕೆ ಅವಕಾಶಗಳು ಹೆಚ್ಚು. ಹಾಗಾಗಿ ವಿದ್ಯಾರ್ಥಿಗಳು ತಮ್ಮ ಇಚ್ಛೆಯ ಕೋರ್ಸ್‌ನ ಜೊತೆಗೆ ಹೆಚ್ಚುವರಿಯಾಗಿ ತಮ್ಮನ್ನು ತಾವು ತಮ್ಮ ಕೌಶಲಗಳ ಜೊತೆಗೆ ಗುರುತಿಸಿಕೊಳ್ಳಲು ಪ್ರಯತ್ನಿಸಬೇಕು. ಪದವಿಯ ಜೊತೆಗೆ ತಮ್ಮ ಪ್ರತಿಭೆಯನ್ನೂ ಪೋಷಿಸಿಕೊಳ್ಳಬೇಕು. ಆಗ ವೃತ್ತಿ-ಪ್ರವೃತ್ತಿ ಎರಡೂ ಸೇರಿದ ಸುಂದರ, ಸುದೃಢ ವ್ಯಕ್ತಿತ್ವವು ಸಮಾಜದಲ್ಲಿ, ಔದ್ಯಮಿಕ ರಂಗದಲ್ಲಿ ಹೆಚ್ಚು ಯಶಸ್ವಿ ಎನಿಸಿಕೊಳ್ಳುತ್ತದೆ. ಅಷ್ಟೇ ಅಲ್ಲ, ವಿದ್ಯಾರ್ಥಿಗಳಿಗೆ ಪ್ರಸ್ತುತ ಮತ್ತು ಅಪ್ರಸ್ತುತಗಳ ತಿಳುವಳಿಕೆ ಇದ್ದಾಗ, ತಮ್ಮ ಕೌಶಲವನ್ನು ದುಡಿಸಿಕೊಳ್ಳುವ, ಆಸಕ್ತಿಯಿಂದ ತೆರೆದುಕೊಳ್ಳುವ ಮತ್ತು ಚುರುಕುತನದಿಂದ ಅರಳುವ ಹಾದಿಯೊಂದನ್ನು ತಮ್ಮದಾಗಿಸಿಕೊಳ್ಳುವುದು ಸುಲಭ.

ಬದಲಾದ ಶಿಕ್ಷಣ ಮತ್ತು ಔದ್ಯಮಿಕ ಜಗತ್ತಿನ ಆವಶ್ಯಕತೆಗಳನ್ನು ಪೋಷಕರು ಕೂಡ ಅರ್ಥಮಾಡಿಕೊಳ್ಳಬೇಕು. ತಾವು ಮುಟ್ಟದ ಗುರಿಗಳನ್ನು ಮಕ್ಕಳ ಮುಖೇನ ಮುಟ್ಟುವ 'ಹಮ್ಮು' ಬಿಡಬೇಕು. ಡಿಗ್ರಿ ಮಾತ್ರವಲ್ಲ, ನಮ್ಮ ಮಕ್ಕಳು ಒಳ್ಳೆಯ ವ್ಯಕ್ತಿಗಳೂ ಆಗುವಂತೆ ಮಾಡುವ ಜವಾಬ್ದಾರಿ ಹೆತ್ತವರದ್ದು. ರುಚಿ, ಅಭಿರುಚಿ ಸೇರಿದ ವ್ಯಕ್ತಿತ್ವಕ್ಕೆ ಸಮಾಜದ ಒತ್ತಡಗಳನ್ನು ನಿಭಾಯಿಸುವ ಕಲೆಯೂ ತಿಳಿಯುತ್ತದೆ. ತಮ್ಮ ತಮ್ಮ ಮಕ್ಕಳ ಶಕ್ತಿ, ಆಸಕ್ತಿಗೆ ಬೆಂಬಲವಾಗಿ ಪೋಷಕರು ನಿಂತರೆ, ಸಮಾಜದಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆಯ ಪ್ರಕರಣಗಳು ಗಣನೀಯವಾಗಿ ಕಡಿಮೆಯಾಗಬಲ್ಲದು. ಪದವಿ, ಹಣ, ಗೌರವ, ಯಶಸ್ಸು ಎಲ್ಲರಿಗೂ ಬೇಕು. ಎಲ್ಲಕ್ಕಿಂತ ಹೆಚ್ಚಾಗಿ ನಿರಂತರ ಪ್ರಯತ್ನವೊಂದೇ ಸಾಧನೆಯ ಮೆಟ್ಟಿಲು ಎನ್ನುವ ಅರಿವಿರಬೇಕು. ಎಲ್ಲರೂ ತುಳಿಯುವ ಹಾದಿಯನ್ನೇ ತುಳಿಯಬೇಕೆಂದೇನಿಲ್ಲ, ನಮ್ಮ ದೃಷ್ಟಿ ನಮ್ಮ ಗುರಿ ಮತ್ತು ನಮ್ಮ ಒಲವು ನಿಖರವಾಗಿದ್ದರೆ ಯಾರೂ ಇದುವರೆಗೆ ತುಳಿಯದ ಅಪರಿಚಿತ ಹಾದಿಯೂ ಗೆಲುವನ್ನು ತಂದುಕೊಟ್ಟೀತು. ■

ಹಾಗೆ ಹೋಗಿ ಹೀಗೆ ಬಂದರೇಕೆ?

ವರಿಷ್ಠರನ್ನು ಕಂಡು ದುಮ್ಮಾನ ತೋಡಿಕೊಳ್ಳಲೆಂದು ದೆಹಲಿಗೆ ಹೋಗಿದ್ದ ಕಾಂಗ್ರೆಸ್‌ನ ಹಿರಿಯ ನಾಗರಿಕರು ನಿರಾಶರಾಗಿ ಹಿಂದಿರುಗಿದ್ದೇಕೆ? ಇಲ್ಲಿದೆ ಕಾರಣ.

❑ ಫಲ್ಗುಣಿ

ಕಳೆದ ವಾರ ದೆಹಲಿಗೆ ಹೋದ ರಾಜ್ಯ ಕಾಂಗ್ರೆಸ್‌ನ ಹಿರಿಯ ಶಾಸಕರು ನಿರಾಶೆಯಿಂದ ಹಿಂದಿರುಗಿದ್ದಾರೆ.

ಅಂದ ಹಾಗೆ, ಈ ಹಿರಿಯ ಶಾಸಕರು ಒಂದು ಉದ್ದೇಶದೊಂದಿಗೆ ದೆಹಲಿ ದಂಡಯಾತ್ರೆ ಮಾಡಿದ್ದರು. ರಾಜ್ಯದಲ್ಲಿ ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಅಸ್ತಿತ್ವಕ್ಕೆ ಬಂದು ಮೂರು ವರ್ಷ ಕಳೆಯುತ್ತಾ ಬಂತು. ಹೀಗಾಗಿ ಸರಕಾರಕ್ಕೆ ಮೂರು ವರ್ಷ ಭರ್ತಿಯಾಗುವ ಸಂದರ್ಭದಲ್ಲಾದರೂ ರಾಜ್ಯ ಸಚಿವ ಸಂಪುಟವನ್ನು ಪುನಾರಚಿಸಬೇಕು ಎಂಬುದು ಅವರ ಉದ್ದೇಶ.

ವಾಸ್ತವವಾಗಿ ಸರಕಾರಕ್ಕೆ ಎರಡು ವರ್ಷ ಭರ್ತಿಯಾದಾಗ ಮುಖ್ಯಮಂತ್ರಿ ಸಿದ್ಧರಾಮಯ್ಯನವರೇ ಪಕ್ಷದ ವರಿಷ್ಠರನ್ನು ಕೋರಿದ್ದರಂತೆ. ಸರಕಾರಕ್ಕೆ ಎರಡು ವರ್ಷ ಭರ್ತಿಯಾದ ಸಂದರ್ಭದಲ್ಲಿ ರಾಜ್ಯ ಸಚಿವ ಸಂಪುಟವನ್ನು ಪುನಾರಚಿಸಿದರೆ ಒಳ್ಳೆಯದು. ಯಾಕೆಂದರೆ ಆಡಳಿತ ಯಂತ್ರಕ್ಕೆ ಚುರುಕು ನೀಡಲು ಇದರಿಂದ ಸಾಧ್ಯವಾಗುತ್ತದೆ ಎಂದು ವಿವರಿಸಿದ್ದರಂತೆ.

ಮೂಲಗಳ ಪ್ರಕಾರ, ಸಿದ್ಧರಾಮಯ್ಯನವರು ಹೈಕಮಾಂಡ್ ವರಿಷ್ಠರ ಮುಂದೆ ಇಂಥ ಪ್ರಸ್ತಾವವನ್ನಿಟ್ಟ ಕಾಲದಲ್ಲಿ ಖುದ್ದು ರಾಹುಲ್ ಗಾಂಧಿ ಅವರು ಕೂಡಾ ಸಂಪುಟ ಪುನಾರಚನೆ ಮಾಡಿ ಎಂದು ಒಪ್ಪಿಗೆ ಕೊಟ್ಟಿದ್ದರು.

ಆದರೆ ಈ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ಮುಖ್ಯಮಂತ್ರಿ ಸಿದ್ಧರಾಮಯ್ಯನವರ ಆಪ್ತರೇ ಮಧ್ಯೆ ಪ್ರವೇಶಿಸಿ, 'ಈಗ ಸಂಪುಟ ಪುನಾರಚನೆ ಮಾಡಿದರೆ ಮಂತ್ರಿಗಿರಿ ಕಳೆದುಕೊಳ್ಳುವವರಿಗೆ ಅದಕ್ಷರು ಎಂಬ ಹಣೆಪಟ್ಟಿ ಅಂಟಿಕೊಳ್ಳುತ್ತದೆ. ಹೀಗಾಗಿ ಸರಕಾರಕ್ಕೆ ಎರಡೂವರೆ ವರ್ಷ ಭರ್ತಿಯಾದ ಸಂದರ್ಭದಲ್ಲಿ ಪುನಾರಚನೆಗೆ ಕೈ ಹಾಕಿದರೆ ಒಳ್ಳೆಯದು' ಎಂದು ಸಲಹೆ ನೀಡಿದ್ದರು. ಸರಕಾರ ತನ್ನ ಅರ್ಧ ಅಧಿಕಾರಾವಧಿಯನ್ನು ಪೂರ್ಣಗೊಳಿಸಿದ ಸಂದರ್ಭದಲ್ಲಿ ಒಂದಷ್ಟು ಮಂದಿಯನ್ನು ಪಕ್ಷದ ಕೆಲಸಕ್ಕೆ ನಿಯೋಜಿಸಿ, ಬೇರೆಯವರಿಗೆ ಅವಕಾಶ ಕೊಟ್ಟಂತಾಗುತ್ತದೆ ಎಂಬುದು ಅವರ ಸಲಹೆಯ ತಾತ್ಪರ್ಯ.

ಕುತೂಹಲದ ಸಂಗತಿಯೆಂದರೆ, ಇಂಥ ಆಪ್ತರು ನೀಡಿದ ಸಲಹೆ ಮುಖ್ಯಮಂತ್ರಿ ಸಿದ್ಧರಾಮಯ್ಯನವರಿಗೂ ಹಿಡಿಸಿತು. ಹೀಗಾಗಿ ಸಂಪುಟ ಪುನಾರಚನೆ ಮಾಡಿ ಎಂದು ರಾಹುಲ್ ಗಾಂಧಿಯವರು ಗ್ರೀನ್ ಸಿಗ್ನಲ್ ನೀಡಿದ್ದರೂ, ಸಿದ್ಧರಾಮಯ್ಯನವರು ಒಂದಷ್ಟು ಕಾಲ ಕಾಯಲು ನಿರ್ಧರಿಸಿದರು.

ಡಿಕೆಶಿ ಚೌಕಾಶಿ

ಗಮನಿಸಬೇಕಾದ ಸಂಗತಿ ಎಂದರೆ, ಸಿದ್ಧರಾಮಯ್ಯನವರು ರಾಜ್ಯ ಸರಕಾರಕ್ಕೆ ಎರಡೂವರೆ ವರ್ಷ ಭರ್ತಿಯಾಗಲಿ ಎಂದು ಕಾಯಲು ನಿರ್ಧರಿಸಿದ್ದರಿಂದ ಒಂದಷ್ಟು ಬೆಳವಣಿಗೆಗಳು ನಡೆದವು. ಈ ಪೈಕಿ ಮುಖ್ಯವಾದುದು ಅಧಿಕಾರ ಹಂಚಿಕೆಯ ಮಾತು ಭುಗಿಲೆದ್ದಿದ್ದು. ಉಪಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರು : 'ಸರಕಾರ ಅಸ್ತಿತ್ವಕ್ಕೆ ಬರುವಾಗ ಎರಡೂವರೆ ವರ್ಷ ಸಿದ್ಧರಾಮಯ್ಯನವರು ಸಿ.ಎಂ. ಆಗಿರಲಿ, ಅನಂತರದ ಎರಡೂವರೆ ವರ್ಷ ನೀವು ಸಿ.ಎಂ. ಆಗಿ' ಎಂದು ಹೈಕಮಾಂಡ್ ನಾಯಕರ ಸಮ್ಮುಖದಲ್ಲೇ ಒಪ್ಪಂದವಾಗಿತ್ತು. ಅದರ ಪ್ರಕಾರ, ರಾಜ್ಯ ಸರಕಾರಕ್ಕೆ ಎರಡೂವರೆ ವರ್ಷ ಭರ್ತಿಯಾದ ಈ ಸಂದರ್ಭದಲ್ಲಿ ಸಿದ್ಧರಾಮಯ್ಯನವರು ನನಗೆ ಸಿಎಂ ಹುದ್ದೆ ಬಿಟ್ಟುಕೊಡಬೇಕು' ಎಂದು ಬಿಗಿಪಟ್ಟು ಹಿಡಿದರು.

ಯಾವಾಗ ಅವರು ಕಳೆದ ವರ್ಷ ನವೆಂಬರ್ ಹೊತ್ತಿಗೆ ಇಂಥ ತಕರಾರು ತೆಗೆದರೋ, ಆಗ ಪ್ರತಿಯೊಂದು ಹೆಜ್ಜೆಯಲ್ಲೂ ಸಿದ್ಧರಾಮಯ್ಯನವರಿಗೆ ಅಡ್ಡಿಯುಂಟುಮಾಡಲು ತೊಡಗಿದರು. ಹೀಗಾಗಿ 'ಸಂಪುಟ ಪುನಾರಚನೆಗೆ ಅವಕಾಶ ಕೊಡಿ' ಎಂಬ ಸಿದ್ಧರಾಮಯ್ಯನವರ ಮಾತಿಗೆ ಸ್ಪಂದಿಸುವ ಸ್ಥಿತಿಯಲ್ಲಿ ಕಾಂಗ್ರೆಸ್ ಹೈಕಮಾಂಡ್ ಇರಲಿಲ್ಲ.

ಒಂದು ಹಂತದಲ್ಲಿ ಸಿದ್ಧರಾಮಯ್ಯನವರು ದೆಹಲಿಗೆ ಹೋಗಿ ರಾಹುಲ್ ಗಾಂಧಿಯವರಿಂದ ಸಂಪುಟವನ್ನು ಪುನಾರಚಿಸಲು ಹಸುರು ನಿಶಾನೆ ಪಡೆದು ಬಂದರಾದರೂ, ಇದಾದ ಅನಂತರ ದೆಹಲಿಗೆ ದೌಡಾಯಿಸಿದ ಡಿ. ಕೆ. ಶಿವಕುಮಾರ್ ಅವರು , 'ನಾಯಕತ್ವದ ಪ್ರಶ್ನೆ ಇತ್ಯರ್ಥವಾಗದೆ ಸಚಿವ ಸಂಪುಟ ಪುನಾರಚನೆಗೆ ಒಪ್ಪಿಗೆ ನೀಡಬಾರದು' ಎಂದು ಪಟ್ಟು ಹಿಡಿದರು.

ಡಿ. ಕೆ. ಶಿವಕುಮಾರ್ ಅವರು ಹೀಗೆ ಹೇಳಲು ಒಂದು ಕಾರಣವೂ ಇತ್ತು. ಅದೆಂದರೆ, ಇವತ್ತು ರಾಜ್ಯ ಸಚಿವ ಸಂಪುಟವನ್ನು ಪುನಾರಚಿಸಲು ಹೈಕಮಾಂಡ್ ಒಪ್ಪಿಗೆ ನೀಡಿದರೆ ಸಿದ್ಧರಾಮಯ್ಯನವರು ಮುಖ್ಯಮಂತ್ರಿ ಪದವಿಯಲ್ಲಿ ಮುಂದುವರಿಯಲು ಹೈಕಮಾಂಡ್ ಒಪ್ಪಿಗೆ ನೀಡಿದಂತೆಯೇ ಅರ್ಥ. ಹಾಗೇನಾದರೂ ಆದರೆ ಮುಖ್ಯಮಂತ್ರಿ ಪದವಿ ತಮಗೆ ಬೇಕು ಎಂಬ ಹೋರಾಟವೇನಿದೆ, ಅದಕ್ಕೆ ಅಡ್ಡಿಯಾದಂತೆ ಆಗುತ್ತದೆ ಎಂಬುದು.

ಇದೇ ರೀತಿ ಡಿ. ಕೆ. ಶಿವಕುಮಾರ್ ಅವರು ಅಡ್ಡಗಾಲು ಹಾಕಿ ಕುಳಿತಾಗ ಹೈಕಮಾಂಡ್ ವರಿಷ್ಠರಿಗೆ ಅದನ್ನು ನಿರಾಕರಿಸಲು ಸಾಧ್ಯವಾಗಲಿಲ್ಲ. ಹೀಗಾಗಿ ರಾಜ್ಯ ಸರಕಾರಕ್ಕೆ ಎರಡೂವರೆ ವರ್ಷ ಭರ್ತಿಯಾದ ಸಂದರ್ಭದಲ್ಲಿ ಸಂಪುಟ ಪುನಾರಚನೆಗೆ ತಾವೇ ಗ್ರೀನ್ ಸಿಗ್ನಲ್ ನೀಡಿದ್ದರೂ ತತ್‌ಕ್ಷಣ ಮೌನಕ್ಕೆ ಜಾರಿ ಬಿಟ್ಟರು.

ಮಂತ್ರಿಗಿರಿ ಆಕಾಂಕ್ಷಿಗಳ ದಂಡಯಾತ್ರೆ

ಪರಿಣಾಮ, ಸಂಪುಟ ಪುನಾರಚನೆ ಕಾರ್ಯಕ್ಕೆ ಮುಂದಾಗಲು ಮುಖ್ಯಮಂತ್ರಿ ಸಿದ್ಧರಾಮಯ್ಯನವರಿಗೆ ಸಾಧ್ಯವಾಗಲಿಲ್ಲ. ಆದರೆ ಸಂಪುಟ ಪುನಾರಚನೆ ವಿಷಯದಲ್ಲಿ ಹೈಕಮಾಂಡ್ ಇಂಥ ಧೋರಣೆ ತಳೆಯಿತು ಎಂದ ಮಾತ್ರಕ್ಕೆ ಸಂಪುಟ ಪದವಿ ಆಕಾಂಕ್ಷಿಗಳು ಸುಮ್ಮನಿರಲು ಸಾಧ್ಯವೇ?

ಯಾಕೆಂದರೆ, ಇವತ್ತು ರಾಜ್ಯ ಸಚಿವ ಸಂಪುಟಕ್ಕೆ ಸೇರಲು ಕನಿಷ್ಠ ಮೂರು ಡಜನ್‌ನಷ್ಟು ಹಿರಿಯ ಶಾಸಕರು ತಯಾರಿ ಮಾಡಿಕೊಂಡೇ ಬರುತ್ತಿದ್ದಾರೆ. ಇವರೆಲ್ಲ ಮೂರು, ನಾಲ್ಕು , ಐದು ಬಾರಿ ಶಾಸಕರಾದವರು. ಕೆಲವರಂತೂ ಹಲವು ಬಾರಿ ಮಂತ್ರಿಗಳಾಗಿ ಸೇವೆ ಸಲ್ಲಿಸಿದ ಅನುಭವ ಇರುವವರು. ಉದಾಹರಣೆಗೆ ಟಿ. ಬಿ. ಜಯಚಂದ್ರ, ಆರ್. ವಿ. ದೇಶಪಾಂಡೆ, ಲಕ್ಷ್ಮಣ ಸವದಿ ಅವರಂಥವರು.

ಹೀಗೆ ಘಟಾನುಘಟಿಗಳೆನಿಸಿಕೊಂಡ ಇಂಥ ಹಿರಿಯ ಶಾಸಕರಿಗೆ ಈಗ ಒಂದು ವಿಷಯ ಅರ್ಥವಾಗಿದೆ. ಅದೆಂದರೆ, ತಾವು ಪಟ್ಟು ಹಿಡಿಯದಿದ್ದರೆ ತಮ್ಮ ನಿರೀಕ್ಷೆ ಈಡೇರಲು ಸಾಧ್ಯವಿಲ್ಲ. ಮುಖ್ಯವಾಗಿ, ಮುಖ್ಯಮಂತ್ರಿ ಹುದ್ದೆಯ ವಿಷಯದಲ್ಲಿ ಉಂಟಾಗಿರುವ ಗೊಂದಲವನ್ನು ಬಗೆಹರಿಸಲು ಕಾಂಗ್ರೆಸ್ ಹೈಕಮಾಂಡ್ ಸಿದ್ಧವಿಲ್ಲ.

ದೆಹಲಿ ವರಿಷ್ಠರು ಎಲ್ಲಿಯ ತನಕ ಈ ವಿಷಯದಲ್ಲಿ ಮೌನವಾಗಿರುತ್ತಾರೋ, ಅಲ್ಲಿಯವರೆಗೂ ಅಧಿಕಾರ ಹಂಚಿಕೆಯ ವರಾತ ಮುಂದುವರಿಯುತ್ತದೆ ಮತ್ತು ಸಿದ್ಧರಾಮಯ್ಯನವರು ಆಸಕ್ತಿ ತೋರಿದರೂ ಡಿ. ಕೆ. ಶಿವಕುಮಾರ್ ಅವರು ಇದಕ್ಕೆ ಅವಕಾಶ ನೀಡುವುದಿಲ್ಲ ಎಂಬುದು ಸ್ಪಷ್ಟ.

ಹೀಗಾಗಿ ಕಳೆದ ವಿಧಾನಮಂಡಲ ಅಧಿವೇಶನದ ಸಂದರ್ಭದಿಂದ ರಂಗಕ್ಕೆ ಇಳಿದ ಹಿರಿಯ ಸಚಿವರು, 'ಸಿದ್ಧರಾಮಯ್ಯ ಮತ್ತು ಡಿ. ಕೆ. ಶಿವಕುಮಾರ್ ಅವರ ನಡುವಣ ವಿಷಯದ ಬಗ್ಗೆ ಮಾತನಾಡದೆ ತಮಗೆ ಮಂತ್ರಿಗಿರಿ ಬೇಕು' ಎಂದು ವರಿಷ್ಠರನ್ನು ಒತ್ತಾಯಿಸಲು ಸಭೆಗಳನ್ನು ನಡೆಸುತ್ತಿದ್ದಾರೆ.

ಈಗ ಸಿದ್ಧರಾಮಯ್ಯ ಅವರ ಸಚಿವ ಸಂಪುಟದಲ್ಲಿರುವ ಬಹುತೇಕ ಮಂದಿ ಮೂರು, ನಾಲ್ಕು ಬಾರಿ ಸಚಿವರಾದವರು. ಅವರಿಗೆ ನಿರಂತರವಾಗಿ ಅವಕಾಶ ನೀಡುತ್ತಾ, ನಮ್ಮಂಥವರಿಗೆ ಅನ್ಯಾಯ ಮಾಡುತ್ತಿದ್ದರೆ ಇದಕ್ಕೆ ಏನರ್ಥ- ಎಂಬುದು ಇವರ ಮಾತು. ಹೀಗಾಗಿಯೇ ಕಳೆದವಾರ ದೆಹಲಿಗೆ ಹೋದ ಹಿರಿಯ ಶಾಸಕರ ಪಡೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಹಲವರ ಬಳಿ ತನ್ನ ದುಮ್ಮಾನ ತೋಡಿಕೊಂಡಿದೆ.

ಹೀಗೆ ಹಿರಿಯ ಶಾಸಕರು ದುಮ್ಮಾನ ತೋಡಿಕೊಂಡ ಕಾರಣಕ್ಕಾಗಿ : ಸೂಕ್ತ ಸಂದರ್ಭದಲ್ಲಿ ಸಂಪುಟ ಪುನಾರಚನೆ ಮಾಡುತ್ತೇವೆ ಅಂತ ಕಾಂಗ್ರೆಸ್ ವರಿಷ್ಠರೂ ಭರವಸೆ ನೀಡಿ ಕಳಿಸಿದ್ದಾರೆ. ಆದರೆ ಇದು ಈಡೇರುವ ಭರವಸೆಯಂತೆ ಹಿರಿಯ ಶಾಸಕರಿಗೆ ಭಾಸವಾಗುತ್ತಿಲ್ಲ. ಹೀಗಾಗಿ ಅವರು ದೆಹಲಿ ಯಾತ್ರೆ ಮುಗಿಸಿ ನಿರಾಶೆಯಿಂದ ಹಿಂತಿರುಗಿದ್ದಾರೆ.

ರತ್ನಪ್ರಭೆಯ ಕಥೆ

❑ಡಾ॥ ಸಂಧ್ಯಾ ಪೈ

ಜಾನು ಮರಿ,

ರಾಜಾ ವಿಕ್ರಮಾದಿತ್ಯ ಬೇತಾಳ ಹೊಕ್ಕ ಶವವನ್ನು ಹೆಗಲಿಗೇರಿಸಿ ನಾಲ್ಕು ಹೆಜ್ಜೆ ಮುಂದೆ ಹೋದ ಕೂಡಲೇ ಬೇತಾಳ ಮಾತನಾಡತೊಡಗಿತು. ''ರಾಜಾ, ದುಷ್ಟನೂ, ಕುತಂತ್ರಿಯೂ, ಕ್ರೂರನೂ ಆದ ಸಿದ್ಧವೇಷಧಾರಿಯ ಮಾತು ಕೇಳಿ, ಈ ಅಪರಾತ್ರಿಯಲ್ಲಿ, ಈ ಭಯಂಕರ ಸ್ಥಳದಲ್ಲಿ ಯಾಕೆ ಕಷ್ಟಪಡುತ್ತಿಯೋ ನಾನರಿಯೆ! ಇರಲಿ. ಮಾರ್ಗಾಯಾಸ ಕಳೆಯಲು ಒಂದು ಕಥೆ ಹೇಳುತ್ತೇನೆ, ಕೇಳು'' ಎಂದು ಶುರುಮಾಡಿತು.

ಅವಂತಿ ದೇಶವನ್ನು ಪ್ರಭುದೇವ ಎಂಬ ರಾಜ ಆಳುತ್ತಿದ್ದ. ಯೋಗ್ಯ ವಯಸ್ಸಾಯಿತು. ವಿವಾಹವಾಗಬೇಕು, ಸಿಂಹಾಸನಕ್ಕೆ ಉತ್ತರಾಧಿಕಾರಿ ನೀಡಬೇಕು ಎಂದು ಮಂತ್ರಿಗಳು ಸಲಹೆ ನೀಡಿದರು. ರಾಜನಿಗೂ ಇದು ಸರಿ ಎನಿಸಿತು. ಅವನಲ್ಲಿ ಒಂದು ಸಾಕು ಗಿಳಿ ಇತ್ತು. ಅದರ ಹೆಸರು ಗಿಳಿರಾಮ. ಅದು ಆಗಾಗ ದೇಶ – ವಿದೇಶ ಸಂಚಾರ ಮಾಡಲು ಹೋಗುತ್ತಿತ್ತು.

ಪ್ರಭುದೇವ ಗಿಳಿರಾಮನನ್ನು ರಾಜ್ಯಕ್ಕೊಬ್ಬಳು ಯೋಗ್ಯ ರಾಣಿಯನ್ನು ತೋರಿಸಿಕೊಡುವಂತೆ ಹೇಳಿದ. ಕೂಡಲೇ ಅದು, ''ಇದನ್ನು ನಾನು ಹಲವು ಕಾಲದಿಂದ ಯೋಚಿಸುತ್ತಿದ್ದೆ. ನನ್ನ ಮಿತ್ರ ಹದ್ದು ನಿನಗೆ ಯೋಗ್ಯಳಾದ ರಾಜಕುಮಾರಿಯನ್ನು ತೋರಿಸಿದೆ. ಅವಳು ಮಗಧದ ರಾಜಕುಮಾರಿ. ಹೆಸರು ಪುಷ್ಪವತಿ. ಮಾತ್ರವಲ್ಲ, ಹದ್ದು ಅವಳಿಗೆ ನಿನ್ನ ಬಗ್ಗೆ ತಿಳಿಸಿದೆ ಕೂಡ. ನೀನು ಅವಳ ತಂದೆಗೆ ಸಂದೇಶ ಕಳುಹಿಸು'' ಎಂದಿತು. ರಾಜ ಪ್ರಭುದೇವನಿಗೆ ಸಂತೋಷವಾಯಿತು.

ಗಿಳಿರಾಮ ಹೇಳಿದಂತೆಯೇ ಮಗಧದ ರಾಜಕುಮಾರಿ ಪುಷ್ಪವತಿಯೊಂದಿಗೆ ಇವನ ಮದುವೆಯೂ ಆಗಿಹೋಯಿತು. ರಾಜಕುಮಾರಿಯೊಂದಿಗೆ ಅವಳ ಹದ್ದು ಅವಂತಿ ದೇಶಕ್ಕೆ ಬಂತು. ಗಿಳಿರಾಮ ಮತ್ತು ಹದ್ದು ಒಂದೇ ಪಂಜರದಲ್ಲಿ ವಾಸಿಸತೊಡಗಿದವು.

ಒಂದು ದಿನ ಹದ್ದು, ''ಗಿಳಿರಾಮ, ಇಂದು ಯಾಕೋ ಯಾವುದರಲ್ಲೂ ಆಸಕ್ತಿ ಕಾಣುತ್ತಿಲ್ಲ ಒಂದು ಕಥೆ ಹೇಳಲ್ಲ!'' ಎಂದಿತು. ಗಿಳಿರಾಮ, ಹಾಗೇ ಆಗಲಿ ಎಂದು ಹೇಳಿ ಕಥೆ ಶುರುಮಾಡಿತು. ''ಒಂದಾನೊಂದು ಕಾಲದಲ್ಲಿ, ಒಂದಾನೊಂದು ಶಹರದಲ್ಲಿ, ಒಬ್ಬಾನೊಬ್ಬ ವ್ಯಾಪಾರಿ ಇದ್ದ. ಅಂತಿಂಥ ವ್ಯಾಪಾರಿಯಲ್ಲ, ಬಲು ಶ್ರೀಮಂತ ವೈಣಿಕ. ಅವನಿಗೊಬ್ಬ ಮಗಳಿದ್ದಳು. ಹೆಸರು ರತ್ನಪ್ರಭೆ. ಅತಿ ಮುದ್ದಿನಿಂದಲೂ ಇರಬಹುದು, ಸರಿಯಾದ ಸಂಸ್ಕಾರ ಇಲ್ಲದ್ದರಿಂದಲೂ ಇರಬಹುದು. ಈ ಹುಡುಗಿ ಕ್ರೂರಳೂ, ಸುಳ್ಳುಗಾರ್ತಿಯೂ, ಸ್ವೇಚ್ಛಾಚಾರಿಯೂ ಆಗಿ ಬೆಳೆದಳು. ಇದನ್ನರಿತ ತಂದೆ ಚಿಂತಿತನಾದ. ಯೋಗ್ಯನಾದ, ಸತ್ಕುಲದ ಒಬ್ಬನನ್ನು ಆರಿಸಿ, ಇವಳ

ಮದುವೆ ಮಾಡಿದ. ಒಳ್ಳೆಯ ಕುಟುಂಬ. ಪತಿ ಸಿಕ್ಕಿದರೂ ಈ ಹುಡುಗಿಯ ಸ್ವಭಾವ ಬದಲಾಗಲಿಲ್ಲ.

ಒಂದು ದಿನ ಯಾವುದೋ ಕೆಲಸದ ನಿಮಿತ್ತ ಇವಳ ತಂದೆಯ ಸೇವಕ ಒಬ್ಬ ಇವಳ ಊರಿಗೆ ಬಂದವ ಇವಳ ಮನೆಗೆ ಬಂದ. ಅವನನ್ನು ನೋಡಿದ ಕ್ಷಣ ಇವಳ ಮನಸ್ಸಿನಲ್ಲಿ ಒಂದು ದುಷ್ಟ ವಿಚಾರ ಬಂತು. ಹಾಲಿಗೆ ವಿಷ ಹಾಕಿ ಅವನಿಗೆ ನೀಡಿದಳು. ಅವನ ಪ್ರಾಣ ಹೋದಕೂಡಲೇ ಮಹಡಿಯ ಮೆಟ್ಟಿಲ ಕೆಳಗೆ ಶವವನ್ನು ಅಡಗಿಸಿ ಇಟ್ಟಳು. ಸಂಜೆಯಾಯಿತು. ಗಂಡ ಮನೆಗೆ ಬಂದ. ಸ್ನಾನ, ಊಟ ಮುಗಿಸಿ, ಮಲಗಲು ಹೋದ. ಮಧ್ಯರಾತ್ರಿ ಇವಳು ಎದ್ದು ಬೊಬ್ಬೆಹಾಕಿದಳು. 'ಅಯ್ಯೋ! ಅಯ್ಯೋ! ನನ್ನ ಗಂಡ ನನ್ನ ತವರಿನವನನ್ನು ಕೊಂದುಹಾಕಿದ್ದಾನೆ!' ಗಲಾಟೆಗೆ ಅಕ್ಕಪಕ್ಕದ ಮನೆಯವರು ಸೇರಿದರು. ಅಡಗಿಸಿಟ್ಟ ಶವ ಹೊರಗೆ ಬಂತು. ರಾಜಭಟರಿಗೆ ಸುದ್ದಿ ಹೋಯಿತು. ಮಾರನೆಯ ಬೆಳಗು ಇವನನ್ನು ರಾಜಸಭೆಗೆ ಹಾಜರು ಮಾಡಿದರು. ಪ್ರಾಣಕ್ಕೆ ಪ್ರಾಣ ಎಂದು ಹೇಳಿ ರತ್ನಪ್ರಭೆಯ ಪತಿಗೆ ನೇಣಿನ ಶಿಕ್ಷೆ ವಿಧಿಸಿದ ರಾಜ.

ಪಾಪದವನ ಹೆಡಮುರಿ ಕಟ್ಟಿ, ರಾಜರಸ್ತೆಯಲ್ಲಿ ಎಳದೊಯ್ಯುತ್ತಿರುವಂತೆ ಕಥೆಗೊಂದು ತಿರುವು ಬಂತು. ಒಬ್ಬ ಮುಂದೆ ಬಂದು, ಕೊಲೆ ಮಾಡಿದವಳು ರತ್ನಪ್ರಭೆ ಎಂದೂ ಇವನು ನಿರಪರಾಧಿ ಎಂದು ಹೇಳಿದ. ಸರಿ, ರತ್ನಪ್ರಭೆ, ಅವಳ ಪತಿ ಮತ್ತು ಈ ಆಗಂತುಕನನ್ನು ಮತ್ತೆ ರಾಜನ ಮುಂದೆ ನಿಲ್ಲಿಸಲಾಯಿತು. ಮತ್ತೆ ವಿಚಾರಣೆ ಆಯಿತು. ಈ ಆಗಂತುಕ ತನ್ನ ಕಥೆ ಹೇಳಿದ. 'ಸ್ವಾಮೀ, ನಾನು ಒಬ್ಬ ವೃತ್ತಿಪರ ಕಳ್ಳ. ಅಂದು ಈ ರತ್ನಪ್ರಭೆಯ ಮನೆಗೆ ಕಳ್ಳತನಕ್ಕೆಂದು ಹೋಗಿದ್ದೆ. ಇವಳು ತಂದೆಯ ಮನೆಯಿಂದ ಬಂದಿದ್ದ ಸೇವಕನಿಗೆ ವಿಷಪೂರಿತ ಹಾಲು ನೀಡಿದಳು. ಅವನು ಕೂಡಲೇ ಸತ್ತುಹೋದ. ಅನಂತರ ಹೆಣವನ್ನು ಮುಚ್ಚಿಟ್ಟು ಏನೂ ನಡೆಯದವಳಂತೆ ನಟಿಸಿ, ಗಂಡನಿಗೆ ಊಟ ಹಾಕಿದಳು.

'ಸರಿರಾತ್ರಿ ಗಂಡ ಕೊಲೆಗಾರ ಎಂದು ಕಿರುಚಾಡಿದಳು. ಪಾಪದ ಇವ ನಿರಪರಾಧಿ. ಇವನಿಂದ ಬಿಡುಗಡೆ ಹೊಂದಲು ಈ ನಾಟಕ ಮಾಡಿದ್ದಾಳೆ ಈ ಧೂರ್ತೆ!' ಎಂದ. ಸಾಕ್ಷಿ ಇರುವುದನ್ನು ನೋಡಿ ರತ್ನಪ್ರಭೆ ಹೆದರಿದಳು. ಸತ್ಯ ಒಪ್ಪಿಕೊಂಡಳು. ರಾಜ ಕೋಪದಿಂದ ಅವಳನ್ನು ಶೂಲಕ್ಕೇರಿಸಲು ಆಜ್ಞೆ ಮಾಡಿದ. ಗಂಡನಿಗೆ ಬಿಡುಗಡೆಯಾಯಿತು'' ಎಂದು ಗಿಳಿ ಕಥೆ ಮುಗಿಸಿತು.

ಗಿಳಿರಾಮ ಕಥೆ ಮುಗಿಸುತ್ತಿರುವಂತೆ ಬೇತಾಳ, ''ಅಯ್ಯಾ ವಿಕ್ರಮ, ಗಿಳಿರಾಮನ ಕಥೆ ಬಲು ಸುಂದರವಾಗಿತ್ತು. ಆದರೆ, ಇಲ್ಲಿ ನನಗೊಂದು ಸಂದೇಹ ಬರುತ್ತಿದೆ. ಈ ಕಥೆಯಲ್ಲಿ ನಿಜವಾದ ಅಪರಾಧಿ ಯಾರು? ನಿಜವಾದ ತ್ಯಾಗಿ ಯಾರು? ಉತ್ತರಿಸಿದರೆ ನಿನ್ನ ತಲೆ ಹೋಳಾಗುವುದು ತಪ್ಪುತ್ತದೆ'' ಎಂದಿತು. ವಿಕ್ರಮಾದಿತ್ಯ, ''ಇಲ್ಲಿ ನಿಸ್ಸಂದೇಹವಾಗಿ ಕಳ್ಳನೇ ಮಹಾ ತ್ಯಾಗಿ. ತಾನು ಕಳ್ಳ, ಕಳ್ಳತನ ಮಾಡಲು ರತ್ನಪ್ರಭೆಯ ಮನೆಯಲ್ಲಿ ಅಡಗಿದ್ದೆ ಎಂದು ಒಪ್ಪಿಕೊಂಡದ್ದರಿಂದ ಅವನಿಗೆ ಕಾರಾಗೃಹದ ಶಿಕ್ಷೆಯಾಗುತ್ತಿತ್ತು. ಇದು ಅವನಿಗೆ ತಿಳಿದಿತ್ತು ಕೂಡ. ಆದರೆ, ತಾನು ಸುಮ್ಮನಿದ್ದರೆ ನಿರಪರಾಧಿಯೊಬ್ಬನ ಪ್ರಾಣ ಹೋಗುತ್ತದೆ. ಇದು ಸರಿಯಲ್ಲ ಎಂದು ಅವನು ಮುಂದೆ ಬಂದು, ನಡೆದ ಘಟನೆಗೆ ಸಾಕ್ಷಿ ಹೇಳಿದ. ರಾಜನಿಗೆ ಇವನ ಪ್ರಾಮಾಣಿಕತೆ ಮೆಚ್ಚುಗೆ ಆಯಿತು ಮತ್ತು ಅವನನ್ನು ಶಿಕ್ಷಿಸಲಿಲ್ಲ. ನಿಜವಾದ ಅಪರಾಧಿ ರತ್ನಪ್ರಭೆಯ ತಂದೆ. ತನ್ನ ಮಗಳ ಸ್ವಭಾವ ತಿಳಿದಿದ್ದೂ ಅವನು ಅವಳಿಗೆ ಮದುವೆ ಮಾಡಿದ. ಮಾತ್ರವಲ್ಲ, ಅವಳ ಪತಿಗೆ ಅವಳ ಬಗ್ಗೆ ಏನೂ ಹೇಳಲಿಲ್ಲ. ಆದುದರಿಂದ ಅವನು ಅಪರಾಧಿ'' ಎಂದ.

ಮುಂದಿನ ಕಥೆ ನಿನಗೆ ಗೊತ್ತು. ಹೌದು, ಶವವನ್ನು ಹೊತ್ತುಕೊಂಡು ಬೇತಾಳ ಮುತ್ತುಗದ ಮರ ಸೇರಿತು ಮತ್ತು ವಿಕ್ರಮಾದಿತ್ಯ ಮತ್ತೆ ಶವವನ್ನು ತರಲು ಹೊರಟ. ಹೌದಲ್ಲ!? ಸೈ.

ಮುಂದಿನ ವಾರ ಮತ್ತೊಂದು ಕಥೆ...

ಮಂಡೂರಾಯನ ಸಾಹಸ
ಚಿತ್ರ-ಕಥೆ: ಟಿ.ಜಿ.
ಮಂಡೂರಾಯನಿಗೆ ಟಿ20 ಕೆಲಸ! ಭಾಗ-2
ಮಂಡೂರಾಯ ಬ್ಯಾಟು ಎತ್ತಿ ಕೆಸರು ಕೊಳದಿಂದ ಹೊರಗೆ ಬಂದಾಗ...
ಇದು ಚೀಟಿಂಗ್!
ನನ್ನ ಬ್ಯಾಟಿಂಗ್ ಬಂದಾಗ ಎಲ್ಲರೂ ಹೋಗಿಬಿಟ್ಟಿದ್ದಾರೆ!
ಅಲ್ಲೇ ಹತ್ತಿರದಲ್ಲಿ-
ನಾವು ರಾತ್ರಿ ತನಕ ಇಲ್ಲೇ ಇರಬೇಕಾ?
ಹೌದು. ನಮ್ಮ ಬಾಸ್ ಇವತ್ತಿನ ಟ್ವೆಂಟಿ20 ಮ್ಯಾಚ್ ಮೇಲೆ ದೊಡ್ಡ ಬೆಟ್ ಕಟ್ಟಿದ್ದಾರೆ.
ಇವನು ಪಂಜಾಬ್ ಪಕಾಲಿ ಟೀಮಿನ ಫಾಸ್ಟ್ ಬೌಲರ್. ಇವನು ಆಟಕ್ಕೆ ಇಲ್ಲದಿದ್ದರೆ ಇವನ ತಂಡ ಸೋಲುತ್ತದೆ, ನಮ್ಮ ಬಾಸ್ ಬೆಟ್ ಗೆಲ್ತಾರೆ.
ಸಂಜೆ ತನಕ ಇವನನ್ನು ಇಲ್ಲೇ ಹಿಡಿದು ಇಟ್ಟಿರಬೇಕು. ಆನಂತರ ಬಾಸ್ ಫೋನ್ ಮಾಡಿ ಏನು ಮಾಡಬೇಕು ಹೇಳುತ್ತಾರೆ.
ಅಯ್ಯಪ್ಪಾ ನನಗೆ ಹಸಿವಾಗ್ತಾ ಇದೆ.
ನಂಗೂ ಹಸಿವು. ಬೆಳಗ್ಗಿನಿಂದ ಇವನನ್ನು ಹಿಡಿಯೋದೇ ಆಯ್ತು. ಗುಡ್ಡದ ಆಚೆ ಅಂಗಡಿ ಇದೆ. ಏನಾದರೂ ತಿನ್ನಲು ತಾ.
ಬೆಳಗ್ಗಿನಿಂದ ಏನೂ ತಿಂದಿಲ್ಲ, ಈ ಹಾಳು ಬೌಲರನ್ನು ಕಾಯೋದೇ ಆಯ್ತು!
ಹಸಿವಿನಲ್ಲಿ ಕಣ್ಣು ಕತ್ತಲೆ ಬರ್ತಾ ಇದೆ.
ಓಯ್!
ರೀ, ನೀವು ಬೌಲಿಂಗ್ ಮಾಡ್ತೀರಾ?
ಆ್ಞಂ?
ಭೂ- ಭೂತ!
ಅಯ್ಯಮ್ಮಾ!
?!!
ಭೂತ-ಭೂತ!
ಆ್ಞಂ?
ಅಲ್ಲಿ ಭೂತ ಇದೆ! ನಾನು ನೋಡಿದೆ!
ಬ್ಯಾಟು ಹಿಡಿದು ಬೀಸುತ್ತಿತ್ತು!
ನಿನಗೆಲ್ಲೋ ತಲೆ ಕೆಟ್ಟಿದೆ.


ಮಂಡೂರಾಯ ಆಶ್ಚರ್ಯದಲ್ಲಿದ್ದಾನೆ!
ಆಟಕ್ಕೆ ಕರೆದರೆ ಈ ಮಾರಾಯ ಎಲ್ಲಿಗೆ ಹೋದರು?
ಬ್ಯಾಟಿಂಗ್ ಕೊಟ್ಟರೆ ಎಲ್ಲರೂ ಬರ್ತಾರೆ. ನಾನು ಬ್ಯಾಟಿಂಗ್ ಮಾಡ್ತೇನೆ, ಅಂದರೆ ತಪ್ಪಿಸಿಕೊಳ್ತಾರೆ.
ಹೋಗಲಿ ಬಿಡಿ! ಅವರಿಗೇ ಬ್ಯಾಟಿಂಗ್ ಕೊಡುತ್ತೇನೆ.
ಓ, ಅಲ್ಲಿದ್ದಾರೆ!
ಓಯ್! ಬನ್ನಿ, ನೀವೇ ಮಾಡಿ ಬ್ಯಾಟಿಂಗು!!
ಆಂ?
?!!
ಭೂತ! ಭೂತ! ಇಲ್ಲಿಗೇ ಬಂತು!
?!
ತಗೊಳ್ಳಿ ಬ್ಯಾಟು!
ಬೀಸುವಾಗ ಮಂಡೂರಾಯನ ಕೈಯಿಂದ ಬ್ಯಾಟು ಜಾರಿ ಹಾರಿತು!
ಆಹ್!
ಭೂತಗೀತ ಏನೂ ಅಲ್ಲ, ಇವನನ್ನು ನಾನು ನೋಡಿಕೊಳ್ಳುತ್ತೇನೆ.
ಆಗಲೇ–
?!!
ಭೂತ! ಕಾಪಾಡಿ!
ನಂಜೊತೆ ಆಟ ಆಡ್ತೀರಾ? ಬೇಕಿದ್ರೆ ನೀವೇ ಬ್ಯಾಟಿಂಗ್ ಮಾಡಿ!
ಮೊದಲು ನನ್ನ ಕಟ್ಟು ಬಿಡಿಸೋ!
ಮಂಡೂರಾಯ ಕಟ್ಟು ಬಿಡಿಸಿದ.
ಥ್ಯಾಂಕ್ಸ್ ಕಣೋ! ನಂಜೊತೆ ಸ್ಟೇಡಿಯಂಗೆ ಬಾ! ನಿನಗೆ ಅಲ್ಲಿ ಕೆಲಸ ಕೊಡಿಸುತ್ತೇನೆ!
ಮಂಡೂರಾಯನಿಗೆ ಕೊನೆಗೂ ಕೆಲಸ ಸಿಕ್ಕಿತು.
ಐಪಿಎಲ್
ಇಷ್ಟು ದಿನ ಕ್ರಿಕೆಟ್ ಆಡಿದ್ದು ಸಾರ್ಥಕ ಆಯ್ತು!
ಐಪಿಎಲ್‌ನಲ್ಲಿ ನಂಗೆ ಗಮ್ಮತ್ತಿನ ಕೆಲಸ ಸಿಕ್ತು ನೋಡಿ!
ಸ್ಟೇಡಿಯಂ ಹೊರಗೆ ಸಿಕ್ಸರ್ ಬಿದ್ದರೆ ಬಾಲು ತರುವ ಕಂಟ್ರಾಕ್ಟು ನನಗೆ. ಬೇಕಿದ್ದರೆ ನೀವೂ ಬನ್ನಿ!
ಓಯ್! ನಿಲ್ಲೋ!
ಮುಂದಿನ ವಾರ: ಮಂಡೂರಾಯನ ಹೊಸ ಸಾಹಸ

❑ ವಿಜಯಪ್ರಕಾಶ್ ಕಣಕ್ಕೂರು



ಸಹಾನುಭೂತಿ

ನಿತ್ಯ ಹರಿದ್ವರ್ಣಗಳಿಂದ ಕಂಗೊಳಿಸುವ ಮಲೆನಾಡಿನ ನಿಸರ್ಗದ ಮಡಿಲಲ್ಲಿ, ಕಣ್ಣು ಹಾಯಿಸಿದಷ್ಟು ದೂರದವರೆಗೆ ಹರಡಿಕೊಂಡಿರುವ ಅಡಿಕೆ, ತೆಂಗಿನ ತೋಟದ ನಡುವಲ್ಲಿ, ಭವ್ಯವಾದ ಬಂಗಲೆಯ ವಿಶಾಲವಾದ ಪಡಸಾಲೆಯಲ್ಲಿ ಕುಳಿತು ಮುಂಜಾವಿನ ತಂಬೆಲರಿನ ಸ್ಪರ್ಶವನ್ನು ಸವಿದು, ಬೆಚ್ಚಗಿನ ಕಾಫಿ ಕುಡಿಯುತ್ತಾ ಪತ್ರಿಕೆಗಳನ್ನು ಓದುವಲ್ಲಿಂದ ಶ್ರೀನಿವಾಸರಾಯರ ದಿನಚರಿ ಪ್ರಾರಂಭವಾಗುತ್ತದೆ. 75 ವಸಂತಗಳನ್ನು ಕ್ರಮಿಸಿ, ಗೌರವಾನ್ವಿತ ಬದುಕನ್ನು ನಡೆಸುತ್ತಿರುವ ಜೀವ ಅವರದ್ದು.

ಇತ್ತೀಚೆಗಷ್ಟೇ ಲೋಕಾರ್ಪಣೆಗೊಂಡ ಸಿಗಂದೂರು ಸೇತುವೆಯ ಕುರಿತಾದ ಲೇಖನಗಳೇ ಅಂದಿನ ಪತ್ರಿಕೆಗಳ ತುಂಬಾ ರಾರಾಜಿಸುತ್ತಿದ್ದವು. ಸೇತುವೆಯ ನಿರ್ಮಾಣಕ್ಕಾಗಿ ಶ್ರಮವಹಿಸಿದವರು ನಾವು – ನಾವು ಎನ್ನುವ ರಾಜಕೀಯದವರ ಹಕ್ಕು ಮಂಡನೆ, ದಶಕಗಳ ಕಾಲ ಲಾಂಚ್‌ನಲ್ಲಿ ವಿಹರಿಸಿದ ಅನುಭವಗಳ ರಸವತ್ತಾದ ನೆನಪುಗಳ ಬಗ್ಗೆ ಲೇಖನಗಳು, ಜಲವಿದ್ಯುತ್ ಯೋಜನೆಯಿಂದ ರಾಜ್ಯಕ್ಕೆ ಆದ ಲಾಭ, ಹೀಗೆ ಹತ್ತು ಹಲವು ಲೇಖನಗಳು ಅಂದಿನ ವಿವಿಧ ಪತ್ರಿಕೆಗಳಲ್ಲಿ ಸ್ಥಾನ ಪಡೆದಿದ್ದವು.

ಓದುತ್ತಿದ್ದ ಶ್ರೀನಿವಾಸರಾಯರ ಕಣ್ಣುಗಳು ಮಂಜಾದವು.

ಹಿನ್ನೀರಿನಲ್ಲಿ ಮುಳುಗಿ ಹೋಗಿದ್ದ ಮನಸುಗಳ ಕುರಿತಾಗಲೀ, ಹೃದಯಗಳ ನಡುವಿನ ಕೊಂಡಿಯನ್ನೂ ಬಲಿಪಡೆದ ಹಿನ್ನೀರಿನಿಂದಾಗಿ ಹೊರ ಪ್ರಪಂಚದಿಂದ ಪ್ರತ್ಯೇಕಿಸಲ್ಪಟ್ಟವರ ಕುರಿತಾಗಲೀ ಒಂದಕ್ಷರವೂ ಇಲ್ಲ!

ತನಗೆ ಬಳುವಳಿಯಾಗಿ ಬಂದ ಸಂಸ್ಕಾರಕ್ಕೆ ತನ್ನ ಕಾಲಾನಂತರವೂ ವಾರಸುದಾರರಿರುತ್ತಾರೆ ಎನ್ನುವ ನೆಮ್ಮದಿಯ ಭಾವದಿಂದ ಶ್ರೀನಿವಾಸರಾಯರ ಹೃದಯ ತುಂಬಿ ಬಂತು.

ಸಂಭ್ರಮದ ಸಮಯದಲ್ಲಿ ಸಂತಾಪಕ್ಕೆಲ್ಲಿದೆ ಸ್ಥಾನ!? ದೀರ್ಘವಾಗಿ ಉಸಿರೆಳೆದುಬಿಟ್ಟರು.

ಅವರ ಮನ ಗತಕಾಲದತ್ತ ತನ್ನ ಪ್ರಯಾಣ ಬೆಳೆಸಿತು.

★ ★ ★

ಹಲಸಿನಗದ್ದೆ ಸೀನ. ಒಬ್ಬ ಅನಾಥ ಹುಡುಗ. ಹಳ್ಳಿಯ ವೆಂಕಟೇಶ್ವರ ದೇವಾಲಯದ ಮಂಟಪವೇ ಅವನ ಆಶ್ರಯ ತಾಣವಾಗಿತ್ತು. ದೇವಸ್ಥಾನದ ಕೆಲಸಗಳಲ್ಲೂ, ಹಳ್ಳಿಯ ಜನರ ಕೆಲಸಗಳಲ್ಲೂ ನೆರವಾಗುತ್ತಿದ್ದ ಕಾರಣದಿಂದ ಎಲ್ಲರ ಸ್ನೇಹಕ್ಕೂ ಪಾತ್ರನಾಗಿದ್ದ. ತನ್ನ ನೋವುಗಳನ್ನು ಮರೆತು ಇಡೀ ಹಳ್ಳಿಯ ಜನರೇ ತನ್ನವರೆನ್ನುವ ಭಾವದಿಂದ ಜೀವನ ಸಾಗಿಸುತ್ತಿದ್ದ. ಹಳ್ಳಿಯೆಂದರೆ ಹಾಗೇನೇ ಅಲ್ವಾ. ಕೂಡಿ ಬಾಳುವ ಗುಣ ಆಧುನಿಕತೆ ಮೈಗೂಡಿಸಿಕೊಳ್ಳುವ ತನಕ ಎಲ್ಲಾ ಹಳ್ಳಿಗಳಲ್ಲೂ ಸಾಮಾನ್ಯವಾಗಿತ್ತು.

ಆದರೆ ಆ ಸಮಾಧಾನವೂ ಹೆಚ್ಚು ಕಾಲ ಉಳಿಯಲಿಲ್ಲ, ಲಿಂಗನಮಕ್ಕಿ ಅಣೆಕಟ್ಟು ನಿರ್ಮಾಣವಾಗುವ ಸುದ್ದಿ ಊರೆಲ್ಲಾ ಹಬ್ಬಿತು. ಮೊದಲಿಗೆ ಯಾರಿಗೂ ನಂಬಿಕೆಯಾಗಲಿಲ್ಲ, ನಮ್ಮ ಹಳ್ಳಿ ನೀರಿನಲ್ಲಿ ಮುಳುಗುವುದು ಅಂದ್ರೆ? ಎಂದು ಜನ ನಗುತ್ತಿದ್ದರು. ಆದರೆ ಕೆಲವೇ ತಿಂಗಳುಗಳಲ್ಲಿ ಸರಕಾರದ ಅಧಿಕಾರಿಗಳು ಆಗಮಿಸಿ, ಮನೆಗಳನ್ನು ಖಾಲಿ ಮಾಡಿಸುವ ಸೂಚನೆ ನೀಡಿದರು. ಜನರು ತಮ್ಮ ಮನೆ, ತೋಟ ಎಲ್ಲವನ್ನೂ ಬಿಟ್ಟು ಸ್ಥಳಾಂತರವಾಗಬೇಕೆಂದು ಸರಕಾರದಿಂದ ಆದೇಶ ಹೊರಡಿಸಲಾಯಿತು.

'ಲಿಂಗನಮಕ್ಕಿ ಅಣೆಕಟ್ಟು ನಿರ್ಮಾಣವಾದಾಗ ಹಲಸಿನಗದ್ದೆಯೂ ಸೇರಿ ಸಾಗರ ಹಾಗೂ ಹೊಸನಗರ ತಾಲೂಕುಗಳ ಸುಮಾರು 175 ಹಳ್ಳಿಗಳು; ಸರಿಸುಮಾರು 32,634 ಹೆಕ್ಟೇರ್ ವಿಸ್ತೀರ್ಣದ ಪ್ರದೇಶ ಮುಳುಗಡೆಯಾಗಿತ್ತು. ಅಂದಾಜು 12,000 ಜನರನ್ನು ಸ್ಥಳಾಂತರ ಮಾಡಲಾಗಿತ್ತು. ಜನವಸತಿ ಪ್ರದೇಶಗಳಲ್ಲದೇ ಅಪಾರ ಪ್ರಮಾಣದ ಅರಣ್ಯ-ಸಸ್ಯಸಂಪತ್ತು, ಜೀವವೈವಿಧ್ಯಗಳು ಇದರಿಂದ ನಾಶವಾಯಿತು ಅಂತಾನೇ ಹೇಳಬಹುದು.'

'ದ್ವೀಪದಲ್ಲಿ ಸಿಲುಕಿದಂತಾಗಿ ನರಳಿದ ತುಮರಿ, ಬ್ಯಾಕೋಡು, ಕರೂರು ಚದರವಳ್ಳಿ, ಸಿಗಂದೂರು ಮುಂತಾದ ಊರಿನ ಜನರದ್ದು ಇನ್ನೊಂದು ರೀತಿಯ ಸಮಸ್ಯೆ. ಸಂಪರ್ಕ ಕಡಿತದ ನಂತರ ಶಾಲೆಗಳಿಗೆ ಅಧ್ಯಾಪಕರು, ಬ್ಯಾಂಕ್‌ಗಳಿಗೆ ನೌಕರರು ಬರುವುದಕ್ಕೆ ಹಿಂದೇಟು ಹಾಕುತ್ತಿದ್ದುದರಿಂದ ಆ ಭಾಗದ ಜನರು ಸಂಕಷ್ಟವನ್ನು ಅನುಭವಿಸಬೇಕಾಯಿತು. ಮಳೆಗಾಲಕ್ಕೆ ಮೊದಲೇ ಅಗತ್ಯ ವಸ್ತುಗಳನ್ನು ಕೊಂಡು ತಂದು ದಾಸ್ತಾನು ಮಾಡಬೇಕಾಗಿತ್ತು. ಲಾಂಚ್ ಸೇವೆ ಪ್ರಾರಂಭವಾದ ಮೇಲೆ ಸ್ವಲ್ಪ ಮಟ್ಟಿಗೆ ಸುಧಾರಣೆ ಕಂಡುಬಂದರೂ ತೀವ್ರ ಮಳೆಯ ಸಂದರ್ಭದಲ್ಲಿ ಮತ್ತದೇ ಸಂಪರ್ಕ ಕಡಿತ.'

ನೆಲ ಹೋದರೇನು, ಬೇರೆ ಕಡೆ ಜಮೀನು ಕೊಡುತ್ತೆ ಸರಕಾರ ಅಂತ ಹೇಳೋದು ಸುಲಭ. ಆದರೆ ಹುಟ್ಟಿ ಬೆಳೆದ ಊರನ್ನು ತೊರೆದು ಹೋಗುವುದು ಮೂಲ ಬೇರನ್ನು ಕಡಿದು ಬೇರೆ ಕಡೆ ನೆಟ್ಟ ಮರದ ಹಾಗೆ. ಮೊದಲಿನ ಭದ್ರತೆ ಇರುವುದಿಲ್ಲ. ಆದರೆ ಈ ಅನುಕಂಪದ ಫಲವೂ ಸೀನನಿಗೆ ಸಿಗಲಿಲ್ಲ. ಯಾಕೆಂದರೆ ಅವನು ಹುಟ್ಟಿ ಬೆಳೆದ ಮನೆಯ ದಾಖಲೆಗಳು ಕೂಡ ಅವನ ಬಳಿ ಇರಲಿಲ್ಲ. ಸುಮಾರು ವರ್ಷಗಳ ಹಿಂದೆ ಮಳೆ ಗಾಳಿಗೆ ಆ ಮನೆಯೂ ಮುರಿದು ಬಿದ್ದಮೇಲೆ ಆತ ದೇವಾಲಯದ ಆಸರೆಯನ್ನು ಪಡೆದದ್ದು.

★ ★ ★

ಎಲ್ಲರೂ ಊರನ್ನು ಬಿಡಬೇಕಾದ ಕೊನೆಯ ದಿನ ಬಂದೇ ಬಿಟ್ಟಿತು. ಹಳ್ಳಿಯ ರಸ್ತೆಯಲ್ಲಿ ಲಾರಿ, ಜೀಪುಗಳು ಓಡಾಡುತ್ತಿದ್ದವು. ಅರ್ಧ ಜನ ಮನೆಗಳ ಅಂಗಳದಲ್ಲೇ ಕುಳಿತು ಮೌನವಾಗಿ ರೋದಿಸುತ್ತಿದ್ದರು, ಇನ್ನರ್ಧ ಜನ ದೇವಸ್ಥಾನದ ಹೆಬ್ಬಾಗಿಲ ಬಳಿ, ಕಣ್ಣೀರು ಒರೆಸುತ್ತಾ ಒಬ್ಬರನ್ನೊಬ್ಬರು ಬೀಳ್ಕೊಡುತ್ತಿದ್ದರು. ಆಗಷ್ಟೇ ಬದುಕು ಒಂದು ಹಂತಕ್ಕೆ ಬಂತು ಎಂದು ನಿಟ್ಟುಸಿರು ಬಿಡುತ್ತಿದ್ದವರಿಗೆ ಶೂನ್ಯದಿಂದ ಮತ್ತೆ ಪ್ರಾರಂಭ ಮಾಡಬೇಕಾಗಿ ಬಂದುದರ ನೋವು; ಆಗಷ್ಟೇ ಚಿಗುರಿದ ಪ್ರೀತಿಯನ್ನು ಕಳೆದುಕೊಂಡ ತರುಣ ಹೃದಯಗಳ ಪಾಡು; ಬದುಕಿನ ಸಂಜೆಯಲ್ಲಿ ಒಂದೆರಡು ಸಾಂತ್ವನದ ಮಾತುಗಳನ್ನು ಹೇಳುತ್ತಿದ್ದ ನೆರೆಮನೆಯವರನ್ನು ಬಿಟ್ಟು ಹೋಗಬೇಕಾದ ದುಃಖ, ಹೀಗೆ ಒಬ್ಬೊಬ್ಬರದ್ದೂ ಒಂದೊಂದು ವ್ಯಥೆ.

ಇವರೆಲ್ಲರ ನಡುವೆ ಮಾಸ್ತರ್ ನಾರಾಯಣಾಚಾರ್ಯರು, ಯಾರನ್ನೋ ಹುಡುಕುತ್ತಿದ್ದರು. ಅವರು ಹಳ್ಳಿಯ ಏಕೋಪಾಧ್ಯಾಯ ಶಾಲೆಯ ಶಿಕ್ಷಕರು. ಪಕ್ಕದೂರಿಂದ ಬಂದು ಇಲ್ಲೇ ಶಾಲೆಯ ಹತ್ತಿರ ಬಾಡಿಗೆಯ ಮನೆಯಲ್ಲಿ ವಾಸವಾಗಿದ್ದರು. ಗಂಡ ಹೆಂಡತಿ ಇಬ್ಬರೇ. ಒಮ್ಮೆ ದೇವಾಲಯದ ಮೆಟ್ಟಿಲ ಬಳಿಯಲ್ಲಿ ಕುಳಿತಿದ್ದ ಸೀನನನ್ನು ಗಮನಿಸಿ ಊರಿನವರಲ್ಲಿ ಆತನ ಬಗ್ಗೆ ಕೇಳಿ ತಿಳಿದುಕೊಂಡಿದ್ದರು. ನಾಳೆ ಶಾಲೆಗೆ ಬರೋದಕ್ಕೆ ಹೇಳಿ ಅಂತ ಹೇಳಿದಂದಿನಿಂದ ಅವರ ಕಣ್ಣಿಗೆ ಬೀಳದಂತೆ ಓಡಾಡಿಕೊಂಡಿದ್ದ ಸೀನ. ಶಾಲೆಗೆ ಹೋದ್ರೆ ಉದರ ಪೋಷಣೆಗೆ ಏನು ಮಾಡೋದು ಎನ್ನುವುದಾಗಿತ್ತು ಅವನ ಚಿಂತೆ.

''ಅವನು ಎಲ್ಲಿದ್ದಾನೆ? ಯಾರಾದ್ರು ನೋಡಿದ್ರಾ ಶ್ರೀನಿವಾಸನನ್ನ?''

''ಅದ್ಯಾರು...?''

''ಅದೇ ನಮ್ಮ ಸೀನ...''

ಅವರು ಹೇಳುತ್ತಿದ್ದ ಹಾಗೆ, ಜನ ಇಲ್ಲ ಎನ್ನುವಂತೆ ತಲೆಯಾಡಿಸಿದ್ರು.

★ ★ ★

ಅಂದು ಸಂಜೆ ಮಸುಕಾಗುತ್ತಿತ್ತು. ದೇವರಿಲ್ಲದ ಗುಡಿಯ ಮುಂದಿನ ಕಲ್ಲಿನ ಮಂಚದ ಮೇಲೆ ಮಲಗಿ, ಗಗನದಲ್ಲಿ ಮಿಂಚುತ್ತಿದ್ದ ನಕ್ಷತ್ರಗಳನ್ನೇ ನೋಡುತ್ತಿದ್ದ ಸೀನ. ಖಾಲಿಯಾದ ಊರಿನಲ್ಲಿ ಯಾರೋ ಹತ್ತಿರ ಬರುತ್ತಿರುವಂತೆ ಭಾಸವಾದಾಗ ಬೆಚ್ಚಿ ಎದ್ದು ಕುಳಿತ.

ದೇವಸ್ಥಾನದ ಅರ್ಚಕರು ಹಿಂದಿನ ದಿನವೇ ಊರನ್ನು ತೊರೆದಿದ್ದರಿಂದ ದೇವರಿಗೆ ನೈವೇದ್ಯ ಮಾಡಿ ಸಿಗುತ್ತಿದ್ದ ಆಹಾರವೂ ಸಿಕ್ಕಿರಲಿಲ್ಲ ಅವನಿಗೆ. ಅರ್ಚಕರು ಹೋಗುವಾಗ ತಮ್ಮ ಪೂರ್ವಜರ ಕಾಲದಿಂದಲೂ ಪೂಜಿಸಿಕೊಂಡು ಬಂದಿದ್ದ ದೇವರ ವಿಗ್ರಹವನ್ನೂ ತಮ್ಮ ಜೊತೆಗೆ ತೆಗೆದುಕೊಂಡು ಹೋಗಿದ್ದರು. ಬಹುಶಃ ತನಗೆ ಸಿಕ್ಕಿದ ಹಾಗೆ ಸೀನನಿಗೂ ಹೊಸದೊಂದು ನೆಲೆಯನ್ನು ಕಲ್ಪಿಸುವುದು ದೈವೇಚ್ಛೆ ಆಗಿತ್ತು ಅನ್ಸುತ್ತೆ.

ಹತ್ತಿರ ಬರುತ್ತಿದ್ದಂತೆ ಆ ಆಕೃತಿ ಯಾರದ್ದೆಂದು ತಿಳಿಯಿತು.

''ಮಾಸ್ತರ್ ನಾರಾಯಣಾಚಾರ್ಯರು!''

''ಮಾಸ್ತರ್... ತಾವು... ತಾವೊಬ್ಬರೇ ಇಲ್ಲಿ!?''

''ಶ್ರೀನಿವಾಸ... ನೀನೂ ಇದ್ದಿಯಲ್ವಾ...'' ನಗುತ್ತಾ ಹೇಳಿದ್ರು ಮಾಸ್ತರರು.

ತನ್ನ ಹೆಸರು ಶ್ರೀನಿವಾಸ ಎನ್ನುವುದನ್ನೇ ಮರೆತು ಹೋಗಿದ್ದ ಸೀನನಿಗೆ ಆಶ್ಚರ್ಯದ ಜೊತೆಗೆ ಕಣ್ಣು ತುಂಬಿ ಬರುತ್ತದೆ.

ಅಪ್ಪ ಇದ್ದಾಗ ತನ್ನನ್ನು ಬಾಯ್ತುಂಬಾ ಶ್ರೀನಿವಾಸ ಅಂತ ಕೂಗುತ್ತಿದ್ದದ್ದು ನೆನಪಾಗುತ್ತದೆ ಅವನಿಗೆ.

'ಶ್ರೀನಿವಾಸ... ಬಡತನ ಎನ್ನುವುದು ಶಾಶ್ವತ ಅಲ್ಲ, ಶ್ರಮವಹಿಸಿ ದುಡಿದರೆ ಶ್ರೀಮಂತಿಕೆಯೂ ನಮ್ಮ ಸ್ವತ್ತಾಗುತ್ತೆ. ಎಷ್ಟೇ ಎತ್ತರಕ್ಕೆ ಬೆಳೆದರೂ ಹೃದಯಕ್ಕೆ ಬಡತನ ಬಾರದ ಹಾಗೆ ನೋಡಿಕೋ. ನನಗೆಷ್ಟೇ ಕಷ್ಟ ಆದರೂ ನಿನ್ನನ್ನು ಓದಿಸಿ ಸಮಾಜದಲ್ಲಿ ಒಬ್ಬ ಒಳ್ಳೆಯ ವ್ಯಕ್ತಿಯಾಗಿ ಮಾಡುತ್ತೇನೆ' ಅಂತ ಪಕ್ಕದಲ್ಲಿ ಕೂರಿಸಿ ಹೇಳುತ್ತಿದ್ದರು.

ಅಪ್ಪ ಅಮ್ಮನ ಜೊತೆಗೆ ಸಂತಸದ ಜೀವನ ನಡೆಸುತ್ತಿದ್ದ ಪುಟ್ಟ ಶ್ರೀನಿವಾಸನ ಬಾಳಿನಲ್ಲಿ ಬಿರುಗಾಳಿ ಎಬ್ಬಿಸಿದ್ದು ತನ್ನ ತಂದೆ ತಾಯಿಯ ದುರಂತ ಅಂತ್ಯ. ಕಾಡಿಗೆ ಸೌದೆ ತರಲೆಂದು ಹೋದವರ ಮೇಲೆ ಚಿರತೆ ದಾಳಿ ಮಾಡಿತ್ತು.

ಶ್ರೀನಿವಾಸ ಅನಾಥನಾದ. ಅವನಿಗ್ಯಾಕೆ ಅಷ್ಟು ಚಂದದ ಹೆಸರು...?

ಊರಿನವರ ಬಾಯಲ್ಲಿ ಸೀನ ಆದ.

''ಈ ಜಾಗವೂ ನೀರಲ್ಲಿ ಮುಳುಗುತ್ತೆ. ನೀನಿಲ್ಲಿ ಇರೋದಕ್ಕಾಗಲ್ಲ''

''ಗೊತ್ತು... ಮಾಸ್ತರ್...'' ಹೋಗೋದಕ್ಕೆ ಜಾಗ ಇದ್ರೆ ತಾನೇ ಅಂತ ಯೋಚಿಸತೊಡಗಿದ.

''ಎದ್ದೇಳು ಮಗು, ತುಂಬಾ ಕತ್ತಲೆ ಆಗುವುದರೊಳಗೆ ಹೊರಡೋಣ'' ಅಂತ ಹೇಳಿ ಆತನ ಹೆಗಲ ಮೇಲೆ ಕೈ ಇಟ್ಟರು ಮಾಸ್ತರರು.

ಎಲ್ಲಿಗೆ ಅಂತ ಅವನು ಕೇಳಲಿಲ್ಲ. ಅವರು ಹೇಳಲೂ ಇಲ್ಲ. ಮಾಸ್ತರ ಹಿಂದೆಯೇ ನಡೆಯತೊಡಗಿದ. ಮಹಾದ್ವಾರದ ಬಳಿಯಲ್ಲಿದ್ದ ಎತ್ತಿನ ಗಾಡಿಯವನ ಬಳಿ ಯಾವುದೋ ಜಾಗದ ಹೆಸರು ಹೇಳಿದ್ರು. ಬಹುಶಃ ಯಾವುದಾದರೂ ಅನಾಥಾಶ್ರಮ ಇರಬಹುದು ಅಂತ ಅಂದುಕೊಂಡ.

ಹಳ್ಳಿಯನ್ನು ಬಿಟ್ಟು ಹೊರಗೆಂದೂ ಕಾಲಿಡದವನಿಗೆ ಹಗಲಾಗಿದ್ದೂ ಯಾವ ಕಡೆ ಹೋಗುತ್ತಿರುವುದು ಎನ್ನುವುದು ಗೊತ್ತಾಗುತ್ತಿರಲಿಲ್ಲ. ಸುಮಾರು ರಾತ್ರಿ ಆಗಿರಬಹುದು; ಎತ್ತಿನ ಗಾಡಿಯವನು ಒಂದು ಮನೆಯ ಹತ್ತಿರ ನಿಲ್ಲಿಸಿದ. ಮಾಸ್ತರರು ಕೆಳಗೆ ಇಳಿಯುವಂತೆ ಸೀನನಲ್ಲಿ ಹೇಳಿದ್ರು.

''ಶ್ರೀನಿವಾಸ ಸಿಕ್ಕಿದ್ದಾನೇನ್ರೀ...?'' ಮನೆಯ ಕದ ತೆರೆಯುತ್ತಿದ್ದ ಮಹಿಳೆಯ ಪ್ರಶ್ನೆ.

ಸರೋಜಮ್ಮನವರು!!

ಶಬ್ದದ ಗುರುತು ಸಿಕ್ತು ಸೀನನಿಗೆ. ಹಾಗಾದ್ರೆ ಇದು ಇಬ್ಬರೂ ಸೇರಿ ತೆಗೆದುಕೊಂಡ ತೀರ್ಮಾನ ಎನ್ನುವುದು ಅವನಿಗೆ ಮನವರಿಕೆಯಾಯಿತು.

''ಹಾಂ... ಎಲ್ಲಾ ಕಡೆ ಹುಡುಕಿದ ಮೇಲೆ ಕೊನೆಗೂ ಸಿಕ್ಕಿದ...''

ಪ್ರೀತಿಯಿಂದ ಒಳಗೆ ಬರುವಂತೆ ಹೇಳಿ, ಬಿಸಿ ಬಿಸಿಯಾದ ಕಾಫಿ ಕೊಟ್ಟು ಉಪಚರಿಸಿದರು.

''ಈ ಹೊತ್ತಲ್ಲಿ ಕಾಫಿ ಯಾಕೆ. ಊಟ ಬಡಿಸು. ಪಾಪ ಹೊಟ್ಟೆಗೆ ಏನೂ ಹೋಗಿರಲಿಕ್ಕಿಲ್ಲ ಬೆಳಗ್ಗಿನಿಂದ.''

''ಬಚ್ಚಲುಮನೆಯ ಹಂಡೆಯಲ್ಲಿ ಬಿಸಿ ನೀರಿದೆ. ಸ್ನಾನ ಮಾಡಿ ಬರಲಿ. ಅಷ್ಟರಲ್ಲಿ ಊಟ ಬಡಿಸುತ್ತೇನೆ.''

ಊಟದ ಬಳಿಕ 'ಇನ್ಮೇಲೆ ಇದು ನಿನ್ನದು' ಅಂತ ಒಂದು ಕೊಠಡಿಯನ್ನು ತೋರಿಸಿದರು. ಮಲಗಿದವನಿಗೆ ಎಷ್ಟೋ ವರುಷಗಳ ಬಳಿಕ ಕಣ್ತುಂಬಾ ನಿದ್ದೆ ಆವರಿಸಿತು.

★ ★ ★

''ಶ್ರೀನಿವಾಸಾ... ಎದ್ದೇಳು... ದೋಸೆ ಮಾಡಿದ್ದೇನೆ... ಬಿಸಿ ಬಿಸಿಯಾಗಿದ್ದಾಗಲೇ ತಿಂದರೆ ಚಂದ... ಎದ್ದು ಫ್ರೆಶ್ ಆಗಿ ಬಾ'' ಅಂತ ಸರೋಜಮ್ಮನವರು ಕೂಗಿದಾಗಲೇ ಅವನಿಗೆ ಎಚ್ಚರವಾಗಿದ್ದು. ದಡಬಡಿಸಿ ಎದ್ದು ಹಲ್ಲುಜ್ಜಿ, ಸ್ನಾನ ಮಾಡಿ ಬಂದವನಿಗೆ ದೋಸೆ ತಿನ್ನಲು ಕೊಟ್ಟು ಪಕ್ಕದಲ್ಲೇ ಕುಳಿತರು.

''ನೋಡು ಕಂದಾ, ನಿನ್ನ ಬಗ್ಗೆ ಇವರು ಬಂದು ಹೇಳಿದಾಗಿನಿಂದ ನಿನ್ನನ್ನು ನಮ್ಮ ಮನೆಗೆ ಕರೆದುಕೊಂಡು ಬರಬೇಕು, ಒಳ್ಳೆಯ ವಿದ್ಯಾವಂತನನ್ನಾಗಿ ಮಾಡಬೇಕು ಎನ್ನುವುದು ನಮ್ಮಿಬ್ಬರ ಆಲೋಚನೆಯಾಗಿತ್ತು. ಆದರೆ ನೀನು ಕಣ್ಣು ತಪ್ಪಿಸಿಕೊಂಡು ಓಡಾಡುತ್ತಿದ್ದೆ. ಈಗಲಾದರೂ ಸಿಕ್ಕಿದೆ. ಎಲ್ಲಿ ತಪ್ಪಿಸಿಕೊಂಡು ಊರು ಬಿಟ್ಟು ಹೋಗಿಬಿಡುತ್ತಿಯೋ ಅಂತ ಅಂದುಕೊಂಡು ಮಾಸ್ತರರನ್ನು ಬೆಳಗ್ಗೆಯೇ ಹಳ್ಳಿಗೆ ಕಳಿಸಿದ್ದೆ'' ಅಂದರು ಸರೋಜಮ್ಮ.

ಅವರ ಕಣ್ಣನ್ನೇ ನೋಡತೊಡಗಿದ. ಅದರಲ್ಲಿ ಮಾತೃಪ್ರೇಮವಿತ್ತು.

''ನೀನು ತಂದೆ ತಾಯಿಯನ್ನು ಕಳೆದುಕೊಂಡು ಅನಾಥನಾಗಿದ್ದರೆ, ಮಕ್ಕಳಿಲ್ಲದ ನಾವೂ ಅನಾಥರೇ!''

★ ★ ★

ಒಂಟಿಯಾಗಿ ಬದುಕಿದ್ದವನು ತಾಳಗುಪ್ಪದ ಹೊಸ ಪರಿಸರಕ್ಕೆ ನಿಧಾನವಾಗಿ ಹೊಂದಿಕೊಳ್ಳತೊಡಗಿದ. ಮನೆಗೆ ಹೊಂದಿಕೊಂಡೇ ಇರುವ ಅಡಿಕೆ, ತೆಂಗಿನ ತೋಟಕ್ಕೆ ನೀರು ಹರಿಸುವುದು ಮೊದಲಾದ ಕೆಲಸಗಳಲ್ಲಿ ತನ್ನನ್ನು ತಾನೇ ತೊಡಗಿಸಿಕೊಂಡ. ರಾತ್ರಿ ಊಟಕ್ಕೆ ಮೊದಲು ಮಾಸ್ತರರು ಆತನನ್ನು ಹತ್ತಿರ ಕೂರಿಸಿ ಅಕ್ಷರಗಳನ್ನು ಕಲಿಸುತ್ತಿದ್ದರು. ಮೊದಮೊದಲು ಕಷ್ಟವೆನಿಸಿದರೂ

ಬಹು ಬೇಗನೆ ಎಲ್ಲವನ್ನೂ ಗ್ರಹಿಸಲು ಸಾಧ್ಯವಾಯಿತು ಅವನಿಗೆ.

ಕೆಲವು ವರ್ಷಗಳ ಬಳಿಕ ಮನೆಯಲ್ಲೇ ಶಿಕ್ಷಣ ಪಡೆದು ಎಸೆಸೆಲ್ಸಿ ಪರೀಕ್ಷೆ ಬರೆದು ತೇರ್ಗಡೆಯಾದ. ಅನಂತರ ಪಿಯೂ ಹಾಗೂ ಪದವಿಯನ್ನೂ ದೂರ ಶಿಕ್ಷಣದಲ್ಲಿಯೇ ಪಾಸ್ ಮಾಡಿದ. ಮಾಸ್ತರರು ಶ್ರೀನಿವಾಸನ ಬದುಕಿನಲ್ಲಿ ಜ್ಞಾನದ ಬೀಜ ಬಿತ್ತಿ ಅದರ ಫಸಲನ್ನು ತೆಗೆದರು. ಶ್ರೀನಿವಾಸನು ಮಾಸ್ತರರ ಖಾಲಿಯಾಗಿದ್ದ ಜಮೀನಿನಲ್ಲಿ ಕೃಷಿ ಮಾಡಿ ಉತ್ತಮ ಫಸಲನ್ನು ಪಡೆದ.

★ ★ ★

"ಏನಪ್ಪಾ ಹಳೆಯದ್ದನ್ನೆಲ್ಲಾ ನೆನಪು ಮಾಡ್ಕೊಂಡು ಯಾಕೆ ಬೇಸರ ಪಡುತ್ತಿಯಾ...?" ರಾಕೇಶನ ಮಾತು ಶ್ರೀನಿವಾಸರಾಯರನ್ನು ವಾಸ್ತವಕ್ಕೆ ಮರಳಿಸುತ್ತದೆ.

"ಏನಿಲ್ಲ ಮಗಾ... ಅದೆಲ್ಲಾ ಮುಗಿದು ಹೋದ ಕಥೆ. ನೆನಪಾಯ್ತು ಅಷ್ಟೇ."

"ಮತ್ತೆ... ನಿಮ್ಮ ಮುಖದಲ್ಲಿರುವ ಆತಂಕಕ್ಕೆ ಕಾರಣ?"

"ಈ ಸುದ್ದಿಯನ್ನೊಮ್ಮೆ ಓದು..." ಅಂತ ಹೇಳಿ ಪತ್ರಿಕೆಯನ್ನು ಅವನಿಗೆ ಕೊಡುತ್ತಾರೆ.

"ಓಹ್ ಒಳ್ಳೆಯ ಸುದ್ದಿ... ಸಾಗರದಲ್ಲಿ ಬೈಪಾಸ್ ರಸ್ತೆ ಬರ್ತಿದೆ..." ಖುಷಿಯಿಂದ ಹೇಳಿದ ರಾಕೇಶ್.

"ಅದರ ರೂಟ್ ಮ್ಯಾಪ್ ನೋಡಿ ಆಮೇಲೆ ಮಾತನಾಡು..." ಧ್ವನಿಯಲ್ಲಿ ಸ್ವಲ್ಪ ಅಸಹನೆಯಿತ್ತು.

ಅರ್ಥವಾಗದೇ ರಾಕೇಶ್ ಅಪ್ಪನ ಮುಖ ನೋಡ್ತಾನೆ.

"ನಿನಗೆ ಗೊತ್ತಲ್ವಾ, ಬಳಸಗೋಡು ಬಳಿ ಗುಡಿಸಲುಗಳು ಇರುವ ಜಾಗದ ಮೂಲಕವೇ ರಸ್ತೆ ನಿರ್ಮಾಣ ಆಗ್ತಿರೋದು. ಹಕ್ಕು ಪತ್ರಗಳು ಅವರ ಬಳಿ ಇರೋದು ಸಂಶಯ." ಆತಂಕದಿಂದ ಹೇಳಿದ್ರು ಶ್ರೀನಿವಾಸರಾಯರು.

"ಓಹ್ ಹೌದಲ್ವಾ... ನೋಡೋಣ, ಸರಕಾರ, ಜನಪ್ರತಿನಿಧಿಗಳು ಏನು ಮಾಡ್ತಾರೆ ಅಂತ..."

"ಮಾಡದಿದ್ದರೆ...?" ರಾಕೇಶ್‌ನ ಉತ್ತರಕ್ಕಾಗಿ ನೋಡಿದರು.

"ಏನಪ್ಪಾ ನೀನು, ಹೇಗೂ ನಮ್ಮ ತೋಟದ ಆಚೆ ಬದಿಯಲ್ಲಿ ಕಳೆದ ಬಾರಿ ಗಿಡ ಕಡಿಮೆ ಆಗಿದ್ದರಿಂದ ಖಾಲಿಯಾಗಿ ಉಳಿದ ಸ್ವಲ್ಪ ಜಾಗ ಇದೆಯಲ್ಲಾ. ಅದರಲ್ಲಿ ಕೆಲವು ಮನೆಗಳನ್ನು ನಿರ್ಮಿಸಿ ಕೊಟ್ಟರಾಯ್ತು. ಅವರು ಬಯಸುವುದಾದರೆ ನಮ್ಮ ತೋಟದಲ್ಲೇ ಕೆಲಸ ಮಾಡೋಕೆ ಹೇಳೋಣ. ಅವರ ಜೀವನಕ್ಕೂ ಒಂದು ಮಾರ್ಗವನ್ನು ಕಲ್ಪಿಸಿದಂತಾಗುತ್ತದೆ."

ಶ್ರೀನಿವಾಸರಾಯರ ಹೃದಯ ತುಂಬಿ ಬಂತು. ವಾಸ್ತವದಲ್ಲಿ ಅವರ ಮನಸಲ್ಲೂ ಅದೇ ಯೋಚನೆ ಮೂಡಿತ್ತು. ಮಗನ ಬಳಿ ಸಾವಧಾನವಾಗಿ ವಿಷಯ ಪ್ರಸ್ತಾಪಿಸಿ, ಅವನ ಒಪ್ಪಿಗೆ ಪಡೆದು ಋಣವನ್ನು ತೀರಿಸಲು ಒದಗಿಬಂದ ಅವಕಾಶವನ್ನು ಬಳಸಿಕೊಳ್ಳಬೇಕು ಎನ್ನುವ ಬಯಕೆ ಅವರದ್ದಾಗಿತ್ತು. ಅವನೇ ವಿಷಯ ಪ್ರಸ್ತಾಪಿಸಿ ಅವರ ಕೆಲಸವನ್ನು ಸುಲಭಗೊಳಿಸಿದ್ದ. ಅವರ ಕಣ್ಣುಗಳಿಂದ ಒಂದೆರಡು ಹನಿಗಳು ಉರುಳಿದವು. ತನಗೆ ಬಳುವಳಿಯಾಗಿ ಬಂದಿದ್ದ ಸಂಸ್ಕಾರಕ್ಕೆ ತನ್ನ ಕಾಲಾನಂತರವೂ ವಾರಸುದಾರರಿರುತ್ತಾರೆ ಎನ್ನುವ ನೆಮ್ಮದಿಯ ಭಾವ ಅವರ ಮುಖದಲ್ಲಿತ್ತು. ■

ಲಹರಿ

ಯುದ್ಧವೆಂದರೇನೆಂದು ಯಾರನ್ನು ಕೇಳಲಿ?

ಯುದ್ಧವೆಂದರೇನೆಂದು ಯಾರನ್ನು ಕೇಳಲಿ
ಇದ್ದಾರೆ ನೂರೆಂಟು ಸಾಕ್ಷಿಗಳು ಇತಿಹಾಸದಲ್ಲಿ
ಎಲ್ಲ ದೇಶಗಳಲ್ಲಿ, ಎಲ್ಲರ ಪುರಾಣಗಳಲ್ಲಿ

ನಾನು ಅತಿರಥಿ ಅಶ್ವತ್ಥಾಮ
ನಿರ್ದಯ ನನ್ನ ಸ್ವಾಮಿ ನಿಷ್ಠೆ
ಗರ್ಭಸ್ಥ ಭ್ರೂಣಗಳನ್ನೂ ಬಿಡಲಿಲ್ಲ ನನ್ನ ಅಸ್ತ್ರ
ನಾನು ಹೇಳುತ್ತೇನೆ
ಯುದ್ಧವೆಂದರೆ ಸರ್ವನಾಶ
ಮೈ- ಮಾಯದ ಗಾಯಗಳ ಕೀವುಗಳ ಗೂಡು

ಗಾಂಧಾರಿ ಮರುಗುತ್ತಾಳೆ ಹಡೆದದ್ದು ನೂರು
ಕಣ್ತುಂಬಿಕೊಂಡಿದ್ದು ಯಾವುದೂ ಇಲ್ಲ
ಆತನೋ ಹುಟ್ಟು ಕುರುಡ ನಾನು ಕಣ್ಣಿದ್ದೂ ಕುರುಡಿ
ಹೇಗೆ ಬೆಳೆದಾವು ಅವು ಒಳ್ಳೆ ಮಕ್ಕಳಾಗಿ
ಕೆಟ್ಟವು ಕಾದಾಡಿ ಕುರುಕ್ಷೇತ್ರದ ಮಣ್ಣುಪಾಲಾದವು
ಯುದ್ಧವೆಂದರೆ ಸರ್ವನಾಶ

ಪಾಂಚಾಲಿ ಬಿಕ್ಕುತ್ತಾಳೆ ದಾಯಾದಿ ಮತ್ಸರದ ಬೆಂಕಿ
ಹೊಟ್ಟೆ ಸುಟ್ಟ ಸಂಕಟ, ಪಗಡೆ ಜೂಜು
ಕಾಡು ಕುರುಕ್ಷೇತ್ರ ತೊಡೆ ಮುರಿದಿದ್ದಾಯ್ತು
ಒಡಲು ಸೀಳಿದ್ದಾಯ್ತು
ಮುಡಿಗೆ ರಕ್ತವ ಸುರಿದು ಸ್ನಾನ ಮಾಡಿದ್ದಾಯ್ತು
ಆದರೂ ಬರಿದಾಯ್ತು ನನ್ನ ಮಡಿಲು
ಯುದ್ಧವೆಂದರೆ ಎಳೆಯರ ಸ್ಮಶಾನ ಸರ್ವನಾಶ

ಅರ್ಜುನ ಅತ್ತುಬಿಟ್ಟ
ಯುದ್ಧವೆಂದರೆ ಕುಲ ನಾಶ
ಬಂಧುನಾಶ, ಜಾತಿನಾಶ
ಯುದ್ಧವೆಂದರೆ ಸರ್ವನಾಶ
ನಾ ಯುದ್ಧ ಮಾಡಲಾರೆ
ನಾ ಯುದ್ಧ ಮಾಡಲಾರೆ

ವಿಶ್ವ ವಿಜೇತ ಯಾರು?
ಹನುಮನ ಬಾಲದಷ್ಟುದ್ದ ಪಟ್ಟಿ
ಫ್ರೆಂಚರ, ನೆಪೋಲಿಯನ್ನನು
ಗ್ರೀಕರ ಅಲೆಕ್ಸಾಂಡರನು
ಮಂಗೋಲರ ಚೆಂಗೀಸ್‌ಖಾನನು
ರೋಮನ್ನರ ಚಕ್ರವರ್ತಿ ಕಾನ್‌ಸ್ಟಂಟೈನನು
ಕಳಿಂಗ ವಿಜೇತ ಚಕ್ರವರ್ತಿ ಅಶೋಕನು
ನೂರು ಅಶ್ವಮೇಧಗಳ ನಡೆಸಿದವರೆಲ್ಲ ಏನಾದರು?
ಎಲ್ಲರ ಸಾಮ್ರಾಜ್ಯಗಳು ಸೂರ್ಯ ಮುಳುಗುವವರೆಗೆ

ಜರ್ಮನಿ, ಫ್ರಾನ್ಸ್, ಇಟಲಿ, ಟರ್ಕಿ
ಸೂರ್ಯ ಮುಳುಗದ ಸಾಮ್ರಾಜ್ಯವೂ ಕೊನೆಗೆ ಮುಳುಗಿತಲ್ಲ
ಸೂರ್ಯ ಉದಯಿಸುವ ನಾಡೂ ಪರಮಾಣು ಸಿಡಿತಕ್ಕೆ ಸರ್ವನಾಶ

ಆಗೋ ಬರುತ್ತಿದ್ದಾನೆ
ರಕ್ಕಸ ಹೆಜ್ಜೆಗಳನ್ನಿಡುತ್ತ ಬರುತ್ತಿದ್ದಾನೆ
ಭೂಮಂಡಲವ ಯುದ್ಧ ಸಾಗರದಾಳದಲ್ಲಿ ಮುಳುಗಿಸಲು
ಹೆಜ್ಜೆ ಮೇಲೆ ಹೆಜ್ಜೆ ಕೊರಿಯಾ, ವಿಯೆಟ್ನಾಂ
ಇರಾಕ್, ಅಫಘಾನಿಸ್ತಾನ್... ಇರಾನ್
ಯುದ್ಧವೆಂದರೇನೆಂದು ಯಾರನ್ನು ಕೇಳಲಿ
ಯಾರನ್ನು ಕೇಳಲಿ

❑ ಅರುಂಧತಿ ದೇಶಪಾಂಡೆ

ಬಿಹಾರ : ಬಿಜೆಪಿಗೆ ಅಚ್ಛೇ ದಿನ್

❑ ಶ್ರೀನಿವಾಸ ಸಿರನೂರಕರ್

ಬಿಹಾರದಲ್ಲಿ ಇದುವರೆಗೆ ಜೆಡಿಯುನ ಮುಲಾಜಿನಲ್ಲೇ ವ್ಯವಹರಿಸುತ್ತ ಬಂದಿರುವ ಬಿಜೆಪಿ ಪಾಲಿಗೆ ಈ ಬಾರಿಯ ಯುಗಾದಿ ಭಾಗ್ಯದ ಬಾಗಿಲನ್ನೇ ತೆರೆದಿದೆ. ಆ ಪಕ್ಷದ ನಾಯಕ ಸಮ್ರಾಟ್ ಚೌಧುರಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಮಿತ್ರಪಕ್ಷ ಜೆಡಿಯು ಅವರನ್ನು ಸ್ವತಂತ್ರರಾಗಿ ಕಾರ್ಯನಿರ್ವಹಿಸಲು ಬಿಟ್ಟೀತೆ?

ಭಾರತೀಯ ಜನತಾಪಕ್ಷ ಸಂಭ್ರಮಿಸುವುದಕ್ಕೆ ಎಲ್ಲ ಕಾರಣಗಳಿವೆ. ಇದೇ ಮೊದಲ ಬಾರಿಗೆ ಪಕ್ಷದ ನಾಯಕರೊಬ್ಬರು ಬಿಹಾರದ ಮುಖ್ಯಮಂತ್ರಿ ಆಗುವುದರ ಮೂಲಕ ಪಕ್ಷ ಒಂದು ನವ ಇತಿಹಾಸಕ್ಕೆ ನಾಂದಿಹಾಡಿದೆ.

ಹಸ್ತಿನಾಪುರದಲ್ಲಿ ನಾಲ್ಕೈದು ಅವಧಿಗೆ ರಾಷ್ಟ್ರದ ರಾಜ್ಯಭಾರ ನಡೆಸಿದ್ದ ಮತ್ತು ನಡೆಸುತ್ತಿರುವ ಪಕ್ಷಕ್ಕೆ ಪಾಟಲೀಪುತ್ರ ಕೈಗೆಟುಕದ ಕುಸುಮವಾಗಿಯೇ ಉಳಿದಿತ್ತು. ಆದರೆ ಇದೇ ಮೊದಲ ಬಾರಿಗೆ ಪಕ್ಷದ ನಾಯಕ ಸಮ್ರಾಟ್ ಚೌಧುರಿ ಅವರು ಎಪ್ರಿಲ್ 15ರಂದು ಮುಖ್ಯಮಂತ್ರಿಯಾಗಿ ಪ್ರತಿಷ್ಠಾಪಿತರಾಗುವುದರೊಂದಿಗೆ ತನ್ನ ಬಹುದಿನದ ಕನಸನ್ನು ಕೇಸರಿಪಡೆ ನನಸಾಗಿಸಿಕೊಂಡಿದೆ. ಪಕ್ಷದ ಕನಸು ಮರೀಚಿಕೆಯಾಗಿ ಉಳಿಯದಿರುವುದು ಬಿಜೆಪಿಯ ಅದೃಷ್ಟವೇ ಸರಿ.

ಸಂಯುಕ್ತ ಜನತಾ ದಳದ (ಜೆ.ಡಿ.ಯು.) ನಾಯಕ ಮತ್ತು ಹತ್ತು ಬಾರಿ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿ, ಸುಮಾರು ಇಪ್ಪತ್ತು ವರ್ಷಗಳ ಕಾಲ ರಾಜ್ಯವನ್ನಾಳಿದ ನಿತೀಶ್ ಕುಮಾರ್ ರಾಜ್ಯಸಭೆಗೆ ಆಯ್ಕೆಯಾಗಿ ಕೊನೆಗೂ ಬಿಜೆಪಿಗೆ ಸದವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ನಿತೀಶ್ ಕುಮಾರ್ ಅವರ ನೆರಳಿನಲ್ಲಿ, ಮುಲಾಜಿನಲ್ಲಿ ದ್ವಿತೀಯ ಸ್ಥಾನದಲ್ಲಿದ್ದು ಅಧಿಕಾರ ಹಂಚಿಕೊಂಡಿದ್ದ ಬಿಜೆಪಿ ಇದೀಗ ರಾಜಕೀಯ ಹಾಗೂ ನೈಸರ್ಗಿಕ ನ್ಯಾಯಕ್ಕೆ ಪಾತ್ರವಾಗಿದೆ. ರಾಜಕೀಯ ನಿಷ್ಠೆ ಎಂಬ ಪದವನ್ನೇ ತನ್ನ ನಿಘಂಟಿನಿಂದ ತೆಗೆದುಹಾಕಿದ್ದ ನಿತೀಶ್ ಕುಮಾರ್ ಕಳೆದೆರಡು ವರುಷಗಳಿಂದ ಬಿಜೆಪಿಯನ್ನು ಆಟವಾಡಿಸುತ್ತಲೇ ಇದ್ದರು. ಈ ಕಪಿಮುಷ್ಟಿಯಿಂದ ಹೊರಬರಲಾಗದೆ ಪರಿತಪಿಸುತ್ತಿದ್ದ ಬಿಜೆಪಿ ಇದೀಗ ನಿಟ್ಟುಸಿರು ಬಿಡುವಂತಾಗಿದೆ.

ಬಿಜೆಪಿಯ ರಾಜಕೀಯ ಇತಿಹಾಸದಲ್ಲಿ ಹೊಸ ಅಧ್ಯಾಯವೊಂದು ಖಂಡಿತವಾಗಿಯೂ ಆರಂಭವಾಗಿದೆ. ನಿತೀಶ್ ಕುಮಾರ್ ಅವರು ಬಿಜೆಪಿಗೆ ಅವಕಾಶ ಮಾಡಿಕೊಟ್ಟಿರುವುದೇ ಒಂದು ದೊಡ್ಡ ಔದಾರ್ಯವೆಂದು ಬಗೆಯಲಾಗಿದೆ. ರಾಷ್ಟ್ರೀಯ ಜನತಾದಳ (ಆರ್.ಜೆ.ಡಿ.), ಕಾಂಗ್ರೆಸ್, ಬಿಜೆಪಿ ಪಕ್ಷಗಳನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಉಪಯೋಗಿಸಿಕೊಂಡು ಬಿಸಾಡುತ್ತಿದ್ದ ನಿತೀಶ್ ಕುಮಾರ್ ಅವರ ನಡಾವಳಿ ಭಾರತದ ರಾಜಕಾರಣದ ಮಾದರಿಯಲ್ಲಿಯೇ ವಿಶಿಷ್ಟವಾದದ್ದು. ಆದರೆ ಬಿಜೆಪಿಗೆ ಅನ್ಯಮಾರ್ಗವಿರಲಿಲ್ಲ, ಅದಕ್ಕೊಂದು ಊರುಗೋಲಿನ ಅಗತ್ಯವಿತ್ತು. ಅದು ಕೂಡ ನಿತೀಶ್ ಕುಮಾರ್ ಅವರನ್ನು ಚೆನ್ನಾಗಿ ಬಳಸಿಕೊಂಡು ಬಿಹಾರದಲ್ಲಿ ತನ್ನ ಅಸ್ತಿತ್ವವನ್ನು ಗಟ್ಟಿಗೊಳಿಸಿಕೊಳ್ಳಲು ಮತ್ತು ವಿಸ್ತರಿಸಿಕೊಳ್ಳಲು ಯಶಸ್ವಿಯಾಯಿತು.

ಹೆಜ್ಜೆ ಹೆಜ್ಜೆಗೆ ನಿತೀಶ್ ಕುಮಾರ್ ಅವರ ಮರ್ಜಿ ಕಾಯುವುದೇ ಬಿಜೆಪಿಯ ಧ್ಯೇಯವಾಗಿತ್ತು. ಬಿಜೆಪಿಗೆ ಹಾಗೂ ಪಕ್ಷದ ಧೀಮಂತ ನಾಯಕ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಅನೇಕ ಬಾರಿ ಅವಮಾನವಾಗುವಂತೆ ನಿತೀಶ್ ನಡೆದುಕೊಂಡಿದ್ದರೂ, ಒಂದು ಮಹೋದ್ದೇಶದ ಸಾಧನೆಗಾಗಿ ಪಕ್ಷ ಮತ್ತು ಮೋದಿ ಎಲ್ಲವನ್ನು ಸಹಿಸಿಕೊಂಡದ್ದು ನಿಜ. ಒಂದಿಲ್ಲ ಒಂದು ದಿನ ಬಿಹಾರದಲ್ಲಿ ತನಗೆ 'ಅಚ್ಛೇ ದಿನಗಳು' ಬಂದಾವೆಂದು ಪಕ್ಷ ಕಾಯುತ್ತಲೇ ಇತ್ತು. 'ತಾಳುವಿಕೆಗಿಂತನ್ಯ ತಪವಿಲ್ಲ' ಎಂದು ವಾದಿರಾಜ ಸ್ವಾಮಿಗಳು ಹೇಳಿರುವಂತೆ, ತಾಳಿದವನು ಬಾಳಿಯಾನು ಎಂಬ ಕನ್ನಡ ಗಾದೆಯಂತೆ ಬಿಜೆಪಿ ತನ್ನ ತಾಳ್ಮೆಗೆ ಪ್ರತಿಫಲವನ್ನು ಕಂಡುಕೊಂಡಿತು.

'ಮಾರ್ಗದರ್ಶಕ' ನಿತೀಶ್!

ಹಾಗೆಂದು, ಬಿಜೆಪಿ ಸಂಯುಕ್ತ ಜನತಾದಳದಿಂದ ಮತ್ತು ನಿತೀಶ್ ಅವರ ಹಿಡಿತದಿಂದ ಮುಕ್ತವಾಗಿದೆ ಎಂದೇನಿಲ್ಲ. ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ನಿತೀಶ್ ಅವರದೇ ನಿರ್ಣಾಯಕ ಪಾತ್ರವಾಗುವ ಸೂಚನೆಯನ್ನು ಅವರ ಪಕ್ಷದ ನಾಯಕರು ನೀಡಿದ್ದಾರೆ. ಬಿಜೆಪಿಯ ಮುಖ್ಯಮಂತ್ರಿ ಯಾರಾಗಬೇಕು ಎಂಬ ವಿಷಯದಲ್ಲಿಯೂ ಅವರದೇ ಪ್ರಮುಖ ಪಾತ್ರವಿದೆ ಎಂದು ನಂಬಲಾಗಿದೆ. ಸಮ್ರಾಟ್ ಚೌಧುರಿ ಅವರು ನಿತೀಶ್ ಅವರಿಗೆ ಬಹಳ ಆಪ್ತರು ಮತ್ತು ಹಿತಚಿಂತಕರು. ನಿತೀಶ್ ಮಂತ್ರಿಮಂಡಲದಲ್ಲಿ ಉಪಮುಖ್ಯಮಂತ್ರಿಯಾಗಿದ್ದ ಸಮ್ರಾಟ್, ನಿತೀಶ್ ಅನಾರೋಗ್ಯದಿಂದಿರುವಾಗ ಅವರ ಕಾಳಜಿವಹಿಸಿದ್ದರು, ಅವರಿಗೆ ಅನೇಕ ರೀತಿಯಲ್ಲಿ ನೆರವಾಗಿದ್ದಾರೆ. ಓರ್ವ ಬಿಜೆಪಿ ನಾಯಕ ಮಿತ್ರಪಕ್ಷದ ಅತ್ಯುನ್ನತ ನಾಯಕನ ವಿಶ್ವಾಸಕ್ಕೆ ಪಾತ್ರನಾಗುವುದು ವಿರಳ.

ನಿತೀಶ್‌ರ ಆಣತಿಯಂತೆಯೇ ಜೆ.ಡಿ.ಯು.ನ ಇಬ್ಬರು ನಾಯಕರು ಉಪ ಮುಖ್ಯಮಂತ್ರಿಗಳಾಗಿದ್ದಾರೆ. ಮೇಲಾಗಿ, ತಾವು ರಾಜ್ಯಸಭೆಗೆ ಆಯ್ಕೆಯಾದರೂ ದೆಹಲಿಯಲ್ಲಿ ಹೆಚ್ಚಿನ ಸಮಯ ಕಳೆಯದೆ ಪಾಟ್ನಾದಲ್ಲಿಯೇ ಇರುವುದಾಗಿ ಹೇಳಿದ್ದಾರೆ. ಅವರ ಒಂದು ಕಾಲು ದೆಹಲಿಯಲ್ಲಿ, ಇನ್ನೊಂದು ಪಾಟ್ನಾದಲ್ಲಿ ಎಂದೇನಿಲ್ಲ, ಎರಡೂ ಕಾಲುಗಳು ಪಾಟ್ನಾದಲ್ಲಿಯೇ ಇರುವಂಥವು. ಸಮ್ರಾಟ್ ಸರಕಾರಕ್ಕೆ ಅವರು 'ಮಾರ್ಗದರ್ಶಕ'ರಾಗಿ ಇರುತ್ತಾರಂತೆ. ಈ ಸೂಕ್ಷ್ಮ ಸಂಕೀರ್ಣ ಹಿನ್ನೆಲೆಯೊಂದಿಗೆ ಬಿಜೆಪಿ ಸದ್ಯಕ್ಕಂತೂ ಅತ್ಯಂತ ಜಾಗರೂಕತೆಯಿಂದ ನಡೆದುಕೊಳ್ಳಬೇಕಾಗುತ್ತದೆ.

2025ರ ಅಸೆಂಬ್ಲಿ ಚುನಾವಣೆಯಲ್ಲಿ ಬಿಜೆಪಿ 89 ಸ್ಥಾನಗಳನ್ನು ಪಡೆದು ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತೇನೋ ನಿಜ. ಆದರೆ ನಿತೀಶ್ ಪಕ್ಷ 85 ಸ್ಥಾನಗಳೊಂದಿಗೆ ತೀರಾ ಹತ್ತಿರದಲ್ಲಿಯೇ ಇದೆ. ನಿತೀಶ್ ಕುಮಾರ್ ನಂಬಿಕೆಗೆ ಅರ್ಹವಲ್ಲದ ನಾಯಕ ಎಂಬುದು ರಹಸ್ಯವೇನೂ ಅಲ್ಲ. ಅವರು ಈ ಇಳಿವಯಸ್ಸಿನಲ್ಲಿಯೂ ಎಂಥ ರಾಜಕಾರಣವನ್ನಾದರೂ ಮಾಡಬಲ್ಲರು.

ಹಲವರ ಗರಡಿಯಲ್ಲಿ ಪಳಗಿರುವ ಸಮ್ರಾಟ್...

ಐವತ್ತೇಳರ ಹರೆಯದ ಹಿಂದುಳಿದ ವರ್ಗದ ನಾಯಕರಾದ ಸಮ್ರಾಟ್ ಚೌಧುರಿ ಎಲ್ಲರ ಗರಡಿಯಲ್ಲಿ ಪಳಗಿದವರಾಗಿದ್ದಾರೆ. ಅವರು ಆರೆಸ್ಸೆಸ್ ಮೂಲದವರೂ ಅಲ್ಲ, ಬಿಜೆಪಿ ಮೂಲದವರೂ ಅಲ್ಲ. ಲಾಲುಪ್ರಸಾದ್ ಯಾದವ್ ಅವರ ಆರ್‌ಜೆಡಿಯಲ್ಲಿದ್ದ ಚೌಧುರಿ ಅನಂತರ ತಮ್ಮ ನಿಷ್ಠೆಯನ್ನು ನಿತೀಶ್ ಕುಮಾರ್ ಅವರಿಗೆ ಬದಲಿಸಿದರು. ಅಲ್ಲಿಂದ ಸಂಯುಕ್ತ ಜನತಾದಳವನ್ನು ಸೇರಿದರು. ಅನಂತರದಲ್ಲಿ ಅವರು ಈಗ ಕೇಂದ್ರ ಸಚಿವರೂ, ಬಿಹಾರದ ಮಾಜಿ ಮುಖ್ಯಮಂತ್ರಿಗಳೂ ಆದ ಜಿತನ್‌ರಾಂ ಮಾಂಝಿ ಅವರ ಹಿಂದುಸ್ತಾನ್ ಆವಾಮ್ ಮೋರ್ಚಾ (ಎಚ್.ಎ.ಎಂ.) ಸೇರಿದರು. 2018ರಲ್ಲಿ ಬಿಜೆಪಿ ಸೇರಿದ ಚೌಧುರಿ ಅಲ್ಲಿ ತಮ್ಮ ರಾಜಕೀಯ ಜೀವನದ ಅತ್ಯುನ್ನತ ಶಿಖರವನ್ನು ತಲುಪಿದ್ದಾರೆ. ಅವರು ಈ ಹಿಂದೆ ಆರ್‌ಜೆಡಿಯ ರಾಬ್ಡಿದೇವಿ ಸರಕಾರದಲ್ಲಿ, ಜಿತನ್‌ರಾಂ ಸರಕಾರದಲ್ಲಿ, ನಿತೀಶ್ ಕುಮಾರ್ ಅವರ ಸರಕಾರದಲ್ಲಿ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. ಉಪಮುಖ್ಯಮಂತ್ರಿಯಾಗಿಯೂ ಕಾರ್ಯಾನುಭವ ಪಡೆದಿದ್ದಾರೆ. ಗೃಹ ವ್ಯವಹಾರ ಮತ್ತು ಹಣಕಾಸು ಮುಂತಾದ ಮಹತ್ವದ ಖಾತೆಗಳು ಸೇರಿ ಅನೇಕ ಖಾತೆಗಳನ್ನು ನಿರ್ವಹಿಸಿದ್ದಾರೆ. ಅವರಿಗೆ ರಾಜಕೀಯ ಮತ್ತು ಆಡಳಿತದ ಅನುಭವ ಸಾಕಷ್ಟಿದೆ. ಈಗವರು ಎಷ್ಟರಮಟ್ಟಿಗೆ ಸ್ವತಂತ್ರವಾಗಿ ಕಾರ್ಯನಿರ್ವಹಿಸಬಲ್ಲರೆಂಬುದು ಕುತೂಹಲಕರವಾದದ್ದು. ಅವರು ದೆಹಲಿಯ ಆಜ್ಞೆಯನ್ನೂ ಪಾಲಿಸಬೇಕು, ನಿತೀಶರ ಆಣತಿಯಂತೆಯೂ ನಡೆದುಕೊಳ್ಳಬೇಕು.

ಮುಖ್ಯಮಂತ್ರಿಯಾಗಿ ಬಿಜೆಪಿ ಆಡಳಿತವನ್ನು ಜನಾನುರಾಗಿಯಾಗಿ ಮಾಡುವ ಗುರುತರ ಜವಾಬ್ದಾರಿ ರಾಜ್ಯದ 24ನೆಯ ಮುಖ್ಯಮಂತ್ರಿಯಾದ ಅವರ ಮೇಲಿದೆ. ವಿರೋಧ ಪಕ್ಷಗಳಾದ ಆರ್.ಜೆ.ಡಿ. ಮತ್ತು ಕಾಂಗ್ರೆಸ್ ಸೊರಗಿ ಹೋಗಿರುವುದು ಅವರಿಗೆ ಅನುಕೂಲಕರವೇ ಆದೀತು. ಆದರೆ ಬಿಜೆಪಿ – ಜೆಡಿಯು ಮೈತ್ರಿಯನ್ನು ಉಳಿಸಿಕೊಳ್ಳುವುದಷ್ಟೇ ಅಲ್ಲ, ಅದನ್ನು ಬಲಪಡಿಸಲೂ ಬೇಕು. ಜೆಡಿಯುವನ್ನು ಮೀರಿ ಮುನ್ನಡೆಯುವ ಪ್ರಯತ್ನ ಅವರು ಮಾಡಲಾರರು. ಅದಕ್ಕಾಗಿ ಇನ್ನೂ ಸಾಕಷ್ಟು ಸಮಯ ಕಾಯಬೇಕಾದೀತು.

1980ರಲ್ಲಿ ಬಿಜೆಪಿ ಬಿಹಾರ ವಿಧಾನಸಭೆಯಲ್ಲಿ ತನ್ನ ಖಾತೆ ತೆರೆದಿತ್ತು. ಅದು ಆಡಳಿತ ಪಕ್ಷವಾಗಲು ನಾಲ್ಕೂವರೆ ದಶಕಗಳ ದೀರ್ಘಾವಧಿ ಬೇಕಾಯಿತು. ಬರಲಿರುವ ದಿನಗಳು ಅತ್ಯಂತ ಪ್ರಮುಖವಾಗಿವೆ. ರಾಜ್ಯ ವಿಧಾನಸಭೆಯ ಮುಂದಿನ ಚುನಾವಣೆ ಮಹಿಳಾ ಮೀಸಲಾತಿಯೊಂದಿಗೆ ನಡೆಯುವುದರಿಂದ ವಿಧಾನಸಭಾ ಸ್ಥಾನಗಳು ಈಗಿರುವ ಸ್ಥಾನಗಳು ಗಣನೀಯವಾಗಿ ಹೆಚ್ಚಲಿವೆ. ಈ ಎಲ್ಲಾ ದೃಷ್ಟಿಯಿಂದ ನೋಡಿದರೆ ಬಿಹಾರ ಬಿಜೆಪಿಯ ಮೊದಲ ಮುಖ್ಯಮಂತ್ರಿ ನಿರ್ಣಾಯಕರಾಗಿ ಪರಿಣಮಿಸಬಲ್ಲರು. ■

ಐಪಿಎಲ್

ದಾಖಲೆಗಳ ಸುನಾಮಿ

ಐಪಿಎಲ್ 19ನೆಯ ಆವೃತ್ತಿಯ ಟಿ20 ರೋಚಕ ರಣಾಂಗಣವಾಗಿ ಮಾರ್ಪಟ್ಟಿದೆ. ಹಲವು ದಾಖಲೆಗಳು ಕ್ರಿಕೆಟ್ ಅಂಗಣದಲ್ಲಿ ಸೃಷ್ಟಿಯಾಗಿವೆ. ಸಂಕಲ್ಪ, ಛಲ, ಕೆಚ್ಚಿನೊಂದಿಗೆ ಎಲ್ಲಾ ಪರಿಸ್ಥಿತಿಗಳನ್ನು ಎದುರಿಸುವ, ಗೆದ್ದು ತೋರುವ ಅಖಾಡವಾಗಿ ಬದಲಾಗಿದೆ. ಹೊಸ ಯುವ ಆಟಗಾರರು ಆರಂಭಿಕ ಪಂದ್ಯದಲ್ಲೇ ಅದ್ಭುತ ದಾಖಲೆ ಬರೆದು ಹೀರೋಗಳಾಗುತ್ತಿದ್ದಾರೆ. ಈ ಆಟದ ರೋಚಕ ನೋಟ ಇಲ್ಲಿದೆ.

❑ಬಾಲಾಜಿ

ಕ್ರಿಕೆಟ್ ಎಂಬುದು ಕೇವಲ ಆಟವಲ್ಲ, ಅದೊಂದು ಭಾವನೆ ಎಂಬುದನ್ನು ಐಪಿಎಲ್ ಪ್ರತಿ ವರ್ಷ ಸಾಬೀತುಪಡಿಸುತ್ತಿದೆ. ಅದರಲ್ಲೂ ಈ ಆವೃತ್ತಿ ಹಳೆಯ ದಾಖಲೆಗಳನ್ನೆಲ್ಲಾ ಗಾಳಿಗೆ ತೂರಿ ಹೊಸ ಇತಿಹಾಸ ಬರೆಯುತ್ತಿದೆ. ಕ್ರೀಡಾಂಗಣದ ಮೂಲೆಮೂಲೆಗೆ ಸಿಕ್ಸರ್‌ಗಳು ಸಿಡಿಯುತ್ತಿದ್ದರೆ, ಇತ್ತ ಅಂಕಿಅಂಶಗಳ ಪುಸ್ತಕದಲ್ಲಿ ದಾಖಲೆಗಳು ಬದಲಾಗುತ್ತಿವೆ. ನೂತನ ಆಟಗಾರರ ಕಿಚ್ಚು, ಆಟದ ಗತಿಯನ್ನೇ ಬದಲಿಸಲು ಕಾರಣವಾಗುತ್ತಿದೆ.

ಸೂರ್ಯವಂಶಿ: ದಾಖಲೆಗಳ ವೈಭವ

ರಾಜಸ್ಥಾನ್ ರಾಯಲ್ಸ್ ತಂಡದ ಗೆಲುವುಗಳಲ್ಲಿ ನಿರ್ಣಾಯಕ ಎನಿಸಿರುವುದು 15ರ ಹರೆಯದ ವೈಭವ್ ಸೂರ್ಯವಂಶಿ ಬ್ಯಾಟಿಂಗ್. ತಮ್ಮ ಸಿಡಿಲಬ್ಬರದ ಬ್ಯಾಟಿಂಗ್‌ನಿಂದ ಕ್ರಿಕೆಟ್ ಲೋಕವನ್ನು ಅಚ್ಚರಿಗಳಲ್ಲಿ ಮುಳುಗಿಸಿದ್ದಾರೆ. ಎರಡು ಬಾರಿ 15 ಎಸೆತಗಳಲ್ಲಿ ಅರ್ಧಶತಕ ಸಿಡಿಸಿದ್ದಾರೆ. ಇಷ್ಟು ಸಣ್ಣ ವಯಸ್ಸಿನ ಯಾರೊಬ್ಬರೂ ಐಪಿಎಲ್‌ನ ವರ್ತಮಾನ ಮತ್ತು ಗತದಲ್ಲಿ ಈ ದಾಖಲೆ ಮಾಡಿಲ್ಲ.

ಐಪಿಎಲ್ ಈಗ ದಾಖಲೆಗಳ ಯುದ್ಧಭೂಮಿ. ಒಂದು ಕಾಲದಲ್ಲಿ ಟಿ20 ಕ್ರಿಕೆಟ್‌ನಲ್ಲಿ ಅರ್ಧಶತಕಕ್ಕೆ 25–30 ಎಸೆತಗಳು ಬೇಕಾಗುತ್ತಿದ್ದವು. ಆದರೆ ಈಗ 13–14 ಎಸೆತಗಳಲ್ಲೇ ಬ್ಯಾಟರ್‌ಗಳು 50ರ ಗಡಿ ದಾಟುತ್ತಿದ್ದಾರೆ. ಯಶಸ್ವಿ ಜೈಸ್ವಾಲ್ ಅವರ 13 ಎಸೆತಗಳ ಮಿಂಚಿನ ಆಟ ಮತ್ತು ಕ್ರಿಸ್‌ಗೇಲ್ ಅವರ 30 ಎಸೆತಗಳ ಶತಕದ ದಾಖಲೆಗಳು ಇಂದಿಗೂ ಕ್ರಿಕೆಟ್ ಪ್ರೇಮಿಗಳ ಮನದಲ್ಲಿ ಹಚ್ಚ ಹಸುರಾಗಿದೆ.

ಇದೀಗ ರಾಜಸ್ಥಾನ್ ರಾಯಲ್ಸ್ ತಂಡದ ಆರಂಭಿಕ ಆಟಗಾರ ವೈಭವ್ ಸೂರ್ಯವಂಶಿ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ರಾಯಲ್ ಛಾಲೆಂಜರ್ಸ್ ತಂಡಗಳ ವಿರುದ್ಧದ ಪಂದ್ಯದಲ್ಲಿ ಕೇವಲ 15 ಎಸೆತಗಳಲ್ಲಿ ಅರ್ಧಶತಕ ಸಿಡಿಸುವ ಮೂಲಕ ಐಪಿಎಲ್ ಇತಿಹಾಸದ ಅತಿ ವೇಗದ ಅರ್ಧಶತಕದ ದಾಖಲೆ ನಿರ್ಮಿಸಿದ್ದಾರೆ.

ಸದ್ಯದ ಅಂಕಿಅಂಶಗಳ ಪ್ರಕಾರ, ಈ ಸೀಸನ್‌ನಲ್ಲಿ ಕೇವಲ ನಾಲ್ಕು ಪಂದ್ಯಗಳಲ್ಲಿ 18 ಸಿಕ್ಸರ್ ಹಾಗೂ 36 ಬೌಂಡರಿ ಬಾರಿಸಿ ಅಪೂರ್ವ ಸಾಧನೆ ತೋರಿದ್ದಾರೆ. ಇವರ ಸ್ಟ್ರೈಕ್ ರೇಟ್ 263.15 (ಆಟಗಾರನೊಬ್ಬ 100 ಎಸೆತಗಳಿಗೆ ಬ್ಯಾಟರ್ ಗಳಿಸುವ ರನ್ ಸರಾಸರಿಯನ್ನು ಸ್ಟ್ರೈಕ್ ರೇಟ್ ಎನ್ನುತ್ತೇವೆ. ಸಾಮಾನ್ಯವಾಗಿ ಸ್ಟ್ರೈಕ್ ರೇಟ್ 140–150 ಇದ್ದರೆ ಉತ್ತಮ ಎನಿಸಿಕೊಳ್ಳುತ್ತದೆ).

ಕ್ರಿಕೆಟ್ ಎನ್ನುವುದು ಅನುಭವದ ಆಟ ಎನ್ನುವ ಮಾತನ್ನು ವೈಭವ್ ಸೂರ್ಯವಂಶಿ ಸುಳ್ಳು ಮಾಡಿದ್ದಾರೆ. ಮೈದಾನಕ್ಕಿಳಿದರೆ ಸಾಕು, ಎದುರಿಗಿರುವ ಬೌಲರ್ ಯಾರು, ಅವರ ಅನುಭವ ಎಷ್ಟು ಎಂಬುದನ್ನು ಲೆಕ್ಕಿಸದೆ ಬ್ಯಾಟ್ ಬೀಸುವ ಈ

ಕಿಶೋರ, ಪ್ರಸಕ್ತ ಐಪಿಎಲ್‌ನ 'ಪೋಸ್ಟರ್ ಬಾಯ್' ಆಗಿ ಹೊರಹೊಮ್ಮಿದ್ದಾರೆ. ಮೈದಾನದ ಮೂಲೆ ಮೂಲೆಗೂ ಚೆಂಡನ್ನು ಅಟ್ಟುವ ವೈಭವ್ '360 ಡಿಗ್ರಿ ಪ್ಲೇಯರ್' ಎಂದೂ ಕರೆಯಿಸಿಕೊಳ್ಳುತ್ತಿದ್ದಾರೆ.

ಚೆಂಡಿನ ಗತಿಯನ್ನು ಅತಿ ವೇಗವಾಗಿ ಗ್ರಹಿಸಿ, ಲೈನ್ ಮತ್ತು ಲೆಂಗ್ತ್‌ಗೆ ತಕ್ಕಂತೆ ಬ್ಯಾಟ್ ಬೀಸುವ ಕಲೆ ಅವರಿಗಿದೆ. ಕೇವಲ ಸಾಂಪ್ರದಾಯಿಕ ಹೊಡೆತಗಳಿಗೆ ಸೀಮಿತವಾಗಿರದೆ ಆಫ್-ಸೈಡ್‌ನಲ್ಲಿ ಕಟ್ ಶಾಟ್‌ಗಳು, ಲೆಗ್-ಸೈಡ್‌ನಲ್ಲಿ ಫ್ಲಿಕ್ ಮತ್ತು ಸ್ಲಾಗ್ ಸ್ವೀಪ್‌ಗಳನ್ನು ಅತ್ಯಂತ ಲೀಲಾಜಾಲವಾಗಿ ಆಡುತ್ತಾರೆ. ಅವರ ಬ್ಯಾಟ್ ಸ್ವಿಂಗ್ ಅತ್ಯಂತ ವೇಗವಾಗಿದ್ದು, ಚೆಂಡು ಬ್ಯಾಟಿಗೆ ತಗುಲಿದ ಕೂಡಲೇ ಗುಂಡಿನಂತೆ ಚಿಮ್ಮುತ್ತದೆ. ಫುಟ್‌ವರ್ಕ್ ಕೂಡ ಚಾಣಾಕ್ಷ ನಡೆ ಎಂದೆನಿಸಿಕೊಂಡಿದೆ.

ಚೆಂಡಿನ ಗತಿ ಹೇಗೇ ಇದ್ದರೂ ಅದನ್ನು ಸಿಕ್ಸರ್‌ಗೆ ಎತ್ತುವ ವೈಭವ್ ಆಟದ ಗುಟ್ಟು ಬೌಲರ್‌ಗಳಿಗೆ ಚಿದಂಬರ ರಹಸ್ಯ! ಗಂಟೆಗೆ 145-150 ಕಿ.ಮೀ. ವೇಗದಲ್ಲಿ ಬರುವ ಚೆಂಡನ್ನು ಅಷ್ಟೇ ವೇಗವಾಗಿ ಗಡಿ ದಾಟಿಸುವ ಪರಿ ನೋಡುಗರಿಗೆ ಹಬ್ಬ.

ಕ್ರಿಕೆಟ್‌ಗೆ ಅಂಟಿಕೊಂಡ ಜೀವ

ಕಳೆದ ವರ್ಷ ಐಪಿಎಲ್ ಪದಾರ್ಪಣೆಗೂ ಕೆಲವು ಗಂಟೆಗಳಿಗೆ ಮುನ್ನ ವೈಭವ್ ಅವರನ್ನು ತಮ್ಮ ಕೊಠಡಿಗೆ ಕರೆದಿದ್ದ ಆಗಿನ ರಾಜಸ್ಥಾನ ರಾಯಲ್ಸ್ ತಂಡದ ಕೋಚ್ ರಾಹುಲ್ ದ್ರಾವಿಡ್ 'ಇವತ್ತು ನಿನ್ನನ್ನು ಆಡಿಸುತ್ತೇನೆ, ನಿನ್ನ ಗೇಮ್ ಪ್ಲಾನ್ ಏನು?' ಎಂದು ಕೇಳಿದಾಗ ವೈಭವ್ ಕೊಟ್ಟ ಉತ್ತರ ಹೀಗಿತ್ತು: 'ಐಸಾ ಕುಛ್ ನಹೀ ಹೇ ಸರ್.. ಹಮ್ ತೋ ಖೇಲೇಂಗೆ.. ಅಗರ್ ಹಮೇ ಬಾಲ್ ಪೆಹ್ಲಾ ಮಿಲಾ, ಪೆಹ್ಲಾ ಹೀ ಉಡಾ ದೇಂಗೇ' (ಅಂಥದ್ದೇನೂ ಇಲ್ಲ ಸರ್. ನಾವು ಆಡುತ್ತೇವೆ. ಹಾಗೇನಾದರೂ ಚೆಂಡು ಮೊದಲು ನನಗೆ ಸಿಕ್ಕರೆ ಅದನ್ನು ಗಾಳಿಯಲ್ಲಿ ಹಾರಿಸಿ ಸಿಕ್ಸರ್ ಬಾರಿಸುತ್ತೇನೆ).

ಇದು ಕೇವಲ ಮಾತಿಗೆ ಸೀಮಿತವಾಗಿರಲಿಲ್ಲ, ಕೃತಿ ರೂಪ ತಾಳಿತು. ಮೊದಲ ಪಂದ್ಯ, ಮೊದಲ ಎಸೆತವನ್ನೇ ಸಿಕ್ಸರ್‌ಗೆ ಉಡಾಯಿಸಿ ತನ್ನ ನುಡಿ, ಸಾಮರ್ಥ್ಯದ ಪ್ರತೀಕ ಎಂಬುದನ್ನು ರುಜುವಾತುಪಡಿಸಿದರು.

ಈಗ ಅವರ ಆಟವನ್ನು ಕಂಡು ಆರ್‌ಸಿಬಿ ತಂಡದ ವಿರಾಟ್ ಕೊಹ್ಲಿ ಶಹಬ್ಬಾಸ್ ಹೇಳಿದ್ದಾರೆ. ಕ್ಯಾಪ್‌ಗೆ ಹಸ್ತಾಕ್ಷರ ಹಾಕಿ, ಬ್ಯಾಟ್ ಉಡುಗೊರೆ ನೀಡಿದ್ದಾರೆ. ನೈಜ ಆಟದ ಪ್ರತಿಭೆಗೆ ಎಲ್ಲರೂ ಹೇಗೆ ಮನಸೋಲುತ್ತಾರೆ ಎಂಬುದಕ್ಕೆ ಇದು ನಿದರ್ಶನ.

ವೈಭವ್ ಸೂರ್ಯವಂಶಿ ಬಿಹಾರದ ಸಮಸ್ತಿಪುರದ ಬಾಲಕ. ಹುಟ್ಟೂರಲ್ಲಿ ಕ್ರಿಕೆಟ್ ಅಭ್ಯಾಸಕ್ಕೆ ಉತ್ತಮ ವ್ಯವಸ್ಥೆ ಇರಲಿಲ್ಲ. ಹೀಗಾಗಿ ಎಂಟನೆಯ ವಯಸ್ಸಲ್ಲಿ ಬೆಳಗ್ಗೆ ನಾಲ್ಕಕ್ಕೆ ಎದ್ದು ತಂದೆಯೊಂದಿಗೆ ಸಮಸ್ತಿಪುರದಿಂದ 85 ಕಿ.ಮೀ. ದೂರದ ಪಾಟ್ನಾಗೆ ಪ್ರಯಾಣಿಸುತ್ತಿದ್ದ. ಅಲ್ಲಿ ಪ್ರತಿ ದಿನ ನಾಲ್ಕು ಗಂಟೆಗಳ ಕಾಲ ಅಭ್ಯಾಸ. ದಿನಪೂರ್ತಿ ಆಡಿದರೂ ದಣಿಯದ ಉತ್ಸಾಹ. ತಂದೆ ಮಗನಿಗೆ ಲಾರಾ, ಯುವರಾಜ್ ಸಿಂಗ್ ಅವರ ಆಟದ ವಿಡಿಯೊಗಳನ್ನು ತೋರಿಸುತ್ತಿದ್ದರಂತೆ. ಇದರಿಂದ ಬಾಲಕನಲ್ಲಿ ವೀರೋಚಿತತೆ ಮೈಗೂಡಿತು.

ಈ ಐಪಿಎಲ್ ಋತುವಿನ ನಾಲ್ಕು ಪಂದ್ಯಗಳಲ್ಲಿ ಅದ್ಭುತ ಆಟವಾಡಿರುವ ವೈಭವ್ ಕ್ರಿಕೆಟ್ ಪ್ರೇಮಿಗಳ ಮನಸ್ಸು ಕದ್ದಿದ್ದಾರೆ. ಇವರ ಆಟಕಂಡು ಫಿದಾ ಆಗಿರುವ ಆಯ್ಕೆಗಾರರು ಜೂನ್‌ನಲ್ಲಿ ಐರ್ಲೆಂಡ್ ವಿರುದ್ಧ ಆಡುವ ಪಂದ್ಯದಲ್ಲಿ ಟೀಮ್ ಇಂಡಿಯಾಗೆ ಆಯ್ಕೆ ಮಾಡಿದ್ದಾರೆ.

ಫಸ್ಟ್ ಓವರ್ ಮ್ಯಾಜಿಕ್

ಸನ್ ರೈಸರ್ಸ್ ಹೈದರಾಬಾದ್ ತಂಡದ ಹೊಸ ವೇಗಿ ಪ್ರಫುಲ್ ಹಿಂಗೆ (24) ಐಪಿಎಲ್‌ನ ತನ್ನ ಪದಾರ್ಪಣಾ ಪಂದ್ಯದ ಮೊದಲ ಓವರ್‌ನಲ್ಲೇ ಮೂರು ವಿಕೆಟ್ ಪಡೆದ ಮೊದಲ ಬೌಲರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ರಾಜಸ್ಥಾನ್ ರಾಯಲ್ಸ್ ವಿರುದ್ಧದ ಪಂದ್ಯದಲ್ಲಿ ಅವರು ಈ



ಪ್ರಫುಲ್ ಹಿಂಗೆ

ಸಾಧನೆ ಮಾಡಿದ್ದಾರೆ. ವೈಭವ್ ಸೂರ್ಯವಂಶಿ, ಧ್ರುವ್ ಜುರೆಲ್ ಮತ್ತು ಲುವಾನ್ ಡ್ರೆ ಪ್ರಿಟೋರಿಯಸ್ ಅವರನ್ನು ಸೊನ್ನೆಗೆ ಔಟ್ ಮಾಡಿದ ಹಿರಿಮೆ ಇವರದ್ದು. ಐಪಿಎಲ್‌ನ 19 ವರ್ಷಗಳ ಇತಿಹಾಸದಲ್ಲೇ ಈ ಸಾಧನೆ ಇದೇ ಮೊದಲಿನದ್ದು ಎಂಬುದು ಗಮನಾರ್ಹ.

ಬೌಲರ್ ಒಬ್ಬ ಆರಂಭಿಕ ಸ್ಪೆಲ್‌ನಲ್ಲಿ ಎರಡು ವಿಕೆಟ್ ತೆಗೆದ 32 ನಿದರ್ಶನಗಳಿವೆ. ಆದರೆ ಮೂರು ವಿಕೆಟ್ ವಿಕ್ರಮ ಇದೇ ಮೊದಲು. ವಿದರ್ಭ ಮೂಲದ ಈ ಯುವಕನನ್ನು ಐಪಿಎಲ್ ಹರಾಜಿನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡ 30 ಲಕ್ಷ ರೂ.ಗೆ ಖರೀದಿಸಿತ್ತು.

ಈ ಸೀಸನ್‌ನ ಮೊದಲ ಶತಕ ಬಾರಿಸಿದ ಕೀರ್ತಿ ಸಂಜು ಸ್ಯಾಮ್ಸನ್ ಅವರಿಗೆ ಸಲ್ಲುತ್ತದೆ. ಚೆನ್ನೈ ಸೂಪರ್ ಕಿಂಗ್ಸ್ ಪರವಾಗಿ ದಿಲ್ಲಿ ಕ್ಯಾಪಿಟಲ್ಸ್ ವಿರುದ್ಧ ಕೇವಲ 56 ಎಸೆತಗಳಲ್ಲಿ ಅಜೇಯ 115 ರನ್ ಸಿಡಿಸಿದರು. ತಮ್ಮ ತಂಡಕ್ಕಾಗಿ ಅತಿ ಹೆಚ್ಚು ಬಾರಿ ಟಾಪ್-ಸ್ಕೋರ್ ಮಾಡಿದ ವಿಕೆಟ್ ಕೀಪರ್ ಎಂಬ ಎಂ.ಎಸ್. ಧೋನಿಯವರ ದಾಖಲೆಯನ್ನು ಅವರು ಚಿಂದಿ ಮಾಡಿದರು.

ಸಂಜು ಸ್ಯಾಮ್ಸನ್

ಗುಜರಾತ್ ಟೈಟನ್ಸ್ ಪರ ಆಡುತ್ತಿರುವ ಕನ್ನಡಿಗ ಪ್ರಸಿದ್ಧ್ ಕೃಷ್ಣ 10 ವಿಕೆಟ್ ಪಡೆಯುವ ಮೂಲಕ ಪರ್ಪಲ್ ಕ್ಯಾಪ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ.

ಸೋತರೂ ಗೆದ್ದ ರಾಜಸ್ಥಾನ್ ರಾಯಲ್ಸ್

ಐಪಿಎಲ್ ಇತಿಹಾಸದಲ್ಲಿ ಸಾಮಾನ್ಯವಾಗಿ ಆರಂಭದಲ್ಲೇ ವಿಕೆಟ್ ಉರುಳಿದರೆ ತಂಡ ಕಡಿಮೆ ಸ್ಕೋರಿಗೆ ಔಟ್ ಆಗುತ್ತದೆ. ಆದರೆ ಈ ಐಪಿಎಲ್‌ನಲ್ಲಿ ಈ ನಂಬಿಕೆ ಸುಳ್ಳಾಯಿತು. ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ಕೇವಲ ಒಂಬತ್ತು ರನ್‌ಗಳಿಗೆ ಪ್ರಮುಖ ಐದು ವಿಕೆಟ್ ಕಳೆದುಕೊಂಡಿತ್ತು. ಎಲ್ಲರೂ ಈ ತಂಡ 50ರ ಗಡಿ ದಾಟುವುದು ಕಷ್ಟ ಎಂದು ಭಾವಿಸಿದರು. ಆದರೆ 159 ರನ್ ಕಲೆ ಹಾಕಿತು. ಐಪಿಎಲ್ ಇತಿಹಾಸದಲ್ಲಿ 20 ರನ್‌ಗಳ ಒಳಗೆ ಐದು ವಿಕೆಟ್ ಕಳೆದುಕೊಂಡ ಅನಂತರ 150+ ರನ್ ಗಳಿಸಿದ ಮೊದಲ ತಂಡ ಎಂಬ ಹೆಗ್ಗಳಿಕೆಗೆ ಭಾಜನವಾಯಿತು.



ವಿರಾಟ್ ಕೊಹ್ಲಿ ರೆಕಾರ್ಡ್

ಆರ್‌ಸಿಬಿ ಪರ ಆಡುತ್ತಿರುವ ವಿರಾಟ್ ಕೊಹ್ಲಿ ಈ ಬಾರಿ ಮತ್ತೊಂದು ಭವ್ಯ ದಾಖಲೆ ಬರೆದಿದ್ದಾರೆ. ಐಪಿಎಲ್‌ನ ಆರಂಭದಿಂದಲೂ (2008 ರಿಂದ 2026 ರವರೆಗೆ) ಅಂದರೆ ಸತತ 19 ಆವೃತ್ತಿಗಳನ್ನು ಒಂದೇ ತಂಡದ ಪರವಾಗಿ ಆಡಿದ ಜಗತ್ತಿನ ಏಕೈಕ ಆಟಗಾರ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ. ■

ಇಂಗ್ಲಿಷ್ ಭೂತ

ಕಥೆ

❑ ಬಸವರಾಜ ಡೋಣೂರ

ಶಾಂತನಾಳದಲ್ಲಿದ್ದಾಗ ಅವನ ಹೆಸರು ವೀರಯ್ಯ ಎಂದಿತ್ತು. ದೇವರ ಹಿಪ್ಪರಗಿಯಲ್ಲಿ ಮಾಧ್ಯಮಿಕ ಶಿಕ್ಷಣ ಮುಗಿಸಿ ಪದವಿ ಶಿಕ್ಷಣಕ್ಕಾಗಿ ವಿಜಯಪುರಕ್ಕೆ ಬರುವಷ್ಟರಲ್ಲಿ ಅವನ ಹೆಸರು ವಿರಾಟ್ ಎಂದು ಬದಲಾಗಿತ್ತು. ಆದರೆ ಅವನ ಸ್ವಭಾವ ಮತ್ತು ವಿಚಾರಗಳು ಬದಲಾಗಿರಲಿಲ್ಲ. ಹಳ್ಳಿಯ ಮುಗ್ಧತೆ, ಹುಂಬತನ, ಹಿಂಜರಿಕೆ, ಕೀಳರಿಮೆ ಅವನನ್ನು ತೊರೆದಿರಲಿಲ್ಲ. ವಿರಾಟ್ ಕನ್ನಡ ಮಾಧ್ಯಮದಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಪದವಿಪೂರ್ವ ಕಾಲೇಜು ಶಿಕ್ಷಣ ಪೂರೈಸಿ, ಬಿ.ಎ.ನಲ್ಲಿ ಇಂಗ್ಲಿಷ್ ಪ್ರಧಾನ ವಿಷಯವನ್ನಾಗಿ ಆಯ್ಕೆ ಮಾಡಿಕೊಂಡ. ಆ ಕಾಲಕ್ಕೆ ವಿಜಯಪುರದ ವಿಜಯಾ ಕಾಲೇಜು ಮತ್ತು ಬಾಗಲಕೋಟೆಯ ಬಸವೇಶ್ವರ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಧಾನ ವಿಷಯವನ್ನು ಕಲಿಸಲಾಗುತ್ತಿತ್ತು. ಹೀಗಾಗಿ ವಿರಾಟನ ಮುಂದೆ ಹೆಚ್ಚು ಆಯ್ಕೆಗಳಿರಲಿಲ್ಲ. ವಿಜಯಪುರ ಶಾಂತನಾಳಕ್ಕೆ ಬಹಳ ಹತ್ತಿರದಲ್ಲಿತ್ತು. ಅಲ್ಲದೆ ಅವನಿಗೆ ಈ ನಗರದ ಪರಿಚಯವಿತ್ತು. ಹೀಗಾಗಿ ವಿರಾಟ್ ವಿಜಯಪುರದಲ್ಲಿಯೇ ಬಿ.ಎ. ಓದಲು ನಿರ್ಧರಿಸಿದ.

★ ★ ★

ವಿರಾಟ್ ಪಿ.ಯು.ಸಿ.ಯನ್ನು ಸಿಂದಗಿಯ ಆರ್.ಡಿ. ಪಾಟೀಲ್ ಕಾಲೇಜಿನಲ್ಲಿ ಓದಿದ. ಇತಿಹಾಸ, ಸಮಾಜಶಾಸ್ತ್ರ, ಶಿಕ್ಷಣಶಾಸ್ತ್ರ ಮತ್ತು ಕನ್ನಡ ವಿಷಯಗಳಲ್ಲಿ ಅವನು ತನ್ನ ತರಗತಿಯಲ್ಲಿಯೇ ಅತ್ಯಂತ ಜಾಣನಾಗಿದ್ದ. ಆದರೆ ಇಂಗ್ಲಿಷ್ ಮಾತ್ರ ಅವನ ಜೀವ ಹಿಂಡುತ್ತಿತ್ತು. ತನ್ನ ತರಗತಿಯಲ್ಲಿ ಓದುತ್ತಿದ್ದ ಬಹುತೇಕ ವಿದ್ಯಾರ್ಥಿಗಳ ಪರಿಸ್ಥಿತಿ ವಿರಾಟನ ಪರಿಸ್ಥಿತಿಯಷ್ಟೇ ಸೂಕ್ಷ್ಮವಾಗಿತ್ತು. ಆದರೆ ಇಂಗ್ಲಿಷ್ ತಲೆಗೆ ಹತ್ತದಿದ್ದರೆ ಏನಂತೆ? ನಕಲು ಮಾಡಿ ಪರೀಕ್ಷೆಯಲ್ಲಿ ಪಾಸಾಗಬಹುದು ಎಂಬ ಹುಂಬ ಧೈರ್ಯದಿಂದ ವಿರಾಟನ ಗೆಳೆಯರು ಇಂಗ್ಲಿಷ್ ಭೂತದ ಭೀತಿಯಿಂದ ಹೊರಗೆ ಬಂದಿದ್ದರು. ವಿರಾಟ್ ಮಾತ್ರ ನಿರಂತರವಾಗಿ ಇಂಗ್ಲಿಷ್ ಭೂತದ ದಾಳಿಯನ್ನು ಎದುರಿಸಬೇಕಾಯಿತು.

ಒಂದು ದಿನ ಇಂಗ್ಲಿಷ್ ತರಗತಿ ಮುಗಿಸಿ ಹೊರಗೆ ಬಂದಾಗ ಅವನ ಗೆಳೆಯ ಮಲ್ಲಿಕಾರ್ಜುನ ತಳವಾರ ವಿರಾಟನನ್ನು ನಿಲ್ಲಿಸಿ ಕೇಳಿದ:

''ವಿರಾಟ್, ಇಂಗ್ಲಿಷಿನ ಕಾರಣದಿಂದ ನನ್ಗ ನಿದ್ದಿ ಬರ್ತಿಲ್ಲ. ಇಂಗ್ಲಿಷ್ ವಿಷಯದಲ್ಲಿ ನಪಾಸ್ ಆದ್ರ ನನ್ನ ಗತಿ ಅಧೋಗತಿ. ಶಿಕ್ಷಕರು ಪಾಠ ಮಾಡುವಾಗ ಇಂಗ್ಲಿಷ್ ವ್ಯಾಕರಣ ಅರ್ಥ ಆದಂಗ ಅನಸ್ತದ. ಆದ್ರ ಕೋಣೆಗೆ ಬರ್ತಿದ್ದಂಗೇ ಎಲ್ಲಾ ಮರ್ತು ಹೋಗ್ತದ'' ಎಂದು ಮುಖದ ಮೇಲೆ ಹತಾಶೆ ವ್ಯಕ್ತಪಡಿಸುತ್ತ ಅತ್ಯಂತ ಖೇದದಿಂದ ಹೇಳಿದ. ತನ್ನ ಪರಿಸ್ಥಿತಿ ತನ್ನ ಗೆಳೆಯನ ಪರಿಸ್ಥಿತಿಗಿಂತ ಉತ್ತಮ ಆಗಿರದಿದ್ದರೂ ವಿರಾಟ್ ಮಲ್ಲಿಕಾರ್ಜುನನಿಗೆ ಸಮಾಧಾನ ಹೇಳಲು ಮುಂದಾದ.

''ಮಲ್ಲು, ಭಾಳ ಗಾಬರಿ ಆಗಬ್ಯಾಡ. ಹೆದರಬ್ಯಾಡ. ಇಂಗ್ಲಿಷ್ ಭೂತ ಭಾಳ ಅಪಾಯಕಾರಿಯಲ್ಲ. ಅದು ನಮ್ಮನ್ನ ಅಂಜಸ್ತದ. ಆದ್ರ ನಾವು ಅಂಜಬಾರದು. ಇಂಗ್ಲಿಷ್ ಭಾಷೆಯನ್ನು ಸೃಷ್ಟಿಸಿದ ಇಂಗ್ಲಿಷರಿಗೇ ನಾವು ಹೆದರಿಲ್ಲ! ಅವರು ಹಿಂದೆ ಬಿಟ್ಟು ಹೋದ ಈ ಇಂಗ್ಲಿಷ್ ಭಾಷೆಗೆ ನಾವು ಹೆದರಬಹುದೆ?'' ಎಂದು ವಿರಾಟ್ ಹೇಳಿದ.

ಪರಿಶ್ರಮಕ್ಕೆ ಜಯ ಖಂಡಿತ ಎಂಬ ಬಲವಾದ ನಂಬಿಕೆಯೇ ವಿರಾಟನ ಯಶಸ್ಸಿಗೆ ಕಾರಣವಾಯಿತು.

''ಹೀಂಗ ಮಾತಾಡಿದ್ರ ಇಂಗ್ಲಿಷ್ ಕಲ್ತಂಗ ಆಗ್ತದೇನು?'' ಎಂದು ಕೇಳಿ ಮಲ್ಲಿಕಾರ್ಜುನ ವಿರಾಟನ ಕಡೆಗೆ ಆಸೆಗಣ್ಣಿನಿಂದ ನೋಡಿ ಸಣ್ಣ ನಿಟ್ಟುಸಿರು ಬಿಟ್ಟ.

''ಇಂಗ್ಲಿಷ್ ನಮ್ಮನ್ನ ಅಷ್ಟ ಸರಳ ಬಿಡೋದಿಲ್ಲ. ಯಾಕಂದ್ರ ಇಂಗ್ಲಿಷ್ ನಮ್ಮನ್ನ ಹಿಡಿದಿಲ್ಲ. ನಾವು ಇಂಗ್ಲಿಷ್‌ನ್ನ ಹಿಡಿದಿವಿ. ಭೂತ ನಮ್ಮನ್ನ ಹಿಡಕೊಂಡ್ರ ಮಂತ್ರವಾದಿ ಹತ್ತಿರ ಹೋಗಿ ಅದನ್ನು ಓಡಿಸಬಹುದು. ನಾವೇ ಭೂತವನ್ನ ಹಿಡಕೊಂಡ್ರ ಎಂಥ ಶಕ್ತಿಶಾಲಿ ಮಂತ್ರವಾದಿಯೂ ನಾವು ಭೂತದಿಂದ ನಮ್ಮನ್ನ ಬಿಡುಗಡೆಗೊಳಿಸಲು ಸಾಧ್ಯವಿಲ್ಲ'' ಎಂದು ಹೇಳಿ ವಿರಾಟ್ ತನ್ನ ಗೆಳೆಯನನ್ನು ವಿಷಾದದಿಂದ ನೋಡಿದ.

ಗೆಳೆಯನ ಮಾತು ಕೇಳಿ ಮಲ್ಲಿಕಾರ್ಜುನ ಗದ್ಗದಿತನಾದ. ಅವನ ಕಣ್ಣುಗಳಿಂದ ನೀರು ಧಾರೆಯಾಗಿ ಹರಿಯಿತು. ಅವನು ಕಣ್ಣೀರು ಹರಿಯುವುದನ್ನು ಕಂಡು ವಿರಾಟ್ ಮರುಗಿದ.

''ಮಲ್ಲು, ಅಳಬ್ಯಾಡ. ಈ ಜಗತ್ತಿನಲ್ಲಿ ಪರಿಹರಿಸಲಾಗದ ಸಮಸ್ಯೆಯೇ ಇಲ್ಲ. ನಾನು ಬುದ್ಧಿವಂತನಲ್ಲ. ಆದ್ರ ಭಾಳ ಕಷ್ಟಪಟ್ಟು ಅಧ್ಯಯನ ಮಾಡ್ತೀನಿ. ದಿನಕ್ಕ ಹದಿನೆಂಟು ತಾಸ ಓದ್ತೀನಿ. ನಾವು ಆರು ವಿಷಯಗಳಲ್ಲಿ ತೇರ್ಗಡೆ ಆಗಬೇಕು. ಐದು ವಿಷಯಗಳ ತಯಾರಿಗಾಗಿ ನಾವು ಎಷ್ಟು ಶ್ರಮ ಹಾಕ್ತೇವೆಯೋ ಅಷ್ಟು ಶ್ರಮ ಇಂಗ್ಲಿಷ್ ಒಂದ್ ವಿಷಯ ಮ್ಯಾಲ ಹಾಕಿದ್ರ ನಾವು ಪಾಸ್ ಆಗೇ ಆಗ್ತೀವಿ. ಓದ್ಲಾಕ ನೀನೂ ನಮ್ಮ ಕೋಣೆಗೆ ಬರ್ತಿದ್ರ ಬಾ. ನಾನು ಈಗ ಒಂದ್ ಪ್ರತಿಜ್ಞೆ ಮಾಡ್ತೀನಿ. ನಾನು ಪಿ.ಯು.ಸಿ.ಯಲ್ಲಿ ನಕಲು ಮಾಡುವುದಿಲ್ಲ, ಪರೀಕ್ಷೆ ಪಾಸು ಮಾಡುವತನಕ ಸಿನೇಮಾ, ನಾಟಕ ನೋಡುವುದಿಲ್ಲ'' ಎಂದು ಹೇಳಿ ವಿರಾಟ್ ನಕ್ಕ. ಅವನ ನಗುವಿನಲ್ಲಿ ಪ್ರಚಂಡ ಆತ್ಮವಿಶ್ವಾಸ ವ್ಯಕ್ತವಾಯಿತು. ವಿರಾಟನ ಮಾತಿನಲ್ಲಿ ಮಲ್ಲಿಕಾರ್ಜುನನಿಗೆ ಭರವಸೆ ಕಂಡರೂ ನಕಲು ಮಾಡದೆ ಇಂಗ್ಲಿಷ್ ವಿಷಯದಲ್ಲಿ ತೇರ್ಗಡೆಯಾಗಲು ಸಾಧ್ಯವಿಲ್ಲ ಎಂದುಕೊಂಡು ಮತ್ತೊಂದು ವಿಷಾದದ ದೀರ್ಘ ನಿಟ್ಟುಸಿರು ಬಿಟ್ಟು ಹೊರಟು ಹೋದ.

ಆದರೆ ವಿರಾಟ್ ಇಂಗ್ಲಿಷ್ ಭೂತದ ಮೇಲೆ ಸವಾರಿ ಮಾಡಲು ಮುಂದಾದ. ಇಂಗ್ಲಿಷ್ ಪಾಠಗಳನ್ನು ಗಮನವಿಟ್ಟು ಆಲಿಸಿದ. ಶಿಕ್ಷಕರು ಹೇಳಿದ ಪ್ರತಿಯೊಂದು ಸಾಲನ್ನು ನೋಟ್ ಬುಕ್‌ನಲ್ಲಿ ಬರೆದುಕೊಳ್ಳತೊಡಗಿದ. ರೆನ್ ಆ್ಯಂಡ್ ಮಾರ್ಟಿನ್‌ನ ಇಂಗ್ಲಿಷ್ ವ್ಯಾಕರಣ ಪುಸ್ತಕ ಕೊಂಡುಕೊಂಡ. ಸಾಲದ್ದಕ್ಕೆ ರ್‍ಯಾಪಿಡೆಕ್ಸ್ ಇಂಗ್ಲಿಷ್ ಸ್ಪೀಕಿಂಗ್ ಕೋರ್ಸ್ ಪುಸ್ತಕ ತರಿಸಿದ. ಹಗಲಿರುಳು ಇಂಗ್ಲಿಷ್ ಓದಿದ. ಆದರೆ ತಾನು ನಿರೀಕ್ಷಿಸಿದಷ್ಟು ಇಂಗ್ಲಿಷ್ ಭಾಷಾಜ್ಞಾನ ಗಳಿಸಲು ಅವನಿಗೆ ಸಾಧ್ಯವಾಗಲಿಲ್ಲ.

ಇಂಗ್ಲಿಷ್ ಭೂತ ವಿರಾಟನ ಕನಸಿನಲ್ಲೊಂದು ದಿನ ಪ್ರತ್ಯಕ್ಷವಾಗಿ ಇಂಗ್ಲಿಷ್ ಶೈಲಿಯಲ್ಲಿ ನೃತ್ಯ ಮಾಡುತ್ತ ಹೇಳಿತು:

''ನನ್ನ ಮೇಲೆ ಸವಾರಿ ಮಾಡುವೆಯೋ? ನನ್ನನ್ನು ಒದ್ದೋಡಿಸುವಿಯೋ? ನಮ್ಮವರು ನಿಮ್ಮನ್ನು ಮೂರು ನೂರು ವರ್ಷ ಆಳಿದರು. ನಾನು ನಿಮ್ಮನ್ನು ಸಾವಿರ ವರ್ಷ ಆಳುತ್ತೇನೆ. ಆದರೆ ನನ್ನನ್ನು ಆಳಲು ನಿನಗೆ ಅವಕಾಶ ಕೊಡುವುದಿಲ್ಲ''

ಇಂಗ್ಲಿಷ್ ಭೂತ ಕಂಡು ವಿರಾಟ್ ಹೆದರಲಿಲ್ಲ. ಅವನು ಗಟ್ಟಿಯಾಗಿ ಹೇಳಿದ. ''ನಾವು ಭಾರತೀಯರು. ಪ್ರಾರಂಭದಲ್ಲಿ ನಮಗೆ ಸೋಲಾಗಬಹುದು. ಅಂತಿಮ ಗೆಲುವು ನಮ್ಮದೆ.

ನಮಗೆ ತಪಸ್ಸಿನಲ್ಲಿ, ಕಠಿಣ ಪರಿಶ್ರಮದಲ್ಲಿ ಅಪಾರ ನಂಬಿಕೆ ಇದೆ. ನಮ್ಮ ಋಷಿ–ಮುನಿಗಳು ತಪಸ್ಸು ಮಾಡಿ ಶಿವನನ್ನು ಒಲಿಸಿಕೊಂಡವರು. ಶಿವನನ್ನು ಗೆದ್ದ ನಮಗೆ ಇಂಗ್ಲಿಷ್ ಭಾಷೆಯನ್ನು ಗೆಲ್ಲುವುದು ಕಷ್ಟವೇ? ನಿಮ್ಮ ಜನರು ನಾಚುವಂತೆ ನಾವು ಇಂಗ್ಲಿಷ್ ಮಾತನಾಡುತ್ತೇವೆ, ಬರೆಯುತ್ತೇವೆ'' ಎಂದು ವಿರಾಟ್ ಹೇಳಿದ.

''ಲೆಟ್ ಮೀ ಸೀ, ಲೆಟ್ ಮೀ ಸೀ'' ಎಂದು ಅರಚುತ್ತ ಇಂಗ್ಲಿಷ್ ಭೂತ ಕಣ್ಮರೆಯಾಯಿತು.

★ ★ ★

ವಾರ್ಷಿಕ ಪರೀಕ್ಷೆಗಳು ಬಂದೇ ಬಿಟ್ಟವು. ಇಂಗ್ಲಿಷ್ ಪರೀಕ್ಷೆ ಪ್ರಾರಂಭವಾದ ಹತ್ತು ನಿಮಿಷದ ತರುವಾಯ ಅವರ ಇಂಗ್ಲಿಷ್ ಶಿಕ್ಷಕ ಬಸವರಾಜ ಅವಟಿಯವರು ಪರೀಕ್ಷಾ ಕೊಠಡಿಗೆ ಬಂದು ''40 ಅಂಕಗಳ ವ್ಯಾಕರಣ ಹೇಳುತ್ತೇನೆ. ಎಲ್ಲರೂ ಸರಿಯಾಗಿ ಬರೆದುಕೊಳ್ಳಿ'' ಎಂದು ಹೇಳಿ ಒಂದೊಂದು ಪ್ರಶ್ನೆಗೆ ಉತ್ತರ ಹೇಳತೊಡಗಿದರು. ವಿದ್ಯಾರ್ಥಿಗಳು ಇಂಗ್ಲಿಷ್ ಶಿಕ್ಷಕನಿಗೆ ತಮ್ಮ ಮನಸ್ಸಿನಲ್ಲಿಯೇ ಗೌರವ ಸಲ್ಲಿಸಿ ಉತ್ತರಗಳನ್ನು ಬರೆದುಕೊಳ್ಳತೊಡಗಿದರು. ಆದರೆ ಶಿಕ್ಷಕರು ಹೇಳಿದ ಉತ್ತರಗಳನ್ನು ಬರೆದುಕೊಳ್ಳದ ವಿರಾಟನ ಕಡೆಗೆ ಅವಟಿಯವರ ಗಮನ ಹೋಯಿತು.

''ಏ ಕೆಂಪಂಗಿ, ನೀ ಯಾಕ ಸುಮ್ನ ಕಲ್ಲು ಬಂಡಿ ಹಂಗ ಕುಂತಿಯಾ? ನನ್ನ ಮಾತ್ ನಿನ್ನ ಕಿವಿಗೆ ಬೀಳ್ಳಿಲ್ಲ ಅಂತ ಕಾಣ್ತದ. ಸರ ಸರ ಉತ್ತರ ಬರೆದುಕೊ'' ಎಂದರು. ಆ ದಿನ ವಿರಾಟ್ ಕೆಂಪು ಅಂಗಿ ಧರಿಸಿ ಪರೀಕ್ಷೆ ಬರೆಯಲು ಬಂದಿದ್ದ.

''ಸರ್, ನಾನು ನಕಲು ಮಾಡೋದಿಲ್ಲ, ನನ್ನ ತಿಳಿದಷ್ಟು ಬರೀತಿನಿ. ನಕಲು ಮಾಡಿದ್ರ ಇಂಗ್ಲಿಷ್ ಬರೂದಿಲ್ಲ, ನಾನು ಚೆನ್ನಾಗಿ ಇಂಗ್ಲಿಷ್ ಕಲಿಯಬೇಕಾಗ್ಯಾದ'' ಎಂದು ವಿರಾಟ್ ಧೈರ್ಯದಿಂದ ಹೇಳಿದ.

''ಏ ಕೋತಿ, ಪರೀಕ್ಷೆಯಲ್ಲಿ ಪಾಸಾಗದಿದ್ರ ಇಂಗ್ಲಿಷ್ ಹ್ಯಾಂಗ್ ಕಲಿತಿ? ಈಗ ನಾ ಹೇಳಿದ ಉತ್ತರ ಬರೆದು ಪಾಸಾಗು. ಆಮ್ಯಾಲ ಇಂಗ್ಲಿಷ್ ಕಲಿತು ಬೇಕಾದ್ರ ಇಂಗ್ಲೆಂಡ್ಕ್ಕ ಹೋಗಿ ಇಂಗ್ಲೀಷರಿಗೆ ಪಾಠ ಮಾಡು'' ಎಂದು ಹೇಳಿ ನಕ್ಕರು. ಶಿಕ್ಷಕರ ಮಾತಿಗೆ ವಿದ್ಯಾರ್ಥಿಗಳೂ ಜೋರಾಗಿ ನಕ್ಕರು. ಆದರೆ ವಿರಾಟ್ ಮಾತ್ರ ನಕಲು ಮಾಡಲಿಲ್ಲ, ತನಗೆ ತಿಳಿದಷ್ಟು ಪ್ರಾಮಾಣಿಕವಾಗಿ ಬರೆದ.

ಅರ್ಧ ಉತ್ತರ ಪತ್ರಿಕೆ ಖಾಲಿ ಕೊಟ್ಟು ಅಳು ಮುಖ ಮಾಡಿಕೊಂಡು ವಿರಾಟ್ ತನ್ನ ಕೋಣೆಗೆ ಹೋದ. ಕೋಣೆಯಲ್ಲಿ ಹಾಸಿಗೆಯ ಮೇಲೆ ಬಿದ್ದು ಉರುಳಾಡಿ ಅತ್ತ. ಅವನ ಗೆಳೆಯರು ಅವನಿಗೆ ಸಮಾಧಾನ ಹೇಳಿದರು. ''ನಿನ್ನ ಕನ್ನಡ ಪರೀಕ್ಷೆ ಚೆನ್ನಾಗಿ ಆಗ್ಯಾದ. ಕನ್ನಡದಾಗ 80 ಅಂಕಗಳು ಬಂದ್ರ ಇಂಗ್ಲಿಷ್‌ನಲ್ಲಿ ಕಡಿಮೆ ಅಂಕಗಳು ಬಂದ್ರೂ ಪಾಸ್ ಮಾಡ್ತಾರ. ಇನ್ನಾ ನಾಲ್ಕು ಪರೀಕ್ಷೆಗಳು ಅದಾವ. ಅವುಗಳನ್ನು ಸರಿಯಾಗಿ ಮಾಡು'' ಎಂದು ಬಿ. ಎ. ಓದುತ್ತಿದ್ದ ಅವನ ರೂಮ್‌ಮೇಟ್ ಹೇಳಿದ. ಅವನ ಮಾತು ವಿರಾಟನ ಆತ್ಮವಿಶ್ವಾಸ ಹೆಚ್ಚಿಸಿತು. ಮುಖ ತೊಳೆದುಕೊಂಡು ಊಟ ಮಾಡಿ ಮುಂದಿನ ಪರೀಕ್ಷೆಗಳ ತಯಾರಿ ನಡೆಸಿದ.

ಪರೀಕ್ಷೆ ಮುಗಿಯಿತು. ಫಲಿತಾಂಶ ಪ್ರಕಟಗೊಂಡಿತು. ಸಿಂದಗಿಗೆ ಹೋಗಿ ಫಲಿತಾಂಶ ನೋಡಿ ಬರಲು ಅವನಿಗೆ ಧೈರ್ಯ ಸಾಕಾಗಲಿಲ್ಲ, ಹೀಗಾಗಿ ಅವನು ತನ್ನ ಗೆಳೆಯನನ್ನು ಕಳಿಸಿದ. ಸಂಜೆ ಶಾಂತನಾಳಕ್ಕೆ ಹಿಂದಿರುಗಿದ ವಿರಾಟನ ಗೆಳೆಯ 425 ಅಂಕಗಳೊಂದಿಗೆ ಕಾಲೇಜಿಗೆ ಮೊದಲಿಗನಾಗಿ ವಿರಾಟ್ ಪಾಸಾದ ವಿಷಯವನ್ನು ಇಡೀ ಊರಿಗೆ ಡಂಗುರ ಸಾರಿ ಹೇಳಿದ. ಆದರೆ ಇಂಗ್ಲಿಷ್ ವಿಷಯದಲ್ಲಿ ವಿರಾಟನಿಗೆ ಕೇವಲ 31 ಅಂಕಗಳು ಬಂದಿದ್ದವು.

★ ★ ★

ವಿರಾಟನ ವಾರಿಗೆಯ ಇಬ್ಬರು ಹುಡುಗಿಯರು ದೇವರ ಹಿಪ್ಪರಗಿಯ ಪದವಿಪೂರ್ವ ಕಾಲೇಜಿನಿಂದ ಪಿ.ಯು.ಸಿ. ಪರೀಕ್ಷೆಯನ್ನು ದ್ವಿತೀಯ ದರ್ಜೆಯಲ್ಲಿ ಪಾಸಾಗಿದ್ದರು. ಆದರೆ ಅವರು ಇಂಗ್ಲಿಷ್ ವಿಷಯದಲ್ಲಿ ವಿರಾಟನಿಗಿಂತ 20 ಅಂಕಗಳನ್ನು ಹೆಚ್ಚಿಗೆ ಪಡೆದಿದ್ದರು. ವಿರಾಟ್ ವಿಜಯಪುರದಲ್ಲಿ ಇಂಗ್ಲಿಷ್ ಪ್ರಧಾನ ವಿಷಯವನ್ನಾಗಿ ತೆಗೆದುಕೊಂಡು ಬಿ.ಎ. ಮಾಡುತ್ತಾನೆಂಬ ಸುದ್ದಿ ಶಾಂತನಾಳದ ತುಂಬ ಹರಡಿತ್ತು. ಬಿ.ಎ.ಗೆ ಪ್ರವೇಶ ಪಡೆಯಲು ವಿರಾಟ್ ವಿಜಯಪುರಕ್ಕೆ ಪ್ರಯಾಣ ಬೆಳೆಸಲು ಬಸ್ ನಿಲ್ದಾಣಕ್ಕೆ ಬಂದಾಗ ಶಿಲ್ಪಾ ಪಾಟೀಲ ಮತ್ತು ಮಧು ಕುಲಕರ್ಣಿ ದೇವರ ಹಿಪ್ಪರಗಿಯಲ್ಲಿ ಬಿ.ಎ.ಗೆ ಪ್ರವೇಶ ಪಡೆಯಲು ಬಸ್ ನಿಲ್ದಾಣಕ್ಕೆ ಬಂದರು. ವಿರಾಟನನ್ನು ನೋಡಿ ಇಬ್ಬರೂ ಕಿಸಕ್ಕೆಂದು ನಕ್ಕರು.

''ಮಧು, ಆಸೆಗೆ ಒಂದ್ ಮಿತಿ ಬೇಡವೇ? ಇಂಗ್ಲಿಷ್‌ನಲ್ಲಿ 35 ಅಂಕ ತೆಗೆದುಕೊಂಡು ಪಾಸಾಗಲು ತಿಣುಕಾಡಿದ ಈ ಮನುಷ್ಯನಿಗೆ ಇಂಗ್ಲಿಷ್ ಪ್ರಧಾನ ವಿಷಯವನ್ನಾಗಿ ತೆಗೆದುಕೊಂಡು ಬಿ.ಎ. ಎಂ.ಎ. ಪಾಸ್ ಮಾಡಿ ಇಂಗ್ಲಿಷ್ ಪ್ರೊಫೆಸರ್ ಆಗುವ ಕನಸು!'' ಎಂದು ವ್ಯಂಗ್ಯವಾಡಿದಳು.

''ನೋಡೇ ಶಿಲ್ಪಿ, ಇಂಗ್ಲಿಷ್‌ನಲ್ಲಿ 51, 52 ಅಂಕಗಳನ್ನು ಪಡೆದ ನಾವೇ ದೇವರ ಹಿಪ್ಪರಗಿಯಲ್ಲಿ ಕನ್ನಡ ವಿಷಯದಲ್ಲಿ ಬಿ.ಎ. ಮಾಡಲು ಹೊರಟಿರುವಾಗ 31 ಅಂಕ ಪಡೆದ ಈ ಮನುಷ್ಯ ವಿಜಯಪುರದ ವಿಜಯಾ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಧಾನ ವಿಷಯವನ್ನಾಗಿ ಓದಿ ಇಂಗ್ಲೆಂಡ್‌ಗೆ ಹೋಗುವ ಕನಸು ಕಾಣುತ್ತಿದ್ದಾನೆ! ಬಿ.ಎ.ನಲ್ಲಿ ಇಂಗ್ಲಿಷ್‌ನಲ್ಲಿ 20 ಅಂಕ ಪಡೆದು ಶಾಂತನಾಳಕ್ಕೆ ಹಿಂದಿರುಗಿ ಬಂದು ತನ್ನ ಅಪ್ಪನ ಜೊತೆ ಹೊಲದಲ್ಲಿ ಹುಲ್ಲು ಕೊಯ್ಯುವ ಕೆಲಸ ಮಾಡುತ್ತಾನೆ! ಅದಕ್ಕೆ ನಾವೇ ಸಾಕ್ಷಿಯಾಗುತ್ತೇವೆ'' ಎಂದು ಹೇಳಿ ಮಧು ವಿರಾಟನ ಕಡೆಗೆ ನೋಡಿ ಕಣ್ಣು ಮಿಟುಕಿಸಿದಳು.

★ ★ ★

ವಿರಾಟ್ ವಿಜಯಪುರ ತಲುಪಿ ವಿಜಯಾ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಧಾನ ವಿಷಯವನ್ನಾಗಿ ತೆಗೆದುಕೊಂಡು ಬಿ.ಎ.ಗೆ ಪ್ರವೇಶ ಪಡೆದ. ಆರು ನೂರು ಅಂಕಗಳಲ್ಲಿ ಐದು ನೂರು ಅಂಕಗಳಿಗೆ ಇಂಗ್ಲಿಷ್‌ನಲ್ಲಿ ಉತ್ತರ ಬರೆಯಬೇಕಾಯಿತು. ಮಠಪತಿ ಗಲ್ಲಿಯಲ್ಲಿನ ಮಾಜಿ ಶಾಸಕರ ಮನೆಯಲ್ಲಿ ಒಂದು ಕೋಣೆ ಬಾಡಿಗೆ ಹಿಡಿದು ತನ್ನ ಕಠಿಣ ಪರಿಶ್ರಮ ಮುಂದುವರಿಸಿದ. ಮುಂಚಿತವಾಗಿ ಪಠ್ಯಗಳನ್ನು ಓದಿಕೊಂಡು ವರ್ಗದಲ್ಲಿ ಶಿಕ್ಷಕರಿಗೆ ಇಂಗ್ಲಿಷ್‌ನಲ್ಲಿ ಪ್ರಶ್ನೆಗಳನ್ನು ಕೇಳಿ ತನ್ನ ಸಹಪಾಠಿಗಳಿಗೆ ಆಘಾತ ನೀಡಿದ. ಆದರೆ ಅವನ ಉಚ್ಚಾರಣೆ ಕಂಡು ಕೆಲವರು ನಕ್ಕರೆ, ಅವನ ವ್ಯಾಕರಣ ದೋಷಗಳನ್ನು ಕಂಡು ಇನ್ನೂ ಕೆಲವರು ನಗೆಯಾಡಿದರು.

ಬಿ.ಎ. ಮೊದಲ ವರ್ಷದ ವಾರ್ಷಿಕ ಪರೀಕ್ಷೆಗಳು ಹತ್ತಿರ ಬರುತ್ತಿದ್ದಂತೆ ರಾತ್ರಿಯೆಲ್ಲ ಜಾಗರಣೆ ಮಾಡಿ ಓದತೊಡಗಿದ. ಪರೀಕ್ಷೆ ಬರೆದು ಬೇಸಿಗೆ ರಜೆಗಾಗಿ ಶಾಂತನಾಳಕ್ಕೆ ಹಿಂದಿರುಗಿದ. ಬರುವಾಗ ತನ್ನ ಹಿರಿಯ ಗೆಳೆಯರಿಂದ ಬಿ.ಎ. ಎರಡನೆಯ ವರ್ಷದ ಪುಸ್ತಕಗಳನ್ನು ಇಸಿದುಕೊಂಡು ಬಂದ. ರಜೆಯಲ್ಲಿ ಶೇಕ್ಸ್‌ಪಿಯರನ 'ಹ್ಯಾಮ್ಲೆಟ್' ನಾಟಕ, ಮಿಲ್ಟನ್‌ನ 'ಪ್ಯಾರಡೈಸ್ ಲಾಸ್ಟ್' ಮಹಾಕಾವ್ಯ ಮತ್ತು ಥಾಮಸ್ ಹಾರ್ಡಿಯ 'ದಿ ಮೇಯರ್ ಆಫ್ ಕ್ಯಾಸ್ಟರ್ ಬ್ರಿಡ್ಜ್' ಕಾದಂಬರಿ ಓದಿ ಮುಗಿಸಿದ. ಕಾಲೇಜು ಪ್ರಾರಂಭವಾಯಿತು, ತರಗತಿಗಳು ಭರ್ಜರಿಯಾಗಿ ನಡೆದವು. ಆಗಸ್ಟ್‌ನಲ್ಲಿ ಫಲಿತಾಂಶ ಪ್ರಕಟವಾಯಿತು.

ವಿರಾಟ್ ಇಂಗ್ಲಿಷ್ ಪ್ರಧಾನ ವಿಷಯವನ್ನು ಮೂರನೆಯ ದರ್ಜೆಯಲ್ಲಿ ಪಾಸಾಗಿದ್ದ.

ಮರುಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಿದ. ಆದರೆ ಎರಡು ತಿಂಗಳ ಅನಂತರ ಪ್ರಕಟಗೊಂಡ ಮರುಮೌಲ್ಯಮಾಪನದ ಫಲಿತಾಂಶದಲ್ಲಿ ವಿರಾಟನಿಗೆ ಒಂದು ಅಂಕ ಕೂಡ ಹೆಚ್ಚಿಗೆ ಬರಲಿಲ್ಲ.

ಬಿ.ಎ. ಎರಡನೆಯ ವರ್ಷದ ಅಧ್ಯಯನ ಮುಂದುವರಿಸಿದ. ಇನ್ನೂ ಹೆಚ್ಚಿನ ಪರಿಶ್ರಮ ಪಡತೊಡಗಿದ. ಬಿ.ಎ. ಎರಡನೆಯ ವರ್ಷದ ಫಲಿತಾಂಶ ಬಂದಾಗ ಇಡೀ ಕಾಲೇಜಿಗೆ ಆಘಾತ ಉಂಟುಮಾಡಿತು. ವಿರಾಟನಿಗೆ ಕೇವಲ 80 ಅಂಕಗಳು ಬಂದಿದ್ದವು. ಅವನ ಇಬ್ಬರು ಸಹಪಾಠಿಗಳು 110 ಅಂಕಗಳನ್ನು ಪಡೆದುಕೊಂಡಿದ್ದರು. ಆದರೂ ವಿರಾಟ್ ಹತಾಶೆಯಿಂದ ಭೂಮಿಗೆ ಕುಸಿಯಲಿಲ್ಲ, ಮತ್ತೆ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ. ಎರಡು ತಿಂಗಳ ಅನಂತರ ಫಲಿತಾಂಶ ಬಂದಿತು. ಈ ಬಾರಿ 20 ಅಂಕಗಳು ಹೆಚ್ಚಿಗೆ ಬಂದು ಅವನು ದ್ವಿತೀಯ ಶ್ರೇಣಿಯಲ್ಲಿ ಪಾಸಾದ. ಇಲ್ಲಿಯವರೆಗೆ ವಿಜಯಾ ಕಾಲೇಜಿನಲ್ಲಿ ಒಬ್ಬ ವಿದ್ಯಾರ್ಥಿಯೂ ಇಂಗ್ಲಿಷ್ ಪ್ರಧಾನ ವಿಷಯದಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾದ ನಿದರ್ಶನ ಇರಲಿಲ್ಲ. ಇಂಗ್ಲಿಷ್ ಕಲಿಸುವ ಮೋಹನ್ ಪಾಟೀಲರು ಬಿ.ಎ. ಅಂತಿಮ ವರ್ಷದಲ್ಲಿ ಇಂಗ್ಲಿಷ್ ಪ್ರಧಾನ ವಿಷಯವನ್ನು ಪ್ರಥಮ ಶ್ರೇಣಿಯಲ್ಲಿ ಪಾಸಾಗಿ ಕರ್ನಾಟಕ ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗೆ ಗ್ರಂಥಾಲಯದಲ್ಲಿ ತಮ್ಮ ಹೆಸರಿನಲ್ಲಿ ನಾಲ್ಕು ಪುಸ್ತಕಗಳನ್ನು ಕೊಡಿಸುವುದಾಗಿ ಘೋಷಣೆ ಮಾಡಿದರು.

ವಿರಾಟ್ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಲು ಪ್ರತಿಜ್ಞೆ ಮಾಡಿ ಇನ್ನೂ ಹೆಚ್ಚು ವ್ಯವಸ್ಥಿತವಾಗಿ ಅಧ್ಯಯನ ಮಾಡತೊಡಗಿದ. ಪ್ರತಿಯೊಂದು ಪಠ್ಯದ ಕುರಿತು ಸಣ್ಣ ಸಣ್ಣ ಹಾಳೆಯ ಮೇಲೆ ಉತ್ತರ ಬರೆದು ಕುಳಿತಲ್ಲಿ, ನಿಂತಲ್ಲಿ ಓದತೊಡಗಿದ. ಬಹಿರ್ದೆಸೆಗೆ ಕುಳಿತಾಗ, ಊಟ ಮಾಡುವಾಗ, ಸೈಕಲ್ ತುಳಿದುಕೊಂಡು ಕಾಲೇಜಿಗೆ ಹೋಗುವಾಗ ಬಿಡದೆ ಓದತೊಡಗಿದ.

ಬಿ.ಎ. ಅಂತಿಮ ವರ್ಷದ ಪರೀಕ್ಷೆ ಬರೆದು ಶಾಂತನಾಳಕ್ಕೆ ಮರಳಿದ. ರಜೆಯಲ್ಲಿ ಎಂ.ಎ. ಪ್ರವೇಶ ಪರೀಕ್ಷೆಗಾಗಿ ತಯಾರಿ ಶುರು ಮಾಡಿದ.

ಫಲಿತಾಂಶ ಪ್ರಕಟಗೊಂಡು ಇಂಗ್ಲಿಷ್ ಪ್ರಧಾನ ವಿಷಯದಲ್ಲಿ 200 ಅಂಕಗಳಿಗೆ 134 ಅಂಕ ಪಡೆದು ವಿಜಯಾ ಕಾಲೇಜಿನಲ್ಲಿ ಹೊಸ ಇತಿಹಾಸ ಸೃಷ್ಟಿಸಿದ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದ ಪ್ರವೇಶ ಪರೀಕ್ಷೆಯಲ್ಲಿ 100ಕ್ಕೆ 88 ಅಂಕಗಳನ್ನು ಪಡೆದು ಅಲ್ಲಿಯೂ ಪ್ರತಿಭಾವಂತ ಎನಿಸಿಕೊಂಡ. ಎಂ.ಎ. ಓದಲು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಸಿಕ್ಕ ದಿನ ವಿರಾಟ್ ಆನಂದದ ಹೊಳೆಯಲ್ಲಿ ತೇಲಾಡಿದ. ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ತಿರುಗಾಡಿ ಸಂಭ್ರಮಿಸಿದ. ■

ಕೆಂಪು ಮುಂಡಾಸಿನ ಹಸುರು ಜೇಡ



ಹಸುರು ದೇಹದ ಮೇಲಿನ ಅಲಂಕಾರಿಕ ಮಚ್ಚೆಗಳು.

ಜೇಡಗಳಲ್ಲಿ ಸಹಸ್ರಾರು ಪ್ರಭೇದಗಳು. ಈ ಪೈಕಿ ರೋಮರಹಿತ ಮೈ, ಹಸುರು ಬಣ್ಣ, ತಲೆಯ ಸುತ್ತ ಕೆಂಬಣ್ಣಗಳಿಂದ ಗಮನಸೆಳೆಯುವ 'ಗ್ರೀನ್ ಜಂಪರ್' ಎಂಬ ಹೆಸರಿನ ಈ ಹಾರುವ ಜೇಡದ ಕಥೆ ನಿಜಕ್ಕೂ ರೋಚಕ.

❑ **ಕೆ. ಶಿವ**

ದೇಹಕ್ಕಿಂತ ನಾಲ್ಕಾರು ಪಟ್ಟು ಉದ್ದದ ಕಾಲುಗಳು

ಜೀವ ಜಾಲ ವಿಕಸನದ ಹಳೆಯ ಪೀಳಿಗೆಗೆ ಸೇರಿದ ಜೇಡಗಳ ವೈವಿಧ್ಯ ವಿಶ್ವಾದ್ಯಂತ ಸುಮಾರು 45ಸಾವಿರಕ್ಕೂ ಹೆಚ್ಚು. ಅನೇಕ ವೈಶಿಷ್ಟ್ಯಪೂರ್ಣ ಜೇಡಗಳು ಯಾರ ಕಣ್ಣಿಗೂ ಬೀಳದೆ ಬದುಕಿಕೊಂಡಿರುತ್ತವೆ. ಅಂಥ ಜೇಡಗಳಲ್ಲಿ ವಿಶಿಷ್ಟವಾದದ್ದು 'ಮ್ಯಾಗ್ನೋಲಿಯಾ ಗ್ರೀನ್ ಜಂಪರ್'. ಕನ್ನಡದಲ್ಲಿ ಇದನ್ನು 'ಕೆಂಪು ಮುಂಡಾಸಿನ ಹಸುರು ಜೇಡ' ಎನ್ನಬಹುದು.

ಭಾರತದಲ್ಲಿ ಹೆಚ್ಚಾಗಿರುವುದು ಜಂಪಿಂಗ್ ಸ್ಪೈಡರ್ ಜಾತಿಯ ಜೇಡಗಳು. ಇವುಗಳ ದೇಹ ರೋಮಾಚ್ಛಾದಿತವಾಗಿದ್ದು, ಕಂದು, ಕಪ್ಪು ಇತ್ಯಾದಿ ಗಾಢ ಬಣ್ಣಗಳಿಂದ ಕೂಡಿರುತ್ತವೆ. ಹಸುರು ಬಣ್ಣದ ರೋಮರಹಿತ ಜೇಡಗಳ ಸಂಖ್ಯೆ ಕಡಿಮೆ. ಪೊದೆಗಳಿರುವ ಜಾಗಕ್ಕೆ ಹೋದಲ್ಲಿ ಪ್ರತಿ ಜಾತಿಯ ಹಸುರು ಗಿಡದಲ್ಲೂ ಆ ಗಿಡದ ಬಣ್ಣವನ್ನೆ ಹೋಲುವ (ಕೆಮೋಫ್ಲೇಜ್), ಕಂಡರೂ ಕಾಣದಂತಿರುವ ಹಸುರು ಜೇಡಗಳನ್ನು ನೋಡಬಹುದು. ಅಂಥ ಜೇಡಗಳಲ್ಲಿ ಕೆಂಪು ಮುಂಡಾಸಿನ ಹಸುರು ಜೇಡವೂ ಒಂದು.

ಇದು ಅಮೆರಿಕಾದ ಮ್ಯಾಗ್ನೋಲಿಯಾ ಪೊದೆಗಳಲ್ಲಿ ಕಾಣಿಸುವ ಹಸುರು ಬಣ್ಣದ ಜೇಡವಾದ್ದರಿಂದ ಮತ್ತು ವಿಶಿಷ್ಟವಾದ ಹಾರುವ ಜೇಡಗಳ ವರ್ಗಕ್ಕೆ ಸೇರಿರುವುದರಿಂದ ಇದಕ್ಕೆ 'ಮ್ಯಾಗ್ನೋಲಿಯಾ ಗ್ರೀನ್ ಜಂಪರ್' ಎಂದು ಹೆಸರು.

ಕೀಟಶಾಸ್ತ್ರಜ್ಞರ ಪ್ರಕಾರ ಈ ಜೇಡ ಆಗ್ನೇಯ ಅಮೆರಿಕಾದಲ್ಲಿ ವಿಕಸನಗೊಂಡ ಅಲ್ಲಿಗೇ ಮೀಸಲಾಗಿದ್ದ ಒಂದು ಪ್ರಭೇದ. ಆದರೆ ಜೇಡಗಳೇನೂ ಒಂದು ಎಲ್ಲೆಯನ್ನು ಹಾಕಿಕೊಂಡು ಬದುಕುವ ಜೀವಿಗಳಲ್ಲ, ನಾನಾ ಕಾರಣದಿಂದ ಅವು ವಾಸಸ್ಥಳಗಳನ್ನು ವಿಸ್ತರಿಸಿಕೊಳ್ಳುತ್ತಲೇ ಇರುತ್ತವೆ. ಅದರಲ್ಲೂ ಈಗಿನ ಜಾಗತಿಕ ವ್ಯಾಪಾರ ಚಟುವಟಿಕೆಯಲ್ಲಿ ನೂರಾರು ವಿಧಾನಗಳಿಂದ ದೇಶ–ವಿದೇಶಗಳ ಮಧ್ಯೆ ಸರಕುಸಾಗಣೆ ನಡೆಯುವುದರಿಂದ ಇಂಥ ಕ್ಷುದ್ರಜೀವಿಗಳೋ ಅಥವಾ ಅವುಗಳ ಮೊಟ್ಟೆಗಳೋ ಸಾಗಾಟವಾಗುವುದರಿಂದ ಇತರ ದೇಶಗಳಲ್ಲಿ ಕಾಣಿಸಿಕೊಳ್ಳುವುದು ಮತ್ತು ಅಲ್ಲಿನ ಹವಾಮಾನ ಮತ್ತು ಪರಿಸರ ಪೂರಕವಾಗಿದ್ದರೆ ಅಲ್ಲಿಗೆ ಹೊಂದಿಕೊಳ್ಳುವುದು ಅಪರೂಪವಲ್ಲ. ಹಾಗೆಯೆ ಆಗ್ನೇಯ ಅಮೆರಿಕಾದ ಮ್ಯಾಗ್ನೋಲಿಯಾ ಪೊದೆಗಳಲ್ಲಿ ವಿಕಸನಗೊಂಡ ಈ ಜೇಡ ದಾಸವಾಳದಂಥ ಗಿಡಗಳಲ್ಲಿ ಕಾಣಿಸಿಕೊಳ್ಳುವುದರಿಂದ ನಮ್ಮಲ್ಲೂ ಇರುವ ಅಪರೂಪದ ಜೀವ ವೈವಿಧ್ಯ ಎಂದು ಹೆಮ್ಮೆಪಟ್ಟುಕೊಳ್ಳಬಹುದು!

ಮ್ಯಾಗ್ನೋಲಿಯಾ ಗ್ರೀನ್ ಜಂಪರ್ ಸೇರಿರುವ ಜಂಪಿಂಗ್ ಸ್ಪೈಡರ್ ಕುಟುಂಬದಲ್ಲೆ ಇತ್ತೀಚಿನ ಅಧ್ಯಯನದ ಪ್ರಕಾರ ಸುಮಾರು ಐದು ಸಾವಿರ ವೈವಿಧ್ಯಮಯ ಜೇಡಗಳಿವೆ. ಹಾಗಾದರೆ ಈ ಜೇಡದ ವೈಶಿಷ್ಟ್ಯವೇನು?

ಇತರ ಜಂಪಿಂಗ್ ಜೇಡಗಳಿಗೆ ಸಾಮಾನ್ಯವಾಗಿ ಕಂದು ಬಣ್ಣವಿದ್ದು ಮೈತುಂಬಾ ರೋಮಗಳಿರುತ್ತವೆ. ಸಾಮಾನ್ಯವಾಗಿ ಕಿವಿ ಇಲ್ಲದ ಜೇಡಗಳಿಗೆ ಸೊಂಪಾಗಿ ಬೆಳೆದ ಕೂದಲುಗಳೇ ಕಂಪನವನ್ನು ಗ್ರಹಿಸುವ ಮೂಲಕ ಕಿವಿಯ ಕೆಲಸವನ್ನು ನಿರ್ವಹಿಸುತ್ತವೆ.

ವಿಭಿನ್ನ ದೇಹ ವಿನ್ಯಾಸ, ವಿಭಿನ್ನ ಬಣ್ಣ

ಜೇಡಗಳ ಜೀವನದಲ್ಲಿ ಕೂದಲಿನ ಪಾತ್ರ ಮಹತ್ವದ್ದು. ಅದರಿಂದ ದೇಹಕ್ಕೆ ರಕ್ಷಣೆ ಸಿಕ್ಕುವುದು ಮಾತ್ರವಲ್ಲ, ಬೇಟೆಯಾಡುವಾಗ ಬೇಟೆಯನ್ನು ಹಿಡಿಯಲು, ನಡೆಯುವಾಗ ಹಿಡಿತ ಸಾಧಿಸಲು ಮತ್ತು ಪರಿಸರದ ಬದಲಾವಣೆಯನ್ನು ಅರಿಯಲು ಸೆನ್ಸರ್‌ಗಳಾಗಿಯೂ ಈ ಕೂದಲು ಉಪಯೋಗವಾಗುತ್ತದೆ. ಮ್ಯಾಗ್ನೋಲಿಯ ಜೇಡದ ಮೈಮೇಲೆ ಇತರ ಜೇಡಗಳಿಗಿರುವಷ್ಟು ಸೊಂಪಾದ ಕೂದಲು ಬೆಳೆದಿರುವುದಿಲ್ಲ, ದೂರದೂರಕ್ಕೆ ಒಂದೊಂದು ಮುಳ್ಳುಗಳಂತೆ ಒರಟಾದ ಕೂದಲಿರುತ್ತದೆ.

ಇದರ ದೇಹದ ಬಣ್ಣ ಹಸುರು. ಬೇಟೆಯ ಸಮಯದಲ್ಲಿ ಉಪಯೋಗಿಸುವ ದವಡೆ ಇತರ ಜೇಡಗಳ ದವಡೆಯಂತೆ ರೋಮಭರಿತವಲ್ಲ. ತಲೆಯ ಸುತ್ತ ಕೇಸರಿ ಅಥವಾ ಕೆಂಪು ಬಣ್ಣದ ಪಟ್ಟಿ ಇದೆ. ಇತರ ಜೇಡಗಳಿಗೆ ಹೋಲಿಸಿದರೆ ಇದಕ್ಕೆ ಅತಿ ಉದ್ದದ ಕಾಲುಗಳಿವೆ.

ಜಂಪಿಂಗ್ ಜೇಡಗಳು ವಿಕಸನಗೊಳ್ಳುವ ಕಾಲದ ಪ್ರಥಮ ಹಂತದಲ್ಲಿ 'ವಿಕಾಸಗೊಂಡ ಜೇಡ'ಇದು ಎಂಬುದು ಕೀಟಶಾಸ್ತ್ರಜ್ಞರ ಅಭಿಮತ. ಇತರ ಜೇಡಗಳಿಗಿಂತ ಇದರ ದೇಹದ ಆಕಾರ ಚಿಕ್ಕದು. (ಹೆಣ್ಣು ಜೇಡ ಸುಮಾರು ಆರರಿಂದ ಒಂಬತ್ತು ಮಿಲಿಮೀಟರ್‌ನಷ್ಟು ದೊಡ್ಡದಿದ್ದರೆ, ಗಂಡು ಜೇಡ ಮತ್ತೂ ಚಿಕ್ಕದು. ಅದರ ಅಳತೆ ಸುಮಾರು ಐದು ಮಿಲಿಮೀಟರ್) ಕಾಲುಗಳು ಸಾಕಷ್ಟು ಉದ್ದವಾಗಿರುವುದರಿಂದ, ತನ್ನ ದೇಹದ ಒಳಗಿರುವ ಹಿಮೋಲಿಂಫ್ ಎಂಬ ಜೀವದ್ರವ್ಯವನ್ನು ಉಪಯೋಗಿಸಿ ಹೈಡ್ರಾಲಿಕ್ ಬಲದ ತತ್ವದಂತೆ ತನ್ನ ಒಟ್ಟು ದೇಹದ ಅಳತೆಗಿಂತ ನಾಲ್ಕು ಪಟ್ಟು ದೂರಕ್ಕೆ ಜಿಗಿಯುವ ಸಾಮರ್ಥ್ಯ ಹೊಂದಿದೆ. ಉದ್ದವಾದ ದವಡೆಗಳಿರುವುದರಿಂದ ಬೇಟೆಯನ್ನು ಹಿಡಿದು ದವಡೆಯಲ್ಲಿರುವ ವಿಷವನ್ನು ಚುಚ್ಚಿ ಅದನ್ನು ನಿಶ್ಚೇತನಗೊಳಿಸುವ ಸಾಮರ್ಥ್ಯವೂ ಇದೆ. ಸುಮಾರು ಒಂದು ವರ್ಷ ಬದುಕಬಲ್ಲ ಸಾಮರ್ಥ್ಯವಿರುವ ಈ ಜೇಡಗಳ ಆಹಾರ ಇತರ ಜೇಡಗಳೇ! ಜೊತೆಗೆ ಇರುವೆ, ಗೆದ್ದಲಿನಂಥ ಸಣ್ಣ ಜೀವಿಗಳನ್ನು, ಹಾತೆ, ಚಿಟ್ಟೆ, ಮಿಡಿತೆಗಳನ್ನೂ ಹಿಡಿದು ಭಕ್ಷಿಸುತ್ತವೆ. ಅಪರೂಪಕ್ಕೊಂಬಂತೆ ಹೂವಿನಲ್ಲಿರುವ ಮಕರಂದವನ್ನೂ ಹೀರಿಕೊಳ್ಳುತ್ತವೆ!

ಇತರ ಜೇಡಗಳಿಗಿರುವಂತೆ ಈ ಜೇಡಕ್ಕೆ ಎಂಟು ಕಣ್ಣುಗಳ ಸಮೂಹವಿದ್ದರೂ ಮುಂದಿನ ಎರಡು ಪ್ರಧಾನ ಕಣ್ಣುಗಳು ಇತರ ಜೇಡಗಳ ಕಣ್ಣುಗಳಿಗಿಂತಲೂ ಹೆಚ್ಚು ಶಕ್ತಿಶಾಲಿ. ಇದರಿಂದಾಗಿ ತನ್ನ ಆಹಾರವನ್ನೂ ಶತ್ರುಗಳನ್ನೂ ಸುಲಭವಾಗಿ ಇದು ಗುರುತಿಸುತ್ತದೆ. ಈ ತೀಕ್ಷ್ಣ ಕಣ್ಣುಗಳಿಂದ ಸಂತಾನೋತ್ಪಾದನೆಯ ಸಮಯದಲ್ಲಿ ಹೆಣ್ಣು ಅಥವಾ ಗಂಡು ಜೇಡ ತನ್ನ ಸಂಗಾತಿಯನ್ನು ಗುರುತಿಸಲು ಸುಲಭವಾಗುತ್ತದೆ. ಸಂತಾನೋತ್ಪತ್ತಿಯ ವಿಧಾನ ಇತರ ಜೇಡಗಳಂತೆಯೆ ಇದ್ದರೂ ವಿಶೇಷವೆಂಬಂತೆ ಇದು ಇಡುವುದು ಹಸುರು ಮೊಟ್ಟೆಗಳನ್ನೆ!

■

ಭವಿಷ್ಯದರ್ಪಣ

23-4-2026ರಿಂದ 29-4-2026ರವರೆಗೆ)

(ಜನ್ಮರಾಶಿಗನುಗುಣವಾಗಿ)

❑ ಎಸ್. ವಿಶ್ವಮೂರ್ತಿ ಬಡಿಕಿಲ್ಲಾಯ

ಮೇಷ

ಬೆಲೆಬಾಳುವ ವಸ್ತುಗಳನ್ನು ಖರೀದಿಸಬಹುದು. ವಿವಾಹ ಪ್ರಸ್ತಾಪಗಳಲ್ಲಿ ಯಶಸ್ಸು ಸಾಧಿಸುತ್ತೀರಿ. ಸಹೋದರರ ಸಹಾಯವು ನಿಮಗೆ ಸದಾ ಸಿಗುತ್ತದೆ. ನ್ಯಾಯಾಲಯದಲ್ಲಿರುವ ದಾವೆಗಳಲ್ಲಿಯೂ ಜಯ ಸನಿಹದಲ್ಲಿದೆ. ಕ್ರೀಡಾ ಕ್ಷೇತ್ರದಲ್ಲಿರುವವರಿಗೆ ಉತ್ತಮ ಅವಕಾಶಗಳಿವೆ. ಮಕ್ಕಳಿಗೆ ದುರ್ವ್ಯಸನಗಳು ಅಂಟದಂತೆ ನೋಡಿಕೊಳ್ಳಿ.

ವೃಷಭ

ಹೊಸ ಹೊಸ ಯೋಜನೆಗಳನ್ನು ಕಾರ್ಯಗತಗೊಳಿಸುವ ಸಮಯ. ಖರ್ಚು ಅಧಿಕವಾದರೆ ಲೆಕ್ಕ ಕೈ ತಪ್ಪಬಹುದು. ನಿಮ್ಮ ನೇರ ನುಡಿಯಲ್ಲಿ ನಯ ವಿನಯಗಳಿರಲಿ. ಸರಕಾರಿ ಕೆಲಸ ಕಾರ್ಯಗಳು ನಿರೀಕ್ಷೆಯಂತೆ ಪೂರ್ಣಗೊಳ್ಳಲಿವೆ. ಕೋಪವನ್ನು ನಿಯಂತ್ರಿಸದಿದ್ದರೆ ಹಿನ್ನಡೆಗೆ ಕಾರಣವಾಗಬಹುದು. ಹೊಸ ಜವಾಬ್ದಾರಿಯೊಂದು ನಿಮ್ಮ ಹೆಗಲೇರಲಿದೆ. ಯಾರೊಂದಿಗೂ ವೈರ ಬೇಡ.

ಮಿಥುನ

ಉದ್ಯೋಗ ಕ್ಷೇತ್ರದಲ್ಲಿ ಅನೇಕ ಪರಿವರ್ತನೆಗಳಾಗಲಿವೆ. ಕೆಲವೊಮ್ಮೆ ಆಪ್ತರಿಂದಲೇ ನಿಮ್ಮ ಸ್ಥಾನಮಾನಕ್ಕೆ ಚ್ಯುತಿ ಬರಬಹುದು. ಪ್ರಯತ್ನವಿಲ್ಲದಿದ್ದರೆ ಅದೃಷ್ಟವೂ ಕೈ ಕೊಡಬಹುದು. ಉದ್ಯಮ ಕ್ಷೇತ್ರವನ್ನು ಬೆಳೆಸುವಲ್ಲಿ ಯಶಸ್ಸನ್ನು ಕಾಣುತ್ತೀರಿ. ಪಿತ್ರಾರ್ಜಿತ ಆಸ್ತಿಯ ಪಾಲುಗಳ ಬಗ್ಗೆ ಮಾತುಕತೆ ಮುಂದುವರಿಸಿ. ಅಪವಾದಗಳು ಬರುತ್ತಲೇ ಇರುತ್ತವೆ. ಚಿಂತೆ ಬೇಡ.

ಕರ್ಕಾಟಕ

ವಿದೇಶಿ ವ್ಯವಹಾರಗಳಿಗೆ ಬಂಡವಾಳ ಹೂಡಿದರೆ ಲಾಭವಿದೆ. ಭಾವನಾತ್ಮಕ ವಿಚಾರಗಳಿಗೆ ಸ್ಪಂದಿಸುವಾಗ ತಾಳ್ಮೆ ಇರಲಿ. ಕಾನೂನು ಹೋರಾಟ ಇತ್ಯರ್ಥವಾಗಲು ಪರಸ್ಪರ ಮಾತುಕತೆ ಸಾಧ್ಯವೇ ಎಂದು ಪ್ರಯತ್ನಿಸಿ. ಮಂದಗತಿಯಲ್ಲಿದ್ದ ಕೆಲಸ ಕಾರ್ಯಗಳು ವೇಗ ಪಡೆದುಕೊಳ್ಳುತ್ತವೆ. ಕೃಷಿ ಕಾರ್ಯಗಳಲ್ಲಿ ತೊಡಗಿದರೆ ಲಾಭಗಳಿಸುತ್ತೀರಿ. ಆಧ್ಯಾತ್ಮಿಕ ಚಟುವಟಿಕೆಗಳು ನಿಮ್ಮ ವ್ಯಕ್ತಿತ್ವಕ್ಕೆ ಮೆರುಗುಕೊಡಲಿವೆ.

ಸಿಂಹ

ಪಶು ಸಾಕಣೆಯೂ ಹೆಚ್ಚಿನ ಲಾಭವನ್ನು ತಂದುಕೊಡುತ್ತದೆ. ಮಕ್ಕಳ ಶಿಕ್ಷಣಕ್ಕೆ ಆದ್ಯತೆ ಕೊಡಿ. ಸಹೋದರರಿಂದ ಸಮಸ್ಯೆ ಸೃಷ್ಟಿಯಾಗಬಹುದು. ಸಂಬಂಧಗಳು ಕೆಡದಂತೆ ಹೊಂದಿಕೊಳ್ಳಲು ಅಭ್ಯಾಸ ಮಾಡಿಕೊಳ್ಳಿ. ಸಂಪಾದನೆಗೆ ಮಾರ್ಗಗಳು ಅನೇಕವಿದ್ದರೂ ಭವಿಷ್ಯಕ್ಕೆ ಒಳ್ಳೆಯ ದಾರಿಯನ್ನು ಆಯ್ಕೆ ಮಾಡಿಕೊಳ್ಳಿ . ಗೃಹೋಪಕರಣ ವಸ್ತುಗಳನ್ನು ಖರೀದಿಸಬಹುದು. ಹಳೆಯ ಯೋಜನೆಗಳನ್ನು ಮತ್ತೆ ಕಾರ್ಯರೂಪಕ್ಕೆ ತರಬಹುದು.

ಕನ್ಯಾ

ನಿಮ್ಮ ಉತ್ತಮ ಕಾರ್ಯಗಳಿಗೆ ಸಾಮಾಜಿಕ ಕ್ಷೇತ್ರದಲ್ಲಿ ಮನ್ನಣೆ ಸಿಗುತ್ತದೆ. ಹೊಸದಾಗಿ ಯೋಚಿಸಿದ ಕಾರ್ಯಗಳನ್ನು ಅನುಷ್ಠಾನಗೊಳಿಸಿ. ಆಸ್ತಿ ಸಂಬಂಧವಾಗಿ ಕೋರ್ಟು ಕಚೇರಿ ಅಲೆದಾಡಬೇಕಾಗಬಹುದು. ಹೊಸ ಹೂಡಿಕೆಗಳು ಜಾಗತಿಕ ಮಟ್ಟದಲ್ಲಿ ಲಾಭವನ್ನು ತಂದು ಕೊಡಲಿವೆ. ಉನ್ನತ ವಿದ್ಯಾಭ್ಯಾಸಕ್ಕೆ ಕಾಲಾವಕಾಶ ಕೂಡಿ ಬಂದಿದೆ. ಸಹೋದ್ಯೋಗಿಗಳಿಂದ ನಿಮಗೆ ಅಡೆತಡೆಗಳು ಬರಬಹುದು.

ತುಲಾ

ಉಚ್ಚ ಶಿಕ್ಷಣಕ್ಕೆ ವಿದೇಶ ಪ್ರಯಾಣದ ಯೋಗವಿದೆ. ವ್ಯವಹಾರ ಕ್ಷೇತ್ರದಲ್ಲಿ ಮೂರನೆಯವರ ಹಸ್ತಕ್ಷೇಪವಾದರೆ ನಷ್ಟ ಸಂಭವಿಸಲಿದೆ. ಕೈಚೆಲ್ಲಿ ಬಿಡುವ ಪರಿಸ್ಥಿತಿಯಲ್ಲಿಯೂ ಕೊನೆಗೆ ಜಯ ನಿಮ್ಮದೇ ಆಗುತ್ತದೆ. ಇನ್ನೊಬ್ಬರು ಹಾಕುವ ನಿರ್ಬಂಧಗಳನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಿಲ್ಲ. ಉದರ ಸಂಬಂಧಿ ಅನಾರೋಗ್ಯಗಳು ಕಾಡಬಹುದು. ನಿಮ್ಮ ಗುಣಾತ್ಮಕ ನಡವಳಿಕೆ ಯಶಸ್ಸು ತರಲಿದೆ.

ವೃಶ್ಚಿಕ

ಹಿರಿಯರ ಸಲಹೆಗಳನ್ನು ಅಚ್ಚುಕಟ್ಟಾಗಿ ಪಾಲಿಸಿದರೆ ಯಶಸ್ಸು ನಿಮ್ಮದಾಗುತ್ತದೆ. ಸಾಲ ಮಾಡುವಾಗ ನೂರು ಬಾರಿ ಯೋಚಿಸಿ. ಪ್ರಮುಖ ನಿರ್ಧಾರಗಳನ್ನು ಧೈರ್ಯವಾಗಿ ಕೈಗೆತ್ತಿಕೊಳ್ಳಿ. ಒಳ್ಳೆಯ ಮತ್ತು ಕೆಟ್ಟ ಅನುಭವಗಳನ್ನು ಸಮಾನವಾಗಿ ಸ್ವೀಕರಿಸಿ. ಕೆಲವೊಮ್ಮೆ ಸಂಬಂಧವಿಲ್ಲದ ಕೆಲಸಗಳಿಗೂ ಅಪವಾದ ಕೇಳಬೇಕಾದೀತು. ಸಂಶೋಧನಾ ವಿದ್ಯಾರ್ಥಿಗಳಿಗೆ ಅವಕಾಶಗಳು ಸನಿಹದಲ್ಲಿವೆ.

ಧನು

ಶಾಸ್ತ್ರಾಧ್ಯಯನಕ್ಕೆ ಒತ್ತು ನೀಡುವುದರಿಂದ ಮಾನಸಿಕ ನೆಮ್ಮದಿ ಸಿಗುತ್ತದೆ. ಆರ್ಥಿಕವಾಗಿ ಒಳ್ಳೆಯ ಲಾಭದ ಸಮಯ. ಖರ್ಚುಗಳೂ ಹಾಗೆಯೇ ಬರಬಹುದು. ವ್ಯವಹಾರ ಕ್ಷೇತ್ರದಲ್ಲಿ ವಿರೋಧ ಅಥವಾ ಪ್ರತಿರೋಧಗಳಿದ್ದರೂ ಜಯ ನಿಮ್ಮದಾಗಲಿದೆ. ಬಂಧುಗಳೊಂದಿಗೆ ಭಿನ್ನಾಭಿಪ್ರಾಯಗಳು ಬಂದರೂ ತಾಳ್ಮೆ ವಹಿಸಿ. ಕ್ರೀಡೆ ಅಥವಾ ನೃತ್ಯ ಕಲಾಕ್ಷೇತ್ರದಲ್ಲಿರುವವರಿಗೆ ಏಳಿಗೆಯಿದೆ. ಹೊಸ ಹೂಡಿಕೆಗಳನ್ನು ಮಾಡುವಾಗ ಹೆಚ್ಚಿನ ವಿಮರ್ಶೆ ಅತ್ಯಗತ್ಯ.

ಮಕರ

ಸ್ಥಗಿತಗೊಂಡಿದ್ದ ಕೆಲಸ ಕಾರ್ಯಗಳು ಮತ್ತೆ ವೇಗ ಪಡೆದುಕೊಳ್ಳುತ್ತವೆ. ವೃತ್ತಿ ಕ್ಷೇತ್ರದಲ್ಲಿ ಪ್ರಯತ್ನಿಸಿದರೆ ಪದೋನ್ನತಿ ಸಿಗಲಿದೆ. ಸರಕಾರಿ ಭೂಮಿಯ ವಿಚಾರಕ್ಕೆ ಸಂಬಂಧಿಸಿ ಕೆಲಸ ಕಾರ್ಯಗಳು ಪ್ರಗತಿ ಕಾಣಲಿವೆ. ಹೊಸಮನೆ ನಿರ್ಮಾಣಕ್ಕೆ ಅಡಿಗಲ್ಲು ಹಾಕಬಹುದು. ಮಕ್ಕಳು ದುಶ್ಚಟಕ್ಕೆ ಸಿಲುಕದಂತೆ ಜಾಗ್ರತೆ ವಹಿಸಿ. ವಿದೇಶಿ ಕಂಪೆನಿಗಳಿಗೆ ಹೂಡಿಕೆ ಮಾಡುವುದರಿಂದ ನಷ್ಟವಾಗಬಹುದು.

ಕುಂಭ

ಖರ್ಚುಗಳನ್ನು ನಿಯಂತ್ರಿಸದಿದ್ದರೆ ಚಿಂತೆಗೆ ದಾರಿಯಾಗುತ್ತದೆ. ವ್ಯವಹಾರ ಕ್ಷೇತ್ರದಲ್ಲಿ ಹೊಸ ಹೂಡಿಕೆಯಿಂದ ಹೆಚ್ಚಿನ ಲಾಭವಿದೆ. ಬಿಕ್ಕಟ್ಟಿನ ಸಮಯದಲ್ಲಿ ತಾಳ್ಮೆಗೆಡಬೇಡಿ. ಹಿಂದೆ ವಿಫಲವಾಗಿದ್ದ ಕೆಲಸ ಕಾರ್ಯಗಳು ಸಂಚಲನೆ ಕಾಣಲಿವೆ. ಮಕ್ಕಳಿಗೆ ಮಿತಿ ಮೀರಿದ ಸ್ವಾತಂತ್ರ್ಯ ನೀಡಿ ತೊಂದರೆಗೆ ಸಿಲುಕಬೇಡಿ. ಸಂಗಾತಿಯೊಂದಿಗೆ ಭಿನ್ನಾಭಿಪ್ರಾಯ ಹೆಚ್ಚಾಗದಿರಲಿ.

ಮೀನ

ಪಶು ಸಂಗೋಪನೆಯ ಕೆಲಸದಿಂದ ಲಾಭವಿದೆ. ಹೊಸ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ದುಡುಕದೆ ಆಲೋಚನೆ ಮಾಡಿ. ಶೀತ-ಕಫ ಸಂಬಂಧಿ ಅನಾರೋಗ್ಯಗಳು ಕಾಡಬಹುದು. ಹಣಕಾಸಿನ ಪರಿಸ್ಥಿತಿ ಸುಧಾರಿಸಲಿದೆ. ಅತಿಯಾದ ಮಾತುಗಳಿಂದ ನಿಮಗೆ ತೊಂದರೆಯೇ ಹೊರತು ನೆಮ್ಮದಿಯಿಲ್ಲ. ಹೊಸ ಮುಖ ಪರಿಚಯಗಳಿಂದ ಕಾರ್ಯಕ್ಷೇತ್ರದಲ್ಲಿ ಅನುಕೂಲವಾಗಲಿದೆ.

ವಾರದ ವಿಶೇಷ: ಎಪ್ರಿಲ್ 23 – ವಿಶ್ವಪುಸ್ತಕ ದಿನ, 27 – ಸರ್ವೈಕಾದಶಿ, 29 – ವಿಶ್ವ ನೃತ್ಯ ದಿನ.

ಮುಗಿಯದ ಮೌನ



❑ ಡಾ. ಆರತಿ ವೆಂಕಟೇಶ್

ಹಿಂದಿನ ಸಂಚಿಕೆಯಿಂದ...

ಆಲೋಕ್ ತಾಯಿಯಿಂದ ಬೀಳ್ಕೊಂಡು ಮನೆಗೆ ಹಿಂತಿರುಗಿದ. ಸುದ್ದಿಯಿಲ್ಲದೆ ಬಂದ ಅವನಿಗೆ ಮನೆಯೊಳಗೆ ಕಂಡದ್ದು ಕೆವಿನ್‌ಗೆ ಒರಗಿ ನಿಂತ ಪ್ರಾಂಜಲಿ. ಸಿಟ್ಟಿಗೆದ್ದು ಪ್ರಶ್ನಿಸಿದಾಗ ಉದ್ಧಟತನದ ಉತ್ತರ ನೀಡಿದಳೇ ಹೊರತು, ಸಮಜಾಯಿಷಿ ನೀಡಲಿಲ್ಲ. ಹೋದ ವೇಗದಲ್ಲೇ ಹಿಂತಿರುಗಿದ ಮಗನನ್ನು ಕಂಡು ವಾಸಂತಿಯವರಿಗೂ ದಿಗಿಲಾಯಿತು. ತಮ್ಮಿಬ್ಬರ ಮಧ್ಯೆ ಬಂದ ಕೆವಿನ್‌ನನ್ನು, ಆಲೋಕ್ ತರಾಟೆಗೆ ತೆಗೆದುಕೊಂಡ.

ಮುಂದೆ ಓದಿ...

ಮಗ ಇನ್ನೂ ಮನೆಗೆ ಬಂದಿಲ್ಲ ಎಂಬ ಆತಂಕದಿಂದ ವಾಸಂತಿ ಮನೆಯಲ್ಲಿ ಚಡಪಡಿಸುತ್ತಿದ್ದರು. ಅವನಿಗೆ ಎರಡು ಬಾರಿ ಫೋನ್ ಮಾಡಿದಾಗ ರಿಂಗ್ ಆಯಿತೇ ಹೊರತು ಅವನು ಎತ್ತಿಕೊಂಡಿರಲಿಲ್ಲ. ಕಾಲ ಕೆಟ್ಟುಹೋಗುತ್ತಿದೆ, ಜೊತೆಗೆ ಅವನ ಮನಸ್ಸು ಚೆನ್ನಾಗಿಲ್ಲ. ಯಾರೋ ಸ್ನೇಹಿತರನ್ನು ನೋಡಬೇಕೆಂದು ಹೋದವನು ಎಲ್ಲಿದ್ದಾನೋ, ಏನು ಮಾಡುತ್ತಿದ್ದಾನೋ. ಫೋನ್ ಕರೆಯೂ ರಿಸೀವ್ ಮಾಡಿಲ್ಲವೆಂದ ಮೇಲೆ ಏನಾದರೂ ಆ್ಯಕ್ಸಿಡೆಂಟ್...!

ಕೆಟ್ಟ ಯೋಚನೆಯಲ್ಲೇ ಅವರ ಮನಸ್ಸು ಹರಿದಾಡುತ್ತಿತ್ತು.

ಬಾಗಿಲ ಕರೆಘಂಟೆ ಕೇಳಿಸಿದೊಡನೆ ದಡದಡನೆ ಬಂದು ಬಾಗಿಲು ತೆರೆದರು. ಎದುರಿಗೆ ನಿಂತಿದ್ದ ಮಗನ ಅವಸ್ಥೆ ಕಂಡು ಅವಾಕ್ಕಾದರು...

ಅಸ್ತವ್ಯಸ್ತವಾದ ತಲೆಯ ಕ್ರಾಪಿನ ಕೂದಲು, ಬಾಡಿದ ಮುಖಭಾವ, ಕೆಂಪೇರಿದ ಕಣ್ಣುಗಳು, ಪ್ಯಾಂಟಿನಿಂದ ಅರ್ಧ ಹೊರಬಂದಿದ್ದ ಶರ್ಟು! ಎದೆಯ ಬಳಿ ತೆರೆದಿದ್ದ ಗುಂಡಿ, ಬೆವೆತುಹೋಗಿದ್ದ ಕೊರಳಿನ ಭಾಗ... ಬಾಗಿಲು ಹಿಡಿದು ಒಳಗೆ ಬಂದಾಗ ನವುರಾಗಿ ಕಂಪಿಸುತ್ತಿದ್ದ ಕೈಗಳು...!

ಈ ಅವಸ್ಥೆಯಲ್ಲಿ ಅವರು ಮಗನನ್ನೆಂದೂ ನೋಡಿರಲಿಲ್ಲ.

''ಆಲೋಕ್, ಏನಾಯಿತು? ಯಾಕೋ?'' ಎಂದು ಕೇಳುತ್ತ ಅವನನ್ನು ಹಿಂಬಾಲಿಸಿ ಹೋದರು.

ಆಲೋಕ್ ಏನೂ ಮಾತನಾಡದೆ ರೂಮಿಗೆ ಹೋಗಿ ಹಾಸಿಗೆಯ ಮೇಲೆ ಉರುಳಿಕೊಂಡಾಗ ಅಲ್ಲಿಗೆ ಬಂದ ವಾಸಂತಿಗೆ ರೇಗಿತು.

''ಏನೋ ಇದು? ಶೂಸ್ ಕೂಡ ಬಿಚ್ಚದೇ ಹಾಸಿಗೆ ಮೇಲೆ ಬಿದ್ಕೊಂಡಿದ್ಯಲ್ಲ! ಏನಾಗಿದೆ ನಿಂಗೆ? ಕುಡಿದು-ಗಿಡಿದು ಬಂದಿದ್ದೀಯಾ ಹೇಗೆ?''

ಆಲೋಕ್ ತಲೆಯೆತ್ತಿ,

''ಬಿಯರ್ ಕುಡಿದು ಬಂದೆ ಮಮ್ಮಿ'' ಎಂದಾಗ ಅವರು ತಬ್ಬಿಬ್ಬಾದರು.

ಬಾಯಿಮಾತಿಗೆ ಕೇಳಿದ್ದೇ ನಿಜವಾಗಿದೆಯೇ ಎಂದು ದಿಗ್ಭ್ರಾಂತಿಯಾಯಿತು. ಜೊತೆಗೆ ಕೋಪವೂ ಉಕ್ಕಿಬಂದು,

''ಹೆಣ್ಣುಮಕ್ಕಳಿದ್ರೆ ಬವಣೆ ಅಂತಾರೆ. ಆದ್ರೆ ಗಂಡುಮಗನ್ನ ಹೆತ್ತಿದ್ದಕ್ಕೆ ದಿನನಿತ್ಯ ಇದೇ ಹಣೆಬರಹ ಆಗಿದೆ ನನಗೆ! ಅಲ್ಲಿ ಕೈಹಿಡಿದ ಹೆಂಡ್ತಿ ಆರಾಮವಾಗಿ ಓಡಾಡ್ಕೊಂಡಿದ್ದಾಳೆ, ಹೆತ್ತ ತಪ್ಪಿಗೆ ನಾನು ಇಲ್ಲಿ ಅನುಭವಿಸ್ತಾ ಇದ್ದೀನಿ ನಿಂಜೊತೆ!'' ಎಂದು ಹಂಗಿಸಿಬಿಟ್ಟರು.

ಆಲೋಕನ ಕಣ್ಣುಗಳಲ್ಲಿ ನೋವು ಇಣುಕಿತು.

''ಅವಳಿಗೆ ನಾನು ಬೇಡವಾಗಿದ್ದೀನಿ. ಈಗ ನಿನಗೂ ನನ್ನ ಕಂಡ್ರೆ ಬೇಜಾರು. ಅಲ್ಲಿ ಅವಳ ಮನೆ, ಇಲ್ಲಿ ನಿನ್ನ ಮನೆ. ನಾನೆಲ್ಲಿಗೆ ಹೋಗ್ಲಿ ಹೇಳು?''

ವಾಸಂತಿಯ ಕೋಪ ಜರ್ರನೇ ಇಳಿದುಹೋಯಿತು.

''ಯಾಕೋ ಹೀಗೆಲ್ಲ ಮಾತಾಡಿ ಹೊಟ್ಟೆ ಉರಿಸ್ತೀಯಾ? ನಿಮ್ಮಪ್ಪ ಒಂದಿನ ಕುಡಿದವರಲ್ಲ. ಒಂದು ಕೆಟ್ಟ ಚಟ ಹಿಡೀದೇ ಇರೋ ಹಾಗೆ ಬೆಳೆಸ್ದೆ ನಿನ್ನನ್ನು. ಈಗ ಕುಡಿದು ಬರೋಂಥದ್ದೇನಾಯಿತು ನಿಂಗೆ?''

ತಾಯಿಯ ದನಿಯಲ್ಲಿ ಮಮಕಾರ, ಕಕ್ಕುಲತೆ ಅವನನ್ನು ಕರಗಿಸಿತು.

ಅಂದು ತಾನು ಕೆವಿನ್‌ನ ಭೇಟಿಯಾದ ಸಂದರ್ಭವನ್ನು ಹೇಳಿಕೊಳ್ಳುತ್ತ,

''ಯಾವ ವಿಷ್ಯಕ್ಕೂ ನಾನು ಬಗ್ಗಿರಲಿಲ್ಲ ಮಮ್ಮಿ. ಆದ್ರೆ ಪ್ರಾಂಜಲಿ ತನ್ಮೇಲೇ ಆಣೆಯಿಟ್ಟುಕೊಂಡುಬಿಟ್ಟಳಲ್ಲಾ. ಆಗ್ಲೇ ನಾನು ಬ್ರೇಕ್ ಆಗಿಬಿಟ್ಟೆ ಅವಳಿಗೆ. ಯಾರು ಹೆಚ್ಚು ಅಂತ ಮಾತ್ನಲ್ಲೇ ತೋರಿಸಿಬಿಟ್ಳು!'' ಎಂದು ಅವರ ಮಡಿಲಲ್ಲಿ ತಲೆಯಿಟ್ಟು ಅತ್ತುಬಿಟ್ಟ.

ವಾಸಂತಿಗೆ ದುಃಖ, ಕೋಪ ಎರಡೂ ಉಮ್ಮಳಿಸಿತು.

''ಯಾಕೆ ಬೇಕು ಈ ಕರ್ಮ? ಬಿಟ್ಟುಹಾಕಿಬಿಡು ಈ ಸಂಬಂಧ!''

ಅವನು ಕಣ್ಣರಳಿಸಿ ಅವರತ್ತ ನೋಡಿದ.

''ಅಂದ್ರೆ! ಏನು ಹೇಳ್ತಿದ್ದೀಯ ಮಮ್ಮಿ?''

''ನಾನೇನು ಹೇಳೋದು? ಅವಳೇ ಹೇಳಿದ್ದಲ್ಲ. ಅವಳ ವಿಷ್ಯ ಬಿಟ್ಬಿಡು ಅಂತ. ನಿನ್ನನ್ನು ಮನೆಯಿಂದ ಹೊರಗೆ ಹಾಕಿದ್ದಾಯಿತು. ಅವಳೇ ಬಾಯ್ಬಿಟ್ಟು ಹೇಳೋಕೆ ಮುಂಚೆ ನೀನೇ ಅವಳ ಜೀವನದಿಂದ ಹೊರಗೆ ಬಂದುಬಿಡು!''

''ಯೂ ಮೀನ್... ಮಮ್ಮಿ... ಡೈವೋರ್ಸ್?'' ಆಲೋಕ್ ತಡವರಿಸಿದ.

''ಇನ್ನೇನು ಮತ್ತೆ ನಾಚಿಕೆಗೆಟ್ಕೊಂಡು ಅವಳಾಗಿಯೇ ಕೇಳೋವರೆಗೂ ಸುಮ್ನೆ

ಕೂತಿರ್ತೀಯಾ? ಅಂಥ ಹೆಂಡ್ತಿ ನಿಂಗ್ಯಾಕೆ? ಅವಳ್ಗೆ ನೀನು ಬೇಡ ಅಂದ್ಮೇಲೆ ನಿನಗ್ಯಾಕೆ ಬೇಕು ಅವಳು?''

''ಮಮ್ಮಿ, ನಿನ್ನ ಬಾಯಿಂದ ಈ ಮಾತಾ?''

ಮಗನ ಮುಖದಲ್ಲಿ ದುಗುಡ, ನಿರಾಶೆ, ಆಶ್ಚರ್ಯ ತುಂಬಿರುವುದನ್ನು ಕಂಡು ಅವರು ಎಚ್ಚೆತ್ತರು.

ಅಂದು ಪ್ರಾಂಜಲಿ ತಮ್ಮ ಮುಂದೆ ಆಡಿದ ಮಾತನ್ನು ಮಗನಿಗೆ ಹೇಳಲು ಅವರ ನಾಲಿಗೆ ಹಿಡಿದಿತ್ತು. ಒಳಗೇ ಹುದುಗಿಟ್ಟುಕೊಂಡ ರೋಷ, ಬೇಸರ ತಾವು ಹೊರಗೆ ಹಾಕುತ್ತಿದ್ದೇವೆ ಎಂದು ಹೇಗೆ ಹೇಳುವುದು?

ಆದರೆ, ಅದನ್ನು ಮುಚ್ಚಿಟ್ಟುಕೊಳ್ಳಲೂ ಸಾಧ್ಯವಿಲ್ಲ. ಈ ಸತ್ಯ ಆಲೋಕನಿಗೆ ತಿಳಿಯಲೇಬೇಕು!

ಅವರು ಒಣಗಿದ್ದ ತುಟಿಯ ಮೇಲೆ ನಾಲಿಗೆಯಾಡಿಸಿಕೊಂಡು, ಗಂಟಲು ಸರಿಮಾಡಿಕೊಂಡರು.

''ಒಂದ್ವೇಳೆ... ಪ್ರಾಂಜಲಿಯೇ ಡೈವೋರ್ಸ್ ಕೇಳಿದ್ರೆ?''

''ನಾನು ಸತ್ತುಹೋಗ್ತೀನಿ ಮಮ್ಮಿ.''

''ಆಲೋಕ್!''

ಆಲೋಕ್ ವ್ಯಥೆಯಿಂದ,

''ಇನ್ನೇನು ಮಮ್ಮಿ? ನಾನೇನು ಅಂತ ನಿಂಗೊತ್ತಿಲ್ವಾ? ನನ್ನ ಜೀವನದಲ್ಲಿ ಪ್ರೀತಿಸಿದ್ದು ನಿನ್ನನ್ನು ಬಿಟ್ರೆ , ನನ್ನ ಪ್ರಾಂಜಲಿನ್ನ ಮಾತ್ರ. ಅವಳನ್ನು ಬಿಟ್ಟುಬಿಡ್ತೀನಾ?'' ಎಂದಾಗ ವಾಸಂತಿ ಗೊಂದಲಕ್ಕೊಳಗಾದರು.

''ಅಲ್ಲಪ್ಪ ರಾಜಾ, ಇಷ್ಟೆಲ್ಲ ಆದ್ಮೇಲೆ ನೀವಿಬ್ರೂ ಮೊದಲಿನಂತೆ ಇರೋಕ್ಕಾಗುತ್ತಾ? ಅವನ್ಯಾರೋ ಕೆವಿನ್ ಅಂತ ಹೇಳಿದ್ಯಲ್ಲ, ಅವನು ನಿಜಕ್ಕೂ ಮರ್ಯಾದಸ್ತನಾಗಿದ್ರೆ ಯಾವತ್ತೋ ಬಿಟ್ಟುಹೋಗ್ತಿದ್ದ. ಅವನ ಚಹರೆ ನೋಡಿದ್ರೆ ಅವನಿಗೂ ಪ್ರಾಂಜಲಿನ್ನ ಬಿಡೋ ಉದ್ದೇಶ ಇಲ್ಲಅನ್ಸುತ್ತೆ. ಅವರಿಬ್ರೂ ಎಷ್ಟುಕ್ಲೋಸ್ ಆಗಿದ್ದಾರೋ ಏನೇನು ನಿರ್ಧಾರ ಮಾಡ್ಕೊಂಡಿದ್ದಾರೋ! ದಿನನಿತ್ಯ ನೀನು ಈ ರೀತಿ ಕೊರಗ್ತಾ ಇರ್ಬೇಕಾ? ಇದನ್ನು ನಾನು ಹೇಗೆ ಸಹಿಸ್ಕೊಳ್ಳೋದು ಹೇಳು.''

ಆಲೋಕ್ ಎದ್ದು ಸರಿಯಾಗಿ ಕುಳಿತ.

''ಮಮ್ಮಿ , ನಮ್ಮ ಫ್ಯಾಮಿಲಿ ಸರ್ಕಲ್‌ನಲ್ಲಿ ಯಾರಾದ್ರೂ ಡೈವೋರ್ಸ್ ಮಾಡಿದ್ದಾರಾ? ಡ್ಯಾಡಿ ಕಡೆಯವರು... ನಿನ್ನ ಕಡೆಯವರು. ಹಾಗಿರೋವಾಗ ನಿನ್ನ ಮಗನಾಗಿ ನಾನು ಆ ಕೆಲ್ಸ ಮಾಡ್ತೀನಾ? ನೀನು ನನ್ನನ್ನು ಹೇಗೆ ಬೆಳೆಸ್ದೆ ಮರೆತುಹೋಯ್ತಾ? ಊಟ, ತಿಂಡಿ ಏನೇ ಆಗಿರ್ಲಿ, ತಟ್ಟೆಗೆ ಬಡಿಸಿದ್ಮೇಲೆ ಚೆಲ್ಲಬಾರದು! ಹಾಗೇ ಜೀವನಾನೂ ಅಲ್ವಾ ಮಮ್ಮಿ? ಆಸೆಪಟ್ಟು ನಾನು ಅವಳ್ನ ಮದ್ವೆಯಾದೆ, ಇಷ್ಟಪಟ್ಕೊಂಡು ಜೀವನ ಮಾಡ್ತಿದ್ದೆ. ಈಗೊಂದು ತಪ್ಪು ನಡೆದಿದೆ ಅಂತ ನಾನು ಆಸೆಪಟ್ಟಿದ್ದನ್ನು ಬೇಡಾಂತ ಬಿಸಾಕೋಕ್ಕಾಗುತ್ತಾ? ತಟ್ಟೆಗೆ ಬಡಿಸ್ಕೊಂಡ ಮೇಲೆ ತಿನ್ನಲೇಬೇಕು. ಹಾಗೆಯೇ ತಾಳಿ ಕಟ್ಟಿದ್ಮೇಲೆ ಬಾಳಲೇಬೇಕು.''

''ಆದ್ರೆ ಆಲೋಕ್...''

''ಮಮ್ಮಿ ಪ್ಲೀಸ್, ಪ್ರಾಂಜಲಿ ಬಗ್ಗೆ ತಪ್ಪಾಗಿ ತಿಳ್ಕೋಬೇಡ. ಕೆವಿನ್ ಅಂಥವನು ಬಂದು ಈಗ ಅವಳ ತಲೆ ಕೆಡಿಸಿರಬಹುದು. ಆದ್ರೆ ಅವಳು ತಪ್ಪಾಗಿ ನಡ್ಕೊಳ್ಳೋ ಹುಡ್ಗಿ ಅಲ್ಲ ಮಮ್ಮಿ. ನನಗಿಂತ ಹೆಚ್ಚಾಗಿ ನೈತಿಕತೆ, ಪ್ರಿನ್ಸಿಪಲ್ಸ್ ಅವಳಿಗಿದೆ. ಏನೇ ಆದ್ರೂ ಅವಳು ನನ್ನ ಕೈಬಿಟ್ಟು ಹೋಗಲ್ಲ. ಆ ಒಂದು ಕಟ್ಟ ಭರವಸೆ ನನಗಿದೆ. ಯಾಕೇಂದ್ರೇ ನಿನಗಿಂತ ಹೆಚ್ಚಾಗಿ ನಾನು ಅವಳನ್ನು ಅರ್ಥಮಾಡ್ಕೊಂಡಿದ್ದೀನಿ.''

ವಾಸಂತಿ ಏನೂ ಹೇಳಲು ತೋಚದೆ ಅವನನ್ನೇ ನೋಡುತ್ತಿದ್ದರು.

''ಮಮ್ಮಿ , ಹಸಿವಾಗ್ತಿದೆ'' ಆಲೋಕ್ ಮೆಲ್ಲನುಸುರಿದಾಗ ಅವರಿಗೆ ಪುಟ್ಟ ಆಲೋಕನನ್ನೇ ಮತ್ತೆ ಕಂಡಂತಾಯಿತು.

ಉಕ್ಕಿ ಬಂದ ಮಮತೆ, ವಾತ್ಸಲ್ಯದಿಂದ ಎದ್ದು ಅವನ ತಲೆ ಸವರಿದರು.

''ಬಾ, ನಾನೂ ಊಟ ಮಾಡಿಲ್ಲ. ಡ್ರೆಸ್ ಚೇಂಜ್ ಮಾಡ್ಕೋ. ನಾನು ತಟ್ಟೆ ಹಾಕ್ತೀನಿ'' ಎಂದು ರೂಮಿನಿಂದ ಹೊರಗೆ ಹೋಗುತ್ತಿದ್ದವರನ್ನು ಅವನ ಕರೆ ತಡೆದು ನಿಲ್ಲಿಸಿತು.

''ಮಮ್ಮಿ...''

'ಏನು?' ಎನ್ನುವಂತೆ ತಿರುಗಿದರು.

''ಮತ್ತೆ ಇನ್ಯಾವತ್ತೂ ಡೈವೋರ್ಸ್ ಬಗ್ಗೆ ಮಾತಾಡ್ಬೇಡ. ಪ್ರಾಂಜಲಿ ಬಿಟ್ಟು ನಾನು ಬದುಕಲ್ಲ!'' ಎಂದವನೇ ಅಟ್ಯಾಚ್ಡ್ ಬಾತ್‌ರೂಮಿನಲ್ಲಿ ಹೋಗಿ ಬಾಗಿಲು ಹಾಕಿಕೊಂಡ.

ಅವನ ಮಾತಿನಿಂದ ಸುಧಾರಿಸಿಕೊಳ್ಳಲು ವಾಸಂತಿಗೆ ತುಸು ಸಮಯವೇ ಬೇಕಾಯಿತು.

ರಾತ್ರಿ ಮಲಗಿದರೂ ಕಣ್ಣಿಗೆ ತತ್‌ಕ್ಷಣ ನಿದ್ದೆ ಹತ್ತಲಿಲ್ಲ. ಏನೇನೋ ಅಸಮಂಜಸ ಕನಸುಗಳು! ಬೆಳಗ್ಗಿನ ಜಾವ ಕುಳಿರ್ಗಾಳಿ ಕಿಟಕಿಯಿಂದ ಬೀಸಿದಾಗ ಅವರಿಗೆ ಮಂಪರು ಹರಿಯಿತು.

ಗಡಿಯಾರ ನೋಡಿದರೆ ಇನ್ನೂ ನಾಲ್ಕೂವರೆ!

ಮತ್ತೆ ನಿದ್ದೆ ಬರುವಂತಿರಲಿಲ್ಲ. ಎದ್ದು ಕಾಫಿಗೆ ಡಿಕಾಕ್ಷನ್ ಆದರೂ ಹಾಕೋಣ ಎಂದು ರೂಮಿನಿಂದ ಬಂದರು.

ಆಲೋಕ್ ಮಲಗಿದ ರೂಮಿನ ಬಾಗಿಲು ಅರೆತೆರೆದಂತಿತ್ತು. ಅವನೇನಾದರೂ ಎಚ್ಚರಗೊಂಡಿದ್ದಾನೇನೋ ಎಂದು ರೂಮಿನ ಬಾಗಿಲು ಸರಿಸಿದಾಗ ಅವರಿಗೆ ಎದೆಬಡಿತವೇ ನಿಂತಂತಾಯಿತು.

ಹೌದು...! ಆಲೋಕ್... ತಮ್ಮ ಮುದ್ದು ಮಗ. ಏಕೆ ಹೀಗೆ ನೇತಾಡುತ್ತಿದ್ದಾನೆ! ಮರುಕ್ಷಣ ಫ್ಯಾನಿನಿಂದ ಇಳಿಬಿದ್ದ ಬೆಡ್‌ಶೀಟ್ ಅವನ ಕೊರಳನ್ನು ಸುತ್ತಿಕೊಂಡಿರುವುದು ಕಂಡಿತು.

ವಾಸಂತಿ ಜೋರಾಗಿ ಕಿರುಚಿದರು.

ಥಟ್ಟನೇ ಅವರು ಬೆಚ್ಚಿಬಿದ್ದಂತಾಗಿ ಕಣ್ಣುಬಿಟ್ಟಾಗ ರೂಮಿನಲ್ಲಿ ನಸುಗತ್ತಲೆ ತುಂಬಿತ್ತು.

ಮಸುಕಾದ ಬೆಡ್‌ಲೈಟನಿಂದ ಗಡಿಯಾರ ರಾತ್ರಿ ಎರಡೂವರೆ ತೋರಿಸುತ್ತಿತ್ತು. ತಾವು ಕಂಡಿದ್ದು ಕನಸು ಎಂದು ಅರಿವಾಗಲು ಅವರಿಗೆ ಕೆಲವು ಕ್ಷಣಗಳೇ ಬೇಕಾದವು!

ಅವರು ಸಾವರಿಸಿಕೊಂಡು ಎದ್ದು ರೂಮಿನ ದೀಪ ಹಾಕಿದಾಗ ಅವರ ಮೈ ಪೂರ್ತಿ ಬೆವೆತುಹೋಗಿತ್ತು. ಅಲ್ಲೇ ಇದ್ದ ಜಗ್ಗಿನಿಂದ ನೀರು ಬಗ್ಗಿಸಿಕೊಂಡು ಗಟಗಟನೇ ಕುಡಿದಾಗ ಒಳಗಿದ್ದ ಆತಂಕದ ಬೇಗೆ ಸ್ವಲ್ಪ ಶಾಂತವಾಯಿತು. ಅವರಿಗೆ ತಡೆಯಲಾರದೇ ಮಗನ ರೂಮಿಗೆ ಹೋಗಿ ನೋಡಿದಾಗ ಮೈ ತುಂಬಾ ಹೊದಿಕೆ ಹೊದ್ದು ಗಾಢ ನಿದ್ದೆಯಲ್ಲಿದ್ದ ಆಲೋಕ್.

ಚಿಕ್ಕ ಮಗುವಾಗಿ ತೊಟ್ಟಿಲಲ್ಲಿ ಮಲಗಿದ್ದಾಗಲೂ ಅವನದು ಇದೇ ಮುಖಭಾವ!

ಅದನ್ನು ನೆನೆದೇ ಅವರಿಗೆ ಮಮತೆಯ ಸೆಲೆಯುಕ್ಕಿ ಬಂತು. ಅವನಿಗೆ ಎಚ್ಚರವಾಗದಂತೆ ಮೆಲ್ಲನೆ ಅವನ ತಲೆ ಸವರಿ ಬಾಗಿಲು ಮುಂದುಮಾಡಿಕೊಂಡು ಹೊರಬಂದರು.

ಮತ್ತೆ ಅವರಿಗೆ ನಿದ್ದೆ ಬರಲಿಲ್ಲ.

★ ★ ★

ಗೆಳತಿಯ ಮಾತುಗಳನ್ನು ತದೇಕಚಿತ್ತದಿಂದ ಕೇಳುತ್ತಿದ್ದರು ಶಶಿಕಲಾ. ವಾಸಂತಿ ಅವರ ಮನೆಗೆ ಹೋಗಿ ತಮ್ಮ ಸಂಸಾರದ ಸಂದಿಗ್ಧ ಪರಿಸ್ಥಿತಿಯನ್ನು ಹೇಳಿಕೊಂಡ ಮೇಲೆ ಅವರಿಗೆ ಮನಸ್ಸಿನ ಭಾರ ಕೊಂಚ ಹಗುರವಾಗಿತ್ತು.

''ಈಗ ಡೈವೋರ್ಸ್ ಬಗ್ಗೆ ನಿನ್ನ ಮಗ, ಸೊಸೆ ತುಂಬಾ ಸೀರಿಯಸ್ಸಾಗಿದ್ದಾರೇನು?'' ಕಾಫಿ ಬೆರೆಸಿಕೊಡುತ್ತ ಶಶಿಕಲಾ ಪ್ರಶ್ನಿಸಿದರು.

''ನಮ್ಮ ಆಲೋಕ್ ಬಗ್ಗೆ ನಿಂಗೇ ಗೊತ್ತಲ್ಲ ಶಶಿ. ಯಾರನ್ನಾದ್ರೂ ಹಚ್ಕೊಂಡ್ರೆ ಜೀವಾನೇ ಬಿಟ್ಟುಬಿಡ್ತಾನೆ. ಆದ್ರೆ ನನ್ನ ಸೊಸೇನೇ ವಕ್ರ. ಮಗನಿಂದ ನನಗೆ ಡೈವೋರ್ಸ್ ಕೊಡ್ಸಿ ಅಂತ ಕೂತಿದ್ದಾಳೆ. ನನ್ನ ಮಗ ಅದನ್ನು ತಡ್ಕೊಳ್ಳೋ ಪರಿಸ್ಥಿತೀಲಿಲ್ಲ ಕಣೇ. ದುಡುಕಿ ಎಲ್ಲಿ ಪ್ರಾಣ ಕಳ್ಕೊಂಡುಬಿಡ್ತಾನೋ ಅಂತ ಭಯವಾಗುತ್ತೆ'' ಎಂದು ದುಗುಡದಿಂದ ನುಡಿದರು.

ಆಲೋಕ್, ಕೆವಿನ್‌ನನ್ನು ಭೇಟಿಯಾದ ಪ್ರಕರಣ ಅವರು ಶಶಿಕಲಾ ಮುಂದೆ ಹೇಳಲಿಲ್ಲ. ತಮ್ಮ ಸೊಸೆ ಬೇರೆಯವನ ಜೊತೆ ನಿಕಟವಾಗಿದ್ದಾಳೆಂದು ಯಾವ ಬಾಯಿಂದ ಹೇಳುವುದು?

''ಯಾಕಂತೆ ಡೈವೋರ್ಸ್ ನಿನ್ನ ಸೊಸೆಗೆ?''

ವಾಸಂತಿ ಸಾವರಿಸಿಕೊಂಡು,

''ಏನೋ ಈಗಿನ ಕಾಲದ ಹುಡ್ಗೀರ ಮನಸ್ಸೇ ಅರ್ಥ ಆಗಲ್ಲ. ನನ್ನ ಮಗನ್ನ ಲವ್ ಮಾಡಿ ಮದ್ವೆಯಾಗಿದ್ದೂ ಅವಳೇ. ಈಗ ಹೊಂದಾಣಿಕೆ ಇಲ್ಲಾಂತ ಕಂಪ್ಲೇಂಟ್ ಮಾಡ್ತಿರೋದೂ ಅವಳೇ! ಏನು ಶಶಿ, ನಾವೆಲ್ಲ ಗಂಡಂದಿರ ಜೊತೆ ಸಂಸಾರ ಮಾಡಿಲ್ವಾ? ಎಲ್ಲಾ ವಿಷಯದಲ್ಲೂ ನಮಗೇನು ಹಂಡ್ರೆಡ್ ಪರ್ಸೆಂಟ್ ಹೊಂದಾಣಿಕೆ ಇರ್ತಿತ್ತಾ? ಆದ್ರೂ ನಾವು ಸುಖವಾಗಿರ್ಲಿಲ್ವಾ? ಹೊಗಲ್ಕೋಬೇಕೂಂತಲ್ಲ.. ಆದ್ರೆ ನನ್ನ ಮಗ ಚಿನ್ನದಂಥ ಹುಡ್ಗ. ಅವನ ಜೊತೆ ಹೊಂದ್ಕೊಳ್ಳೋಕ್ಕಾಗಲ್ಲ ಅಂದ್ರೆ ಏನರ್ಥ ಹೇಳು. ನನಗಂತೂ ದಿಕ್ಕೇ ತೋಚ್ತಿಲ್ಲ'' ಎಂದು ಹಣೆಯ ಮೇಲೆ ಕೈಯಾಡಿಸಿಕೊಂಡರು.

''ಅಯ್ಯೋ ವಾಸಂತಿ, ಇದು ನಮ್ಮ ಕಾಲ ಅಲ್ಲ ಕಣೇ. ಮದ್ವೆ ಆಗೋದು ಕಷ್ಟ ಆಗಿದೆ. ಆದ್ರೆ ಡೈವೋರ್ಸ್ ಸಿಗೋದು ಸುಲಭ. ಅದಕ್ಕೆ ಇಮ್ಮಿಡಿಯೆಟ್ ಪರಿಹಾರ ಅಂದ್ರೆ ವಿಚ್ಛೇದನ ಅಂತ ಕುಣೀತಾವೆ! ನಾಳೆ ಇನ್ನೊಬ್ಬನ್ನ ಕಟ್ಕೊಂಡು ಅವನ ಜೊತೆಲೂ ಹೊಂದಾಣಿಕೆ ಆಗದೇ ಇದ್ರೆ ಮತ್ತೆ ಡೈವೋರ್ಸ್ ಮಾಡ್ತಾಳಂತಾ?'' ಶಶಿಕಲಾರ ದನಿಯಲ್ಲಿ ಕಹಿ ತುಂಬಿತ್ತು.

ವಾಸಂತಿ ಹೌಹಾರಿ,

''ಸದ್ಯ ಹಾಗಾಗೋದು ಬೇಡ! ನಿಮ್ಮ ಚಿಕ್ಕಪ್ಪನ ಮಗ ಲಾಯರ್ ಇದ್ದಾರಲ್ಲ ಅವರನ್ನ ಕನ್ಸಲ್ಟ್ ಮಾಡೋಣ ಅಂದ್ಕೊಂಡೆ. ಹೇಗಾದ್ರೂ ಮಾಡಿ ಈ ಡೈವೋರ್ಸ್ ಅನ್ನೋ ಭೂತ ನಮ್ಮನೆ ಕಡೆ ಸುಳೀಬಾರದು! ಹಾಗೆ ಅವರೇನಾದ್ರೂ ಸಹಾಯ ಮಾಡ್ತಾರಾ ಅಂತ ಕೇಳೋಕೆ ಬಂದೆ'' ಎಂದಾಗ ಶಶಿಕಲಾ ಅವರ ಕೈಯಿಂದ ಕಾಫಿ ಲೋಟ ತೆಗೆದುಕೊಂಡು ಸಿಂಕಿಗೆ ಹಾಕಿ ಹಜಾರಕ್ಕೆ ಬಂದು ವಾಸಂತಿಯನ್ನು ಜೊತೆಗೆ ಕುಳ್ಳಿರಿಸಿಕೊಂಡರು.

''ವಾಸಂತಿ, ಇದಕ್ಕೆಲ್ಲ ಲಾಯರ್ ಬೇಡ ಕಣೇ. ಕಡ್ಡಿನ್ನ ಗುಡ್ಡ ಮಾಡ್ತಿದ್ದೀಯ ನೀನು. ಈಗ ಕೌನ್ಸಿಲಿಂಗ್ ಮಾಡ್ತಾರೆ. ವಿಚ್ಛೇದನಕ್ಕೆ ಮುಂಚೆ ಕಪಲ್ ಕೌನ್ಸಿಲಿಂಗ್ ಅಂತ ಗಂಡ-ಹೆಂಡ್ತಿನ್ನ ಒಟ್ಟಿಗೆ ಕೂಡಿಸಿ ಮಾತಾಡ್ತಾರೆ. ಆಗ ಎಷ್ಟೋ ಸಮಸ್ಯೆಗಳು ಬಗೆಹರಿಯುತ್ತೆ. ನಮ್ಮ ಸ್ಕೂಲಲ್ಲಿ ಮಾಣಿಕ್ಯಮ್ಮ ಇದ್ದಾರಲ್ಲ, ಮ್ಯಾತ್ಸ್

ಟೀಚರ್, ಅವರ ಮಗಳು – ಅಳಿಯನ್ನ ಕೌನ್ಸಿಲಿಂಗ್ ಮಾಡಿಸಿದ್ಮೇಲೆ ಈಗ ಪ್ರಾಬ್ಲಂ ಸರಿಹೋಗಿ, ಇಬ್ರೂ ಚೆನ್ನಾಗಿದ್ದಾರೆ. ಇನ್ನೇನು ಡೈವೋರ್ಸ್ ಆಗೇಬಿಡುತ್ತೆ ಅನ್ನೋ ಹಂತದಲ್ಲಿತ್ತು! ಈಗ ಅವರ ಮಗಳು ರೇಖಾ ಐದು ತಿಂಗಳ ಗರ್ಭಿಣಿ ಗೊತ್ತಾ? ಬೆಟ್ಟದ ಹಾಗೆ ಬಂದಿದ್ದು ಮಂಜಿನ ಹಾಗೆ ಕರಗಿಹೋಯಿತು ಅಂತ ಮಾಣಿಕ್ಯಮ್ಮ ಖುಷಿಯಾಗಿದ್ದಾರೆ.''

ವಾಸಂತಿಯ ಮನಸ್ಸಿನಲ್ಲಿ ಹೊಸ ಆಸೆಯ ದೀಪ ಹೊತ್ತಿಕೊಂಡಿತು.

''ಅದರ ಬಗ್ಗೆ ಡೀಟೈಲ್ಸ್ ಕೊಡು! ನಾನು ಆಲೋಕ್, ಪ್ರಾಂಜಲಿ ಜೊತೆ ಮಾತಾಡ್ತೀನಿ!''

ಆದರೆ, ತಮ್ಮ ಮುಂದೆ ದೊಡ್ಡ ತಿರುವು ಕಾದಿದೆ ಎಂದು ಅವರು ಕನಸಿನಲ್ಲೂ ಊಹಿಸಲು ಸಾಧ್ಯವಿರಲಿಲ್ಲ.

ಹೈಸ್ಕೂಲಿನ ವಿದ್ಯಾರ್ಥಿಯೊಬ್ಬನಿಗೆ ಕಾಲಿನ ಮೂಳೆ ಮುರಿದು, ಆಪರೇಷನ್ ಆಗಿತ್ತೆಂದು ಅವನನ್ನು ನೋಡಿ ಬರಲು ವಾಸಂತಿ ಕಾರಿನಲ್ಲಿ ಆಸ್ಪತ್ರೆಯಲ್ಲಿ ಬಂದಿಳಿದರು.

ಆ ಹುಡುಗ ಇರುವ ವಾರ್ಡಿನ ನಂಬರ್ ತಿಳಿದು ಲಿಫ್ಟ್ ಹತ್ತಿ ಹೋದಾಗ ಅಲ್ಲಿ ಸಾಲಾಗಿ ರೋಗಿಗಳು ಕುಳಿತಿದ್ದರು. ಆ ಪ್ರವೇಶ ಹಾದು ಹೋಗಿ ಬಲಕ್ಕೆ ತಿರುಗಿದರೆ ಅಲ್ಲಿ ನರ್ಸ್ ಸ್ಟೇಷನ್. ಅದರ ಹಿಂಭಾಗದಲ್ಲಿ ವಾರ್ಡ್‌ಗಳಿದ್ದವು.

ವಾಸಂತಿ ಲಿಫ್ಟ್‌ನಿಂದ ಇಳಿದು ರೋಗಿಗಳು ಕುಳಿತಿರುವ ಜಾಗದ ಬಳಿ ಹೋಗುತ್ತಿದ್ದಂತೆ ಬಲಗಡೆ ಇದ್ದ ಕನ್ಸಲ್ಟಿಂಗ್ ರೂಮಿನಿಂದ ಬಂದ ವ್ಯಕ್ತಿಯನ್ನು ನೋಡಿ ಅವಾಕ್ಕಾದರು.

ಹೌದು, ಪ್ರಾಂಜಲಿ! ತಮ್ಮ ಕಣ್ಣುಗಳು ಮೋಸ ಮಾಡುತ್ತಿಲ್ಲವಷ್ಟೆ? ಇಲ್ಲಿಗೇಕೆ ಬಂದಿದ್ದಾಳೆ?

ಕನ್ಸಲ್ಟಿಂಗ್ ಬಾಗಿಲ ಮೇಲೆ 'ಡಾ. ಭಕ್ತವತ್ಸಲಂ– ನ್ಯೂರಾಲಜಿಸ್ಟ್' ಎಂದು ಬರೆದಿತ್ತು.

ಭಕ್ತವತ್ಸಲಂ ಎಲ್ಲೋ ಹೆಸರು ಕೇಳಿದ್ದೇನೆ ಎನ್ನಿಸಿತು ವಾಸಂತಿಗೆ. ಅನಂತರ ಅವರಿಗೆ ನೆನಪಾಯಿತು, ಎರಡು ವರ್ಷಗಳ ಹಿಂದೆ ಶಾಲೆಯ ವಾರ್ಷಿಕೋತ್ಸವದ ದಿನ ಡಾ. ಭಕ್ತವತ್ಸಲಂ ಅವರನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸಿದ್ದರು.

ಈಗ ಅವರ ಬಳಿ ಪ್ರಾಂಜಲಿಗೇನು ಕೆಲಸ?

ಅವರ ತಲೆಯೊಳಗೆ ಗೊಂದಲದ ಗೂಡು ತುಂಬಿಕೊಳ್ಳುತ್ತಿದ್ದಂತೆ ಆ ಹುಡುಗನ ತಂದೆ ಬಂದವರೇ ವಾಸಂತಿಯನ್ನು ನೋಡಿ,

''ಓಹ್! ಮೇಡಂ ನೀವು! ಬನ್ನಿ ಬನ್ನಿ ನಮ್ಮ ಹುಡುಗ ವಾರ್ಡ್‌ನಲ್ಲಿದ್ದಾನೆ'' ಎಂದು ಗೌರವಾದರದಿಂದ ಕರೆದೊಯ್ದರು.

ವಾಸಂತಿಗೆ ಯಾವುದಕ್ಕೂ ಮನಸ್ಸಿರಲಿಲ್ಲ. ಮೊದಲು ಪ್ರಾಂಜಲಿಯ ಎದುರಿಗೆ ನಿಂತು ಪ್ರಶ್ನೆಗಳನ್ನು ಕೇಳಬೇಕೆಂದು ಅವರ ಮನಸ್ಸು ಹುಚ್ಚೆದ್ದು ಕುಣಿಯುತ್ತಿತ್ತು.

ಅದು ಹೇಗೆ ವಾರ್ಡಿಗೆ ಹೋದರೋ ಹುಡುಗನ ಯೋಗಕ್ಷೇಮ ವಿಚಾರಿಸಿ, ಅವನ ತಂದೆ–ತಾಯಿಯೊಡನೆ ಮಾತನಾಡಿದರೋ. ಒಟ್ಟಿನಲ್ಲಿ ವಾರ್ಡಿನಿಂದ ಹೊರಬರುವಷ್ಟರಲ್ಲಿ ಅರ್ಧ ಗಂಟೆಯೇ ಆಗಿತ್ತು. ಹುಡುಗನ ತಾಯಿ ಒತ್ತಾಯದಿಂದ ಕಾಫಿ ತರಿಸಿಕೊಟ್ಟದ್ದು ಇನ್ನೂ ತಡವಾಗಿತ್ತು. ಆದರೆ, ವಾಸಂತಿ ಶಿಷ್ಟಾಚಾರಕ್ಕೆ ಸಿಲುಕಿ, ಅವರ ಔದಾರ್ಯವನ್ನು ನಿರಾಕರಿಸಲಾಗಲಿಲ್ಲ. ಕೊನೆಗೆ ಅವರು ವಾರ್ಡಿನಿಂದ ಬಂದಾಗ ಡಾ. ಭಕ್ತವತ್ಸಲಂ ಕುಳಿತಿದ್ದ ಕನ್ಸಲ್ಟಿಂಗ್ ಚೇಂಬರ್ ಬಾಗಿಲು ತೆರೆದಿತ್ತು. ಒಳಗೆ ಬಗ್ಗಿ ನೋಡಿದಾಗ ಖಾಲಿ ಕುರ್ಚಿಗಳಿದ್ದವು. ಯಾರೂ ಇರಲಿಲ್ಲ!

''ಮೇಡಂ ಯಾರು ಬೇಕಿತ್ತು?'' ಹಿಂದಿನಿಂದ ನರ್ಸ್ ಪ್ರಶ್ನಿಸಿದಾಗ ವಾಸಂತಿ ಎಚ್ಚೆತ್ತರು.

''ಇಲ್ಲಿ... ಡಾ. ಭಕ್ತವತ್ಸಲಂ...''

''ಅಪಾಯಿಂಟ್ಮೆಂಟ್ ತೊಗೊಂಡಿದ್ದೀರಾ?''

''ಇಲ್ಲ... ಆದ್ರೆ...'' ವಾಸಂತಿ ತಡವರಿಸಿದರು.

''ಅಪಾಯಿಂಟ್ಮೆಂಟ್ ಇಲ್ಲದೇ ಡಾಕ್ಟರ್‌ನ ನೋಡೋಕ್ಕಾಗಲ್ಲ. ಸಂಜೆಗೆ ಅಪಾಯಿಂಟ್ಮೆಂಟ್ ತೊಗೊಂಡು ಬನ್ನಿ.''

''ಡಾಕ್ಟರ್ ಮನೆಗೆ ಹೊರಟುಹೋದ್ರಾ?''

''ಇಲ್ಲ. ವಾರ್ಡ್ ರೌಂಡ್ಸ್‌ಗೆ ಹೋಗಿದ್ದಾರೆ.''

ಸದ್ಯ ಅವರಿನ್ನೂ ಇಲ್ಲೇ ಇದ್ದಾರೆ ಎಂದು ವಾಸಂತಿಗೆ ಸಮಾಧಾನವಾಯಿತು.

''ಈಗ್ತಾನೇ ಪ್ರಾಂಜಲಿ ಅನ್ನೋ ಹುಡ್ಗಿ ಡಾಕ್ಟರ್ ನೋಡೋಕೆ ಬಂದಿದ್ಲಲ್ಲ ಅವಳೂ ಹೊರಟುಹೋದ್ಲಾ?''

''ಏನೋ ಗೊತ್ತಿಲ್ಲ ಮೇಡಂ.''

''ಆ ಹುಡ್ಗಿ ಯಾಕೆ ಡಾಕ್ಟರ್ ಹತ್ರ ಬಂದಿದ್ಲು ಅಂತೇನಾದ್ರೂ...''

''ನರ್ಸ್ ಸ್ಟೇಷನ್‌ನಲ್ಲಿ ವಿಚಾರಿಸಿ'' ಎಂದು ಆ ನರ್ಸ್ ಏನೋ ಕೆಲಸದ ಮೇಲೆ ಅಲ್ಲಿಂದ ಹೊರಟುಬಿಟ್ಟಳು.

ವಾಸಂತಿ ನರ್ಸ್‌ಗಳು ನಿಂತಿದ್ದ ಜಾಗದ ಬಳಿ ಹೋದರು.

''ಎಕ್ಸ್‌ಕ್ಯೂಸ್ ಮಿ. ಪ್ರಾಂಜಲಿ ಅನ್ನೋ ಹುಡ್ಗಿ ಈಗ್ತಾನೇ ಡಾ. ಭಕ್ತವತ್ಸಲಂ ಅವರ ಹತ್ರ ಕನ್ಸಲ್ಟಿಂಗ್‌ಗೆ ಬಂದಿದ್ಲು. ಅವಳ ಬಗ್ಗೆ ತಿಳ್ಕೋಬೇಕಾಗಿತ್ತು?''

''ಯಾರು ಪ್ರಾಂಜಲಿ?'' ನರ್ಸ್ ಗೊಂದಲದಿಂದ ಕೇಳಿದಳು.

''ಪ್ರಾಂಜಲಿ ಆಲೋಕ್ ಅಂತ. ಬೆಳ್ಳಗೆ, ಉದ್ದ ಕೂದಲು ಇಳಿಬಿಟ್ಕೊಂಡಿದ್ಲು. ಜೀನ್ಸ್, ಲೈಟ್ ಗ್ರೀನ್ ಟಾಪ್ಸ್ ಹಾಕ್ಕೊಂಡಿದ್ಲು'' ವಾಸಂತಿ ವಿವರಿಸಲೆತ್ನಿಸಿದರು.

ನರ್ಸ್ ಏನೂ ಮಾತನಾಡದೆ ಅವರನ್ನೇ ನೋಡುತ್ತಿದ್ದಳು.

ವಾಸಂತಿ ಇನ್ನಷ್ಟು ಸ್ಪಷ್ಟಪಡಿಸಲು,

''ಡಾ. ಭಕ್ತವತ್ಸಲಂ ಅವರ ಹತ್ರ ಇವತ್ತು ಕನ್ಸಲ್ಟೇಶನ್‌ಗೆ ಬಂದಿದ್ಲು. ಲಿಸ್ಟ್ ನೋಡಿದ್ರೆ ಗೊತ್ತಾಗುತ್ತೆ'' ಎಂದಾಗ ನರ್ಸ್ ನಿರಾಸಕ್ತಿಯಿಂದ,

''ಅದನ್ನು ರಿಸೆಪ್ಷನ್‌ನಲ್ಲಿ ವಿಚಾರಿಸಬೇಕು'' ಎಂದಳು.

ವಾಸಂತಿ ಗಂಟಲು ಸರಿಪಡಿಸಿಕೊಂಡು,

''ಹಾಗಲ್ಲ, ಅವಳು ಡಾಕ್ಟರ್ ಹತ್ರ ಯಾಕೆ ಬಂದಿದ್ಲು ಅಂತ ತಿಳ್ಕೋಬೇಕಾಗಿತ್ತು'' ಎಂದಾಗ ನರ್ಸ್ ನಗುತ್ತ,

''ಡಾಕ್ಟರ್ ಹತ್ರ ಇನ್ಯಾಕೆ ಬರ್ತಾರೆ? ಪೇಷೆಂಟ್ ಆಗಿ ಬಂದಿರ್ತಾರೆ'' ಎಂದಳು.

ವಾಸಂತಿಯ ಮುಖ ಗಂಟಿಕ್ಕಿತು.

''ಇಲ್ಲ, ಪ್ರಾಂಜಲಿಗೆ ಅಂಥ ತೊಂದ್ರೆ ಏನೂ ಇಲ್ಲ.''

ಅಷ್ಟರಲ್ಲಿ ಅಲ್ಲೇ ಯಾವುದೋ ಕೇಸ್ ಶೀಟ್‌ನಲ್ಲಿ ಬರೆಯುತ್ತಿದ್ದ ಇನ್ನೊಬ್ಬ ನರ್ಸ್,

''ವಾಣಿ, ಪ್ರಾಂಜಲಿ ಯಾರು ಗೊತ್ತೇನೇ? ನಮ್ಮ ಡಾಕ್ಟರ್‌ಗೆ ದೂರದ ಸಂಬಂಧಿಕರು ಅಂತ ಕೇಳ್ಕೊಂಡು ಬಂದಿರ್ಲಿಲ್ವಾ? ತುಂಬಾ ಅಪರೂಪದ ಹೆಸರು. ನೋಡೋಕ್ಕೂ ಚೆನ್ನಾಗಿದ್ದಾರೆ ಅಂತ ನಾವೆಲ್ಲ ಮಾತಾಡ್ಕೊಂಡಿರ್ಲಿಲ್ವಾ?'' ಎನ್ನುತ್ತಿದ್ದಂತೆ ವಾಸಂತಿ ತತ್‌ಕ್ಷಣ,

''ಯೆಸ್, ಅವಳೇ'' ಎಂದರು.

''ಇವತ್ತು ಅಪಾಯಿಂಟ್ಮೆಂಟ್ ಇತ್ತಾ ಅವರದು?''

''ತಾಳಿ, ಓಪಿಡಿ ಲಿಸ್ಟ್ ನೋಡ್ತೀನಿ. ಹೌದು, ಕೊನೆಯ ಅಪಾಯಿಂಟ್ಮೆಂಟ್ ಅವರದೇ.''

ನರ್ಸ್‌ಗಳು ಮಾತನಾಡಿಕೊಳ್ಳುತ್ತಿದ್ದಂತೆ ವಾಸಂತಿ ಆತುರದಿಂದ,

''ಡಾಕ್ಟರ್ ಅವಳ ಕಡೆ ಸಂಬಂಧಿಕರಾ?'' ಎಂದು ಪ್ರಶ್ನಿಸಿದರು.

''ಅವರು ಫಸ್ಟ್ ಟೈಂ ಬಂದಾಗ ಹಾಗೆ ಹೇಳಿದ್ರು.''

''ಯಾಕೆ ಬಂದಿದ್ಲು ಅವಳು?''

''ಏನೋ ಗೊತ್ತಿಲ್ಲ ಮೇಡಂ. ನೀವು ಡಾಕ್ಟರ್‌ನೇ ಕೇಳಬೇಕು.''

''ಡಾಕ್ಟರ್ ಎಷ್ಟು ಹೊತ್ತಿನವರೆಗೆ ಇಲ್ಲಿರ್ತಾರೆ?''

''ಈಗ ರೌಂಡ್ಸ್ ಮುಗಿಸಿ ಮನೆಗೆ ಹೋಗ್ತಾರೆ. ಆಮೇಲೆ ಸಂಜೆ ಆರು ಗಂಟೆಗೆ ಬರ್ತಾರೆ.''

''ಈಗ ನಾನು ಅವರನ್ನು ನೋಡಬಹುದಾ?''

''ಅವರ ಲಂಚ್ ಟೈಂ ಮೇಡಂ. ಎಮರ್ಜೆನ್ಸಿ ಕೇಸ್ ಇದ್ರೆ ಮಾತ್ರ ನೋಡ್ತಾರೆ.''

''ಪೇಷೆಂಟ್ ಆಗಿ ಅಲ್ಲ, ಪರ್ಸನಲ್ಲಾಗಿ ಮಾತಾಡ್ಬೇಕಿತ್ತು.''

ವಾಸಂತಿ ಹೇಳುತ್ತಿದ್ದಂತೆ ಡಾ. ಭಕ್ತವತ್ಸಲಂ ವಾರ್ಡಿನ ಆವರಣದಿಂದ ಬರುವುದು ಕಾಣಿಸಿತು.

ತಾವೇ ಮುಂದೆ ಹೋಗಿ ವಾಸಂತಿ,

''ಹಲೋ ಸರ್, ನಮಸ್ಕಾರ. ನಾನ್ಯಾರೂಂತ ಗೊತ್ತಾಗಲಿಲ್ಲ ಅನ್ಸುತ್ತೆ. ಐ ಆ್ಯಮ್ ವಾಸಂತಿ ಮೂರ್ತಿ. ನಮ್ಮ ದಕ್ಷಿಣಾಮೂರ್ತಿ ವಿದ್ಯಾಸಂಸ್ಥೆಯ ಪ್ರಿನ್ಸಿಪಾಲ್ ಹಾಗೂ ಛೇರಮನ್ ಆಗಿದ್ದೀನಿ. ಎರಡು ವರ್ಷಗಳ ಹಿಂದೆ ತಾವು ಚೀಫ್ ಗೆಸ್ಟ್ ಆಗಿ ನಮ್ಮ ಸ್ಕೂಲಿಗೆ ಆಗಮಿಸಿದ್ರಿ'' ಎಂದಾಗ ಡಾ. ಭಕ್ತವತ್ಸಲಂ ಗುರುತು ಹಿಡಿದು ಕೈಮುಗಿದರು.

''ನಮಸ್ಕಾರಾಮ್ಮ, ಗೊತ್ತಾಯಿತು.''

''ನಿಮ್ಮ ಹತ್ರ ಮುಖ್ಯವಾದ ವಿಷ್ಯ ಮಾತಾಡ್ಬೇಕಿತ್ತು. ಜಾಸ್ತಿ ಹೊತ್ತು ತೊಗೋಳಲ್ಲ.''

ಭಕ್ತವತ್ಸಲಂ ಅನುಮಾನಿಸಿದರು. ಆದರೆ, ವಾಸಂತಿಯವರ ಒತ್ತಡಕ್ಕೆ ಅವರು ಮಣಿದು,

''ಬನ್ನಿ'' ಎಂದು ಚೇಂಬರ್‌ಗೆ ಕರೆದೊಯ್ದರು.

ವಾಸಂತಿ ಅವರ ಮುಂದೆ ಕುಳಿತರು.

''ಈಗ್ತಾನೇ ಪ್ರಾಂಜಲಿ ನಿಮ್ಮ ಹತ್ರ ಬಂದಿದ್ಲಲ್ಲ, ನಾನು ಅವಳ ಮದರ್–ಇನ್–ಲಾ. ಆಲೋಕ್ ನನ್ನ ಮಗ.''

''ಐ ಸೀ. ಏನು ವಿಷಯ ಹೇಳಿ.''

ವಾಸಂತಿ ನವುರಾಗಿ ಕೆಮ್ಮಿ, ಸಾವರಿಸಿಕೊಂಡು,

''ಪ್ರಾಂಜಲಿ ನಿಮ್ಮ ಸಂಬಂಧಿಕಳು ಅಂತ ಕೇಳ್ದೆ'' ಎಂದು ಪೀಠಿಕೆ ಹಾಕಿದಾಗ ಡಾ. ಭಕ್ತವತ್ಸಲಂ ಕಣ್ಣು ಕಿರಿದು ಮಾಡಿದರು.

''ಅವಳ ತಂದೆ, ನಾನು ತುಂಬಾ ದೂರದ ಕಸಿನ್ಸ್. ಇನ್‌ಫ್ಯಾಕ್ಟ್ ನಾವು ಸಂಬಂಧಿಕರಿಗಿಂತ ಕ್ಲೋಸ್ ಫ್ರೆಂಡ್ಸ್ ಥರ ಇದ್ವಿ.''

''ಅವಳೇಕೆ ನಿಮ್ಮನ್ನು ಭೇಟಿ ಮಾಡೋಕೆ ಇಲ್ಲಿಗೆ ಬಂದಿದ್ಲು?'' ವಾಸಂತಿ ನೇರವಾಗಿ ಪ್ರಶ್ನಿಸಿದಾಗ ಭಕ್ತವತ್ಸಲಂ ಅವರನ್ನೇ ದೀರ್ಘವಾಗಿ ನೋಡಿದರು.

''ನೀವೇನು ಕೇಳೋಕೆ ಹೊರಟಿದ್ದೀರಾ, ನನಗರ್ಥ ಆಗ್ಲಿಲ್ಲ.''

''ಪ್ರಾಂಜಲಿ ನನ್ನ ಸೊಸೆ. ಆದ್ರೆ ನಮಗೆ ಗೊತ್ತಿಲ್ದೇ ಅವಳು ನಿಮ್ಮನ್ನು ಮೀಟ್ ಮಾಡಿ ಬಂದಿದ್ದಾಳೆ ಅಂತ ಆಶ್ಚರ್ಯ ಆಯಿತು. ನೀವು ಒಬ್ಬ ನ್ಯೂರಾಲಜಿಸ್ಟ್. ಅವಳ್ಗೆ ನಿಮ್ಮ ಹತ್ರ ಏನು ಅಪಾಯಿಂಟ್ಮೆಂಟ್ ಇತ್ತು ಅಂತ ತಿಳ್ಕೋಬಹುದೇ?''

‘‘ಸಾರಿ, ಇದೆಲ್ಲ ಕಾನ್ಫಿಡೆನ್ಷಿಯಲ್. ನಿಮ್ಮ ಹತ್ರ ಹೇಳೋಕ್ಕಾಗಲ್ಲ’’ ಅವರು ಅಷ್ಟೇ ನೇರವಾಗಿ ಕೊಟ್ಟಿದ್ದು ವಾಸಂತಿಗೆ ಕಸಿವಿಸಿಯಾಯಿತು.

‘‘ನಾನು ಹೊರಗಿನವಳಲ್ಲ. ನನ್ನ ಸೊಸೆ ಬಗ್ಗೆ ತಿಳ್ಕೊಳ್ಳೋ ಅಧಿಕಾರ ನನಗಿದೆ ಅಲ್ಲವೇ?’’

ಭಕ್ತವತ್ಸಲಂ ತಮ್ಮ ಕನ್ನಡಕ ತೆಗೆದು ಒರೆಸಿಕೊಳ್ಳುತ್ತ,

‘‘ನೀವು ಯಾರೇ ಆಗಿರ್ಲಿ. ನನ್ನನ್ನು ನಂಬ್ಕೊಂಡು ಕನ್ಸಲ್ಟೇಶನ್‌ಗೆ ಬಂದ್ಮೇಲೆ ನಾನು ಅವರ ವಿಷಯ ಗುಟ್ಟಾಗಿಡಬೇಕಾಗುತ್ತದೆ. ಅದು ನಮ್ಮ ಪ್ರೊಫೆಶನಲ್ ಎಥಿಕ್ಸ್. ಮೇಲಾಗಿ ಪ್ರಾಂಜಲಿ ಮೆಜಾರಿಟಿ ದಾಟಿರುವವಳು. ಅವಳ ವಿಷ್ಯ ಬೇರೊಬ್ಬರ ಹತ್ರ ಚರ್ಚೆ ಮಾಡಬಾರದು ಅಂತ ರಿಕ್ವೆಸ್ಟ್ ಮಾಡ್ಕೊಂಡಿದ್ದಾಳೆ’’ ಎಂದಾಗ ವಾಸಂತಿಗೆ ಅವಮಾನವೆನಿಸಿತು.

‘‘ನಾನು ಬೇರೆಯವಳು ಅಂತ ಕನ್ಸಿಡರ್ ಮಾಡ್ತಿದ್ದೀರಲ್ಲ ಡಾಕ್ಟರ್. ಇದು ನಮ್ಮ ಕುಟುಂಬಕ್ಕೆ ಸಂಬಂಧಪಟ್ಟ ವಿಷ್ಯ. ನೀವು ನನ್ನ ಹತ್ರ ಹೇಳಬಹುದು. ನೀವು ಹೇಳಿದ್ದೀರಿ ಅಂತ ನಾನು ಅವಳ ಮುಂದೆ ಬಿಟ್ಟುಕೊಡೋದಿಲ್ಲ.’’

ಡಾ. ಭಕ್ತವತ್ಸಲಂ ಮೆಲ್ಲಗೆ ನಕ್ಕರು. ಆ ನಗು ತಮ್ಮನ್ನು ನವುರಾಗಿ ಅವಹೇಳನ ಮಾಡಿದಂತಿದೆ ಎಂದು ವಾಸಂತಿಗೆ ಭಾಸವಾಯಿತು.

‘‘ನಿಮ್ಮ ಫ್ಯಾಮಿಲಿ ವಿಷ್ಯ ನೀವು ನಿಮ್ಮ ಸೊಸೆಯನ್ನೇ ಕೇಳಿ. ನನ್ನತನಕ ಬರುವ ಅಗತ್ಯವಿರಲಿಲ್ಲ’’ ಎಂದು ಅವರು ಎದ್ದು ನಿಂತಾಗ ಅವರು ಪರೋಕ್ಷವಾಗಿ ಮಾತು ಮುಗಿಸುತ್ತಿದ್ದಾರೆಂದು ವಾಸಂತಿಗೆ ಅರಿವಾಯಿತು.

‘‘ಒಂದೇ ಒಂದು ಪ್ರಶ್ನೆ. ಪ್ರಾಂಜಲಿ ನಿಮ್ಮ ಸ್ನೇಹಿತರ ಮಗಳಾಗಿ ನಿಮ್ಮ ಹತ್ರ ಬಂದಿದ್ಲೋ ಅಥವಾ ನನ್ನ ಸೊಸೆಯಾಗಿ ಬಂದಿದ್ಲೋ! ಅವಳು ಪೇಷೆಂಟಾಗಿ ಬಂದಿರೋಕೆ ಖಂಡಿತ ಸಾಧ್ಯವಿಲ್ಲ.’’

ಡಾಕ್ಟರ್ ಅವರಿಗೆ ಕೈ ಮುಗಿದು,

‘‘ತಾವಿನ್ನು ಹೊರಡಬಹುದು ಮೇಡಂ. ನನಗೆ ಲೇಟಾಯಿತು’’ ಎಂದು ಬಾಗಿಲು ತೆರೆದಾಗ ಅವಮಾನ, ಕೋಪದಿಂದ ವಾಸಂತಿ ಹೊರಗೆ ನಡೆದರು.

ಡಾ. ಭಕ್ತವತ್ಸಲಂ ಹೊರಟ ಮೇಲೆಯೂ ವಾಸಂತಿ ಹಾಗೇ ನಿಂತಿರುವುದನ್ನು ಕಂಡು ನರ್ಸ್ ಕೇಳಿದಳು,

‘‘ಡಾಕ್ಟರ್ ಜೊತೆ ಮಾತಾಡಿದ್ರಾ?’’

ಮುಳುಗುತ್ತಿರುವವನಿಗೆ ಹುಲ್ಲುಕಡ್ಡಿಯೇ ಆಧಾರ ಎನ್ನುವಂತೆ ನರ್ಸ್ ಕೇಳಿದ ಪ್ರಶ್ನೆ ವಾಸಂತಿಯವರಲ್ಲಿ ಆಶಾಭಾವನೆ ಮೂಡಿಸಿತು.

‘‘ಸಿಸ್ಟರ್, ಡಾಕ್ಟರ್ ಚೇಂಬರ್‌ನಲ್ಲಿ ಪೇಷೆಂಟ್ ಜೊತೆ ನೀವು ನರ್ಸ್ ಯಾರಾದ್ರೂ ಒಳಗೆ ಇರ್ತೀರ ಅಲ್ವಾ?’’

‘‘ಹೌದು, ಬೇರೆ ಅಟೆಂಡೆಂಟ್ ಇಲ್ಲದಿದ್ರೆ ಇರ್ತೀವಿ.’’

‘‘ಇವತ್ತು ಪ್ರಾಂಜಲಿ ಒಳಗಡೆ ಹೋದಾಗ ಯಾರಿದ್ರು ಅವಳ ಜೊತೆ?’’

‘‘ಅವರು ಪ್ರೈವೇಟಾಗಿ ಡಾಕ್ಟರ್ ಜೊತೆ ಮಾತಾಡ್ಬೇಕೂಂತ ಹೇಳಿದ್ರು. ಅವರೊಬ್ರೇ ಹೋಗಿದ್ರು.’’

ಅಷ್ಟರಲ್ಲಿ ಮತ್ತೊಬ್ಬ ನರ್ಸ್ ಅವಳನ್ನುದ್ದೇಶಿಸಿ,

‘‘ವಾಣಿ, ವಾರ್ಡ್ಸ್‌ನಲ್ಲಿ ಕೆಲ್ಸ ಇದೆ, ಬಾ’’ ಎಂದು ಕರೆದಳು.

ಅವಳು ತನ್ನೊಡನೆ ಮಾತನಾಡಿದ್ದಕ್ಕೆ ಎಚ್ಚರಿಕೆ ನೀಡುತ್ತಿದ್ದಾಳೆಂದು ಅರ್ಥಮಾಡಿಕೊಳ್ಳದಷ್ಟು ಅಮಾಯಕರಲ್ಲ ವಾಸಂತಿ.

ಬಂದ ದಾರಿಗೆ ಸುಂಕವಿಲ್ಲವೆನ್ನುವಂತೆ ಕಾರಿನತ್ತ ನಡೆದರು. ಆದರೆ, ಅವರ ಮನಸ್ಸಿಗೆ ಸಮಾಧಾನವಿರಲಿಲ್ಲ.

ಪ್ರಾಂಜಲಿ ತಮ್ಮಿಂದ ಗುಟ್ಟು ಮಾಡಿ ಏನೋ ಹುನ್ನಾರ ನಡೆಸುತ್ತಿದ್ದಾಳೆ ಎಂದು ಅವರ ಮನಸ್ಸು ಹೊಗೆಯಾಡುತ್ತಿತ್ತು.

★ ★ ★

ಆಗತಾನೇ ಊಟ ಮುಗಿಸಿ ತಟ್ಟೆಗಳನ್ನು ಸಿಂಕಿಗೆ ಹಾಕುತ್ತಿದ್ದಳು ಪ್ರಾಂಜಲಿ. ಕರೆಘಂಟೆ ಸದ್ದು ಮಾಡಿದಾಗ ಅವಳು ಗೊಂದಲದಿಂದಲೇ ಪೀಪ್ ಹೋಲ್‌ನಲ್ಲಿ ಇಣುಕಿದಳು.

(ಮುಂದುವರಿಯುವುದು)

ಶಬ್ದಶಿಲ್ಪ

▯ ಪ್ರಹ್ಲಾದ್

ಎಡದಿಂದ ಬಲಕ್ಕೆ

1. ರೋಹಿಣಿಯ ಭೇಟಿಗಾಗಿ ಮೇಲಕ್ಕೇರಿದ ರೀತಿ.. 4
3. ಉತ್ತಮ ವಸ್ತುಗಳಿಗಿಂತ ಎಳ್ಳಿನಷ್ಟು ಸುಂದರಿಯಾದ ಅಪ್ಸರೆ................................ 4
6. ಮಾರಾಮಾರಿ ಜಗಳ ನೋಡಲು ಬಂದ ವಿಷ್ಣುಸತಿ... 2
8. ಮರೆತನೆಂದು ಸುಮ್ಮನಿರದೆ ಚಲಾಯಿಸಬೇಕಾದ ಹಕ್ಕು 2
9. ಪದರದ ತುಂಬಾ ತುಂಬಿಕೊಂಡ ಹಾಡು.. 2
11. ಮಣಿಸರ ಧರಿಸಿ ಬಂದ ಹೆಂಗಸು 3
12. ಬಡಿಗೆಯಿಂದ ಹೊಡೆದ ರೀತಿ ಇದೇ.. 2
13. ನಮನ ಮಾಡಿದ ಚಿತ್ತ... 2
14. ಉಡುಪಿ ಕೃಷ್ಣನನ್ನು ಒಲಿಸಿಕೊಂಡ ದಾಸರು.. 3
16. ಮಗ ವಿದ್ಯೆ ಕಲಿಯಲೊಂದು ಗುಹೆ 2
18. ಹರಣಕ್ಕೆ ಕಾರಣವಾದ ದುಡ್ಡು 2
19. ಅರಸ ವಿನಯ ತೋರಿದ್ದೇ ಸಿಹಿ 2
21. ದೇಗುಲದಲ್ಲಿ ಹಂಚಿದ ಬಾಳೇಹಣ್ಣಿನ ಸಿಹಿಖಾದ್ಯ.. 4
22. ಗ್ರಂಥಭಾಗದ ಅಧ್ಯಾಯದಲ್ಲಿನ ಹಗರಣ... 4

ಮೇಲಿನಿಂದ ಕೆಳಕ್ಕೆ

1. ಮೋಹವನ್ನು ಇರಿಸಿಕೊಂಡು ಮನದಲ್ಲಿ ಬೆಳಗಿದ ಜ್ಯೋತಿ................................ 4
2. ಗುರುತಿನವರ ಹಡಗು ಭಾರವೇ ಇಲ್ಲ.. 3
4. ಹಿತವಾದ ಲೋಹವನ್ನು ಹೊಂದಿದವನ ರಕ್ತವರ್ಣ... 3
5. ಮೃದುವಾಗಿ ವರ್ತಿಸಿದವನ ಮಂದಹಾಸ 4
7. ಮಾಯಗಾರನಂತೆ ಬಂದ ಮನ್ಮಥ 2
8. ಸರದಲ್ಲಿ ಪೋಣಿಸಿಕೊಂಡ ಹವಳ 2
10. ಆದರ್ಶ ಹೊಂದಿ ದೇವರು ನೀಡಿದ ಕಾಣ್ಕೆ 3
12. ಉತ್ತರದಿಕ್ಕಿನ ನೀಲಗಿರಿ ಬೆಟ್ಟದಲ್ಲಿನ ಜನ ಹಾಗೂ ಭಾಷೆ.................................. 3
13. ಸಿಹಿಯಾದ ಹಸ್ತವನ್ನು ಹೊಂದಿದ ಭ್ರಮರ.. 4
14. ಕಲ್ಯಾಣ ನಡೆದ ಸ್ಥಳದಲ್ಲಿನ ಕ್ರೀಡಾಂಗಣ... 2
15. ರಸವನ್ನು ಮಾಡಲು ಉಪಯೋಗಕ್ಕೆ ಬರುವ ತ್ಯಾಜ್ಯ 2
17. ‘ಪದ್ಮ’ ಪ್ರಶಸ್ತಿಯಿಂದ ಅಲಂಕಾರಗೊಂಡ ಆಭರಣ 4
18. ಮೊಹರೆ ಹಾಕಿದವನ ಯೌವನ 3
20. ಪರಮಹಂಸರ ಶಿಷ್ಯನ ವಿವೇಚನೆ 3



(ಉತ್ತರ: ಮುಂದಿನ ವಾರ)

ಕಳೆದ ವಾರದ ಶಬ್ದಶಿಲ್ಪದ ಉತ್ತರಗಳು

ಎಡದಿಂದ ಬಲಕ್ಕೆ : 1. ಸಾಮರಸ್ಯ 3. ಸಮಾಗಮ 6. ಸವಿ 8. ಭವ 9. ತವ 11. ಧನಿಯ 12. ಹಳಿ 13. ಅಂತ 14. ದನುಜ 16. ತಪ 18. ದಾನ 19. ನಗ 21. ಕಪ್ಪುಬಣ್ಣ 22. ಪ್ರತಿಕಾರ.

ಮೇಲಿನಿಂದ ಕೆಳಕ್ಕೆ: 1. ಸಾಲಂಕೃತ 2. ರಕ್ಕಸ 4. ಮಾದೇವ 5. ಮರೆಗುಳಿ 7. ವಿಧ 8. ಭಯ 10. ವಸಂತ 12. ಹರಿತ 13. ಅಂಗಾರಕ 14. ದನ 15. ಜನ 17. ಪರಾಶರ 18. ದಾಳಿಂಬ 20. ಗಣತಿ.

❑ದಿಯಾ

ಭಾರತೀಯ ಚಿತ್ರಸಂಗೀತದ ಆಕಾಶದಲ್ಲಿ ಧ್ರುವತಾರೆಯಂತೆ ಮೊಳಗಿದ ಕಂಠ ಆಶಾ ಭೋಂಸ್ಲೆ ಅವರದ್ದು. ಶ್ರುತಿಬದ್ಧ ಶಾಸ್ತ್ರೀಯ ಗಾಯನದಿಂದ ಹಿಡಿದು ಪಾಪ್ ಗೀತೆಗಳವರೆಗೆ, ವಿರಹದ ನೋವಿನ ಗಝಲ್‌ಗಳಿಂದ ಹಿಡಿದು ಭಕ್ತಿಯ ಪರಾಕಾಷ್ಠೆಯವರೆಗೆ ಆಶಾ ಸ್ವರ ಸಂಚಾರ ಅಪ್ರತಿಮ. 93ರ ವಯಸ್ಸಿನಲ್ಲಿ ಇಹಲೋಕ ತ್ಯಜಿಸಿದ ಈ ಗಾಯನಗಂಗೆಯ ಚೈತನ್ಯದಾಯಿ ಪಯಣವೇ ಒಂದು ಅದ್ಭುತ ಮಹಾಕಾವ್ಯ!

ಸಂಗೀತ ಧ್ರುವತಾರೆ ಸೋದರಿ ಲತಾಮಂಗೇಶ್ಕರ್ ಜೊತೆ ಆಶಾ.

ಸ್ವರಲೋಕದ ಧ್ರುವತಾರೆ

ಆಶಾ ಭೋಂಸ್ಲೆ

ಸಂಗೀತ ಜಗತ್ತೆಂಬ ನಭೋಮಂಡಲದಲ್ಲಿ ಎಂಟು ದಶಕಗಳಿಂದ ಅಚ್ಚಳಿಯದ ಧ್ರುವತಾರೆಯಾಗಿ ಮಿನುಗಿದ ಮಧುರ ಕಂಠಸಿರಿಯ ಆಶಾಭೋಂಸ್ಲೆ ಈಗ ಸ್ವರಸಾಮ್ರಾಜ್ಯದಲ್ಲಿ ಲೀನರಾಗಿದ್ದಾರೆ. ಲೌಕಿಕ ಜಗತ್ತಿನ ಕಠಿಣ ಸವಾಲುಗಳನ್ನು ದೈವದತ್ತ ಸ್ವರದ ತ್ರಾಣದಿಂದಲೇ ಗೆದ್ದು ನೋವಿನ ನಡುವೆಯೂ ನಾದದ ಅಮೃತವನ್ನೇ ಉಣಬಡಿಸಿದ್ದ ಸ್ವರ ಸಾಮ್ರಾಜ್ಞಿಯ ನಿರ್ಗಮನ ಸಂಗೀತ ಲೋಕದ ಸುವರ್ಣಯುಗದ ಅಂತ್ಯವನ್ನು ಸಾರಿದೆ.

ಇದೇ ಏ. 12ರಂದು ಅವರು ತಮ್ಮ ಗಾನಾಭಿಯಾನವನ್ನು ಸಮಾಪನಗೊಳಿಸಿದ್ದಾರೆ. ಆದರೆ ಅಭಿಮಾನಿಗಳ ಹೃದಯದಿಂದ ಅವರು ಸುಲಭದಲ್ಲಿ ಮರೆಯಾಗಲಾರರು!

ಬಾಲ್ಯದ ಸ್ವರಸಂಚಾರ

1933ರಲ್ಲಿ ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಜನಿಸಿದ ಆಶಾ, ತಂದೆ ಪಂಡಿತ್ ದೀನನಾಥ್ ಮಂಗೇಶ್ಕರ್ ಗರಡಿಯಲ್ಲಿ ಶಿಸ್ತಿನ ಸ್ವರಾಭ್ಯಾಸ ಕಲಿತರು. ತಂದೆಯ ಅಕಾಲಿಕ ನಿಧನ ಒಂಬತ್ತರ ಹರೆಯದ ಬಾಲಕಿಯ ಮೇಲೆ ಸಂಸಾರದ ನೊಗವನ್ನೇ ಹೊರಿಸಿತು. ಅಕ್ಕ ಲತಾ ಮಂಗೇಶ್ಕರ್ ಜೊತೆಗೂಡಿ ಚಿತ್ರರಂಗದ ಕದ ತಟ್ಟಿದ ಆಶಾ, 1948ರಲ್ಲಿ 'ಚುನ್ ಅರಿಯಾ' ಚಿತ್ರದ ಮೂಲಕ ಹಿನ್ನೆಲೆ ಗಾಯಕಿಯಾಗಿ ಚಿತ್ರಸಂಗೀತ ಲೋಕಕ್ಕೆ ಪದಾರ್ಪಣ ಮಾಡಿದರು.

ಅಕ್ಕ ಲತಾ ಮಂಗೇಶ್ಕರ್ ಶಾಸ್ತ್ರೀಯ ಹಾಗೂ ಗಂಭೀರ ಹಾಡುಗಳ ಅವಕಾಶಗಳನ್ನು ಪಡೆದುಕೊಳ್ಳುತ್ತಿದ್ದರು. ಅವರು ನಿರಾಕರಿಸಿದ ಸಣ್ಣಪುಟ್ಟ ಅವಕಾಶವಷ್ಟೇ ತಂಗಿಗೆ ಸಿಗುತ್ತಿತ್ತು. 'ಅಕ್ಕ ಹಾಡಲು ಸಾಧ್ಯವಿಲ್ಲದ್ದನ್ನು ನಾನು ಹಾಡಿ ತೋರಿಸಬೇಕು' ಎಂಬ ಹಠ ತೊಟ್ಟ ತಂಗಿ ಪಾಶ್ಚಾತ್ಯ ಶೈಲಿಯ ಪಾಪ್, ಕ್ಯಾಬರೆ, ಜಾಝ್ ಸಂಗೀತಕ್ಕೆ ತಮ್ಮ ದನಿಯನ್ನು ಒಗ್ಗಿಸಿಕೊಂಡರು. ಇದು ಅವರನ್ನು ಭಾರತದ ಮೊದಲ 'ವರ್ಸಟೈಲ್ ಗಾಯಕಿ'ಯನ್ನಾಗಿ ಮಾಡಿತು.

ಸಂಗೀತ ನಿರ್ದೇಶಕ ಓ.ಪಿ. ನಯ್ಯರ್ ಅವರ ಗೀತೆಗಳು ಆಶಾ ಅವರ ದನಿಗೆ ವಿಭಿನ್ನ ಆಯಾಮ ನೀಡಿದವು. ಸಂಪ್ರದಾಯಬದ್ಧ ಹಾಡುಗಳಿಗೆ ಮಾದಕತೆ ಹಾಗೂ ಲವಲವಿಕೆ ತುಂಬಿದವು. ಆರ್. ಡಿ. ಬರ್ಮನ್ (ಪಂಚಮ್) ಅವರ

ಪ್ರಯೋಗಾತ್ಮಕ ಸಂಗೀತ ಸಂಯೋಜನೆಗೆ ಆಶಾ ಅವರ ಧ್ವನಿ ಜೀವ ತುಂಬಿತು. ಸಂಗೀತಾಭಿಮಾನಿಗಳ ಈ ಜೋಡಿಯ ನಡುವಿನ ಆತ್ಮೀಯತೆ ವಿವಾಹದಲ್ಲಿ ಸುಖಾಂತ್ಯ ಕಂಡಿತು.

ಸಂಗೀತ ನಿರ್ದೇಶಕ ಖಯ್ಯಾಮ್ ಅವರ ಮಾರ್ಗದರ್ಶನದಲ್ಲಿ ಆಶಾ ಹಾಡಿದ 'ದಿಲ್ ಚೀಜ್ ಕ್ಯಾ ಹೈ' ಹಾಗೂ 'ಇನ್ ಆಂಖೋ ಕಿ ಮಸ್ತಿ' ಗಜ಼ಲ್‌ಗಳು ಅವರಿಗೆ ರಾಷ್ಟ್ರಪ್ರಶಸ್ತಿ ತಂದುಕೊಟ್ಟವು. ಅವರ ಧ್ವನಿಯ ಗಾಂಭೀರ್ಯ ಜಗತ್ತಿಗೆ ಪರಿಚಿತವಾಯಿತು. ಖ್ಯಾತ ಗಾಯಕ ಮೊಹಮ್ಮದ್ ರಫಿಯವರ ಜೊತೆ ನೂರಾರು ಯುಗಳ ಗೀತೆಗಳನ್ನು ಹಾಡಿದರು. ಖ್ಯಾತ ಸ್ವರ ಸಂಯೋಜಕರಾದ ರವಿ, ಸಚಿನ್ ದೇವ್ ಬರ್ಮನ್, ಇಳಯರಾಜ, ಎ. ಆರ್. ರೆಹಮಾನ್, ಜಯದೇವ್, ಶಂಕರ್ ಜೈಕಿಶನ್, ಅನು ಮಲಿಕ್ ಇವರೊಂದಿಗೆ ಕೆಲಸ ಮಾಡಿದ ಆಶಾ ಎಲ್ಲಾ ಸಂಘರ್ಷಗಳನ್ನು ಮೀರಿ ಬೆಳೆದರು. ಸುಮಾರು 20 ಭಾಷೆಗಳಲ್ಲಿ 12 ಸಾವಿರಕ್ಕೂ ಅಧಿಕ ಗೀತೆಗಳನ್ನು ಹಾಡಿ ಗಿನ್ನೆಸ್ ದಾಖಲೆ ಪುಸ್ತಕದಲ್ಲಿ ತಮ್ಮ ಹೆಸರನ್ನು ಛಾಪಿಸಿಕೊಂಡರು.

ಆಶಾ ಭೋಂಸ್ಲೆ ಪತಿ ಆರ್.ಡಿ. ಬರ್ಮನ್ ಜೊತೆಗಿನ ಸಂಬಂಧವನ್ನು 'ಸುರ್ ಕಾ ನಾತಾ' (ಸ್ವರಗಳ ಬಾಂಧವ್ಯ) ಎಂದೇ ಕರೆಯುತ್ತಿದ್ದರು.

ಆಶಾ ಹಾಡಿದ ಖ್ಯಾತ ಗೀತೆಗಳು

- **'ದಮ್ ಮಾರೋ ದಮ್'** (ಹರೇ ರಾಮ್ ಹರೇ ಕೃಷ್ಣ)
- **'ಚುರಾ ಲಿಯಾ ಹೈ ತುಮ್ನೆ'** (ಯಾದೋಂ ಕಿ ಬಾರಾತ್)
- **'ದಿಲ್ ಚೀಜ್ ಕ್ಯಾ ಹೈ'** (ಉಮ್ರಾವ್ ಜಾನ್)
- **'ಪಿಯಾ ತು ಅಬ್ ತೋ ಆಜಾ'** (ಕಾರವಾನ್)
- **'ಓ ಮೇರೆ ಸೋನಾ ರೇ'** (ತೀಸ್ರೀ ಮಂಜಿಲ್)
- **'ಬೆಳ್ಳನೆ ಬೆಳಗಾಯಿತು'** (ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ)
- **'ಅಮ್ಮಾ ನಿನ್ನ ಎದೆಯಾಳದಲ್ಲಿ'** (ಮೌನಗೀತೆ)
- **'ಯೌವನ ಅಂದದ ಚಂದದ'** (ಬಜರಂಗಿ)
- **'ಶೆನ್ಬಗಮೇ'** (ಎಂಗ ಊರು ಪಾಟ್ಟುಗಾರನ್)

324 ಯಶಸ್ವಿ ಹಾಡುಗಳನ್ನು ನೀಡಿತ್ತು ಓ.ಪಿ. ನಯ್ಯರ್ ಹಾಗೂ ಆಶಾ ಜೋಡಿ.

ಖ್ಯಾತ ಹಿನ್ನೆಲೆ ಗಾಯಕ ಮೊಹಮ್ಮದ್ ರಫಿ ಮತ್ತು ಆಶಾ.

ಗಾನವಿಶಾರದೆಯ ವೃತ್ತಿಪರ ಶ್ರದ್ಧೆ

ಆಶಾ ದಿನಕ್ಕೆ 12ರಿಂದ 15 ಗಂಟೆ ಕಾಲ ಸ್ಟುಡಿಯೋದಲ್ಲಿರುತ್ತಿದ್ದರು. ಒಂದೇ ದಿನದಲ್ಲಿ ವಿವಿಧ ಭಾಷೆಗಳ 5-6 ಹಾಡುಗಳನ್ನು ರೆಕಾರ್ಡ್ ಮಾಡುತ್ತಿದ್ದರು. ಕನ್ನಡದ 'ಬೆಳ್ಳನೆ ಬೆಳಗಾಯಿತು' ಹಾಡನ್ನು ಹಾಡುವಾಗ ಪ್ರತಿಯೊಂದು ಪದದ ಅರ್ಥ ಹಾಗೂ ಉಚ್ಚಾರಣೆಯನ್ನು ಹತ್ತಾರು ಬಾರಿ ಕೇಳಿ ಬರೆದುಕೊಂಡಿದ್ದರಂತೆ. ಪರಭಾಷೆಯ ಗಾಯಕಿಯಾದರೂ ಕನ್ನಡಿಗರಿಗೆ ಅದು ಪರಕೀಯ ಎನಿಸದಂತೆ ಹಾಡಿದ್ದು ಅವರ ವೃತ್ತಿಪರತೆಗೆ ಸಾಕ್ಷಿ.

★ ★ ★

ತಮ್ಮ 80ರ ಹರೆಯದಲ್ಲೂ ಆಶಾ ರೆಕಾರ್ಡಿಂಗ್ ಸ್ಟುಡಿಯೋಗೆ ಹೋದರೆ ಹೊಸಬರಂತೆ ಶ್ರದ್ಧೆಯಿಂದ ನಡೆದುಕೊಳ್ಳುತ್ತಿದ್ದರು. ಮೈಕ್ ಮುಂದೆ ನಿಲ್ಲುವ ಮೊದಲು ತಮ್ಮ ಗುರುಗಳಿಗೂ, ಸರಸ್ವತಿ ದೇವಿಗೂ ವಂದಿಸುವುದು ಅವರ ಪದ್ಧತಿ. 'ಇನ್ನೊಂದು ಟೇಕ್ ಬೇಕು' ಎಂದರೆ ಕಿಂಚಿತ್ತೂ ಬೇಸರಿಸದೆ ಹತ್ತು ಬಾರಿಯೂ ಮೊದಲ ಬಾರಿಯಷ್ಟೇ ಉತ್ಸಾಹದಿಂದ ಹಾಡುತ್ತಿದ್ದರು. ಅಂದಿನ ಲೈವ್ ರೆಕಾರ್ಡಿಂಗ್ ಕಾಲದಿಂದ ಇಂದಿನ ಡಿಜಿಟಲ್ ಯುಗದವರೆಗೂ ಅಪ್‌ಡೇಟ್ ಆಗಿದ್ದರು.

★ ★ ★

ಸ್ಟುಡಿಯೋದಲ್ಲಿ ಲತಾ ಮಂಗೇಶ್ಕರ್ ಹಾಗೂ ಆಶಾ ಭೋಂಸ್ಲೆ ಇಬ್ಬರೂ ಇದ್ದಾಗ ವಾತಾವರಣ ರಂಗೇರುತ್ತಿತ್ತು. ಒಮ್ಮೆ ಇಬ್ಬರೂ ಸೇರಿ 'ಮನ್ ಕ್ಯೂಂ ಬೆಹಕಾ' ಹಾಡನ್ನು ಹಾಡಬೇಕಿತ್ತು. ರೆಕಾರ್ಡಿಂಗ್ ಮುಗಿದ ಬಳಿಕ ಲತಾ ಅವರು ಆಶಾ ಅವರ ಬೆನ್ನು ತಟ್ಟಿ 'ಇಂದು ನೀನು ನನಗಿಂತ ಚೆನ್ನಾಗಿ ಹಾಡಿದ್ದೀಯಾ' ಎಂದು ಬೆನ್ನುತಟ್ಟಿದ್ದರು. ಆಗ ಆಶಾ ಕಣ್ಣಲ್ಲಿ ನೀರುಕ್ಕಿತ್ತು. 'ಆ ಪ್ರಶಂಸೆಯೇ ನನಗೆ ಎಲ್ಲಾ ಪ್ರಶಸ್ತಿಗಳಿಂದ ದೊಡ್ಡದು' ಎಂದು ಅವರು ಹೇಳಿಕೊಂಡಿದ್ದರು.

ಸವಾಲುಗಳ ಸುಳಿಯಲ್ಲಿ...

ಅವರ ವೈಯಕ್ತಿಕ ಬದುಕಿನಲ್ಲಿ ಮುಳ್ಳುಗಳಿದ್ದುದೇ ಹೆಚ್ಚು. ತಮ್ಮ 16ನೆಯ ವಯಸ್ಸಿನಲ್ಲಿ ಮನೆಮಂದಿಯ ಇಚ್ಛೆಗೆ ವಿರುದ್ಧವಾಗಿ ವಿವಾಹವಾದವರು ಆಶಾ. ಈ ದಾಂಪತ್ಯ ಅವರಿಗೆ ನೆಮ್ಮದಿ ನೀಡಲಿಲ್ಲ. ಮೂವರು ಮಕ್ಕಳನ್ನು ಕಂಕುಳಲ್ಲಿರಿಸಿಕೊಂಡು ಪತಿಯ ಮನೆಯಿಂದ ಹೊರಬಿದ್ದಾಗ ಮುಂದಿದ್ದದ್ದು ಕೇವಲ ಕಗ್ಗತ್ತಲು! ಆಗ ಅವರಿಗೆ ದಾರಿದೀಪವಾದದ್ದು 'ಸಂಗೀತ' ಮಾತ್ರ. ತಮಗೆ ಸಿಕ್ಕ ಪ್ರತಿಯೊಂದು ಅವಕಾಶವನ್ನೂ ಸವಾಲಾಗಿ ಸ್ವೀಕರಿಸಿದ ಅವರು, ಮಕ್ಕಳನ್ನು ಸಾಕುವ ಛಲದಿಂದ ಮತ್ತೆ ಅವಕಾಶಗಳಿಗಾಗಿ ಅರಸಿದರು.

ಆಶಾ ಅವರ ದನಿಯಲ್ಲಿ ವಿಶಿಷ್ಟವಾದ ಜಾದೂ ಇತ್ತು. ಅದು ಶಾಸ್ತ್ರೀಯ ಸಂಗೀತದ ಶಿಸ್ತು, ಗಜ಼ಲ್‌ಗಳ ಆರ್ದ್ರತೆ, ಪಾಪ್ ಗೀತೆಗಳ ಲವಲವಿಕೆಗಳನ್ನು ಸಮಾನವಾಗಿ ಮೈಗೂಡಿಸಿಕೊಂಡಿತ್ತು. 'ದಾದಾ ಸಾಹೇಬ್ ಫಾಲ್ಕೆ' ಪ್ರಶಸ್ತಿ, 'ಪದ್ಮವಿಭೂಷಣ'ದಂಥ ಉನ್ನತ ಗೌರವಗಳು ಅವರ ಸ್ವರಸೇವೆಗೆ ಸಂದ ಅರ್ಘ್ಯಗಳು.

ಕನ್ನಡದಲ್ಲಿ ಅವರು ಹಾಡಿದ ಹಾಡುಗಳು ಬೆರಳೆಣಿಕೆಯಷ್ಟಿದ್ದರೂ 'ಬೆಳ್ಳನೆ ಬೆಳಗಾಯಿತು' ಇಂದಿಗೂ ಮನೆಮನಗಳಲ್ಲಿ ಅನುರಣಿಸುತ್ತಿದೆ. ಅವರ ಶರೀರ ಇಂದು ಆಕಾಶದಲ್ಲಿ ಲೀನವಾಗಿರಬಹುದು, ಆದರೆ ಅವರ ಕಂಠಶಾರೀರಕ್ಕೆ ಸಾವಿಲ್ಲ, ಅದು ಸದಾ ಸಂಗೀತಾಭಿಮಾನಿಗಳ ಮನದಲ್ಲಿ ಗುನುಗುನಿಸುತ್ತಿರುತ್ತದೆ.

ಸೌಖ್ಯ ಸಂವಾದ

❑ ಡಾ|| ಸಂಧ್ಯಾ ಪೈ

● ***ಪ್ರಶ್ನೆ: ಬಾಲ್ಯದಿಂದಲೇ ಒಂಟಿಯಾಗಿ ಬೆಳೆದೆ. ಯಾರೊಂದಿಗೂ ಹೆಚ್ಚಿನ ಒಡನಾಟ ಇಲ್ಲ. ನನಗೆ ಆತ್ಮೀಯ ಗೆಳತಿಯರೂ ಇಲ್ಲ. ಈಗ ವಿವಾಹ ನಿಶ್ಚಯವಾಗಿದೆ. ಹುಡುಗ ನಿತ್ಯ ಕರೆ ಮಾಡಿ ಮಾತನಾಡುತ್ತಾನೆ. ನನಗೋ ಮಾತನಾಡಲು ವಿಷಯವೇ ಇರುವುದಿಲ್ಲ. ಮದುವೆಯಾದ ಬಳಿಕ ನನ್ನ ಒಂಟಿತನದ ಬಗ್ಗೆ ಆತನಿಗೆ ತಿಳಿದರೆ ಸಮಸ್ಯೆಯಾಗಬಹುದೇ?***

ದಿವ್ಯಾ, ಪುತ್ತೂರು

ಉತ್ತರ: ನಿಮ್ಮ ಭಾವೀ ಪತಿಗೆ, ನಿಮ್ಮ ಕಡಿಮೆ ಮಾತಿನ ಪ್ರವೃತ್ತಿಯಿಂದ ಭಾರೀ ಖುಷಿಯಾಗಬಹುದು! ಒಂಟಿತನ ಬೇರೆ, ಕಡಿಮೆ ಸಂವಹನ ಶಕ್ತಿ ಬೇರೆ! ಕೆಲವರಿಗೆ ವಿಷಯಗಳಿರುತ್ತವೆ, ಆದರೆ ಅದನ್ನು ಮಾತಿಗಿಳಿಸುವುದು ಕಷ್ಟವಾಗುತ್ತದೆ. ಇದೊಂದು ದೊಡ್ಡ ಕೊರತೆ ಅಲ್ಲ! ಮುಂದೆ ನೀವು ಬದಲಾಗಬಹುದು. ಪತಿಯ ಸಹವಾಸದಿಂದ ಮಾತನಾಡಲು, ಸಂಹವನ ಮಾಡಲು ಕಲಿಯಬಹುದು. ವೈವಾಹಿಕ ಜೀವನಕ್ಕೆ ಇದರಿಂದ ಸಮಸ್ಯೆಯಾಗುತ್ತದೆ ಎಂದು ನನಗೆ ಅನ್ನಿಸುವುದಿಲ್ಲ!

● ***ಪ್ರಶ್ನೆ: ನಾನು ಹೆಚ್ಚಿನ ಸಮಯವನ್ನು ನನ್ನ ಗೆಳೆಯರೊಂದಿಗೆ ಕಳೆಯುತ್ತೇನೆ. ಅವರೆಲ್ಲರೂ ನನ್ನನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ. ಮದುವೆಯ ಬಳಿಕವೂ ಈ ಆತ್ಮೀಯತೆ ಉಳಿಯಬಹುದೇ? ಪತ್ನಿ ನನ್ನ ಈ ಬಾಂಧವ್ಯದ ಮುಂದುವರಿಕೆಗೆ ಅನುಮತಿ ನೀಡಬಹುದೇ?***

ಶ್ರವಣ್ ಕುಮಾರ್, ಬೆಂಗಳೂರು

ಉತ್ತರ: ತಮಾಷೆಯಾಗಿದೆ ನಿಮ್ಮ ಪ್ರಶ್ನೆ. ನನ್ನ ಪ್ರಶ್ನೆ ಏನೆಂದರೆ ನಿಮಗೆ ಮದುವೆ ಗೊತ್ತಾಗಿದೆಯೇ? ಗೆಳೆತನಕ್ಕೆ ಹಲವು ಮುಖಗಳಿವೆ. ಅದರಲ್ಲಿ ನಿಮ್ಮದು ಯಾವುದು? ಜೀವನದಲ್ಲಿ ಜೀವನ ಸಂಗಾತಿಯ ಸ್ಥಾನ ಬೇರೆ. ಗೆಳೆಯರ ಸ್ಥಾನ ಬೇರೆ. ಪತ್ನಿ 'ಜೀವನ ಸಂಗಾತಿ', 'ಕಷ್ಟ-ಸುಖಗಳ ಭಾಗಿ'. ಮಿತ್ರತ್ವ ಲಕ್ಷ್ಮಣರೇಖೆ ದಾಟಿ ಹೊರಬಂದರೆ ಯಾವ ಪತ್ನಿಯೂ ಒಪ್ಪಲಾರಳು. ಒಂದು ವೇಳೆ ನಿಮಗೆ ಮದುವೆ ನಿಶ್ಚಯ ಆಗಿದೆ ಅಥವಾ ಆಗುತ್ತಿದೆ ಎಂದಾದರೆ ನಿಮ್ಮವರೊಂದಿಗೆ ಮುಚ್ಚುಮರೆ ಇಲ್ಲದೆ ಮಾತನಾಡಿ. ನಿಮ್ಮ 'ಗೊಂದಲ' ನಿವಾರಿಸಿಕೊಳ್ಳಿ.

● ***ಪ್ರಶ್ನೆ: ನನ್ನ ಪಕ್ಕದ ಮನೆಯ ಮಗು ಒಂದನೆಯ ತರಗತಿಯಲ್ಲಿ ಕಲಿಯುತ್ತಿದೆ. ಈಗಲೇ ಟ್ಯೂಷನ್ ಕ್ಲಾಸ್‌ಗೆ ಸೇರಿಸಿದ್ದಾರೆ. ಮನೆಯಲ್ಲಿ ಪಾಠ ಹೇಳುವವರಿಲ್ಲ ಎಂಬುದು ನಿಜವಾದರೂ ಅಷ್ಟು ಸಣ್ಣ ಮಗುವಿಗೆ ಟ್ಯೂಷನ್ ಬೇಕೇ? ಇದೊಂದು ರೀತಿಯಲ್ಲಿ ಕ್ರೌರ್ಯವಲ್ಲವೇ?***

ಶ್ರೀನಿವಾಸ, ಮೈಸೂರು

ಉತ್ತರ: ಇಲ್ಲ, ಇದು ಕ್ರೌರ್ಯವಲ್ಲ. ಬುನಾದಿ ಗಟ್ಟಿಯಾಗಿರದಿದ್ದರೆ ಕಟ್ಟಡದ ಬಲ ಬೇಕಾದಷ್ಟಿರುವುದಿಲ್ಲ. ಅದರಂತೆ ಅವರು ಮಗುವಿನ ಕಲಿಕೆಯ ಬುನಾದಿ ಗಟ್ಟಿ ಮಾಡುತ್ತಿದ್ದಾರೆ. ಇದರಿಂದ ಹೆತ್ತವರ ಜವಾಬ್ದಾರಿ, ಚಿಂತೆ ಎರಡಕ್ಕೂ ಉತ್ತರ ಸಿಕ್ಕುತ್ತದೆ. ಇನ್ನು ಮನೆಯವರು ಕಲಿಕೆಯಲ್ಲಿ ಸಹಾಯ ಮಾಡಲು ಹಲವು ಸಮಸ್ಯೆಗಳಿರಬಹುದು. ಹೊರಗೆ ಕೆಲಸಮಾಡಿ ಬಂದ ತಾಯಿಗೆ ಮನೆಕೆಲಸದ ಜವಾಬ್ದಾರಿಯೂ ಇರುತ್ತದೆ. ಇದರ ಮಧ್ಯೆ ಮಗುವಿಗೂ ಕಲಿಸುವುದು ಅವಳಿಗೆ ಮತ್ತಷ್ಟು ಹೊರೆಯಾಗುತ್ತದೆ. ಇದರಿಂದ ಅವಳ ತಾಳ್ಮೆಯ ಸೀಮೆ ಮೀರಿ, ಮಗುವಿನ ಮೇಲೆ ಹರಿದು, ತಾಯಿ-ಮಗುವಿನ ಸಂಬಂಧದ ಮೇಲೆ ಪರಿಣಾಮ ಬೀರಬಹುದು. ಇನ್ನು ವೃತ್ತಿಪರ ಶಿಕ್ಷಕರ ಕಲಿಸುವಿಕೆಗಿಂತ, ತಾಯಂದಿರ ಕಲಿಸುವಿಕೆ ಭಿನ್ನವಾಗಿರುವುದರಿಂದ, ಇದೂ ಸಮಸ್ಯೆ ಆಗಬಹುದು. ಇದು ನನ್ನ ಅನುಭವ!

● ***ಪ್ರಶ್ನೆ: ನನ್ನ ಮಡದಿಯ ಬಾಯಿಯಲ್ಲಿ ಯಾವ ಗುಟ್ಟೂ ಉಳಿಯುವುದಿಲ್ಲ. ಯಾವುದಾದರೊಂದು ವಿಷಯ ಹಂಚಿಕೊಂಡರೆ ಮರುದಿನವೇ ತವರು ಮನೆಗೆ ಮಾತ್ರವಲ್ಲ, ನೆರೆಮನೆಯವರಿಗೂ ತಿಳಿಸಿರುತ್ತಾಳೆ. ಇದು ಕೆಲವೊಮ್ಮೆ ನನಗೆ ಅತೀವ ಮುಜುಗರ ತರುತ್ತದೆ. ಅವಳನ್ನು ಸರಿಪಡಿಸುವುದು ಹೇಗೆ?***

ಕಾರ್ತಿಕ, ಗದಗ

ಉತ್ತರ: ಶೇ. 90 ಕುಟುಂಬಗಳಲ್ಲಿ ಈ ಸಮಸ್ಯೆ ಇದೆ. ಪರಿಹಾರವೂ ಸುಲಭ. ಯಾವುದು ಸಾರ್ವಜನಿಕವಾಗುವುದು ಬೇಡವೋ ಆ ವಿಷಯಗಳನ್ನು ಅವರಿಗೆ ಹೇಳಲೇಬೇಡಿ. ಮತ್ತು ಇದನ್ನು ಕಾರ್ಯರೂಪಕ್ಕೆ ತರುವ ಮುನ್ನ ಅವರಿಗೆ ಈ ವಿಷಯ ತಿಳಿಸಿ. ಅಂದರೆ "ಪ್ರಿಯೇ, ನಿನ್ನ ಈ ಬಾಯಿ ಬಡುಕತನದಿಂದ ನನಗೆ ಮುಜುಗರ ಆಗುತ್ತದೆ. ನೀನು ಸುಧಾರಿಸುವುದು ಅಸಾಧ್ಯ ಎಂದು ನನಗೆ ಮನವರಿಕೆ ಆಗಿದೆ. ಆದುದರಿಂದ ನಾನೇ ಸುಧಾರಿಸುತ್ತಿದ್ದೇನೆ" ಎಂದು ಹೇಳಿ. ನೀವೇ ಬದಲಾಗಿ. ಗುಡ್‌ಲಕ್.

● ***ಪ್ರಶ್ನೆ: ಮಕ್ಕಳ ಮೇಲಿನ ಪೋಷಕರ ನಿರೀಕ್ಷೆ ಅವರ ಬಾಲ್ಯದ ಸೃಜನಶೀಲತೆಯನ್ನು ಕುಂಠಿತಗೊಳಿಸುತ್ತದೆ ಎಂದು ಹೇಳಲಾಗುತ್ತದೆ. ಇದು ಎಷ್ಟು ನಿಜ? ಮಕ್ಕಳು ತರಗತಿಯಲ್ಲಿ ಮೊದಲ ಸ್ಥಾನ ಬರಲಿ ಎಂದು ಪೋಷಕರು ಆಶಿಸುವುದು ತಪ್ಪೇ?***

ಕಮಲಾ, ಹಾಸನ

ಉತ್ತರ: ಹೌದು, ತಪ್ಪೆ. ನೀವು ಯಾವಾಗಲೂ ಮೊದಲ ಸ್ಥಾನದಲ್ಲೇ ಇರುತ್ತಿದ್ದೀರಾ? ಉತ್ತರ 'ಇಲ್ಲ' ಎಂದಾದರೆ ಮತ್ತೆ ನಿಮ್ಮ ಮಕ್ಕಳಿಂದ ಅದನ್ನು ಬಯಸುವುದು ಸರಿಯೇ? ಉತ್ತರ 'ಹೌದು' ಎಂದಾದರೆ, ಹೇಗೆ ನೀವು ಮೊದಲ ಸ್ಥಾನಿಗರಾಗಿದ್ದೀರಿ? ಅದನ್ನೇ ನಿಮ್ಮ ಮಕ್ಕಳಿಗೆ ಅನ್ವಯಿಸಿ ನೋಡಬಹುದಲ್ಲ? ಸೃಜನಶೀಲತೆ, ಭೂಗರ್ಭದ ಒರತೆಯಂತೆ ಎಷ್ಟು ಒತ್ತಿಡಲು ಬಯಸಿದರೂ ಅದು ಹೊರ ಚಿಮ್ಮುವ ಪ್ರಯತ್ನ ಮಾಡುತ್ತದೆ. ನಿಮ್ಮ ಮಗು ಸೃಜನಶೀಲವಾದರೆ, ಆ ಒರತೆ ಹೊರಹೊಮ್ಮುವ ದಾರಿಯನ್ನು ಸುಗಮ ಮಾಡಿ. ಅದರೊಂದಿಗೆ ಓದೂ ಇರಲಿ. 'ಓದು' ಎಂದರೆ ರ್‍ಯಾಂಕುಗಳಲ್ಲ. ವಿಷಯವನ್ನು ಅರ್ಥಮಾಡಿಸುವ ವ್ಯವಸ್ಥೆ. ಮುಂದಿನ ದಾರಿ ಸುಗಮಗೊಳಿಸುವ ಪ್ರಕ್ರಿಯೆ.

■

ನಿಮ್ಮಲ್ಲೂ ಪ್ರಶ್ನೆಗಳಿವೆಯೇ? (ರಾಜಕೀಯ, ಆರ್ಥಿಕ ಹೊರತುಪಡಿಸಿ) ಇದ್ದರೆ ಕೆಳಗಿನ ವಿಳಾಸಕ್ಕೆ ಪತ್ರ ಬರೆಯಿರಿ ಅಥವಾ ಮೇಲ್ ಮಾಡಿ.

ವಿಳಾಸ: ಸಂಪಾದಕರು
'ಸೌಖ್ಯ ಸಂವಾದ' ವಿಭಾಗ
'ತರಂಗ' ವಾರಪತ್ರಿಕೆ ಮಣಿಪಾಲ-576104
ಮೇಲ್: taranga@manipalpress.com

Published by Dr T. Satish U. Pai For Manipal Media Network Limited from Udayavani Building, Press Corner, Manipal – 576 104
and Printed by Mr. B. Narahari at Manipal Technologies Limited, Old Pharmacy College Building, Manipal – 576 104. Editor: Dr U.B.Rajalakshmi

ಶುದ್ಧ ಜೇನು

ಆರೋಗ್ಯಕರ ಮತ್ತು ರುಚಿಕರ

SIRI®

ವಿಟಮಿನ್ ಬಿ, ಮಿನರಲ್ಸ್ ಹಾಗೂ ಕ್ಯಾಲ್ಸಿಯಂ ಹೇರಳವಾಗಿವುದರಿಂದ ನಮ್ಮ ದೇಹದ ಮೇಲೆ ಧನಾತ್ಮಕವಾದ ಪರಿಣಾಮವನ್ನು ಬೀರುತ್ತದೆ.

ಜೇನುತುಪ್ಪ ಸೇವನೆಯಿಂದ ಕಣ್ಣಿನ ಆರೋಗ್ಯ ವೃದ್ಧಿಗೊಳ್ಳುತ್ತದೆ.

ಚರ್ಮವನ್ನು ಸಂರಕ್ಷಿಸುವುದರ ಜೊತೆಗೆ ಚರ್ಮಕ್ಕೆ ಕಾಂತಿಯನ್ನು ಒದಗಿಸುತ್ತದೆ.

ಗಂಟಲು ನೋವು ಮತ್ತು ಕೆಮ್ಮಿಗೆ ಅತ್ಯುತ್ತಮ ನೈಸರ್ಗಿಕ ಔಷಧಿಯಾಗಿದೆ.

ಜೊತೆಗೆ ಬೊಜ್ಜು ಕರಗಿಸಲು ಕೂಡ ಸಹಾಯವಾಗುತ್ತದೆ.

100% NATURAL PRODUCT

Available at 13+ Locations Across Karnataka

Dharmasthala | Belthangady | Dharwad | Hassan | Rayapura | Puttur | Moodabidri
Parika Udupi | Kumbalagodu | Bangalore | Bejai | Amruthavarshini and More

Our Products

Pickles | Millets & Value Added Products | Nutritional Food | Kokum Squash | Savouries
Agarbatti | Floor Cleaners | Toilet Cleaners | Handwash | Dishwash | Detergent Powder & Liquid
Apparels - Mens Ethnic and formal Wear | Women Ethnic and formal Wear | Kids Wear and Uniforms

SIRI SHRI DHARMASTHALA SIRI GRAMODYOGA SAMSTHE

Toll Free : 18001026711
www.siridharmasthala.com

TARANGA Illustrated Family Kannada Weekly Member ABC and INS/RNI/36661/83REGD. No.UDP/1256/2024-2026. 30-4-2026
Posted at Manipal Post Office on every Thursday

Since 1938 ಮದುವೆ ಹಾಗೂ ಶುಭಸಮಾರಂಭಗಳಿಗೆ ರಾಜ್ಯದಲ್ಲಿಯೇ ಪ್ರಸಿದ್ಧವಾದ ಬಟ್ಟೆ ಅಂಗಡಿ

ಬಿ.ಎಸ್.ಚನ್ನಬಸಪ್ಪ & ಸನ್ಸ್

ಕಾಳಿಕಾದೇವಿ ರಸ್ತೆ & ಪಿ.ಜೆ ಬಡಾವಣೆ, **ದಾವಣಗೆರೆ**ಯಲ್ಲಿ ಮಾತ್ರ

THE COMPLETE FAMILY STORE

ಸ್ಯಾರೀಸ್ | ಮೆನ್ಸ್‌ವೇರ್ | ಲೇಡೀಸ್‌ವೇರ್ | ಕಿಡ್ಸ್‌ವೇರ್ | ಹೋಮ್ ಫರ್ನಿಶಿಂಗ್